“ಇಟಾಲಿಯನ್ ಪ್ರಜೆಗಳ ನಿರ್ಧಾರವನ್ನು ತಿಳಿಯಲು ನಾವು ೮ ದಿವಸಗಳಿಂದ ಕಾದಿದ್ದು ಈಗ ನಮ್ಮ ಪಡೆಗಳು ದಂಡಯಾತ್ರೆ ಕ್ರಮವನ್ನು ಕೈಗೊಂಡಿವೆ. ನಿಮ್ಮ ಎಲ್ಲಾ ಲಕ್ಷ ಸೈನಿಕರನ್ನು ಕ...ರಿಂದ ಜರ್ಮನರು ಸೆರೆಯಲ್ಲಿ ಇಟ್ಟಿರುವುದಲ್ಲದೆ ಅವರನ್ನು ದಸ್ತ ಬಂದೀಗಳನ್ನಾಗಿ ಮಾಡುತ್ತಿದ್ದಾರೆ. ಶಾಂತಿಗಾಗಿ ಮಾರ್ಷಲ್ ಬಡೋಗ್ಲಿಯವರು ಯಾವ ಕಾರ್ಯವನ್ನು ಕೈಗೊಂಡಿಲ್ಲ. ಅನಿವಾರ್ಯವಾದ ತಮ್ಮ ಪರಾಜಯವನ್ನು ಇನ್ನು ಕಡೆ ಮಾಡಲು ಜರ್ಮನರ ಅಂತಿಮ ಸಾಹಸದಲ್ಲಿ ಅವರು ಇಟಲಿಯವರೆಲ್ಲ ಯುದ್ಧ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವರು. ಆದರೆ ನಾವು ಜಯಪ್ರದವಾಗಿ ಮುನ್ನುಗ್ಗುತ್ತೇವೆ. ನಾವು ನಿಮಗೆ ಎಚ್ಚರಿಕೆಯನ್ನು ಕೊಟ್ಟು, ನಿಮ್ಮ ನಿರ್ಧಾರಕ್ಕಾಗಿ ಕಾದಿದ್ದೆವು. ಈಗ ನಿಮ್ಮ ಪ್ರತ್ಯುತ್ತರವು ಒದಗಿಲ್ಲವಾಗಿ ಧಾಳಿಯನ್ನು ಆರಂಭಿಸಿದ್ದೇವೆ: ಅಲ್ಜೀರಿಯನ್ ರೇಡಿಯೊ ಇಟಾಲಿಯನ್ನರಿಗೆ ಎಚ್ಚರಿಕೆ ಕೊಟ್ಟಿದೆ.

ಸಿಸಲಿಯ ಕೈದಿಗಳ ಬಿಡುಗಡೆ

ಸಿಸಲಿಯ ಮಿತ್ರ ಸರ್ಕಾರವು ೫ ಸಾವಿರ ಜನ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿದೆ. ಇವರಲ್ಲಿ ಕೆಲವರು ಮುಸೋಲಿನಿಯ ನರಳುತ್ತಿದ್ದರು. ಈ ತಂಡದಲ್ಲಿ ಅನೇಕ ರಾಷ್ಟ್ರದಿಂದ ಬಂದವರೂ ಇರುವರು. ಇನ್ನು ಅನೇಕರು ೨೦ ವರ್ಷಗಳಿಂದಲೂ ಬಂಧನದಲ್ಲಿದ್ದವರು. ಇವರಲ್ಲಿ ಕೆಲವರು ಸಂಪೂರ್ಣ ... ಸಂಚರಿಸಲು ಅಶಕ್ತರಾಗಿರುವರು. ಇವರಿಗೆ ವಸತಿಗಳಿಲ್ಲವೋ, ಯಾವ ... ರತ್ತ ಹರಡಿರುವುದೋ ಅಂಥವರಿಗೆ ಸಹಾಯ ಕೊಡಲಾಗುತ್ತಿದೆಯೆಂದು ಅಲ್ಜೀರಿಯನ್ ವಾರ್ತೆ ತಿಳಿಸುತ್ತದೆ.

ರಾಜಕೀಯ ಕೈದಿಗಳು

ಭಾರತದ ನಾನಾ ಜೈಲುಗಳಲ್ಲಿ ಜೂನ್ ... ನೇ ತಾ॥ ವರೆಗೆ ೧...೦ ರಾಜಕೀಯ ಕೈದಿಗಳಿರುವರೆಂದು ... ... ಸಭೆಯಲ್ಲಿ ತಿಳಿಸಲಾಯಿತು.

ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ

ಬೆಂಗಳೂರು ೩

ಪ್ರಜಾಪ್ರತಿನಿಧಿ ಸಭೆಗೆ ಮೈಸೂರು ಸಿಟಿ ಕ್ಷೇತ್ರದಿಂದ ಖಾಲಿ ಇರುವ ಒಂದು ಸ್ಥಾನಕ್ಕೆ ಸೆಪ್ಟೆಂಬರ್ ೨೨ ರಲ್ಲಿ ಚುನಾವಣೆ ನಡೆಯುವಂತೆ ಸರ್ಕಾರ ಪ್ರಕಟಿಸಿಯಾಗಿದೆ

ಸಕ್ಕರೆ ಮೂಟೆಗಳನ್ನು ವಶಪಡಿಸಿಕೊಳ್ಳಲಾಯಿತು

ತ.ವ ಕೂಲಿನಿಂದ ಬರುತ್ತಿದ್ದ ಒಂದು ಲಾರಿಯನ್ನು ಪಾವಗಡ ಸರ್ಕಲ್ ಪೋಲೀಸರು ತನಿಖೆಮಾಡಲು ಅದರಲ್ಲಿ ಇದ್ದ ಲು ಮೂಟೆಗಳ ಮತ್ತು ಸಕ್ಕರೆ ಮೂಟೆಗಳನ್ನು ಸಾಗಿಸಲು ಬೇಕಾದ ಚೀಟಿಗಳನ್ನು ಪಡೆದಿಲ್ಲವಾದುದರಿಂದ ವಶಪಡಿಸಿಕೊಳ್ಳಲಾಯಿತೆಂದು ವರದಿಯಾಗಿದೆ.

ಮುಖಂಡರ ಖುಲಾಸೆಯಾಗಬೇಕು

ಶ್ರೀ ಜಿ ವಿ ಬೆಳ್ಳಂಬರು ಈಗ ಸೆರೆಮನೆಗಳಲ್ಲಿರುವ ಕಾರ್ಯಕರ್ತ ಮುಖಂಡರುಗಳನ್ನು ಖುಲಾಸೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಾರ್ಥಿಸಿರುವುದಾಗಿ ತಿಳಿಯಬರುತ್ತದೆ

ಆಹಾರ ಸಾಮಗ್ರಿಗಳ ಬಗ್ಗೆ ಆಜ್ಞೆ

ಮೈಸೂರು ಸರ್ಕಾರದವರು ಆಹಾರ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಬಹುದಾದ ವಿಚಾರದಲ್ಲಿ ಸರ್ಕಾರದಿಂದ ನಿಯಮಿಸಲ್ಪಟ್ಟ ಅಧಿಕಾರಿಗಳು ತನಿಖೆಮಾಡಿದಾಗ ತಮ್ಮಲ್ಲಿರುವ ದವಸಧಾನ್ಯಗಳ ಪಟ್ಟಿಯನ್ನು ಜನರು ಕೊಡಬೇಕು. ಅನುಮಾನ ಬಂದರೆ ಅವರು ಒಳಗೆನುಗ್ಗಿ ಪರಿಶೋಧನೆ ಮಾಡಬಹುದು. ಅಧಿಕಾರಿಗಳು ಅಪೇಕ್ಷಿಸಿದರೆ ದವಸಧಾನ್ಯವನ್ನು ಅವರಿಗೆ ಒಪ್ಪಿಸಬೇಕು. ತಪ್ಪಿದ್ದಲ್ಲಿ ೩ ವರ್ಷ ಶಿಕ್ಷೆಯಾಗಬಹುದು ಎಂದು ಆಜ್ಞೆ ಹೊರಡಿಸಿರುವರು

ಗುಮಾಸ್ತರ ಡಿಬಾರ್

ಕಂಟ್ರೋಲರ್ ಕಛೇರಿಯ ಗುಮಾಸ್ತರಾಗಿದ್ದ ಶ್ರೀ ಎಂ. ಇ. ಆದಿನಾರಾಯಣರವರನ್ನು ೧ ವರ್ಷಕಾಲ ಸರ್ಕಾರದ ಹುದ್ದೆಗೆ ಸೇರದಂತೆ 'ಡಿಬಾರ್' ಮಾಡಲಾಗಿದೆ.

ಯುದ್ಧ ಭವಿಷ್ಯ ಹೇಳಲು ಕಷ್ಟ

ಬ್ರಿಟನ್ನಿನ ನಾವಿಕ ಮಂತ್ರಿಯಾದವರು ಭಾಷಣ ಮಾಡುತ್ತಾ ಯುದ್ಧ ಯಾವಾಗ ಮುಗಿಯುತ್ತದೆ ಎಂಬುವುದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲವೆಂದು ತಿಳಿಸಿದರು.

Edited, printed and published by A. R. Nagarajan, at the Sadhvi Press, D Subbiah Road, Mysore.

ಸತ್ಯ ಮತ್ತು ಅಹಿಂಸೆ ಸಂಸ್ಕೃತಿಯ ಮೂಲಾಧಾರ

ಕಲ್ಲಿಕೋಟೆಯಲ್ಲಿ ನಡೆದ ಅಖಿಲಕೇರಳ ವಿದ್ಯಾರ್ಥಿಗಳ ಒಕ್ಕೂಟಸಂಘದ ಪ್ರಥಮ ಸಂಸತ್ತಿನಲ್ಲಿ ಭಾಷಣಮಾಡುತ್ತಾ ಶ್ರೀ|| ಕೇಳಪ್ಪರವರು ಕೆಳಗೆ ಕಂಡಂತೆ ತಿಳಿಸಿದರು. "ವಿದ್ಯಾರ್ಥಿಗಳು ಜಾತಿ ಮತ್ತು ಧಾರ್ಮಿಕ ಮತಭೇದಗಳನ್ನು ಬಿಟ್ಟು ತಾವೆಲ್ಲರೂ ಭಾರತ ಖಂಡದ ಪುತ್ರರೆಂದು ತಿಳಿಯಬೇಕು. ಭಾರತವು ವಿಭಾಗವಾದರೆ ಅದು ಎಂದೂ ಸ್ವತಂತ್ರವಾಗಲಾರದು. ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ಮುಗಿಸಿದ ನಂತರ ಹಳ್ಳಿಗಳಲ್ಲಿ ವಾಸಿಸಬೇಕು. ಹಳ್ಳಿಯ ನಾಶವು ಒಂದು ಕ್ರಾಂತಿಯನ್ನುಂಟುಮಾಡುವುದು. ಗಾಂಧೀಜಿ ಮತ್ತು ನೆಹರು ಆದರ್ಶವನ್ನು ನೀವು ಮುಂದಿಟ್ಟು ಕೊಳ್ಳಬೇಕು. ಜಗತ್ತಿನ ಅತ್ಯಂತ ಶ್ರೇಷ್ಠ ನಾಯಕರುಗಳಲ್ಲಿ ಇವರಿಬ್ಬರು ನನ್ನ ದೇಶದ (ಅಮೆರಿಕ) ಜನರು ಕೂಡ ಗಾಂಧೀಜಿಯವರನ್ನು ಜಗತ್ತಿನ ಮಹಾಪುರುಷರೆಂದು ತಿಳಿಸಿದ್ದಾರೆ.

ಸ್ವಾತಂತ್ರ್ಯ, ಅಕ್ಷರಾಭ್ಯಾಸ, ಗ್ರಾಮಪುನರ್ರಚನೆ, ಐಕಮತ್ಯ ಮತ್ತು ಸತ್ಯದರ್ಶನ ಇವೇ ವಿದ್ಯಾರ್ಥಿಗಳು ಸಾಧಿಸಬೇಕಾದ ಪಂಚಮಹಾ ಕಾರ್ಯಗಳು. ನೀವು ನಿಮ್ಮ ದೇಶದ ಸ್ವಾತಂತ್ರ್ಯವನ್ನು ಅಲಕ್ಷಿಸಲಾಗದು, ಜಗತ್ತಿನ ಎಲ್ಲಾ ದೇಶಗಳಿಗಿಂತಲೂ ಭಾರತವು ಶ್ರೇಷ್ಠ ಸಂಸ್ಕೃತಿಯ ಮೂಲಾಧಾರವಾಗಿದೆ. ಈ ತತ್ವಗಳ ಆಚರಣೆ ಮೂಲಕ ಎಲ್ಲ ದೇಶಕ್ಕಿಂತಲೂ ತಮ್ಮ ದೇಶಕ್ಕೆ ಒಂದು ಪ್ರಧಾನತೆಯುಂಟಾಗಿದೆ. ನೀವು ಈ ತತ್ವಗಳಲ್ಲಿ ಸರಿಯಾದ ಶಿಕ್ಷಣ ಪಡೆದರೆ ಭವಿಷ್ಯಕಾಲದಲ್ಲಿ ಜಗತ್ತಿನ ಮುಂದಾಳುತನ ನಿಮ್ಮ ಪಾಲಿಗೆ ಬರುವುದು. ಈ ತತ್ವಗಳ ಮೇರೆಗೆ ನೀವು ಜೀವನ ನಡೆಸಿದರೆ, ಮಾನವ ಲೋಕದ ಕಲ್ಯಾಣಮಾಡಿದಂತೆ ಆಗುವುದು".

ತೈಲಕೇಂದ್ರಗಳ ಮೇಲೆ ಮಿತ್ರರ ಉಗ್ರಧಾಳಿ

ಜರ್ಮನಿ ತೈಲ ಸರಬರಾಜಿನ ಕೇಂದ್ರವಾದ ಪ್ಲೋಸ್ಟಿಯಾ ಮೇಲೆ ಅಮೆರಿಕನ್ ವಿಮಾನಗಳು ಅಗಾಧ ಧಾಳಿಮಾಡಿದುದರ ಫಲವಾಗಿ ತೈಲ ಶೋಧನಾ ಕಾರ್ಖಾನೆಗಳ ಮೇಲೆ ಬಾಂಬುಗಳು ಬಿದ್ದು, ಅಸ್ಫೋಟನಗಳುಂಟಾಗಿ ಉರಿಯುದ್ಭವಿಸಿತು ಮತ್ತು ಶತ್ರುವಿನ ಪ್ರತಿಭಟನೆಯನ್ನು ಬಲವಾಗಿ ಎದುರಿಸಬೇಕಾಯಿತೆಂದೂ ಹೇಳಲಾಗಿದೆ. ೨೦ ಶತ್ರು ವಿಮಾನಗಳೂ ೨೦ ಮಾತ್ರ ಲಿಬರೇಟರ್ ವಿಮಾನಗಳೂ ನಾಶವಾಯಿತೆಂದು ವರದಿಯಾಗಿದೆ. ಶತ್ರುವಿಗೆ ದಿನಕ್ಕೆ ೧೫ ಸಾವಿರ ಟನ್ ಎಣ್ಣೆ ಸಿಕ್ಕುತ್ತಿತ್ತೆಂದೂ ಹೇಳಲಾಗಿದೆ.

ಕೃತಕ ವೀರ್ಯಪ್ರಯೋಗದಿಂದ ಸಂತಾನ ಪಡೆಯುವುದು ಪಾಪವೇ ?

ಲಾರ್ಡ್ ಸಭೆಯಲ್ಲಿ ಒಂದು ಆಶ್ಚರ್ಯಕರವಾದ ವಿಜ್ಞಾನದ ಮೇಲೆ ಚರ್ಚೆ ನಡೆಯಿತೆಂದು ವರದಿಯಾಗಿದೆ. ವಿಧವೆಯರು ಕೃತಕ ವೀರ್ಯ ಪ್ರಯೋಗ ಮಾರ್ಗದಿಂದ ಸಂತಾನ ಪಡೆಯುವುದು ಸಾಧ್ಯ. ಪತಿಯು ನಪುಂಸಕನಾದರೆ ಸತಿಯು ಈ ಮಾರ್ಗದಿಂದ ಸಂತಾನ ಪಡೆಯಬಹುದು ಎಂದು ಲಾರ್ಡ್ ಬ್ರಿಬಾರ್‌ರು ಒಂದು ವಿಷಯವನ್ನು ಸಭೆಯ ಮುಂದಿಟ್ಟರು. ಅಮೇರಿಕದಲ್ಲಿ ಒಬ್ಬ ಸತಿಯು ಗಂಡನು ನಪುಂಸಕನಾದರೆ ಯಾರೋ ಒಬ್ಬ ಅಪರಿಚಿತನ ವೀರ್ಯಪ್ರಯೋಗದಿಂದ ಮಕ್ಕಳನ್ನು ಪಡೆಯಬಹುದು. ಇದರಿಂದ ದತ್ತುತೆಗೆದುಕೊಳ್ಳುವುದು ನಿಲ್ಲುವುದು. ಸಂತಾನ ವಿಹೀನ ವಿವಾಹಗಳಿಗಾಗಿ ಅಮೆರಿಕದಲ್ಲಿ ೧೦ ಸಾವಿರ ಅರ್ಜಿಗಳಿಗಿಂತ ಹೆಚ್ಚಾಗಿ ಬರುತ್ತಿವೆ. ವಿವಾಹ ಮಾಡಿಕೊಳ್ಳದೆ ಪಾಪವನ್ನು ಗಳಿಸಿಕೊಳ್ಳದೆ ಸಂತಾನವನ್ನು ಪಡೆಯಲು ಆ ಮಹಿಳೆಯರು ಅಪೇಕ್ಷೆಪಡುವರು

ಈ ವಿಧಾನದಿಂದ ಸಂತಾನ ಪಡೆಯುವುದು ಪಾಪವೋ ಅಲ್ಲವೋ ಎಂಬ ವಿಷಯದಲ್ಲಿ ತೀರ್ಮಾನಕ್ಕೆ ಬರಬೇಕೆಂದು ತಿಳಿಸಿದರು. ಅಂಥಹ ಮಕ್ಕಳು ಒಳ್ಳೆಯ ನಾಗರೀಕರಾಗುವರೆಂದೂ ಅವರನ್ನು ದೇಶವು ಕಳೆದುಕೊಳ್ಳಲಾಗದೆಂದು ತಿಳಿಸಿದರು.

ಹೆಂಗಸರಿಗೆ ಗಂಡ ಸತ್ತು ಹೋದ ಮೇಲೆ ಕೃತಕ ವೀರ್ಯ ಪ್ರಯೋಗ ಮಾಡುವ ವಿಷಯದ ಮೇಲೆ ಚರ್ಚಿಸಲಾಯಿತು. ಲಾರ್ಡ್ ಮಾಲೀಯವರು ಬೇವಾರ್ಸಿ ಮಕ್ಕಳುಗಳು ನಾಗರೀಕತೆಯನ್ನೇ ನಾಶಮಾಡುವುದರಿಂದ ಅಂತಹ ಪದ್ಧತಿಯನ್ನು ಪ್ರೋತ್ಸಾಹನ ಮಾಡಬೇಕು. ಬ್ರಿಟನ್ನಿನಲ್ಲಿ ಪ್ರತಿದಿನವೂ ನೂರಾರು ಬೇವಾರ್ಸಿ ಮಕ್ಕಳು ಹುಟ್ಟುತ್ತಿರುವುದು ಕುಟುಂಬ ಜೀವನದ ತತ್ವವನ್ನೇ ಹಾಳುಮಾಡುವ ಇದನ್ನು ಎಲ್ಲಾ ವಿಧದಿಂದಲೂ ತಡೆಯಬೇಕೆಂದು ತಿಳಿಸಿದರು.

ಮರಣ ದಂಡನೆ

ಫ್ರಾನ್ಸಿನಲ್ಲಿ ಒಳಸಂಚು ಕಾರ್ಯದಲ್ಲಿ ಭಾಗವಹಿಸಿದ ೧೧ ಫ್ರೆಂಚ್ ಜನರನ್ನು ಮರಣದಂಡನೆಗೆ ಗುರಿಮಾಡಲಾಗಿದೆಯೆಂದು ಪ್ಯಾರಿಸ್ ರೇಡಿಯೋ ತಿಳಿಸುತ್ತದೆ

ಆಕಾಶವಾಣಿ

ಆಗಸ್ಟ್ ೫ ನೇ ಗುರುವಾರ

...೮ ೩೦ ಪಿ.ಎಂ. : ವಿದ್ವಾನ್ ಎಲ್. ರಾಜಾರಾವ್.

ಕಾರ್ಯಾಲಯಗಳ ಧ್ಯೇಯ

ಅಮೇರಿಕದ ಫೋರ್ಡ್ ಮೋಟಾರ್ ಕಂಪನಿಯ ಮಾಲೀಕರಾದ ಮಿ|| ಹೆನ್ರಿ ಫೋರ್ಡ್‌ರವರು ತಮ್ಮ ೮೧ ನೇ ವರ್ಷದ ಪ್ರಾರಂಭದಲ್ಲಿ ಕೆಲಸಗಾರರಿಗೆ ಈ ರೀತಿ ಸಂದೇಶವಿತ್ತಿದ್ದಾರೆ. "ಕಾರ್ಯಾಲಯಗಳು ತಮ್ಮ ಲಾಭ ನೋಡುವುದಕ್ಕಿಂತ ನಿಜವಾಗಿಯೂ ಜನರಿಗೆ ಉಪಯುಕ್ತವಿರುವ ವಸ್ತುಗಳನ್ನೇ ನಿರ್ಮಾಣ ಮಾಡುವ ಧ್ಯೇಯವನ್ನಿಟ್ಟುಕೊಂಡಿರಬೇಕು". ಅವರಿಗೆ ೮೦ ವರ್ಷವಾಗಿದ್ದರೂ ಕೂಡ ಸೈಕಲ್ ಮೇಲೆ ಹೋಗಬಲ್ಲರೆಂದು ಮತ್ತು ಪಾದ ಸಂಚಾರದಲ್ಲಿ ಎಷ್ಟೋ ಜನರನ್ನು ಹಿಂದಕ್ಕೆ ಹಾಕುವರೆಂದು ಹೇಳಲಾಗಿದೆ.

ಉತ್ತರ ಇಟಲಿಯಲ್ಲಿ ಜರ್ಮನ್ ಸೈನ್ಯ

ಮಿಲಾನ್ ನಗರವನ್ನು ಸಂಪೂರ್ಣವಾಗಿ ಖಾಲಿಮಾಡಲಾಗಿದೆಯೆಂದೂ, ಉತ್ತರ ಇಟಲಿಯಲ್ಲಿ ೧೮ ಜರ್ಮನ್ ಡಿವಿಜನ್ ಸೈನ್ಯಗಳು ಇರುವುದಾಗಿಯೂ ವರದಿಯಾಗಿದೆ. ಇಟಲಿ ದಕ್ಷಿಣಭಾಗದಲ್ಲಿರುವ ಒಂದು ರೇವಿನ ಮೇಲೆ ಬ್ರಿ|| ನೌಕೆಗಳು ಧಾಳಿಮಾಡಿ ೨ ಶತ್ರು ನೌಕೆಗಳನ್ನು ಮುಳುಗಿಸಿದುವು. ನೇಪಲ್ಸ್ ಮೇಲೆ ಮಿತ್ರ ವಿಮಾನಗಳು ಧಾಳಿ ನಡೆಸಿ ೮ ಶತ್ರು ವಿಮಾನಗಳನ್ನು ನಾಶಮಾಡಿವೆ.

EXPERT IN WORLD MEDICINES

ತುರ್ಕಿ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಸಾರ್ವವಾಯು, ವಾತರೋಗ, ಕೆಮ್ಮಲು, ಗೂರಲು, ಮೂತ್ರ ಮತ್ತು ವೀರ್ಯ ದೋಷಗಳು, ಅಲ್ಲದೆ ಹೊಟ್ಟೆಯ ಯಕೃತ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆಮಾಡುವ ನಿಪುಣರು

ನೀವು ಒಂದುಸಾರಿ ನಮ್ಮಲ್ಲಿಗೆ ಬಂದರೆ ನವಚೈತನ್ಯವನ್ನು ಹೊಂದುವಿರಿ.

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯವರೆ
ಸಂಜೆ ೬ ರಿಂದ 9 ಘಂಟೆಯವರೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು.

The Benares Textile Emporium

(Importers of Silk Direct from Benares)

ಬನಾರಸ್ ಜವಳಿ ಅಂಗಡಿ

ಶೀಘ್ರದಲ್ಲಿಯೇ ತೆರೆಯಲ್ಪಡುತ್ತದೆ.

ಎಲ್ಲಿ ? ಯಾವಾಗ ? ನಿರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು.

ವಿ. ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಜಹಿ ಸದಾ ದೊರೆಯುತ್ತವೆ

ಸಂಪುಟ ೧] ಗುರುವಾರ ೯—೮—೪೩ [ಸಂಚಿಕೆ ೧೬

ಓರಲ್ ನಗರಕ್ಕೆ ಗಂಡಾಂತರ

ಇಟಲಿ ಸಂಧಾನಕ್ಕೆ ಒಪ್ಪಬೇಕೆಂದು ಸೆನೆಟರುಗಳ ಒತ್ತಾಯ

ಪ್ರವಾಹದಿಂದ ಒಂದು ಸಾವಿರ ಮಂದಿ ಮರಣ

ಇಟಲಿಯರಿಗೆ ಹಿತನುಡಿ

ಅಮೇರಿಕ ಯುದ್ಧ ಪ್ರಚಾರ ಖಾತೆಯ ಮುಖ್ಯಾಧಿಕಾರಿಗಳಾದ ಎಲ್ಮರ್ ಡೇವಿಸರು ಇಟಾಲಿಯರಿಗೆ ಹಿತನುಡಿಗಳನ್ನಾಡುತ್ತಾ "ಪ್ರಪಂಚದ ರಾಷ್ಟ್ರ ಶ್ರೇಣಿಯಲ್ಲಿ ಪುನಃ ಸ್ವತಂತ್ರ ಸ್ಥಾನ ಪಡೆಯಬೇಕಾದರೆ ಮಾಡಬೇಕಾದ ಕಾರ್ಯವೆಂದರೆ, ಜರ್ಮನರನ್ನು ಶಿಕ್ಷಿಸುವುದು" ಎಂದು ಹೇಳಿದರು. ನಂತರ ಅಲ್ಜೀರಿಯರ್ಸ್‌ನ ಅಮೆರಿಕನ್ ರೇಡಿಯೊ ಮೂಲಕ ಮಾತನಾಡುತ್ತಾ ಜರ್ಮನರನ್ನು ಎಚ್ಚರಿಸಿ; ಅಮೇರಿಕ ಮತ್ತು ಬ್ರಿ॥ ಸೈನ್ಯಗಳು ಯೂರೋಪಿನ ಕೋಟೆಯನ್ನು ಸಿಸಿಲಿಯಲ್ಲಿ ಮಾಡಿದಂತೆ ಛಿದ್ರಛಿದ್ರಮಾಡುವುವೆಂದು ತಿಳಿಸಿದರು.

೪ ಲಕ್ಷ ಹಣವನ್ನು ಇಟಲಿ ದೊರೆಗಳು ತ್ಯಜಿಸಿದ್ದಾರೆ

ಇಟಲಿ ದೊರೆಗಳಾದ ವಿಕ್ಟರ್ ರವರು ತಮಗೆ ವರ್ಷಕ್ಕೆ ದೇಶದಿಂದ ಕೊಡಲಾಗುತ್ತಿದ್ದ ೩ ಲಕ್ಷ ಪೌಂಡ್ ಹಣವನ್ನು ಮುಂದೆ ತೆಗೆದುಕೊಳ್ಳುವುದಿಲ್ಲವೆಂದು ಅದನ್ನು ಯುದ್ಧಾನಂತರ ಪುನರ್ರಚನಾ ಕಾರ್ಯಗಳಿಗೆ ಉಪಯೋಗಿಸಬೇಕೆಂದು ತಿಳಿಸಿದ್ದಾರೆಂದು ವಂದಿಯಾಗಿದೆ.

ಮಿತ್ರರ ಶಾಂತಿ ಕರಾರು

ಪ್ರೆಸಿಡೆಂಟ್ ರೂಸ್ವೆಲ್ಟರು ಇಟಲಿಗೆ ಈ ಕೆಳಗೆ ಕಂಡ ಶಾಂತಿ ಕರಾರುಗಳನ್ನು ಕೊಟ್ಟಿರುವರೆಂದು ಜರ್ಮನ್ ವಾರ್ತೆ ತಿಳಿಸುತ್ತದೆ. ಅವುಗಳು:—

ಇಟಲಿ ಸೈನ್ಯ ಮತ್ತು ನೌಕಾದಳವು ಕದನ ನಿಲ್ಲಿಸಬೇಕು, ಜರ್ಮನಿ ಪಕ್ಷವನ್ನು ಕೂಡಲೇ ತ್ಯಜಿಸಬೇಕು, ಯುಗೋಸ್ಲೇವಿಯಾ, ಗ್ರೀಸ್ ಅಲ್ಬೇನಿಯಾ ಮತ್ತು ಫ್ರಾನ್ಸಿನಲ್ಲಿರುವ ಎಲ್ಲಾ ಇಟಲಿ ಸೈನ್ಯವನ್ನೂ ವಾಪಸು ಕರೆಯಿಸಬೇಕು, ಯುದ್ಧ ಸಾಮಾಗ್ರಿಗಳನ್ನೆಲ್ಲಾ ನಾಶಮಾಡದೆ ಮಿತ್ರರ ವಶಪಡಿಸಬೇಕು, ಬ್ರಿಟಿಷ್, ಅಮೇರಿಕ ಮತ್ತು ರಷ್ಯ ಒಳಗೊಂಡ ಒಂದು ಮಿಲಿಟರಿ ಸರ್ಕಾರವನ್ನು ಇಟಲಿಯಲ್ಲಿ ಸ್ಥಾಪಿಸಲಾಗುವುದು. ಯುದ್ಧ ಕೊಲೆಪಾತಕರನ್ನು ವಶಮಾಡಬೇಕು. ಇಟಲಿಯಲ್ಲಿರುವ ಎಲ್ಲ ಮಿತ್ರ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಬೇಕು.

ಈ ಸಮಾಚಾರಕ್ಕೆ ಆಧಾರವಿಲ್ಲವೆಂದು ಲಂಡನ್ನಿನಲ್ಲಿ ವರದಿಯಾಗಿದೆ.

ಶತ್ರು ಸ್ಥಾನಗಳ ಮೇಲೆ ಬಾಂಬುಗಳು

ಜರ್ಮನಿ ಮತ್ತು ಇಟಾಲಿಯನ್ ನಗರಗಳ ಮೇಲೆ ಕಳೆದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಒಟ್ಟು ೩೨,೦೦೦ ಟನ್ ಬಾಂಬುಗಳನ್ನು ಸುರಿಸಲಾಯಿತೆಂದೂ, ಹ್ಯಾಂಬರ್ಗ್‌ನಲ್ಲಿ ೪,೫೦೦ ಎಕರೆ ಪ್ರದೇಶವು ನಿರ್ನಾಮವಾಗಿದೆಯೆಂದೂ ಪ್ರಕಟವಾಗಿದೆ.

ಓರಲ್ ನಗರಕ್ಕೆ ಗಂಡಾಂತರ

ಓರಲ್ ಕ್ಷೇತ್ರದಲ್ಲಿ ರಷ್ಯನರ ಕೈವಾಡ ಬಲವಾಗಿ ಜರ್ಮನರು ಓಡುತ್ತಿದ್ದಾರೆಂದು ಹೇಳಲಾಗಿದೆ. ಓರಲ್ ನಗರವನ್ನು ಛಾಳಿ ಮಾಡಲು ರಷ್ಯನರು ಸಿರಂಗಿಗಳನ್ನು ಕೇಳುತ್ತಿದ್ದಾರೆ. ಉತ್ತರ ದಕ್ಷಿಣ ಮತ್ತು ಪೂರ್ವಭಾಗಗಳಿಂದ ರಷ್ಯ ಸೇನೆ ಓರಲ್ ನಗರವನ್ನು ಮುತ್ತಿದೆ. ಓರಲ್ ನಗರದ ಮುತ್ತಿಗೆ ಅಂತಿಮ ಘಟ್ಟಕ್ಕೆ ಬಂದಿದೆಯೆಂದು ಹೇಳಲಾಗಿದೆ.

ಪೆರೋಲ್

ಮೈಸೂರು ೫

ಬಂಧನದಲ್ಲಿರುವ ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಟಿ. ಸಿದ್ದಲಿಂಗಯ್ಯನವರನ್ನು ೧ ತಿಂಗಳಕಾಲ ಪೆರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ.

ಭಾಷಣ

ಮಹಾರಾಜಾ ಕಾಲೇಜಿನ ಎಕನಾಮಿಕ್ಸ್ ಸಂಘದ ಪ್ರಥಮ ಭಾಷಣವನ್ನು ಟ್ರಾವಂಕೂರು ವಿಶ್ವವಿದ್ಯಾನಿಲಯದ ಎಕನಾಮಿಕ್ಸ್ ಪ್ರೊಫೆಸರಾದ ಡಾ॥ ಖುರೇಷಿಯವರು ನಿನ್ನೆ ಸಂಜೆ ಮಾಡಿದರು.

ಉಪಚುನಾವಣೆ

ಮೈಸೂರು ನ್ಯಾಯವಿಧಾಯಕ ಸಭೆಗೆ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರು ರಾಜೀನಾಮೆಯಿತ್ತ ಪ್ರಯುಕ್ತ, ಇದೇ ಮಾಹೆ ೧೮ ನೆ ತಾ॥ ಉಪಚುನಾವಣೆನಡೆಯಲಿದೆ ಇದಕ್ಕೆ ಉಮೇದುವಾರರಾಗಿ ಶ್ರೀ. ಕೆ. ಸಿ. ಸುಬ್ಬಣ್ಣ ಮತ್ತು ಶ್ರೀ ಹೆಚ್. ಎಂ. ಚನ್ನಬಸಪ್ಪನವರು ನಿಂತಿರುವರು.

ಕಳ್ಳನ ದಸ್ತಗಿರಿ

ಕೃಷ್ಣರಾಜನಗರದ ಸ್ಯಾನಿಟರಿ ಇನ್ಸ್‌ಪೆಕ್ಟರಾದ ಶ್ರೀ ಚಿಕ್ಕೇಗೌಡರು ಮೊನ್ನೆ ಬೆಳಗ್ಗೆ ಟೌನ್‌ಹಾಲ್ ಆವರಣದಲ್ಲಿರುವ ನಲ್ಲಿಯಲ್ಲಿ, ಕೋಟು ಬಿಚ್ಚಿ ಮುಖ ತೊಳೆದುಕೊಳ್ಳುತ್ತಿರುವಾಗ್ಗೆ ಯಾರೋ ಅವರ ಕೋಟಿನಲ್ಲಿ ಇದ್ದ ೩೪ ರೂ. ಗಳೂ, ೧ ಗಡಿಯಾರ, ೧ ಫೌಂಟನ್‌ಪೆನ್ ಮತ್ತು ಇತರ ವಸ್ತುಗಳನ್ನೂ ಅಪಹರಿಸಿಕೊಂಡು ಹೋದರೆಂದು, ಪೋಲೀಸರಿಗೆ ವರದಿಯಾಗಿತ್ತು. ಇದರ ಮೇಲೆ ಪೇದೆಂಗಡ ಪೋ॥ ಛಾನೇದಾರರಾದ ಮಹಮದ್ ಗೌಸ್ ಎಂಬುವರನ್ನು ಗುಮಾನಿಮೇಲೆ ದಸ್ತಗಿರಿಮಾಡಿ, ಆ ಕಳುವಿನ ಮಾಲನ್ನು ಪತ್ತೆಹಚ್ಚಿದರು.

ಜೂಜುಗಾರರ ಬಂಧನ

ಮಂಡಿಮೊಹಲ್ಲಾ ೬ ನೇ ಕ್ರಾಸಿನಲ್ಲಿ ನಿನ್ನೆರಾತ್ರಿ ಜೂಜಾಡುತ್ತಿದ್ದ ೧೬ ಮಂದಿಯನ್ನು ಮಂಡಿ ಪೋ॥ ದಸ್ತಗಿರಿಮಾಡಿ, ಅವರ ಮೇಲೆ ಮೊಕದ್ದಮೆ ಹೂಡಿದ್ದಾರೆ.

ಅರಮನೆಯಲ್ಲಿ ಉಪಾಕರ್ಮ

ನಾಳೆದಿನ ಬೆಳಗ್ಗೆ ಅರಮನೆಯಲ್ಲಿ ಶಾಸ್ತ್ರೋಕ್ತವಾಗಿ ಉಪಾಕರ್ಮ ನಡೆಯುತ್ತದೆ.

ಫ್ಯಾಸಿಸಂ ಸಂಪೂರ್ಣ ನಾಶವಾಗಬೇಕು

ಮುಸೋಲಿನಿ ಪತನದಿಂದ ತಮಗೆ ಅತ್ಯಂತ ಸಂತೋಷವಾಗಿದೆಯೆಂದು ಅಬ್ಸೀನಿಯಾ ಚಕ್ರವರ್ತಿಗಳು ಲಂಡನ್ನಿನ "ನ್ಯೂಸ್ ಕ್ರಾನಿಕಲ್" ಪತ್ರಿಕೆಗೆ ಒಂದು ಸಂದೇಶವನ್ನು ಕಳುಹಿಸಿದ್ದಾರೆ. ಮುಸೋಲಿನಿ ಆಜ್ಞೆಯನ್ನು ಪಾಲಿಸಿ, ತಮ್ಮ ಜನಾಂಗದ ಮೇಲೆ ವಿಷಾನಿಲವನ್ನು ಪ್ರಯೋಗಿಸಿದವರು ಬಡೋಗ್ಲಿಯವರು. ಈಗ ಅವರು ತಮ್ಮ ಹಿಂದಿನ ಯಜಮಾನನ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಫ್ಯಾಸಿಸಮ್ಮನ್ನು ಸಂಪೂರ್ಣ ನಾಶಪಡಿಸಿದಲ್ಲದೆ ಸ್ವಾತಂತ್ರ್ಯ ಅಪೇಕ್ಷೆಗೆ ಎಂದೂ ಲಾಭವಾಗದು ಎಂದು ತಿಳಿಸಿದ್ದಾರೆ.

ಇಟಲಿಯಲ್ಲಿ ಅಶಾಂತಿ ಹೆಚ್ಚುತ್ತಿದೆ

ಮಿಲಾನ್ ಮತ್ತು ಟ್ಯೂರಿನ್ ನಗರದ ದೇಶಾಭಿಮಾನಿಗಳು ವಿಕ್ಟರ್ ದೊರೆ ಸಿಂಹಾಸನವನ್ನು ತ್ಯಜಿಸಬೇಕೆಂದು ಪ್ರಧಾನಿ ಬಡೋಗ್ಲಿಯ ರಾಜೀನಾಮೆ ಕೊಡಬೇಕೆಂದು ಪ್ರದರ್ಶನ ನಡೆಸುತ್ತಿದ್ದಾರೆಂದು ವರದಿಯಾಗಿದೆ. ಮಿತ್ರಪಕ್ಷದವರು ಕೊನೆಯ ಎಚ್ಚರಿಕೆ ಕೊಟ್ಟ ನಂತರ ಈ ಪ್ರದರ್ಶನಗಳು ನಡೆದು ಇಟಲಿ ದೇಶವು ಶಾಂತಿಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ.

ಜಿನಿವಾ ಮತ್ತು ಫ್ರಾನ್ಸ್ ಗಡಿಯಲ್ಲಿರುವ ಇಟಲಿಯನ್ ನಗರಗಳಲ್ಲೂ ಅಶಾಂತಿ ಉಂಟಾಗಿ, ಗೊರಿಲ್ಲಾ ಕದನ ಪ್ರಾರಂಭವಾಗಿದೆಯೆಂದು ಹೇಳಲಾಗಿದೆ.

ಇಟಲಿ ಯುದ್ಧ ನಿಲ್ಲಿಸಬೇಕು

ಇಟಲಿಯ ಮುಖ್ಯ ಸೆನೆಟ್ ಸದಸ್ಯರು, ಸದಸ್ಯರುಗಳೆಲ್ಲಾ ಸೇರಿ ಇಟಲಿಯು ತಕ್ಷಣ ಯುದ್ಧ ನಿಲ್ಲಿಸಿ, ಮಿತ್ರರಲ್ಲಿ ಶಾಂತಿ ಸಂಧಾನ ಮಾಡಿಕೊಳ್ಳಬೇಕೆಂದು ಬಡೋಗ್ಲಿಯವರಿಗೆ ಒತ್ತಾಯಮಾಡುತ್ತಿರುವರೆಂದು ವರದಿಯಾಗಿದೆ. ಇದೂ ಅಲ್ಲದೆ ರೋಂ ನಗರಕ್ಕೆ ಶಾಂತಿ ಬೇಕೆಂದು ಮೆರವಣಿಗೆ ನಡೆಸಲು ಇತರ ನಗರಗಳಿಂದ ನಿಯೋಗಿಗಳು ಬರುತ್ತಿರುವರೆಂದು ಹೇಳಲಾಗಿದೆ.

ಮೆಸೀನಾ ಮೇಲೆ ಮುತ್ತಿಗೆ

ಸಿಸಿಲಿಯ ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿಭಟನೆ ಜಾಸ್ತಿಯಾಗಿದೆಯೆಂದು, ಅಮೆರಿಕನ್ ಮಿತ್ರ ಸೇನೆಯು ಅನೇಕ ನಗರಗಳನ್ನು ಕೈವಶಪಡಿಸಿಕೊಂಡು ಮುನ್ನುಗ್ಗುತ್ತಿದ್ದಾರೆಂದು ಹೇಳಲಾಗಿದೆ. ಮೆಸೀನಾ ಪಟ್ಟಣದ ಮೇಲೆ ಮಿತ್ರರ ಮುತ್ತಿಗೆಯು ಆರಂಭವಾಗಿದೆಯೆಂದು ವರದಿಯಾಗಿದೆ. ಮಿತ್ರರು ಶಕ್ತ್ಯಬಲವಾದ ಫಿರಂಗಿ ಮತ್ತು ವಿಮಾನ ಪಡೆಗಳ ಸಹಾಯದಿಂದ ಉಗ್ರಧಾಳಿ ಆಕ್ರಮಿಸಿರುವರೆಂದು ಹೇಳಲಾಗಿದೆ. ಜರ್ಮನರು ಅನೇಕ ರಸ್ತೆಗಳನ್ನು ಹಾಳುಮಾಡಿ ಎಟ್ನಾ ಪರ್ವತದ ಬಳಿ ಪ್ರತಿಭಟಿಸುತ್ತಿರುವರೆಂದು ವರದಿಯಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ನೂತನ ಕಾಂಗ್ರೆಸ್ ಸಂಸ್ಥೆ

ದಕ್ಷಿಣಾಫ್ರಿಕದಿಂದ ನೇಟಾಲ್ ಇಂಡಿಯನ್ ಕಾಂಗ್ರೆಸ್ ಮತ್ತು ನೇಟಾಲ್ ಇಂಡಿಯನ್ ಅಸೋಸಿಯೇಷನ್ ಸಂಸ್ಥೆಗಳು ಒಟ್ಟಾಗಿ 1896 ರಲ್ಲಿ ಗಾಂಧೀಜಿಯವರು ಸ್ಥಾಪಿಸಿರುವ ನೇಟಾಲ್ ಇಂಡಿಯನ್ ಕಾಂಗ್ರೆಸ್ ಸಂಸ್ಥೆಯನ್ನು ಪುನಸ್ಸಂಘಟಿಸಲಾಗಿದೆ ಭಾರತದ ಹೈ ಕಮೀಷನರಾದ ಸರ್ ಷಾಫತ್ ಅಹಮದ್ ಖಾನ್ ರವರು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ೧೪ ವರ್ಷಗಳಿಂದಲೂ ದ॥ ಆಫ್ರಿಕದ ಭಾರತ ಜನಾಂಗದವರಲ್ಲಿ ಎರಡು ಪಕ್ಷವಾಗಿ ಪಕ್ಷ ಮತ್ಸರ ಮತ್ತು ವೈಮನಸ್ಯಗಳು ನಾಶವಾಗಿದ್ದವು ಈ ಸಂಸ್ಥೆಯ ಸದಸ್ಯರಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ೩೦ ವರ್ಷದ ಯುವಕರೇ ಇರುವುದರಿಂದ ಭಾರತ ಜನಾಂಗದ ಅಭಿವೃದ್ಧಿಯು ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದ್ದಾರೆ.

ಹೆಚ್ಚು ಬೆಳೆ ಬೆಳೆಯಲು ಮಿಲಿಟರಿ ಹಂಚಿಕೆ

ಜನಗಳಿಗೆ ಬೇಕಾಗುವ ಆಹಾರಗಳ ಸರಬರಾಜಿನ ವಿಷಯದಲ್ಲಿ ಮಿಲಿಟರಿಯವರು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಿರುವರೆಂದು ದಕ್ಷಿಣ ಸೈನ್ಯ ದಳಪತಿಯಾದ ಲೆ. ಜ॥ ಸರ್. ನೋಯೆಲ್ ಬ್ರೆಸ್ ಫೋರ್ಡ್ ಪೇಯರ್ಸ್‌ರವರು ಮದರಾಸ್ ಪ್ರಾಂತ್ಯದ ವೃತ್ತಪತ್ರಿಕೆಯ ಸಂಪಾದಕರ ಸಭೆಯಲ್ಲಿ ತಿಳಿಸಿದ್ದಾರೆ. ಮೇ ಮತ್ತು ಜೂನ್ ತಿಂಗಳಲ್ಲಿ ೧೧ ಸಾವಿರ ಟನ್ ಸಾಮಾನುಗಳನ್ನು ಮಿಲಿಟರಿ ಲಾರಿಗಳಿಂದ ಸಾಗಿಸಲಾಯಿತು. ಪೂನಾ, ನಾಸಿಕ್ ಮತ್ತು ಸಿಕಂದರಾಬಾದ್ ನಗರಗಳಲ್ಲಿ ಆಲೂಗಡ್ಡೆ ಮತ್ತು ಇತರ ತರಕಾರಿಗಳನ್ನು ಮಿಲಿಟರಿಯವರ ಬೆಳೆಯಲು ೨೦ ಸಾವಿರ ಎಕರೆ ಜಮೀನನ್ನು ಉಪಯೋಗಿಸಲಾಗುತ್ತಿದೆ. ೧ ವರ್ಷಕ್ಕೆ ೩೦ ಸಾವಿರ ಪೌಂಡ್ ತರಕಾರಿಯನ್ನೂ ಪ್ರತಿ ತಿಂಗಳಿಗೆ ೩೦೦೦ ಟನ್ ಆಲೂಗಡ್ಡೆಯನ್ನೂ ಬೆಳೆಯಲಾಗುತ್ತಿದೆ. ನೀಲಗಿರಿಯಲ್ಲಿ ಆಲೂಗಡ್ಡೆ ಬೆಳೆಯಲು ೬೧ ಸಾವಿರ ಎಕರೆ ಜಮೀನನ್ನು ಉಪಯೋಗಿಸಲಾಗುತ್ತಿದೆಯೆಂದು ತಿಳಿಸಿದರು.

ಹಣ ಅಪಹರಿಸಲಾಯಿತು

ಬೆಂಗಳೂರು ವಾಸನ ಸಭೆ ಆಫೀಸಿಗೆ ಸೇರಿದ್ದ ೧೧ ಸಾವಿರ ರೂ ಗಳನ್ನು ನೌಕರನು ಲಕೋಟೆಯಲ್ಲಿ ರಿಜಿಸ್ಟರ್ ಪೋಸ್ಟ್ ಗೆ ಹಾಕಲು ತರುತ್ತಿದ್ದ ವೇಳೆಯಲ್ಲಿ ಯಾರೋ ಗುಂಪೊಂದು ಬಲಾತ್ಕಾರದಿಂದ ಕಿತ್ತುಕೊಂಡು ಹೋಗಿ ಹಣ ಅಪಹರಿಸಿದ್ದಾರೆ. ಪೋಲೀಸರಿಗೆ ವರದಿಯಾಗಿದೆ.

ಶ್ರೀ ಬೆಳ್ಳಾವಿ ವೆಂಕಟನಾರಾಯಣಪ್ಪನವರ ನಿಧನ

ಬೆಂಗಳೂರು, ೪

ಸೆಂಟ್ರಲ್ ಕಾಲೇಜಿನ ನಿವೃತ್ತ ಭೌತಿಕ ಶಾಸ್ತ್ರದ ಪ್ರೊಫೆಸರು ಮತ್ತು ಪ್ರಸಿದ್ಧ ಕನ್ನಡ ಸಾಹಿತಿಗಳೂ ಆಗಿದ್ದ ರಾವಸಾಹೇಬ ಶ್ರೀ ಬೆಳ್ಳಾವಿ ವೆಂಕಟನಾರಾಯಣಪ್ಪನವರು ನಿನ್ನೆ ರಾತ್ರಿ ತಮ್ಮ ೭೨ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬ ವಿಷಾದಿಸುತ್ತೇವೆ.

ಬಿಡುಗಡೆ

ಸೆಂಟ್ರಲ್ ಜೈಲಿನಲ್ಲಿ ಡಿಟೆನ್ಯೂ ಆಗಿದ್ದ ಶ್ರೀ ಜೆ. ಎಂ. ರಾಮಲಿಂಗಾಚಾರಿಯವರನ್ನು ಷರತ್ತಿನ ಮೇಲೆ ಬಿಡುಗಡೆ ಮಾಡಲು ಆಜ್ಞೆಯಾಗಿದೆ.

* * * *

ಶ್ರೀ ಬಿ ವಿ ಆರ್ ಕೃಷ್ಣದೇವ್‌ರವರನ್ನು ಒಂದು ತಿಂಗಳು ಪೆರೋಲ್ ಮೇಲೆ ಬಿಡುಗಡೆಮಾಡಿದೆ

ಕಮ್ಮಿ ಅಳತೆಗೆ ಶಿಕ್ಷೆ

ನಲ್ಲಾರ್ಪೇಟೆಯ ಅಲ್ಲಾಬಕ್ಷ್ ಎಂಬುವನಿಗೆ ಕಮ್ಮಿ ಅಳತೆಯ ಸೇರುಗಳನ್ನು ಇಟ್ಟುಕೊಂಡಿದ್ದನೆಂಬ ಆಪಾದನೆಯ ಮೇಲೆ ಆತನಿಗೆ ಒಂದು ವಾರ ಕಠಿಣ ಶಿಕ್ಷೆ ವಿಧಿಸಲಾಯಿತು.

ಹೆಚ್ಚು ಆಹಾರ ಬೆಳೆ ಹಂಚಿಕೆ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಬೆಳೆಯಲು ಸರ್ಕಾರದವರು ಇನ್ನೆರಡು ವರ್ಷಗಳವರೆಗೆ ಅನೇಕ ಏರ್ಪಾಡುಗಳನ್ನು ತೀರ್ಮಾನಪೂರ್ವಕವಾಗಿ ಆಜ್ಞೆ ಮಾಡಿದ್ದಾರೆ. ಇದರ ಸಂಬಂಧವಾಗಿ ವಿಶೇಷ ಅಧಿಕಾರಿಯೊಬ್ಬರನ್ನು ನೇಮಿಸಲಾಗುವುದು. ಈ ವರ್ಷ ೬೫ ಸಾವಿರ ರೂ ಗಳನ್ನು ಸರ್ಕಾರದವರು ವೆಚ್ಚಮಾಡುವರೆಂದು ಗೊತ್ತಾಗಿದೆ.

ವರ್ಗಾವರ್ಗಿ

ಅಸಿ|| ಕಂಟ್ರೋಲರ್ ಆದ ಶ್ರೀ ಎಂ. ಎಸ್ ರಾಮಚಂದ್ರರಾಯರನ್ನು ಸಿವಿಲ್ ಸಪ್ಲೈಸ್ ಶಾಖೆಗೆ ವಿಶೇಷ ಕೆಲಸದ ಮೇಲೆ ವರ್ಗಾಯಿಸಲಾಗಿದೆ

* * * *

ಶಿವಮೊಗ್ಗಾ ಸಬ್ ಡಿವಿಷನ್ ಎ|| ರಾವ್ ಬಿ.|| ಟಿ ಡಿಚ್. ಆಫೀಸರವರನ್ನು ಬೆಂಗಳೂರಿನ ಸಿವಿಲ್ ಆಫೀಸರಾಗಿ ನೇಮಿಸಲಾಗಿದೆ.

ನೂತನ ಹುದ್ದೆ

ಸೆಂಟ್ರಲ್ ಕಾಲೇಜಿನ ಅ. ಪ್ರೊಫೆಸರಾದ ಡಾ|| ಕೆ. ಎಸ್. ಸುಬ್ರಹ್ಮಣ್ಯರವರನ್ನು ಕಾನ್ಪುರದ ಸರ್ ಹಾರ್‌ಕೋರ್ಟ್ ಬಟ್ಲರ್ ಟೆಕ್ನಾಲಜಿಕಲ್ ಇನ್ಸ್ಟಿಟ್ಯೂಟಿನ ಫಿಜಿಕಲ್ ಕೆಮಿಸ್ಟ್ರಿ ಹುದ್ದೆಗೆ ನೇಮಿಸಲಾಗಿದೆಯೆಂದು ಹೇಳಲಾಗಿದೆ.

ಸೂಚನೆ

ಗೋಕುಲಾಷ್ಟಮಿ ಪ್ರಯುಕ್ತ ನಾಳೆಯ ದಿವಸ ನಮ್ಮ ಪತ್ರಿಕೆಯು ಪ್ರಕಟವಾಗುವುದಿಲ್ಲ

ವ್ಯವಸ್ಥಾಪಕ, ಸಾಧ್ವಿ

ಪ್ರವಾಹದಿಂದ ಸಾವಿರ ಮಂದಿ ಮರಣ

ಸೋಲಾಪುರ್ ಕ್ಷೇತ್ರದಲ್ಲಿ ವಿಪರೀತ ಮಳೆ ಬಿದ್ದು ಒಂದು ದೊಡ್ಡ ಕೆರೆಯು ಒಡೆದು ಅಪಾರ ನಷ್ಟ ಉಂಟಾಗಿದೆಯೆಂದು ವರದಿಯಾಗಿದೆ. ಅಜ್ಮೀರಿಗೆ 38 ಮೈಲಿ ದೂರದಲ್ಲಿರುವ ವಿಜಯನಗರವೆಂಬ ಪಟ್ಟಣವು ಅನಿರೀಕ್ಷಿತ ಪ್ರವಾಹಕ್ಕೆ ಸಿಕ್ಕಿ ಒಂದು ಸಾವಿರ ಮಂದಿ ವ್ಯಕ್ತಿಗಳು ಮರಣದರೆಂದೂ, ನಗರವು ಸಂಪೂರ್ಣವಾಗಿ ಮುಳುಗಿತೆಂದೂ, ಹಲವು ಹಳ್ಳಿಗಳು ಕೊಚ್ಚಿಕೊಂಡು ಹೋದುವೆಂದೂ ಹೇಳಲಾಗಿದೆ. ೧೫ ಮೈಲಿ ದೂರ ರೈಲ್ವೆ ಮಾರ್ಗವೂ ಕೊಚ್ಚಿಕೊಂಡು ಹೋಗಿದೆಯೆಂದೂ ತಿಳಿದು ಬಂದಿದೆ.

ಬಟ್ಟೆ ಪತಿಕೋಟಿ ಕಾಲ ಹೆಚ್ಚು ಮಾಡಲಾಗುವುದಿಲ್ಲ

ಈಗ ದಾಸ್ತಾನು ಮಾಡಲ್ಪಟ್ಟಿರುವ ಬಟ್ಟೆಗಳನ್ನು ಮಾರಾಟಮಾಡಲು ಕೊಟ್ಟಿರುವ ಅವಧಿಯನಂತರ ಕಾಲಾವಕಾಶ ಕೊಡಲಾಗುವುದಿಲ್ಲವೆಂದು ಸರಬರಾಜು ಕಾರ್ಯದರ್ಶಿಗಳಾದ ಮಿ|| ಹೈದರಿಯವರು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ತಿಳಿಸಿದರು.

ಗಣಿಗಳಲ್ಲಿ ಸ್ತ್ರೀ ಕೆಲಸಗಾರರು

ಕಲ್ಲಿದ್ದಲು ಗಣಿಗಳಲ್ಲಿ ಇಲ್ಲಿಯವರೆಗೆ ಹೆಂಗಸರು ಕೆಲಸ ಮಾಡಕೂಡದೆಂದೂ ಪ್ರತಿಬಂಧಕವಿದ್ದಿತು ಆದರೆ ಅಲ್ಲಿ ಕೆಲಸ ಮಾಡಲು ಹೆಚ್ಚು ಕೂಲಿಗಾರರು ಬೇಕಾಗಿರುವುದರಿಂದಲೂ ಸುಗ್ಗಿಕಾಲದಲ್ಲಿ ಅನೇಕರು ಕೆಲಸಬಿಟ್ಟು ಬೇಸಾಯ ಮಾಡಲು ಹೋಗುವುದರಿಂದ ಹೆಂಗಸರು ಮಧ್ಯಪ್ರಾಂತ್ಯದ ಗಣಿಗಳಲ್ಲಿ ಕೆಲಸ ಮಾಡಬಹುದೆಂದು ಭಾರತ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಆ ಕಾ ಶ ವಾ ಣಿ

ಆಗಸ್ಟ್ ೬ ನೇ ಶುಕ್ರವಾರ

....೮ ೩೦ ಹಿಂದುಸ್ತಾನಿ ಹಾಡುಗಾರಿಕೆ ಮಿಸ್ಟ್ರೀ ಛೀಮಸೇನ್ ಜೋಷಿ.

EXPERT IN WORLD MEDICINES

ತುರ್ಕಿ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾರ್ಶ್ವವಾಯು, ವಾತರೋಗ, ಕೆಮ್ಮಲು, ಗೂರಲು, ಮೂತ್ರ ಮತ್ತು ವೀರ್ಯ ರೋಗಗಳು, ಅಲ್ಲದೆ ಹೊಟ್ಟೆಯ ಅಲ್ಸರ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆಮಾಡುವ ನಿಪುಣರು

ಶೀಘ್ರ ಬಂದು ನಮ್ಮಲ್ಲಿಗೆ ಬಂದರೆ ಸಮಕ್ಷಮದಲ್ಲಿ ನೋಡುವುದು.

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆ ವ. ಕಾಲ—

ಬೆಳಿಗ್ಗೆ 9 ರಿಂದ 12½ ಘಂಟೆಯವರೆಗೆ

ಸಂಜೆ 5 ರಿಂದ 9 ಘಂಟೆಯವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ) ಮೈಸೂರು

ಇಬ್ಬರು ಪೋಲೀಸರಿಗೆ ಮರಣ ದಂಡನೆ

ಅಲಹಾಬಾದಿನ ಸ್ಪೆಷಲ್ ರಕ್ಷಕ ಪೋಲೀಸ್ ದಳದ ನಾಯಕ್ ರಾಮ ಸುಬ್ಬಿ ಮತ್ತು ಸರ್ಕಲ್ ಹುಸೇನ್ ಎಂಬುವರಿಗೆ ಅಲ್ಲಿನ ಸೆಷನ್ಸ್ ನ್ಯಾಯಾಧೀಶರು ಮರಣ ದಂಡನೆ ವಿಧಿಸಿದ್ದಾರೆ ಮಹಮದ್ ಇದ್ರೀಸ್, ಅಹಮದ್ ಹುಸೇನ್, ಮತ್ತು ಮಹಮದ್ ರಾಜ್ ಎಂಬ ಇತರ ಪೋಲೀಸರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಅಪಾದಿತರು ಒಬ್ಬರು ಗ್ರಾಮದ ಒಬ್ಬ ಬನಿಯ ಮತ್ತು ಆತನ ಸ್ತ್ರೀಯನ್ನು ಕೊಲೆಮಾಡಿದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿತ್ತು.

ರಾಜಕೀಯ ಕೈದಿಗಳ ಬಿಡುಗಡೆ

ಬಂಗಾಳಾ ಮಂತ್ರಿ ಮಂಡಲವು ಅಧಿಕಾರ ಸ್ವೀಕರಿಸಿದಾಗಿನಿಂದ ಇದುವರೆಗೆ ೧೫೧ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗಿಯೆಂದೂ ಪ್ರಕಟವಾಗಿದೆ

ಭಾರತೀ ಸೈನ್ಯ ಪ್ರಶಂಸೆ

ಸಿಸಲಿಯಲ್ಲಿ ಮಿತ್ರಸೇನೆಗಳು ಪ್ರಾಮುಖ್ಯವಾದ ಪ್ರಗತಿಯನ್ನು ಹೊಂದಿರುವುದಾಗಿ ಚರ್ಚಿಲರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. ಸಿಸಲಿಯಲ್ಲಿ ಜುಲೈ ೧೦ ನೇ ತಾರೀಖು ಮೊದಲು ಮಿತ್ರರು ಬಂದಿಳಿದಾಗ ಭಾರತಿ ಪಡೆಗಳು ಪ್ರಮುಖ ಪಾತ್ರ ವಹಿಸಿದ್ದವು. ಸಮುದ್ರದ ಹತ್ತಿರದಲ್ಲಿ ನೌಕೆಗಳಿಂದ ಪಡೆಗಳು ಮತ್ತು ಸರಬರಾಜನ್ನು ಇಳಿಸುವುದು ಶತ್ರು ಧಾಳಿಯಿಂದ ಆತ್ಮ ರಕ್ಷಣೆ ಮಾಡಿಕೊಳ್ಳುವ ಮತ್ತು ರಾತ್ರಿಯಲ್ಲಿ ಶತ್ರು ಪ್ಯಾರಾಚೂಟ್ ಪಡೆಗಳ ಧಾಳಿಯನ್ನು ತಡೆದು ಅವರಿಂದ ರಕ್ಷಿಸುವ ಕಾರ್ಯಕ್ರಮಗಳು ಈ ಪಡೆಗಳದಾಗಿದ್ದಿತು

೧ ಸಾವಿರ ರೂ. ನೋಟುಗಳು ಚಲಾವಣೆಯಲ್ಲಿವೆ

ಒಂದು ಸಾವಿರ ರೂ. ಗಳ ನೋಟುಗಳ ಚಲಾವಣೆಯನ್ನು ತೆಗೆದು ಹಾಕಿದೆಯೆಂದು ಹರಡಿರುವ ಸುದ್ದಿ ನಿರಾಧಾರವಾದುದೆಂದು ಅವು ಚಲಾವಣೆಯಲ್ಲಿ ಇದ್ದೇ ಇವೆಯೆಂದು ಇಂಡಿಯಾ ರಿಜರ್ವ್‌ಬ್ಯಾಂಕಿನವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಮುಂಡಾ ಹತ್ತಿರ ಅಮೇರಿಕ ಸೈನ್ಯ

ನ್ಯೂಗಿನಿ ದ್ವೀಪದಲ್ಲಿ ಅಮೇರಿಕನ್ ಭೂ ಸೈನ್ಯಗಳು ಮುಂಡಾ ವಿಮಾನ ನಿಲ್ದಾಣದ ಪೂರ್ವ ಭಾಗವನ್ನು ಮುಟ್ಟಿದವೆಂದೂ ಹತ್ತಿರ ಭಾಗದ ಅನೇಕ ಸ್ಥಾನಗಳನ್ನು ಇತರ ಅಮೇರಿಕ ಸೈನ್ಯಗಳು ಕೈವಶ ಮಾಡಿಕೊಂಡಿವೆಯೆಂದೂ ಹೇಳಲಾಗಿದೆ. ಮುಂಡಾದಲ್ಲಿ ಶತ್ರು ಪ್ರತಿಭಟನೆಯು ಹೆಚ್ಚಾಗಿದೆಯೆಂದೂ ಹೇಳಲಾಗಿದೆ. ಗ್ಲಾಸರ್ ಭೂಶಿರದ ಹತ್ತಿರದ ಹತ್ತಿರ ೬೦ ಸರಬರಾಜು ದೋಣಿಗಳನ್ನು ಮುಳುಗಿಸಲಾಯಿತು. ಕಳೆದ ೧೦ ದಿನಗಳಿಂದ ೬೦೦ ಶತ್ರು ಸರಬರಾಜು ದೋಣಿಗಳನ್ನು ಮುಳುಗಿಸಲಾಗಿದೆ.

ಹ್ಯಾಂಬರ್ಗ್ ಮೇಲೆ ಪುನಃ ಧಾಳಿ

ಬ್ರಿಟಿಷ್ ವಿಮಾನಗಳು ಹ್ಯಾಂಬರ್ಗ್ ಮೇಲೆ ಪುನಃ ಧಾಳಿ ಮಾಡಿದುವೆಂದು ವರದಿಯಾಗಿದೆ. ರೈನ್ ಪ್ರದೇಶವನ್ನೂ ವಾಯುವ್ಯ ಜರ್ಮನಿಯಲ್ಲಿರುವ ಅನೇಕ ಪಟ್ಟಣಗಳ ಮೇಲೂ ಧಾಳಿ ಮಾಡಲಾಯಿತೆಂದು ಹೇಳಲಾಗಿದೆ.

ಬ್ರಿ|| ಯುದ್ಧ ಕೈದಿಗಳ ವಧೆ

ಜರ್ಮನಿಯಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸಿದ ೬೯ ಜನ ಬ್ರಿಟಿಷ್ ಯುದ್ಧ ಕೈದಿಗಳನ್ನು ಜರ್ಮನರು ಗುಂಡಿನ ಬಾಯಿಗೆ ಗುರಿಮಾಡಿದರೆಂದು ಕಾಮನ್ಸ್ ಸಭೆಯಲ್ಲಿ ತಿಳಿಸಲಾಯಿತು.

ರಸ್ತೆಯಲ್ಲಿ ಅಲೆಯುತ್ತಿದ್ದವರ ದಸ್ತಗಿರಿ

ಕಲ್ಕತ್ತಾದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ವೇಗ್ರೆನ್ಸಿ ಕಾನೂನಿನ ರೀತ್ಯಾ ನಗರದಲ್ಲಿ ಅಲೆಯುತ್ತಿದ್ದ ೩೦೦ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿದರು.

ತಿ ದ್ದು ಪ ಡಿ

ನೆನ್ನೆ ದಿನದ ನಮ್ಮ ಪತ್ರಿಕೆಯ ಮೇಲಿನ ಭಾಗದಲ್ಲಿ "ಸಿಸಲಿಯಲ್ಲಿ ಮಿತ್ರರ ರಾಜಯ" ವೆಂದು ಆಕಸ್ಮಾತ್ ತಪ್ಪಿದ್ದಿದೆ. ಅದನ್ನು "ಸಿಸಲಿಯಲ್ಲಿ ಶತ್ರು ರಾಜಯ" ವೆಂದು ಓದಿಕೊಳ್ಳಬೇಕು ವಿನಂತಿ. [

The Benares Textile Emporium

(Importers of Silk Direct from Benares)

ಬನಾರಸ್ ಜವಳಿ ಅಂಗಡಿ

ಶೀಘ್ರದಲ್ಲಿಯೇ ತೆರೆಯಲ್ಪಡುತ್ತದೆ.

ಎಲ್ಲಿ? ಯಾವಾಗ? ನಿರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ಪಾ|| ೧-೧-೧೪ರ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಪ್ಪಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮಾಕಿ. ಸಹಾ ದೊರೆಯುತ್ತವೆ

Edited, printed and published by A R Nagrajan, at the Sadhvi Press D Subbiah Road Mysore

ಸಂಪುಟ ೨] ಶನಿವಾರ ೭-೮-೪೩ [ಸಂಚಿಕೆ ೧೮

ಸಿಸಲಿಯನ್ನು ಜರ್ಮನರು ತ್ಯಜಿಸುವರೇ ?

ಬೈಲಿಗೊರಾಡ್ ಮತ್ತು ಓರಲ್ ನಗರಗಳ ಆಕ್ರಮಣ
ಕಾಕ್ಸಸ್ಸಿನಲ್ಲಿ ಜರ್ಮನರ ಅತ್ಯಾಚಾರ

ಸೋಟಾರು ಅಪಘಾತದಿಂದ ಒಬ್ಬರ ಮರಣ

ಮೈಸೂರು ೭

ರಾಜಧಾನಿಯ ಚರ್ಚ್ ರಸ್ತೆಯಲ್ಲಿರುವ ಸೆಂಟ್ ಜೋಸೆಫ್ಸ್ ಯೂನಿಯನ್ ಮೋಟಾರ್ ವರ್ಕ್ಸ್ ಮಾಲೀಕರಾದ ವಿ॥ ಫ್ರಾನ್ಸಿಸ್ ಎಂಬುವರು ತಮ್ಮ ಅಂಗಡಿಯಲ್ಲಿ ರಿಪೇರಿಗೆಬಿಟ್ಟಿದ್ದ ಮುನ್ಸಿಪಲ್ ಲಾರಿಯನ್ನು ಮೊನ್ನೆಯ ಸಂಜೆ ೭ ಗಂಟೆಯಲ್ಲಿ ಡ್ರೈವ್ ಮಾಡಿಕೊಂಡುಹೋಗಿ ಚರ್ಚ್ ಮುಂಭಾಗದ ಪ್ರಾಕಾರದಲ್ಲಿ ಕುಳಿತಿದ್ದ ಅಂತೋನಿ ಸಾಮ್ಯುಯಲ್, ಸಾಲಿಸ್ಬರಿ ಮತ್ತು ಇನ್ನೊಬ್ಬರ ಮೇಲೆ ಲಾರಿಯನ್ನು ಹರಿಸಿ, ಘಾಯ ಪಡಿಸಿದರೆಂದೂ, ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತೆಂದೂ ನಿನ್ನೆ ಬೆಳಗ್ಗೆ ಅಂತೋನಿ ಸಾಮ್ಯುಯಲ್‌ರವರು ಮರಣ ಹೊಂದಿದರೆಂದೂ ವರದಿಯಾಗಿದೆ ಲಷ್ಕರ್ ಪೋಲೀಸರು ಫ್ರಾನ್ಸಿಸ್‌ರನ್ನು ದಸ್ತಗಿರಿಮಾಡಿ, ಅವರಮೇಲೆ ಕೇಸು ರಿಜಿಸ್ಟರ್ ಮಾಡಿದ್ದಾರೆ.

ಒಂದು ಸೇರು ಹಾಲಿಗೆ ಹನ್ನೆರಡು ಆಣೆ

ಬೊಂಬಾಯಿ ನಗರದಲ್ಲಿ ಹಾಲಿನ ಅಭಾವದಿಂದ ಬೆಲೆಯು ವಿಪರೀತಕ್ಕೆ ಏರಿದೆಯೆಂದು ಈಗ ಸೇರಿಗೆ ೧೨ ಆಣೆಯಂತೆ ಮಾರುತ್ತಿರುವಾಗಿದೆಯೆಂದೂ, ಸರ್ಕಾರದವರು ಈ ಕಷ್ಟವನ್ನು ಬಗೆಹರಿಸಬೇಕೆಂದೂ ಅಖಿಲ ಭಾರತ ಮಹಿಳಾ ಸಮ್ಮೇಳನದ ಕಾರ್ಯಕಾರಿ ಸಮಿತಿಯವರು ಮನವಿ ಮಾಡಿಕೊಂಡಿದ್ದಾರೆ.

ಅಕ್ಕಿ ಕೊಳೆಯುತ್ತಾ ಬಿದ್ದಿದೆ

ಪ್ರಪಂಚದ ಇತರ ಕಡೆಗಳಲ್ಲಿ ಅಕ್ಕಿ ಇಲ್ಲದೆ, ಜನ ಕಷ್ಟಪಡುತ್ತಿರುವಾಗ ಬರ್ಮ ಮತ್ತು ಈಸ್ಟಿಂಡಿಯಾ ದ್ವೀಪಗಳಲ್ಲಿ ೧೦ ಮಿಲಿಯನ್ ಟನ್ ಅಕ್ಕಿ ಕೊಳೆಯುತ್ತಾ ಬಿದ್ದಿದೆ ಎಂದು ಬ್ರಾಂಗಿಟೋಕಿಯೊರವರು ತಿಳಿಸಿದ್ದಾರೆ. ಬೇರೆಕಡೆ ಸಾಗಿಸಲು ವಾಹನಗಳ ಅಭಾವವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ರಾಜಕೀಯ ಬಂದಿಗಳಿಗೆ ಪ್ರತ್ಯೇಕ ಜೈಲು

ರಾಜಕೀಯ ಖೈದಿಗಳನ್ನು ಇಡಲು ಪ್ರತ್ಯೇಕ ಜೈಲುಗಳನ್ನು ನಿರ್ಮಿಸಲು ಬಂಗಾಳ ಸರ್ಕಾರವು ಏರ್ಪಾಡು ನಡೆಸುತ್ತಿರುವುದಾಗಿ ಹೇಳಲಾಗಿದೆ.

ಲಕ್ಷ ಸಾವಿರ ರೂಪಾಯಿ ಪರಿಹಾರ ದ್ರವ್ಯ

ವೇವಕೋಟೆ ಜಮೀನ್ದಾರರಿಗೆ ಸೇರಿದ ನಾರಿಬಲ್ ಭವನವು ಮದರಾಸ್ ಸರ್ಕಾರದ ಸಿವಿಲ್ ಕೋರ್ಟಿನ ಉಪಯೋಗಕ್ಕಾಗಿ ಕೊಡಲಾಗಿತ್ತು. ಹಿಂದೆ ಆಗಸ್ಟ್ ತಿಂಗಳಲ್ಲಿ ನಡೆದ ಗಲಭೆಯಲ್ಲಿ ಆ ಭವನವು ಬೆಂಕಿ ಬಿದ್ದು ನಾಶ ಹೊಂದಿದ್ದರಿಂದ ಮದರಾಸ್ ಸರ್ಕಾರವು ಪರಿಹಾರ ಹಣವಾಗಿ ೫ ಸಾವಿರ ರೂಪಾಯಿಗಳನ್ನು ಜಮೀನ್ದಾರರಿಗೆ ಕೊಟ್ಟಿರುತ್ತಾರೆ.

ಶಿಕ್ಷೆ

ಕಲ್ಕತ್ತಾದಲ್ಲಿ ಲೈಸೆನ್ಸ್ ಇಲ್ಲದೆ ಒಂದು ಪಿಸ್ತೂಲನ್ನು ಇಟ್ಟುಕೊಂಡಿದ್ದನೆಂಬ ಆಪಾದನೆ ಮೇಲೆ ಓರ್ವ ಬರ್ಮೀಸ್ ಹುಡುಗನಿಗೆ ಅಲ್ಲಿನ ನ್ಯಾಯಾಧೀಶರು ೧ ದಿವಸದ ಶಿಕ್ಷೆಯನ್ನು ವಿಧಿಸಿದರು.

ಬೈಲಿಗೊರಾಡ್ ಮತ್ತು ಓರಲ್ ಆಕ್ರಮಣ

ರಷ್ಯನರು ಬೈಲಿಗೊರಾಡ್ ನಗರವನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ. ಅಲ್ಲಿ ೩ ಸಾವಿರ ಜರ್ಮನ್ ಸೈನಿಕರು ಮಡಿದರೆಂದು ಹೇಳಲಾಗಿದೆ.

ಓರಲ್ ನಗರವನ್ನೂ ಸಹ ರಷ್ಯನರು ಆಕ್ರಮಿಸಿದ್ದಾರೆ. ಆ ನಗರದ ಒಳಭಾಗದ ರಸ್ತೆಗಳಲ್ಲಿ ಭೀಕರ ಕದನ ನಡೆಯುತ್ತಿದೆ. ಅನೇಕ ಯುದ್ಧ ಸಾಮಗ್ರಿಗಳನ್ನು ಬಿಟ್ಟು ಓರಲ್ ವಾಯುವ್ಯ ದಿಕ್ಕಿನ ಕಡೆ ಜರ್ಮನರು ಓಡುತ್ತಿದ್ದಾರೆ. ಓರಲ್‌ಗೆ ೮೦ ಮೈಲಿ ಪಶ್ಚಿಮಕ್ಕಿರುವ ಬ್ರಿಯಾನ್ಸ್ಕ್ ನಗರದ ಮೇಲೆ ರಷ್ಯನರು ನುಗ್ಗುತ್ತಿದ್ದಾರೆ.

ಸಿಸಲಿಯನ್ನು ಜರ್ಮನರು ಖಾಲಿಮಾಡುತ್ತಿದ್ದಾರೆ

ಬ್ರಿ॥ ೮ ನೇ ಸೈನ್ಯವು ಕ್ಯಾಟನಿಯಾ ನಗರವನ್ನು ಆಕ್ರಮಿಸಿಕೊಂಡಿದೆಯೆಂದು ವರದಿಯಾಗಿದೆ. ಆ ನಗರಕ್ಕೆ ೧೫ ಮೈಲಿ ಪಶ್ಚಿಮಕ್ಕಿರುವ ಗೆರ್‌ಬಿನಿ ಮತ್ತು ಇತರ ೯ ವಿಮಾನ ನಿಲ್ದಾಣಗಳು ಈಗ ಮಿತ್ರರ ಕೈವಶದಲ್ಲಿದೆಯೆಂದೂ ಹೇಳಲಾಗಿದೆ. ಮೌಂಟ್ ಎಟ್ನಾಕ್ಕೆ ಹತ್ತಿರವಿರುವ ಪ್ಯಾಟರ್ನೋ ನಗರವನ್ನು ಹಿಡಿಯಲಾಗಿದೆ.

ಇಂತಹ ಮುಖ್ಯ ನಗರಗಳೆಲ್ಲ ಮಿತ್ರರ ವಶದಲ್ಲಿದ್ದ ಮೇಲೆ ಇನ್ನು ಕದನ ನಡೆಸಿ ಪ್ರಯೋಜನವಿಲ್ಲವೆಂದು ಜರ್ಮನರು ಸಿಸಲಿಯನ್ನು ಖಾಲಿಮಾಡುವ ಕಾರ್ಯಕ್ಕೆ ಉಪಕ್ರಮಿಸಿದ್ದಾರೆಂದು ಹೇಳಲಾಗಿದೆ.

ಮೆಸಿನಾದಿಂದ ೬೦ ಮೈಲಿ ತೀರ ಪ್ರದೇಶದಿಂದ ಜರ್ಮನರು ತಮ್ಮ ಸೈನ್ಯವನ್ನು ಸಾಗಿಸಬೇಕಾಗಿದೆ. ಈ ಪ್ರದೇಶದಲ್ಲಿ ಮಿತ್ರರು ಸ್ವಲ್ಪವೂ ತಡೆಯಿಲ್ಲದೆ ಧಾಳಿ ಮಾಡುತ್ತಿದ್ದಾರೆಂದು ಹೇಳಲಾಗಿದೆ.

ಮುಂಡಾ ಮುತ್ತಿಗೆ

ನ್ಯೂ ಜಾರ್ಜಿಯಾದಲ್ಲಿರುವ ಮುಂಡಾ ದ್ವೀಪವನ್ನು ಅಮೆರಿಕ ಸೈನ್ಯವು ಮುತ್ತಿದೆ ಎಂದು ವರದಿಯಾಗಿದೆ. ಆ ಪ್ರದೇಶದ ವಿಮಾನ ನೆಲೆಗಳ ಅರ್ಧಭಾಗವನ್ನು ಈಗ ಮಿತ್ರರ ವಶದಲ್ಲಿದೆಯೆಂದು ಹೇಳಲಾಗಿದೆ.

ವೈಸ್ರಾಯರ ಭಾಷಣದ ದಿನ ನಡೆದ ಘಟನೆ

ವೈಸರಾಯರು ಶಾಸನಸಭೆಗಳ ಸಂಯುಕ್ತ ಸಭೆಯಲ್ಲಿ ಭಾಷಣಮಾಡಿದ ದಿನ ಓರ್ವ ತರುಣನು ತನ್ನ ಜೇಬಿನಲ್ಲಿ ೩ ರಿವಾಲ್ವರುಗಳನ್ನು ಇಟ್ಟುಕೊಂಡು ಪಾರ್ಲಿಮೆಂಟಿನ ರಸ್ತೆಯಲ್ಲಿ ಸಂಚರಿಸುತ್ತಿದ್ದನು. ಪೋಲೀಸರು ಗುಮಾನಿಯಿಂದ ತನಿಖೆಮಾಡಲೆತ್ನಿಸಲು, ಯುವಕನು ಕೋಪಿಸಿ ಒಬ್ಬ ಪೋ॥ ಮೇಲೆ ಗುಂಡುಹಾರಿಸಿ ಓಡಿದನು. ನಂತರ ಪೋ॥ ಅವನನ್ನು ಬೆನ್ನಟ್ಟಿ ಹಿಡಿದರು. ಆ ತರುಣನಮೇಲೆ ಶಸ್ತ್ರಾಸ್ತ್ರ ಶಾಸನದ ಪ್ರಕಾರ ಮೊಕದ್ದಮೆ ಹೂಡಲಾಗಿದೆ.

ವೃದ್ಧನ ಮದುವೆಗೆ ಯುವಕರ ಸತ್ಯಾಗ್ರಹ

ಕಾಂದೋ ಗ್ರಾಮದ ಜಮೀನುದಾರನು ತನ್ನ ೬೦ ನೇ ವಯಸ್ಸಿನಲ್ಲಿ ೧೩ ವರ್ಷದ ಹುಡುಗಿಯನ್ನು ಮದುವೆಯಾಗಲು ಒಪ್ಪಿ, ಅನೇಕ ಜನ ತನ್ನ ಬಂಧುಗಳೊಡನೆ ಮೆರವಣಿಗೆ ಹೊರಟನು. ಆಗ ಯುವಕರು ಅಂದವು ಜಮೀನುದಾರನಿಗೆ ತನ್ನ ವೃದ್ಧಾಪ್ಯದಲ್ಲಿ ಮದುವೆ ಆಗುವುದು ಯುಕ್ತವಲ್ಲವೆಂದು ಬುದ್ಧಿ ಹೇಳಿದರೂ ಕೇಳಲಿಲ್ಲವಾಗಿ ಯುವಕರು ಸತ್ಯಾಗ್ರಹ ಮಾಡಿದರು. ಅವರ ಪರಿಣಾಮವಾಗಿ ವೃದ್ಧ ಜಮೀನುದಾರನು ಮದುವೆ ಇಲ್ಲದೆ ತನ್ನ ಗ್ರಾಮಕ್ಕೆ ಹಿಂತಿರುಗಿದನು.

ವಿಮಾನ ಅಪಘಾತ

ಟಾಟಾ ಕಂಪನಿಯ ಕರಾಚಿ-ಕೊಲಂಬೊ ಮೇಲ್ ವಿಮಾನವೊಂದು ಪೂನವನ್ನು ಬಿಟ್ಟು, ೩ ನೇ ದಿನ ಅದು ತಲಪಲಿಲ್ಲವೆಂದು ವರದಿಯಾಗಿತ್ತು. ಅದರ ಮೇಲೆ ಪತ್ತೆಹಚ್ಚಲು, ಆ ವಿಮಾನವು ಪಶ್ಚಿಮ ಘಟ್ಟದ ಲೋನವಲಾ ಹತ್ತಿರ ಹಳ್ಳವೊಂದರಲ್ಲಿ ಮಗುಚಿಕೊಂಡು ನಾಶವಾಯಿತೆಂದೂ ಅದರಲ್ಲಿ ಸಂಚಾರಮಾಡುತ್ತಿದ್ದ ೭ ಜನರು ಸತ್ತುಹೋದರೆಂದೂ ವರದಿಯಾಗಿದೆ.

ಮಿತ್ರರ ಬಲ ಹೆಚ್ಚಾಗಿದೆ

ಅಟ್ಲಾಂಟಿಕ್‌ನಲ್ಲಿ ಮಿತ್ರರ ಕೈಮೇಲಾಗಿದೆಯೆಂದು ಜರ್ಮನ್ ಅಧಿಕಾರಿಗಳೂ ಒಪ್ಪಿಕೊಂಡಿದ್ದಾರೆ.

ಜೂಜುಗಾರರಿಗೆ ಜುಲ್ಮಾನೆ

ಮೈಸೂರು

ಕುದುರೆ ಪಂದ್ಯಾವಳಿಯಲ್ಲಿ ಜೂಜಿನ ಕ್ಲಬ್‌ನಲ್ಲಿ ಜೂಜಾಡುತ್ತಿದ್ದವರಿಗೆ ಪೋಲೀಸರು ರೆಸಿಡೆನ್ಸಿ ಮ್ಯಾ॥ ದಂಡ ೩೦ ರೂ. ಗಳನ್ನು ವಿಧಿಸಿದರು. ಮನೆ ಮಾಲೀಕರಿಗೆ ಸಬ್‌ಡಿವಿಷನ್ ಮ್ಯಾಜಿಸ್ಟ್ರೇಟರು ಜುಲ್ಮಾನೆ ವಿಧಿಸಿದರು.

ಉಪನ್ಯಾಸ

ಭಾವಸಾರ ಕ್ಷತ್ರಿಯ ಮಂಡಲಿ ಆಶ್ರಯದಲ್ಲಿ ನಿನ್ನೆ ಸಂಜೆ ಶ್ರೀ ಪಾಂಡುರಂಗ ವಿಠಲ ದೇವಸ್ಥಾನದಲ್ಲಿ ಶ್ರೀಯುತ ರಾಮಸ್ವಾಮಿಯವರು "ಸ್ತ್ರೀಯರ ಸ್ವತಂತ್ರ ಜೀವನ" ಎಂಬ ವಿಚಾರವನ್ನು ಭಾಷಣಮಾಡಿದರು.

ಭಾರಿ ಬೆಂಕಿ

ನ್ಯೂಯಾರ್ಕಿನಲ್ಲಿ ನೀಗ್ರೋಜನರು ಪಾಸಿಸಿದ ಜಾಗದಲ್ಲಿ ಒಂದು ದೊಡ್ಡ ದೊಂಬಿ ನಡೆದು ೫ ಜನ ಸತ್ತರೆಂದೂ, ೫೦೦ ಜನರಿಗೆ ಘಾಯಗಳಾದುವೆಂದೂ, ಅನೇಕ ಅಂಗಡಿಗಳಿಗೆ ಮತ್ತು ಮನೆಗಳಿಗೆ ನಷ್ಟವುಂಟಾಗಿ ಒಟ್ಟು ೫ ಮಿಲಿಯನ್ ಡಾಲರುಗಳಷ್ಟು ನಷ್ಟವಾಗಿದೆಯೆಂದೂ ವರದಿಯಾಗಿದೆ.

ನಾಜಿಗಳ ದೌರ್ಜನ್ಯ

ಜರ್ಮನರು ಕಾಕಸಸ್ ಪ್ರಾಂತ್ಯವನ್ನು ಆಕ್ರಮಿಸಿದ ಮೇಲೆ ಕೇವಲ ನೀಚತ್ವಕೃತ್ಯವನ್ನು ಮಾಡಿ ತಮ್ಮ ದೌರ್ಜನ್ಯವನ್ನು ಸ್ಪಷ್ಟ ಪಡಿಸಿರುವರು. ಇವರು ಕಾಕಸಸ್ ಪ್ರಾಂತ್ಯದಲ್ಲಿ ಯಹೂದ್ಯ ಜನಾಂಗದವರನ್ನು ನಾಶಮಾಡಬೇಕೆಂಬ ಉದ್ದೇಶದಿಂದ ಕೈಗೊಂಡು ಅನೇಕ ಜ್ಯೂಗಳನ್ನು ಕೊಂದರೆಂದೂ, ಒಂದು ಸ್ಥಳದಲ್ಲಿ ೬೦೦೦ ಜನಗಳನ್ನು ಮತ್ತೊಂದರಲ್ಲಿ ೨೦೦೦ ಜನಗಳನ್ನು ನಾಜಿಗಳು ಗೋಲಿಹಾರಿಸಿ ಕೊಲೆ ಮಾಡಿದರೆಂದು ಹಿಡಿದಿರುವರೆಂದೂ ಹೇಳಲಾಗಿದೆ.

ಯುದ್ಧ ಬೇಗ ಮುಗಿಯುವುದು

ಯುರೋಪಿನ ಯುದ್ಧವು ಬಹು ಬೇಗ ಮುಗಿಯುವ ಸಂಭವವಿದೆಯೆಂದು ಅಮೆರಿಕದಲ್ಲಿ ಪರಿಗಣಿಸಲಾಗಿದೆ. ಅದಕ್ಕೆ ಕಾರಣಗಳೇನೆಂದರೆ ಮುಸೋಲಿನಿ ಪತನ, ಅಟ್ಲಾಂಟಿಕ್‌ನಲ್ಲಿ ಸಬ್‌ಮೆರೀನ್ ಹಾವಳಿಯು ಕಮ್ಮಿಯಾಗಿರುವುದು, ಜರ್ಮನಿ ಮೇಲೆ ವಿಮಾನಧಾಳಿ ಹೆಚ್ಚಾಗಿರುವುದು, ಮತ್ತು ರಷ್ಯನರ ವಿಜಯ.

ಸಿಸಲಿಯ ಪತನವಾದ ಒಂದೆರಡು ದಿನಗಳಲ್ಲಿಯೇ ಇಟಲಿ ಮೇಲೆ ದಂಡಯಾತ್ರೆ ಆರಂಭವಾಗುವುದೆಂದು ಹೇಳಲಾಗಿದೆ.

ರಾಜಕೀ ಕೈದಿಗಳ ಬಗ್ಗೆ ಅಮೆರಿಯನರ ಉತ್ತರ

ಹಿಂದೂಸ್ಥಾನದ ರಾಜಕೀ ಬಂದಿಗಳ ವಿಚಾರವಾಗಿ ಕಾಮನ್ಸ್ ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದು ಮಿ॥ ಅಮೆರಿಯವರು, ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರಿಗೆ ಯಾವ ಅನುಕೂಲವನ್ನೂ ಒದಗಿಸಿಕೊಡಲಾರೆವೆಂಬುದಾಗಿ ಭಾರತ ಸರ್ಕಾರದ ರೀತಿಯೆಂದು ತಿಳಿಸಿದರು. ಶ್ರೀ ರಾಜಗೋಪಾಲಾಚಾರಿ ಮೊದಲಾದವರು, ಕಾಂಗ್ರೆಸ್ ಮುಖಂಡರುಗಳನ್ನು ಭೇಟಿಮಾಡಲು ಅವಕಾಶ ಕೊಡಬೇಕೆಂದು ... ಮಿ॥ ಸೋರೆನ್‌ಸನ್ ... ಯೋಗಗಳನ್ನು ... ಉದ್ದೇಶವಿಲ್ಲವೆಂದು ತಿಳಿಸಿದರು.

ಸ್ವಸ್ತಿಕ ಸಾಹಿತ್ಯ ಸಂಘ

ಮೈಸೂರು 7

ಮೇಲ್ಕಂಡ ಸಂಘದ ಕಾರ್ಯದರ್ಶಿಗಳು ಈ ರೀತಿ ತಿಳಿಸುತ್ತಾರೆ—

ನಮ್ಮ ಸಂಘದ ಕಾರ್ಯಕಲಾಪಗಳ ಜೊತೆಗೆ ಪಠನಸ್ಪರ್ಧೆ ಪಕ್ಷಾಂತರವನ್ನು ಒಂದನ್ನಾಗಿ ಸೇರಿಸಿಕೊಳ್ಳಲಾಗಿದೆ. ನೆನ್ನೆ ದಿನ ಸಾಯಂಕಾಲ ನಮ್ಮ ಸಂಘದ ಆಶ್ರಯದಲ್ಲಿ ನನ್ನ ಕೇಳಿಯ ದೀಪಾಗಂ ದಿದನ್ನ ಒಂದು ತರಗತಿಯನ್ನು ತೆರೆಯಲಾ ಯಿತು. ನಗರದ ಅಕ್ಷರಪ್ರಚಾರದ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಟಿ ಶ್ರೀನಿವಾಸಮೂರ್ತಿಯವರು ಅಕ್ಷರ ಪ್ರಚಾರದ ಅವಶ್ಯಕತೆ ವಿಚಾರವಾಗಿ ಪ್ರಾರಂಭೋತ್ಸವಕ್ಕಾಗಿ ನೆರೆದಿದ್ದ ಮಹನೀಯರನ್ನು ಕುರಿತು ಅಮೋಘ ಭಾಷಣ ಮಾಡಿದರು. ಸಂಘದ ಸದಸ್ಯರೂ ಮತ್ತು ವಿದ್ಯಾಭ್ಯಾಸಿಲ ಯ. ಸಂಘದ ಕಾರ್ಯದರ್ಶಿಗಳೂ ಆದ ಶ್ರೀ ಡಿ ಎಸ್ ರಾವ್ ಅವರಿಂದ ಭಾರತವಾಚನ ನಡೆದು, ಶ್ರೀ ಎಂ ಕೆ ರಾಜಗೋಪಾಲ್ ಅವರಿಂದ ವಂದನಾರ್ಪಣೆ ನಡೆಯಿತು. ಸಭೆಯಲ್ಲಿ ಈ ತರಗತಿಗೆ ೧೨ ಜನ ವಿದ್ಯಾರ್ಥಿಗಳಿದ್ದರು.

ನಾಟಕ

ತಾ. 8-8-43 ನೇ ಭಾನುವಾರ ಸಂಜೆ 7-30 ಕ್ಕೆ ವಿಶಾಲನೋಟ ರತ್ನಾವಳಿ ಥಿಯೇಟರಿನಲ್ಲಿ ಮೈಸೂರು ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀ ಸರಸ್ವತಿ ವಿದ್ಯಾಶಾಲೆಯ ಬಾಲಕಿಯರಿಂದ ಶ್ರೀ ಕೃಷ್ಣಲೀಲಾ ಎಂಬ ನಾಟಕವು ಅಭಿನಯಿಸಲ್ಪಟ್ಟು ಆ ದಿನದ ಉತ್ಪತ್ತಿಯು ಆ ಪಾಠಶಾಲೆ ಬಹುಮಾನಕ್ಕೆ ಕೊಡಲ್ಪಡುತ್ತದೆ. ಮೈಸೂರು ಸಿಟಿ ಮುನಿಸಿಪಲ್ ಪ್ರೆಸಿಡೆಂಟರಾದ ಮ॥ರಾ॥ ಬಿ ಎಸ್. ರಾಘವೇಂದ್ರರಾಯರು ಆ ದಿನ ಅಧ್ಯಕ್ಷತೆ ವಹಿಸಿ, ಸ್ವಹಸ್ತದಿಂದ ಬಹುಮಾನಗಳನ್ನು ಮಕ್ಕಳಿಗೆ ಹಂಚಲು ಒಪ್ಪಿರುತ್ತಾರೆ. ಮ॥ ರಾ॥ ಜಿ. ಕೆ. ಡಿ. ಭದ್ರಯ್ಯನವರು, ಪ್ರೀಯಾಗಿ ತಮ್ಮ ಥಿಯೇಟರು ಕೊಟ್ಟು ಪ್ರೋತ್ಸಾಹಿಸಿದ್ದಾರೆ. ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕೆಲಸಗಾರರಿಗೆ ಭಾನುವಾರ ರಜಾ ಕೊಡಬೇಕು

ಶ್ರೀ ಎಂ. ಆರ್. ಸಿ. ಬಸಪ್ಪನವರು ಈ ರೀತಿ ತಿಳಿಸುತ್ತಾರೆ—

"ಮೈಸೂರು ರಾಜಧಾನಿ ವರ್ತಕರಲ್ಲಿ ಕೆಲಸ ಮಾಡುವ ಕೆಲಸಗಾರರ ಪರವಾಗಿ, ಪ್ರತಿ ಭಾನುವಾರ ೧೨ ಘಂಟೆ ಮೇಲೆ ಎಲ್ಲಾ ವರ್ತಕರುಗಳೂ, ಡಾಕ್ಟರುಗಳೂ, ಹಿಂದೂ ಹೋಟೆಲ್ ಮಾಲೀಕರುಗಳೂ ಸಹ ತಮ್ಮಲ್ಲಿ ಕೆಲಸಮಾಡುವ ನೌಕರರಿಗೆ ಅರ್ಧ ದಿವಸ ರಜವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

"ಹಾಲಿ ಬೆಂಗಳೂರು ನಗರದಲ್ಲಿ ಎಲ್ಲಾ ವರ್ತಕರುಗಳೂ, ಡಾಕ್ಟರುಗಳೂ ಮತ್ತು ಹಿಂದೂ ಹೋಟೆಲ್ ಮಾಲೀಕರುಗಳೂ ಸಹ ೧೨ ಘಂಟೆ ಮೇಲೆ ತಮ್ಮ ಅಂಗಡಿಗಳನ್ನು ಮುಚ್ಚಿ, ತಮ್ಮಲ್ಲಿ ಕೆಲಸಮಾಡುವ ಕೆಲಸಗಾರರಿಗೆ ಅರ್ಧ ದಿವಸ ರಜವನ್ನು ಕೊಟ್ಟು ತಾವೂ ಸಹ ಆ ದಿನ ವಿಶ್ರಾಂತಿಯನ್ನು ಹೊಂದುತ್ತಿರುತ್ತಾರೆ. ಅದೇ ರೀತಿ ರಾಜಧಾನಿಯಲ್ಲೂ ಎಲ್ಲಾ ವರ್ತಕರುಗಳೂ ಭಾನುವಾರ ಮಧ್ಯಾಹ್ನ ರಜವನ್ನು ಕೊಟ್ಟು ರಾಜಧಾನಿಯ ಕೀರ್ತಿಯನ್ನು ಹೆಚ್ಚಿಸಬೇಕೆಂದು ಕೆಲಸಗಾರರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ."

ವೃತ್ತ ಪತ್ರಿಕೋದ್ಯೋಗಿಗಳ ಸಮ್ಮೇಳನ

ಬೆಂಗಳೂರು ೭

ಮೈಸೂರು ಸಂಸ್ಥಾನದ ವೃತ್ತ ಪತ್ರಿಕೋದ್ಯೋಗಿಗಳ ಸಮ್ಮೇಳನ ಸೆಪ್ಟೆಂಬರ್ ೧೮ ಮತ್ತು ೧೯ ತಾರೀಖುಗಳಲ್ಲಿ ನಡೆಸಲಾಗುವುದು. ಈ ತಿಂಗಳು ತಾ॥ ೨೫ ರೊಳಗಾಗಿ ಪತ್ರಿಕೋದ್ಯೋಗಿಗಳೆಲ್ಲರೂ ೨ ರೂ. ಚಂದಾಕೊಟ್ಟು ಪ್ರತಿನಿಧಿಗಳಾಗಬೇಕೆಂದು ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಬಿ. ಶ್ರೀನಿವಾಸರಾಯರು ಪ್ರಾರ್ಥಿಸುತ್ತಾರೆ.

ಜಪಾನಿನ ನೂತನ ಸಿದ್ಧತೆ

ಪೆಸಿಫಿಕ್ ಮತ್ತು ದೂರ ಪ್ರಾಚ್ಯದಲ್ಲಿ ಮಿತ್ರ ಧಾಳಿಯನ್ನು ಎದುರಿಸಲು ಜಪಾನೀಯರು ಸಾಲಮನ್ಸ್ ಮತ್ತು ನ್ಯೂಗಿನಿಯ ಪ್ರದೇಶಗಳನ್ನು ತ್ಯಜಿಸಿ ನೆದರ್ಲೆಂಡ್ ಇಂಡೀಸ್ ಭಾಗಗಳಲ್ಲಿ ಸಿದ್ಧತೆ ನಡೆಸುತ್ತಿರುವರೆಂದು ಆಸ್ಟ್ರೇಲಿಯ ಬಾತ್ಮೀದಾರರೊಬ್ಬರು ತಿಳಿಸಿರುತ್ತಾರೆ.

ಸ್ವಿಸ್ ರೈಲ್ವೆ ಬಳಸಲು ನಾಜೀಗಳ ಒತ್ತಾಯ

ಸ್ವಿಟ್ಸರ್ಲೆಂಡಿನ ರೈಲ್ವೆ ಮಾರ್ಗಗಳನ್ನುಪಯೋಗಿಸಲು ತಮಗೆ ಆಸ್ಪದ ಕೊಡಬೇಕೆಂದು ಜರ್ಮನರು ಸ್ವಿಟ್ಸರ್ಲೆಂಡಿಗೆ ಒತ್ತಾಯಪಡಿಸುತ್ತಿದ್ದಾರೆಂದು ವರದಿಯಾಗಿದೆ.

ಚೀಣಿಯ ರಣ ನಾಯಕಿ

ಹಾಂಗ್‌ಕಾಂಗ್ ಎಂಬ ಚೀಣಿಯ ಮಹಿಳೆಯು ಹಾಂಗ್ಕೊ ನಗರದ ಹೊರಗೆ ಪ್ರಥಮದಲ್ಲಿ ೨೦೦ ಸೈನಿಕರನ್ನು ಸಂಗ್ರಹ ಮಾಡಿ, ಗೊರಿಲ್ಲದಿಂದ ವೈರಿಗಳನ್ನು ಸುಲಿಗೆಮಾಡುತ್ತಿದ್ದಳು. ಈಗ ಆ ರಣನಾಯಕಿ ಕೈಕೆಳಗೆ ೧೦ ಸಾವಿರ ಸೈನಿಕರೂ, ೮ ಸಾವಿರ ಬಂದೂಕಗಳೂ ಇರುತ್ತವೆ. ಈಕೆ ಜಪಾನರನ್ನು ಪ್ರತಿಭಟಿಸಲು ಚಿಕಿಯಾಂಗ್ ರಣರಂಗಕ್ಕೆ ಬಂದಿರುವಳೆಂದು ಪ್ರಕಟವಾಗಿದೆ.

ಮಿತ್ರ ರೇಡಿಯೊ ಮೇಲೆ ಪ್ರತಿಬಂಧಕ

ಬ್ರಿಟನ್, ಅಮೆರಿಕ ಮತ್ತು ಇತರ ರಾಷ್ಟ್ರ ರೇಡಿಯೋಗಳನ್ನು ಕೇಳಕೂಡದೆಂದು ಇಟಲಿ ಜನಗಳಿಗೆ ಬಡೋಗ್ಲಿಯವರು ಆಜ್ಞೆ ಮಾಡಿದ್ದಾರೆಂದು ಹೇಳಲಾಗಿದೆ.

ಮನೆ, ಜಮೀನು ಮತ್ತು ಷೇರು

ಕೊಳ್ಳುವವರೂ, ಮಾರುವವರೂ ನಮ್ಮಲ್ಲಿ ವಿಚಾರಿಸಿ.

ಬಿ. ಆರ್. ಲಕ್ಷ್ಮಣಶೆಟ್ಟಿ

ದಿ ಎಸ್ಟೇಟ್ ಬ್ರೋಕರೇಜ್ ಹೌಸ್, ಸಯ್ಯಾಜಿರಾವ್ ರಸ್ತೆ, ಮೈಸೂರು.

ಫ್ಯಾಸಿಸ್ಟ್‌ಗಳ ವಿಚಾರಣೆ

ಇಟಲಿಯ ಫ್ಯಾಸಿಸ್ಟ್ ಅಧಿಕಾರಿಗಳನ್ನು ವಿಶೇಷ ಟ್ರಿಬ್ಯೂನಲ್ ವಿಚಾರಣೆಗುರಿಮಾಡಿ ಅವರು ಗಳಿಸಿರುವ ಹಣವೆಲ್ಲಾ ರಾಷ್ಟ್ರಕ್ಕೆ ಸೇರಬೇಕಾಗುವುದೆಂದು ಬಡೋಗ್ಲಿಯವರು ಆಜ್ಞೆ ಮಾಡಿದ್ದಾರೆ. ಇಟಲಿಯ ಎಲ್ಲಾ ಶಾಲೆಗಳಲ್ಲಿ ಫ್ಯಾಸಿಸ್ಟ್ ಪುಸ್ತಕಗಳನ್ನು ತೆಗೆದುಹಾಕಬೇಕೆಂದು ಆಜ್ಞೆ ಮಾಡಿದ್ದಾರೆ.

ಹೆಚ್ಚಾಗಿ ಆಹಾರ ಬೆಳೆಯಲು ಸಹಾಯ

ಪ್ರಾಂತ್ಯಗಳ ಮತ್ತು ಸಂಸ್ಥಾನಗಳು ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುವುದಕ್ಕಾಗಿ ಭಾರತ ಸರ್ಕಾರವು ... ಲಕ್ಷ ರೂ. ಮಂಜೂರು ಮಾಡಿರುವುದು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ತಿಳಿಸಲಾಗಿದೆ.

ಪ್ರಸಿದ್ಧ ಪತ್ರಿಕೆ

ಈ ಮೂಲ್ಯ ರಾಜಧಾನಿಯ ಮಹಾಜನರಿಗೆ ತಿಳಿಯಪಡಿಸುವುದೇನೆಂದರೆ— ಮೈಸೂರ್ ಸಂತೆ

ತಾ॥ ೮-೮-೪೩ ನೇ ಭಾನುವಾರ ದಿವಿ ೧೦ ಘಂಟೆಗೆ

ಹರಾಜು

ನಡೆಯುತ್ತದೆ. ತಾವೂ ತಮ್ಮ ಮಿತ್ರರಲ್ಲಿಯವರೂ ಬಂದು ಬೇಕಾದ ಸಾಮಾನುಗಳಿಗೆ ಬಿಡ್ ಮಾಡಿ ಸಾಮಾನುಗಳನ್ನು ಪಡೆಯಬಹುದು. ಹೆಚ್ಚು ವಿಷಯಗಳು ನಮ್ಮಲ್ಲಿ ರೂಬ್‌ರೂಬ್ ವಿಚಾರಿಸತಕ್ಕದ್ದು.

ಬಿ. ಎಸ್. ಸುಬ್ಬರಾವ್,

ಸಿಟಿ ಆಕ್ಷನೀಯರಿಂಗ್ ಕಂ

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

Edited, printed and published by A. R. Nagaraja at the Sadhvi Press, D. Subbiah Road, Mysore.

The Benares Textile Emporium

(Importers of Silk Direct from Benares)

ಬನಾರಸ್ ಜವುಳಿ ಅಂಗಡಿ

ತಾ॥ ೬-೮-೧೯೪೩ ರಿಂದ ಪ್ರಾರಂಭ

ಇದುವರೆಗೂ ಸಯ್ಯಾಜಿರಾವ್ ರಸ್ತೆಯಲ್ಲಿ ಮೆಸರ್ಸ್ ಜಿ. ಪಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್ ರವರು ಹೊಸದಾಗಿ ತೆರೆಯಲ್ಪಟ್ಟಿರುವ ಬನಾರಸ್ ಜವುಳಿ ಅಂಗಡಿಯಲ್ಲಿ ನಿಮ್ಮ ಇಷ್ಟಕ್ಕೆ ಬೇಕಾದ ರೇಷ್ಮೆ ಬಟ್ಟೆಗಳು ಸುಲಭ ದರದಲ್ಲಿ ಮಾರಾಟಕ್ಕೆ ಸಿದ್ಧವಾಗಿವೆ.

ಬೇರೆ ಕಡೆ ಹೋಗುವ ಮುನ್ನ ದಯವಿಟ್ಟು ಒಮ್ಮೆ ನಮ್ಮಲ್ಲಿ ಬಂದು ನೋಡಿರಿ.

ಶ್ರೀ ಯುರ ನೌಕ ಯ ರ್ ಕ್ಕಾ ಗಿ

ತಾ॥ ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಹೊಸದಾಗಿ ಪ್ರಾರಂಭ ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿರಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮೈಸೂರ್ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಇತರ ಸಾಮಾನು ಮಾರಲ್ಪಡುತ್ತದೆ.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಬೆಳ್ನೊರೆಯು ಬುರುಗು ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಮೇಲಿನ ಅಶುದ್ಧಿಯನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮವನ್ನು ಕಾಪಾಡುವುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಭಾನುವಾರ ೮-೮-೪೫ [ಸಂಚಿಕೆ ೧೯

ಬರ್ಲಿನ್ ನಗರ ತ್ಯಜಿಸಲಾಗುವುದೆ?

ಭಾರತ ಬಿಕ್ಕಟ್ಟನ್ನು ಬಗೆಹರಿಸಲು ಬ್ರಿಟಿಷರ ಮನವಿ ಮೆಕ್ಕಾದಲ್ಲಿ ಭಾರತಿಹೆಂಗಸನ್ನು ಗುಲಾಮಗಿರಿಗೆ ಮಾರಿದರು

ಟಾಗೂರ್ ಸಂಸ್ಮರಣೆ

ಮೈಸೂರು, ೬

ಮೈಸೂರು ವಿಶ್ವವಿದ್ಯಾಲಯದ ಸಂಘದ ವು ನಿನ್ನೆ ಸಾಯಂಕಾಲ ಡಾ॥ ರವೀಂದ್ರನಾಥ್ ಟಾಗೂರ್‌ರವರ ದಿನಾಚರಣೆಯನ್ನು ಆಚರಿಸಿದರು. ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರೊ॥ ರಾವ್ ದಾ॥ ಪ್ರೊಫೆಸರ್ ...ರವರು ಅಗ್ರಾಸನ ವಹಿಸಿದ್ದರು. ಶ್ರೀ ...ದ ಭರತರಾಜ್‌ಸಿಂಗ್, ರಾ ಸಿ ಸ್ವಾಮಿ ...ಸ್ತ್ರಿ, ರಾಜಗೋಪಾಲ್, ರಾಘವಾಚಾರ್ ...ರಲ್ಲಾದವರು ಕವಿಗಳ ಜೀವನ ಚರಿತ್ರೆ ... ವಿಷಯವಾಗಿ ಭಾಷಣ ಮಾಡಿದರು.

ಗ್ರಾಮಾಭಿವೃದ್ಧಿ ಯೋಜನೆ

ಮೈಸೂರು ಜಿಲ್ಲೆಯಲ್ಲಿ ಗ್ರಾಮಾಭಿವೃದ್ಧಿ ಕಾರ್ಯವನ್ನು ಇನ್ನೂ ಹೆಚ್ಚಾಗಿ ನಡೆಸಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ನಿನ್ನೆ ಮಧ್ಯಾಹ್ನ ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಧ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತ್ತು. ಜಿಲ್ಲಾ ...ಲ್ದಾರರುಗಳು, ಸಬ್ ಡಿವಿಜನ್ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಗ್ರಾಮಾಭಿವೃದ್ಧಿ ಸ್ಪೆಷಲ್ ಆಫೀಸರಾದ ... ರಾಮಚಂದ್ರ ಚೊಂಭೋರೆಯವರು ಗ್ರಾಮಾಭಿವೃದ್ಧಿ ಕಾರ್ಯಕ್ರಮದ ವಿವರವನ್ನು ಮಾಡಿದರು.

ಪ್ರತಿಬಂಧಕಾಜ್ಞೆ

ಬೆಂಗಳೂರು ೬

ಬೆಂಗಳೂರು ನಗರದಲ್ಲಿಯೂ ಮತ್ತು ನಗರದ ೫ ಮೈಲಿ ಸುತ್ತಲೂ ಆಗಸ್ಟ್ ತಾ॥ ... ೧ ತಿಂಗಳ ಕಾಲ ಸಭೆ, ಮೆರವಣಿಗೆ ... ನಡೆಯಲಾಗದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಅಂಗಡಿ, ಹೋಟೆಲ್ ಮೊದಲಾದ ಜನೋಪಯುಕ್ತ ಸ್ಥಳಗಳನ್ನು ಮುಚ್ಚಲಾಗದೆಂದೂ ಪ್ರಕಟಿಸಲಾಗಿದೆ.

ಅಕ್ಕಿ ಅಭಾವ ಇಲ್ಲ

ಬೆಂಗಳೂರಿನಲ್ಲಿ ಅಕ್ಕಿ ಅಭಾವ ಉಂಟು ... ನಿಜವಾಗಿಯೂ ಯಾವ ಕಾರಣಗಳು ... ಕಳೆದ ತಿಂಗಳು ೨೨೦೦೦ ಮೂಟೆ ... ಯನ್ನು ಒದಗಿಸಿದ್ದರೂ ಅಕ್ಕಿ ಇಲ್ಲವೆಂ... ಕೇಳಬರಲು, ಹಲವು ವ್ಯಾಪಾರಿ ... ದಸ್ತಗಿರಿಯೇ ಕಾರಣವೆಂಬುದು, ಪತ್ತೆ ... ಹಚ್ಚಲ್ಪಟ್ಟು, ಸುಮಾರು ಅಕ್ಕಿ ವ್ಯಾಪಾರಿಗಳ ಲೈಸೆನ್ಸ್‌ಗಳನ್ನು ಕಿತ್ತುಕೊಳ್ಳಲಾಯಿತೆಂದು ಆಹಾರ ಸರಬರಾಯಿ ಕಾರ್ಯದರ್ಶಿಗಳು ತಿಳಿಸುತ್ತಾರೆ. ಅಕ್ಕಿಯ ಸರಬರಾಯಿ ಇನ್ನಷ್ಟು ಹೆಚ್ಚಾಗುವಂತೆ ಸರ್ಕಾರಿ ... ಮುಂತಾದ ಸಂಸ್ಥೆಗಳ ಮೂಲಕ ... ಅಧಿಕವಾಗುವಂತೆ ಮಾಡಲು ... ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ ... ತಿಳಿಸಿದ್ದಾರೆ.

ದಸ್ತಗಿರಿ

ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ... ಗಿಡಾವ, ಎ. ಎಲ್. ಉಪಾಧ್ಯಾಯ, ... ಎಸ್. ಎಂ. ರಾವ್ ಮತ್ತು ಎ. ಆರ್ ... ಲಾಲ್ ಇವರುಗಳನ್ನು ದಸ್ತಗಿರಿ ಮಾಡಲಾಗಿದೆ.

ಖಾಸಗಿ ಅಧ್ಯಕ್ಷರು

ಚಿಕ್ಕಮಗಳೂರು ಪೌರಸಭೆಯ ಖಾಸಗಿ ... ಡಾ॥ ಕೆ. ಆರ್ ಭಾಗವತರ

ಗಾಂಧಿ ಅಕಾಡೆಮಿ

ಗಾಂಧೀಜಿಯವರ ತತ್ವ ಮತ್ತು ಜೀವನ ಗಳನ್ನು ದೇಶದಲ್ಲಿ ಹರಡಲು ಬೊಂಬಾಯಿಯಲ್ಲಿ ಗಾಂಧಿ ಅಕಾಡೆಮಿ ಎಂಬ ಸ್ವತಂತ್ರ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಶ್ರೀ ಕೆ. ಮುನಿಶಿಯವರು ಅಧ್ಯಕ್ಷರಾಗಿಯೂ, ಮೈಸೂರಿನವರಾದ ಶ್ರೀಮತಿ ಜಿ. ಕೃಷ್ಣಮಾಚಾರಿಯವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ಗಾಂಧಿಜಿಯವರೇ ಶಾಂತಿಸ್ಥಾಪಕರು

ಡೈ॥ ಜೆ ಪಿ ಎಸ್ ... ಗಳು ಸಾಂಗ್ಲಿಯ ವೆಲ್ಲಿಂಗ್‌ಟನ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ "ಮಹಾತ್ಮಾ ಗಾಂಧಿಯವರು ದೊಡ್ಡ ... ಅವರು ಭಾರತ ಸಂಸ್ಕೃತಿ ಮತ್ತು ನಾಗರಿಕತೆಯ ಪ್ರತಿನಿಧಿಗಳಾಗಿರುವರು. ಪ್ರಾಂತ್ಯಗಳಲ್ಲಿ ಕೂಡಲೇ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗಬೇಕು. ಭಾರತದ ಪ್ರತಿನಿಧಿಗಳು ಶಾಂತಿ ಸಮ್ಮೇಳನದಲ್ಲಿ ಇರುವುದು ಅತ್ಯಗತ್ಯ. ಮಹಾತ್ಮ ಗಾಂಧಿಯವರು ಇನ್ನು ಮುಂದೆ ಯುದ್ಧವೇ ಇಲ್ಲದಂತೆ ಮಾಡಲು ಸಮರ್ಥರಾಗಿರುವರು" ಎಂಬುದಾಗಿ ತಿಳಿಸಿದರು.

"ಮೇಲ್" ಪತ್ರಿಕೆ ಮೇಲೆ ದಾವೆ

ಮದರಾಸಿನ ಆಂಗ್ಲ ದಿನಪತ್ರಿಕೆಯಾದ "ಮೇಲ್" ಮೇಲೆ ... ಟಿವ್ ಪಬ್ಲಿಷರ್ಸ್ ಮೇಲೆ ... ಆರ್ ... ಎಂಬುವರು ... ೩,೭೦೦ ರೂ. ನಷ್ಟದ ದಾವೆ ... ಜಸ್ಟಿಸ್ ... ಎರಡು ತಿಂಗಳ ... ಮತ್ತು ತಮ್ಮ ದೇಶಕ್ಕೆ ಹೋಗುವ ... ಕೊಡಬೇಕೆಂದು ತಿಳಿಸಿದರು.

ಸ್ಪ್ರಾನಿಷ್‌ನಲ್ಲಿ ಅಮೆರಿಕನ್ ಸೈನ್ಯ ದಳ

... ಪಾದ ಸ್ಪ್ರಾನಿಷ್‌ನನ್ನು ಅಮೆರಿಕನ್ ಸೈನ್ಯ ... ದಳಗಳು ... ಸೈನ್ಯಗಳು ...

ಬರ್ಲಿನ್ ಖಾಲಿ ಮಾಡಲಾಗುತ್ತಿದೆ

ಬರ್ಲಿನ್ ನಗರವನ್ನು ಖಾಲಿ ಮಾಡುತ್ತಿರುವುದಾಗಿಯೂ ಎಲ್ಲಾ ಹೆಂಗಸರು ಮತ್ತು ಮಕ್ಕಳುಗಳನ್ನು ನಗರದಿಂದ ಬೇರೆ ಕಡೆಗೆ ಸಾಗಿಸಲಾಗುತ್ತಿದೆಯೆಂದೂ ಡಾ॥ ಗೊಬೆಲ್ಸ್‌ರವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ವೈಸರಾಯ್ ವಿಂಡ್‌ಸರ್‌ರವರೇ?

ಆಸ್ಟ್ರೇಲಿಯಾ ... ಗವರ್ನರ್ ಜನರಲ್ ಆಗಿ ಡ್ಯೂಕ್ ಆಫ್ ವಿಂಡ್‌ಸರ್‌ರವರನ್ನು ನೇಮಿಸಲಾಗುವುದೆಂದು ವದಂತಿ ಹೊರಟಿದೆ.

ಬರ್ಲಿನ್ ನಗರವು ಬೈಲು ಪ್ರದೇಶವೆ?

... ಬರ್ಲಿನ್ ನಗರವನ್ನು ಬೈಲು ಪ್ರದೇಶವಾಗಿ ಮಾಡಲಾಗುವುದೆಂದೂ ಅಲ್ಲಿನ ಸರ್ಕಾರಿ ಆಫೀಸ್ ಮತ್ತು ಇತರ ಸಂಸ್ಥೆಗಳನ್ನು ಮ್ಯೂನಿಚ್, ಪ್ರೇಗ್ ಮುಂತಾದ ಸ್ಥಳಗಳಿಗೆ ಸಾಗಿಸಲಾಗುವುದೆಂದು ವದಂತಿ ಹಬ್ಬಿದೆ.

ಇಟಲಿಗೆ ಜರ್ಮನ್ ವಿದೇಶಾಂಗ ಮಂತ್ರಿಗಳ ಭೇಟಿ

ಜರ್ಮನಿ ವಿದೇಶಾಂಗ ಮಂತ್ರಿಯಾದ ವಾನ್ ರಿಬ್ಬನ್ ಟ್ರಾಪ್‌ರವರು ಉತ್ತರ ಇಟಲಿಗೆ ಭೇಟಿಯಿತ್ತು ... ವಿದೇಶಾಂಗ ಮಂತ್ರಿಯನ್ನು ಕಂಡು ಮಾತುಕತೆ ನಡೆಸಿದರೆಂದು ವರದಿಯಾಗಿದೆ.

ಭಾರತದ ಬಿಕ್ಕಟ್ಟು ಬಗೆಹರಿಸಲು ಬ್ರಿ॥ ರ ಮನವಿ

ಲಂಡನ್ನಿನ ... ಆಫ್ ... ಬ್ರಿ॥ ... ದ ... ಪ್ರಿಟಿಷ್ ಸರ್ಕಾರ ... ಭಾರತ ... ಬಿಕ್ಕಟ್ಟು ಬಗೆಹರಿಸ ... ಇದನ್ನು ... ಭಾರತದ ನಾಯಕರು ... ಮಾ...

ಬಟ್ಟೆ ಮತ್ತು ನೂಲಿನ ದಾಸ್ತಾನದ ಬಗ್ಗೆ ಆಜ್ಞೆ

ಬಟ್ಟೆ ಮತ್ತು ನೂಲಿನ ಹತೋಟಿ ಪ್ರಕಾರ ಧೋತಿ, ಸೀರೆಗಳು ಮತ್ತು ಇತರ ೨,೦೦೦ ಗಜ ಉದ್ದ ಮೇಲ್ಪಟ್ಟ ... ಬಟ್ಟೆಗಳಿಗೆ ಸ್ವಲ್ಪ ... ತೋರಿಸಿ, ಇತರ ಬಟ್ಟೆಗಳೆಲ್ಲ ... ದಲ್ಲಿ ದಾಸ್ತಾನ ಮಾಡಿದ ಲೆಕ್ಕವನ್ನು ಕೊಡಲೇಬೇಕೆಂದು ಟೆಕ್ಸ್‌ಟೈಲ್ ಕಮೀಷನರು ಆಜ್ಞೆ ಮಾಡಿದ್ದಾರೆ.

ಪ್ರಪಂಚ ಪುನರ್ರಚನೆ ಹಂಚಿಕೆ

ಯುದ್ಧಾನಂತರ ಪ್ರಪಂಚದ ಪುನರ್ರಚನೆ ನಡೆಸಲು ಅಮೆರಿಕನ್ ನೌಕಾ ಸೆಕ್ರೆಟರಿಗಳಾದ ಕೆ॥ ಫ್ರಾಂಕ್ ನಾಕ್ಸ್‌ರವರು ೩ ಸಲಹೆಗಳನ್ನು ಕೊಟ್ಟಿರುವರು. ಅವುಗಳಾವುವೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನವು ತನ್ನ ಮಿಲಿಟರಿ ಬಲದಿಂದ ಪ್ರಪಂಚದ ಭದ್ರತೆಯನ್ನು ಕಾಪಾಡುವುದು. ಅಮೆರಿಕಾವು ಒಂದು ಆರ್ಥಿಕ ವ್ಯವಸ್ಥೆಯನ್ನು ರಚಿಸಿ, ಪ್ರಪಂಚದ ವ್ಯಾಪಾರಕ್ಕೆ ಯಾವ ಅಡಚಣೆಯೂ ಇಲ್ಲದಂತೆ ಮಾಡುವುದು. ಒಂದು ನೂತನ ಸಂಸ್ಥೆಯನ್ನು ಏರ್ಪಡಿಸಿ ಜನಗಳ ಸ್ವಾತಂತ್ರ್ಯಭಿಲಾಷೆಯನ್ನು ಫಲಕಾರಿಯಾಗಿ ಮಾಡುವುದು.

ಹೆಂಗಸನ್ನು ಗುಲಾಮಳಾಗಿ ಮಾರಲಾಯಿತು

ಮೆಕ್ಕಾದಲ್ಲಿ ಭಾರತ ಹೆಂಗಸು ಮತ್ತು ಆಕೆಯ ಮಗುವನ್ನು ಗುಲಾಮರಾಗಿ ಅಲ್ಲಿನ ಗುಲಾಮ ಮಾರ್ಕೆಟ್ಟಿನಲ್ಲಿ ಬಹಿರಂಗವಾಗಿ ಮಾರಲಾಯಿತೆಂದು ... ಸರ್ ... ಸ್ಪರಿಂದ ಹೋಜಲ್ ... ಸ್ಸರವರು ತಿಳಿಸಿದ್ದಾರೆ. ಬ್ರಿ॥ ಜನಾಂಗದವರನ್ನು ಇನ್ನು ಮುಂದೆ ಇಂತಹ ಗುಲಾಮ ಮಾರ್ಕೆಟ್ಟಿನಲ್ಲಿ ಮಾರುವುದನ್ನು ನಿಲ್ಲಿಸಲು ಏನು ... ಯಮಾಡಬೇಕೆಂದು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಕೇಳಿದ್ದಾರೆ.

ಪ್ರೇಮ ಆಶಾಭಂಗ ಪ್ರಸಂಗ

ಲಾಹೋರಿನ ... ಸಿಖ್ ಯುವಕನೊಬ್ಬನು ೧೬ ವರ್ಷದ ಹುಡುಗಿಯೊಬ್ಬಳನ್ನು ಚಾಕುವಿನಿಂದ ಹೊಡೆದು ನಂತರ ಆತನು ಮನೆಯ ... ಹಾರಿ ... ಗುಂಡಿನಿಂದ ಹೊಡೆದು ಸತ್ತನೆಂದೂ ಇದಕ್ಕೆ ಪ್ರೇಮ ಆಶಾಭಂಗವೇ ಕಾರಣವೆಂದು ವರದಿಯಾಗಿದೆ.

ಬಹುಮಾನ

ಮಾಂಟ್ರಿಯಲಿನ ... ಚಾಂಪಿಯನ್ ಎಂಬುವರಿಗೆ ಸಕಸ್ತ್ರದ ... ಗಾಂಧಿ ... ಫಲವಾಗಿ ... ಜಾರ್ಜ್ ... ಬಹುಮಾನವಾಗಿ ಕೊಡಲಾಯಿತು.

೧ ಗಂಟೆ ಒಳಗೆ ಶವವನ್ನು ಸಮಾಧಿ ಮಾಡಬೇಕು

... ಕಾಲರಾ ... ಜಿಲ್ಲಾ ಕಲೆಕ್ಟರು ... ಒಂದು ಗಂಟೆಯೊಳಗಾಗಿ ಶವವನ್ನು ಸಮಾಧಿ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ ... ಸತ್ತವರ ... ಸಮಾಧಿ ಮಾಡಲು ... ಆರೋಗ್ಯ ... ಗಂಟೆಯೊಳಗಾಗಿ ...

ಚೀಣಾಕ್ಕೆ ಭಾರತ ಸಂಶೋಧಕರು

ತತ್ವಶಾಸ್ತ್ರದಲ್ಲಿ ಸಂಶೋಧನೆ ನಡೆಸಲು ಗುಜರಾತ್ ವಿದ್ಯಾಪೀಠ ಕಾಲೇಜಿನ ಪ್ರೊಫೆಸರ್ ಕೆ. ವಿ. ... ರವರನ್ನು ಭಾರತ ಸರ್ಕಾರದವರು ಚೀಣಕ್ಕೆ ಕಳುಹಿಸಲು ಚು ನಾಯಿಸಿದ್ದಾರೆ

ಖಾರ್ಕೋವ್ ಮೇಲೆ ರಷ್ಯನರ ದ್ವಿಮುಖ ಮುತ್ತಿಗೆ

ಖಾರ್ಕೋವ್ ನಗರದ ಮೇಲೆ ರಷ್ಯನರು ಎರಡು ಕಡೆ ಮುತ್ತಿಗೆ ನಡೆಸುತ್ತಿದ್ದಾರೆ ಎಂದು ರಷ್ಯನರ ದಂಡಿನ ಮತ್ತು ಯುಕ್ರೈನ್ ಮಾರ್ಗವಾಗಿ ನೀಪರ್ ನದಿ ಪ್ರದೇಶಕ್ಕೆ ಹೋಗುವ ರಷ್ಯನರಿಗೆ ಅನುಕೂಲವಾಗುತ್ತದೆ. ರಷ್ಯನರು ಖಾರ್ಕೋವ್, ಬ್ರಿಯಾನ್ಸ್ಕ್ ... ಗಳ ಮೇಲೆ ಧಾಳಿ ನಡೆಸಿದರು. ಆದರೆ ಖಾರ್ಕೋವಿಗೆ ದಕ್ಷಿಣ ದಲ್ಲಿ ಜರ್ಮನರ ಸಂಚಾರ ವ್ಯವಸ್ಥೆಯನ್ನು ಪ್ರತಿಬಂಧಿಸುತ್ತಿದ್ದಾರೆಂದು ವರದಿಯಾಗಿದೆ.

ಸಿಸಲಿಯಲ್ಲಿ ಅಮೇರಿಕನ್ ಸೇನಾ ನಷ್ಟ

ಜುಲೈ ೩೧ ರವರೆಗೆ ಸಿಸಲಿಯಲ್ಲಿ ಅಮೆರಿಕನರಿಗೆ ೬೦೪೧ ಸೇನಾ ನಷ್ಟ ಸಂಭವಿಸಿತು. ಇವರಲ್ಲಿ ೫೨೦ ಜನರು ಮಡಿದರು. ೨೦೫೯ ಮಂದಿ ಗಾಯಗೊಂಡಿದ್ದಾರೆ. ೩೫೬೦ ಮಂದಿ ಪತ್ತೆಯಿಲ್ಲ. ಶತ್ರುವಿನ ಒಂದು ಲಕ್ಷ ಸೇನೆ ಸೆರೆಸಿಕ್ಕಿದೆ ಎಂದು ಸ್ಟಿಮ್ಸನ್ ತಿಳಿಸಿದರು.

ಮೆಸ್ಸೀನಾ ಬಳಿ ಭೀಕರ ಕದನ

ಸಿಸಲಿಯ ಮೆಸ್ಸೀನಾ ಬಳಿ ೬೦ ಮೈಲಿಯ ಒಂದು ಪ್ರದೇಶದಲ್ಲಿ ಜರ್ಮನರು ತೀವ್ರವಾಗಿ ಯುದ್ಧ ಮಾಡುತ್ತಿರುವುದಾಗಿಯೂ ಮಿತ್ರವಿಮಾನಗಳು ಮೆಸ್ಸೀನಾ ರೇವನ್ನು ಧ್ವಂಸ ಮಾಡುತ್ತಿರುವುದಾಗಿಯೂ ತಿಳಿಯಬರುತ್ತೆ.

ಮುಂಡಾ ಮಿತ್ರರ ವಶ

ನೈರುತ್ಯ ಪೆಸಿಫಿಕ್‌ನಲ್ಲಿಲ್ಲ ಜಪಾನರಿಗೆ ಅತ್ಯಂತ ದೊಡ್ಡ ವೈಮಾನಿಕ ನಿಲ್ದಾಣವಾದ ಮುಂಡಾ ದ್ವೀಪವು ಈಗ ಅಮೇರಿಕನರ ವಶವಾಗಿದೆ. ... ಜಪಾನಿ ಸೈನಿಕರು ಮಡಿದರೆಂದೂ, ಶತ್ರುವಿನ ಪ್ರತಿಭಟನೆ ಯಾವುದೂ ಇಲ್ಲವೆಂದೂ ವರದಿಯಾಗಿದೆ

ಶಿಕ್ಷೆ

ಕಳೆದ ಮಾರ್ಚಿ ತಿಂಗಳು ... ರೈಲ್ವೆ ಸ್ಟೇಷನಿನ ಪಕ್ಕದಲ್ಲಿರುವ ಮನೆ ಮತ್ತು ಬಡಗಿಯ ರೈಲ್ವೆ ಲೈನಿಗೆ ಬೆಂಕಿ ಹಚ್ಚಿ ನಾಶಪಡಿಸಿದರೆಂಬ ಆಪಾದನೆ ಮೇಲೆ ತಲಚೇರಿ ಸೆಷನ್ಸ್ ನ್ಯಾಯಾಧೀಶರು ದಾಮೋದರನ್ ಎಂಬುವರಿಗೆ ೫ ವರ್ಷ ಕಠಿಣ ಶಿಕ್ಷೆಯನ್ನೂ ಶ್ರೀಧರ, ಕುಮಾರನ್ ಮತ್ತು ಕಣ್ಣನ್ ಇವರುಗಳಿಗೆ ೨ ವರ್ಷ ಕಠಿಣ ಶಿಕ್ಷೆಯನ್ನೂ ವಿಧಿಸಿದರು.

ಮೊಬಿದ್ದ ಮೆಹೂಡಿದ್ದು ತಪ್ಪು

ಫಿರೋಜ್‌ಪುರದ ಕಾಂಗ್ರೆಸ್ ಕೆಲಸಗಾರರಾದ ಶ್ರೀ ರಾಮಚಂದ್ರ ಶರ್ಮ ಎಂಬುವರು ಕಳೆದ ಏಪ್ರಿಲ್ ತಿಂಗಳಲ್ಲಿ ಯುದ್ಧನಿಧಿಗಾಗಿ ಪೋಲೀಸಿನವರು ಏರ್ಪಡಿಸಿದ ನಾಟಕಕ್ಕೆ ಟಿಕೇಟನ್ನು ಕೊಳ್ಳಲು ಜನಗಳಿಗೆ ಬಲಾತ್ಕಾರ ಮಾಡುತ್ತಿದ್ದಾರೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬರೆದಿದ್ದು ತಪ್ಪೆಂದು ಅವರಿಗೆ ಭಾರತ ರಕ್ಷಣಾ ಶಾಸನ ರೀತ್ಯಾ ೩ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು.

ಅಪೀಲಿನಲ್ಲಿ ಸೆ॥ ನ್ಯಾಯಾಧೀಶರು ಆ ವರನ್ನು ಬಿಡುಗಡೆ ಮಾಡಿ, ಪೋಲೀಸಿನವರು ಜನರ ಮೇಲೆ ಮೊಬಿದ್ದ ಮೆ ಹೂಡಿದ್ದು ತಪ್ಪೆಂದೂ, ಪೋಲೀಸರು ಅತಿ ಸೂಕ್ಷ್ಮ ವಾಗಿರಕೂಡದೆಂದೂ ಶ್ರೀ ಶರ್ಮರವರು ಬರೆದ ಕಾಗದವನ್ನು ಪೋಲಿಸರು ತಪ್ಪು ಭಾವಿಸಿದರೆಂದು ಟೀಕೆ ಮಾಡಿದ್ದಾರೆ.

ಬರ್ಮಾದಲ್ಲಿ ಹೆಚ್ಚು ಜಪಾನಿ ಸೈನ್ಯ

ಮಿತ್ರರು ಮಳೆಗಾಲ ಮುಗಿದ ನಂತರ ದಂಡಯಾತ್ರೆ ನಡೆಸಬಹುದೆಂದು ಜಪಾನರು ಬರ್ಮಾದಲ್ಲಿ ಹೆಚ್ಚು ಸೈನ್ಯ ಶೇಖರಿಸುತ್ತಿದ್ದಾರೆಂದು ಚೀನೀ ಮಿಲಿಟರಿ ಅಧಿಕಾರಿಯೊಬ್ಬರು ತಿಳಿಸುತ್ತಾರೆ.

ಜರ್ಮನಿಗೆ ರೈಲ್ವೆ ಸಹಾಯ ನಿಂತಿತು

ನಾರ್ವೆಯಿಂದ ಸ್ವೀಡನ್ ಮಾರ್ಗವಾಗಿ ಓಡಾಡುವ ಜರ್ಮನ್ ಸೇನಾ ಮತ್ತು ಸಾಮಗ್ರಿ ವಾಹಕ ರೈಲುಗಳನ್ನು ಆಗಸ್ಟ್ ೧೫ ರಿಂದ ನಿಲ್ಲಿಸುವುದಾಗಿ ಸ್ವೀಡನ್ ತಿಳಿಸಿದೆ.

ಪ್ರ ಕಾ ಶ ವಾ ಣಿ

ಆಗಸ್ಟ್ ೯ ನೇ ಸೋಮವಾರ

....೮-೩೦ ನಾದಸ್ವರ : ವಿದ್ವಾನ್ ರಾಜಾರಾಂ ಇವರಿಂದ.

EXPERT IN WORLD MEDICINES

ತುರ್ಕಿ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾರ್ಶ್ವವಾಯು, ವಾತರೋಗ, ಕೆಮ್ಮಲು, ಗಜಕರ್ಣ, ಮೂತ್ರ ಮತ್ತು ವೀರ್ಯ ರೋಗಗಳು, ಅಲ್ಲದೆ ಹೊಟ್ಟೆಯ ಯುಕ್ತರ್ ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆ ಮಾಡುವ ನಿಪುಣರು

ನೀವು ಒಂದುಸಾರಿ ನಮ್ಮಲ್ಲಿಗೆ ಬಂದರೆ ನಮ್ಮ ಕೈತನ್ನವನ್ನು ನೋಡುವಿರಿ.

ನಷ್ಟವಾದ ಶಕ್ತಿಯನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ —

ಬೆಳಗ್ಗೆ 9 ರಿಂದ 12 ಘಂಟೆಯವರೆಗೆ
ಸಂಜೆ 5 ರಿಂದ 9 ಘಂಟೆಯವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು

ಬ್ರಿಯಾನ್ಸ್ಕ್ ಮತ್ತು ಖಾರ್ಕೋವ್ ಗಂಡಾಂತರ

ರಷ್ಯನರು ಖಾರ್ಕೋವ್ ಕಡೆ ೩೫ ಮೈಲಿಗಳ ದೂರ ನುಗ್ಗಿ ೧೫೦ ಪ್ರದೇಶಗಳನ್ನು ಮತ್ತು ಮುಖ್ಯ ರೈಲ್ವೆಸ್ಟೇಷನ್‌ಗಳನ್ನು ಹಿಡಿದುಕೊಂಡಿದ್ದಾರೆ ಖಾರ್ಕೋವಿಗೆ ೩೫ ಮೈಲಿದೂರದಲ್ಲಿರುವ ಜೂಲೋಚಾ ಎಂಬ ನಗರವನ್ನು ಆಕ್ರಮಿಸಿಕೊಂಡಿದ್ದಾರೆ

ಉತ್ತರ ಭಾಗದಲ್ಲಿ ಓರಲ್ ನಗರದಿಂದ ಮುನ್ನುಗ್ಗಿ ಜರ್ಮನ್ ಮುಖ್ಯ ಕೇಂದ್ರವಾದ ಬ್ರಿಯಾನ್ಸ್ಕ್ ನಗರಕ್ಕೆ ಮುತ್ತಿಗೆಹಾಕುವ ದರಲ್ಲಿದ್ದಾರೆಂದೂ, ಬ್ರಿಯಾನ್ಸ್ಕ್‌ನ ೩೫ ಮೈಲಿ ದೂರದಲ್ಲಿ ಭೀಕರ ಕದನ ನಡೆಯುತ್ತಿರುವುದೆಂದೂ, ಬ್ರಿಯಾನ್ಸ್ಕ್ ಮತ್ತು ಖಾರ್ಕೋವ್ ಮೇಲೆ ಭಯಂಕರ ಧಾಳಿ ಮಾಡಲಾಯಿತೆಂದು ವರದಿಯಾಗಿದೆ

ಅಮೆರಿಕಾ ಜ॥ರ ಆಗಮನ

ಜ॥ ಜಾರ್ಜ್‌ಸ್ಟ್ರಾಟ್ ಮೇಯರ್ ಎಂಬ ಅಮೆರಿಕಾ ಸೇನಾನಿಗಳು ಇಂಡಿಯಾಕ್ಕೆ ಬಂದಿರುವರು. ಇಂಡಿಯಾ, ಬರ್ಮಾ, ಚೈನಾ ಯುದ್ಧ ರಂಗದಲ್ಲಿ ಈ ಸೇನಾನಾಯಕರ ಸ್ಥಾನ ಮಾನಗಳು ಪ್ರಸಿದ್ಧಿಸಲಲ್ಪಡಬಹುದೆಂದೂ. ಇವರ ಆಗಮನವು ಬಹಳ ಮುಖ್ಯವೆಂದು ಪರಿಗಣಿಸಲ್ಪಟ್ಟಿರುವುದಾಗಿ ತಿಳಿಯಬರುತ್ತೆ.

ಹಿಟ್ಲರನಿಗೆ ಕಾಹಿಲೆ

ಹಿಟ್ಲರನಿಗೆ ದೇಹಾರೋಗ್ಯ ತುಂಬಾ ಕೆಟ್ಟಿರುವುದಾಗಿಯೂ, ಜರ್ಮನಿಯಲ್ಲಿ ಹಿಟ್ಲರನ ನಂತರ ಮುಂದಿನ ಅಧಿಕಾರಿಯಾರೆಂಬುದು ಜನಗಳು ಚರ್ಚಿಸಲು ಆರಂಭಿಸಿದ್ದಾರೆಂದು ವರದಿಯಾಗಿದೆ.

ಜಪಾನ್ ಮೇಲೆ ದಂಡಯಾತ್ರೆ

ಜಪಾನಿನ ಮೇಲೆ ಹೊಸದಾಗಿ ದಂಡಯಾತ್ರೆ ಕೈಗೊಳ್ಳಲು ಮಿತ್ರಸೇನೆಗಳು ಸಿದ್ಧವಾಗಿರುವುದಾಗಿ ಲೆ॥ಜ॥ ಅಲೆಕ್ಸಾಂಡರ್ ವ್ಯಾಟಿಂಗ್ ಗ್ರಿಫ್ಫಿರವರು ತಿಳಿಸಿದ್ದಾರೆ.

ನ್ಯೂಗಿನಿಯಲ್ಲಿ ಸ್ಯಾಲಮೋವಾಕ್ಕೆ ೫ ಮೈಲಿ ದಕ್ಷಿಣ ಭಾಗದ ಬಾಬ್‌ಡ್ಯೂಬಿಯಲ್ಲಿ ತೀಕ್ಷ್ಣ ಕದನ ನಡೆಯುತ್ತಿದೆಯೆಂದು ವರದಿಯಾಗಿದೆ.

ಬಾಂಬಿನ ಸುರಿಮಳೆ

ಸಿಸಲಿ ಮತ್ತು ಇಟಲಿಗಳ ಮೇಲೆ ಜು... ೩೧ ಕ್ಕೆ ಮುಗಿಯುವ ನಾಲ್ಕು ವಾರಗಳಲ್ಲಿ ೧೦ ದಶ ಸಾ ವಿ ರ ಸಾ ರಿ ಧಾ ಳಿ ಮಾ... ೧೫೪೬೦ ಟನ್ ಬಾಂಬುಗಳನ್ನು ಸುರಿ... ವೆಂದು, ೩೪೮ ಶತ್ರು ವಿಮಾನಗಳನ್ನು ... ಕಮಾಡಲಾಯಿತೆಂದು ಪ್ರಕಟವಾಗಿದೆ

ಯುದ್ಧಾನಂತರದ ಯೋಜನೆ

ಯುದ್ಧಾನಂತರ ಅಂತರರಾಷ್ಟ್ರೀಯ ಹಣ-ಕಾಸಿನ ವ್ಯವಸ್ಥೆ ಮತ್ತು ಸಹಾಯ... ವಿಷಯವನ್ನು ಕುರಿತು ಸಂಯುಕ್ತ ಸಂಸ್ಥಾನದ ಅರ್ಥಿಕ ಪ್ರವೀಣರೊಡನೆ ಚರ್ಚಿಸ... ಭಾರತಕ್ಕೆ ಆಹ್ವಾನ ಬಂದಿದೆಯೆಂದು ... ಕಲಾಗಿದೆ.

ಕಾರ್ಮಿಕ ಮುಖಂಡರ ದಸ್ತಗಿರಿ

ಸುಪ್ರಸಿದ್ಧ ಕಾರ್ಮಿಕ ಮುಖಂಡರ... ಶ್ರೀ. ವಿ. ಆರ್. ಕಾಳಪ್ಪನವರನ್ನು ... ಪುರದಲ್ಲಿ ದಸ್ತಗಿರಿ ಮಾಡಲಾಯಿತು.

ವಿದ್ಯಾಭ್ಯಾಸಕ್ಕೆ ೧೮ ಲಕ್ಷ ರ ಖರ್ಚು

ಭಾ ರ ತ ಸರ್ಕಾರವು ೧೯೪೨-೪೩ ... ವಿದ್ಯಾಭ್ಯಾಸಕ್ಕಾಗಿ ೧೮ ಲಕ್ಷ ರೂ, ಗಳ... ವೆಚ್ಚಮಾಡಲಾಗಿದೆಯೆಂದು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ತಿಳಿಸಲಾಯಿತು.

ಪ್ರವಾಹದಲ್ಲಿ ೫ ಸಾವಿರ ಜನರ ಸಾವು

ಅಜ್ಮೀರ್ ಮೇವಾರ್ ಪ್ರದೇಶಗಳಲ್ಲಿ ... ಹೇರಳ ಮಳೆಯಾಗಿ, ಪ್ರವಾಹದಿಂದ ... ಣಹಾನಿ ಮತ್ತು ನಷ್ಟ ಅತ್ಯಧಿಕವಾಗಿ... ದಾಗಿ ವರದಿಯಾಗಿದೆ. ೫ ಸಾವಿರಕ್ಕೂ ಹೆಚ್ಚಾಗಿ ಜನರು ಸತ್ತರೆಂದೂ, ಬಿಜಾ... ನಗರ ಪ್ರದೇಶ ಒಂದರಲ್ಲೇ ೩ ಸಾ... ಮಂದಿ ಸತ್ತರೆಂದು ಹೇಳಲಾಗಿದೆ. ... ಜವರ ಮೈಲಿ ಪ್ರದೇಶವು ಈ ಪ್ರವಾಹಕ್ಕೆ ... ದಾಗಿದೆ.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್, ಗಾಂಧೀ ಸ್ಕ್ವೇರ್, ಮೈಸೂರು ಇವರ

ಗಾಯನ ಗಾಂಧರ್ವ **ಚಂಪೆ ವೈದ್ಯನಾಥಭಾಗವತರ್**
ಸಂಗೀತ ರತ್ನ ಆಸ್ಥಾನ ವಿದ್ವಾನ್ **ಟಿ. ಚೌಡಯ್ಯ**
ಮೃದಂಗ ವಿದ್ವಾನ್ **ಪಾಲಘಾಟ್ ಮಣಿ**
ಕಲ್ಚರ್ಡ್ ಕಮೆಡಿಯನ್ **ಕೆ. ಹಿರಣ್ಣಯ್ಯ**

ಇವರುಗಳು ಅಭಿನಯಿಸಿರುವ

ವಾಣಿ ಅಥವಾ **VIOLINIST**

ಎಂಬ ಕನ್ನಡ ಸಾಮಾಜಿಕ ಚಲನ ಚಿತ್ರ

ನಿಮ್ಮೂರಿನ ಮೆಚ್ಚಿನ ಚಿತ್ರಮಂದಿರವನ್ನು ಎದುರುನೋಡಿ

೧ ಗಂಟೆ ಒಳಗೆ ಶವವನ್ನು ಸಮಾಧಿ ಮಾಡಬೇಕು

ಮಲಬಾರಿನಲ್ಲಿ ಕಾಲರಾ ಜಾಡ್ಯವು ವಿಪರೀತ ಏರುವ ಪ್ರಯುಕ್ತ ಅಲ್ಲಿನ ಕಲೆಕ್ಟರು ಸತ್ತ ಒಂದು ಗಂಟೆಗೊಳಗಾಗಿ ಹೆಣವನ್ನು ಹೂಳಬೇಕೆಂದು ಆಜ್ಞೆ ಮಾಡಿದ್ದಾರೆ. ಜನಗಳು ವಿಶೇಷವಾಗಿ ಸಾಯುತ್ತಿರುವುದರಿಂದ ಬಡ ಜನರಿಗೆ ಸಮಾಧಿ ಮಾಡಲು ಸಂಬಂಧಿಗಳೇ ಇರುವುದಿಲ್ಲ, ಇಂತಹ ಶವಗಳನ್ನು ಕಲೆಕ್ಟರು ಈ ವಿಚಾರವನ್ನು ಚರ್ಚಿಸಿ ಸಾರ್ವಜನಿಕ ಆರೋಗ್ಯ ಕಾನೂನ ಪ್ರಕಾರ ಪೌರಸಭೆಯವರೇ ಇಂತಹ ಅನಾಥ ಶವಗಳನ್ನು ಸತ್ತ ಒಂದು ಗಂಟೆಯೊಳಗಾಗಿ ಹೂಳಬೇಕೆಂದು ವಿಧಾಯಕ ಮಾಡಿರುವುದಾಗಿ ತಿಳಿದು ಬರುತ್ತದೆ.

ಪ್ರೇಮ ಆಶಾಭಂಗ ಪ್ರಸಂಗ

ಲಾಹೋರಿನ ಸಿಖ್ ಯುವಕನೊಬ್ಬನು ೧೭ ವರ್ಷ ಹುಡುಗಿಯೊಬ್ಬಳನ್ನು ಬಂದೂಕಿನಿಂದ ಹೊಡೆದು ನಂತರ ಆಕೆಯ ಮನೆ ಬಾಗಿಲಲ್ಲೇ ತಾನೂ ಗುಂಡಿನಿಂದ ಹೊಡೆದು ಸತ್ತನೆಂದೂ ಇದಕ್ಕೆ ಪ್ರೇಮ ಆಶಾಭಂಗವೇ ಕಾರಣವೆಂದು ವರದಿಯಾಗಿದೆ.

ಹೆಂಗಸನ್ನು ಗುಲಾಮಳಾಗಿ ಮಾರಲಾಯಿತು

ಮೊಂಬಾಸದಲ್ಲಿ ಭಾರತ ಹೆಂಗಸು ಮತ್ತು ಆಕೆಯ ಮಗುವನ್ನು ಗುಲಾಮರಾಗಿ ಅಲ್ಲಿನ ಗುಲಾಮ ಮಾರ್ಕೆಟ್ಟಿನಲ್ಲಿ ಬಹಿರಂಗವಾಗಿ ಮಾರಲಾಯಿತೆಂದು ಪಾರ್ಲಿಮೆಂಟಿನ ಸದಸ್ಯರಾದ ಮೇಜರ್ ಲೈಯನ್ಸ್‌ರವರು ತಿಳಿಸಿದ್ದಾರೆ. ಬ್ರಿ॥ ಜನಾಂಗದವರನ್ನು ಇನ್ನು ಮುಂದೆ ಇಂತಹ ಗುಲಾಂ ಮಾರ್ಕೆಟ್ಟಿನಲ್ಲಿ ಮಾರುವುದು ನಿಲ್ಲಿಸಲು ಒತ್ತಾಯಮಾಡಬೇಕೆಂದು ಕಾಮನ್ಸ್ ಸಭೆಯಲ್ಲಿ ಪ್ರಶ್ನೆ ಕೇಳಿದ್ದಾರೆ.

ಪ್ರಪಂಚ ಪುನರ್ರಚನೆ ಹಂಚಿಕೆ

ಯುದ್ಧಾನಂತರ ಪ್ರಪಂಚದ ಪುನರ್ರಚನೆ ನಡೆಸಲು ಅಮೇರಿಕನ್ ನೌಕಾ ಸೆಕ್ರೆಟರಿಯಾದ ಕೆ। ಪ್ರಾಂಕ್ ನಾಕ್ಸ್‌ರವರು ೬ ಸಲಹೆಗಳನ್ನು ಕೊಟ್ಟಿರುವರು. ಇವುಗಳಾವುವೆಂದರೆ ಅಮೇರಿಕ ಸಂಯುಕ್ತ ಸಂಸ್ಥಾನವು ತನ್ನ ಮಿಲಿಟರಿ ಬಲದಿಂದ ಪ್ರಪಂಚದ ಶಾಂತಿಯನ್ನು ಕಾಪಾಡುವುದು. ಅಮೇರಿಕವು ಒಂದು ಆರ್ಥಿಕ ವ್ಯವಸ್ಥೆಯನ್ನು ರಚಿಸಿ, ಪ್ರಪಂಚದ ವ್ಯಾಪಾರಕ್ಕೆ ಯಾರ ಅಡಚಣೆಯೂ ಇಲ್ಲದಂತೆ ಮಾಡುವುದು. ಒಂದು ನೂತನ ಸಂಸ್ಥೆಯನ್ನು ಏರ್ಪಡಿಸಿ ಜನಗಳ ಸ್ವಾತಂತ್ರ್ಯಭಿಲಾಷೆಯನ್ನು ಫಲಪ್ರದವಾಗಿ ಮಾಡುವುದು.

[illegible]ಟ್ಟೆ ಮತ್ತು ನೂಲಿನ ದಾಸ್ತಾನದ ಬಗ್ಗೆ ಆಜ್ಞೆ

ಬಟ್ಟೆ ಮತ್ತು ನೂಲಿನ ಹಕೋಟೆ ಆಜ್ಞೆ ಕಾರ ಧೋತಿ, ಸೀರೆಗಳು ಮತ್ತು ಇತರ ೨೦೦ ಗಜ ಉದ್ದ ನೂಲು, ಉಪಯೋಗದ ಬಟ್ಟೆಗಳಿಗೆ ಸ್ವಲ್ಪ ರಿಯಾಯಿತಿ [illegible] ಇತರ ಬಟ್ಟೆಗಳೆಲ್ಲ ಜುಲೈ ೩೧ರಲ್ಲಿ ಸ್ತಾನ ಮಾಡಿದ ಲೆಕ್ಕವನ್ನು ಕೊಡಲೇಕೆಂದು ಟೆಕ್ಸ್‌ಟೈಲ್ ಕಮೀಷನರು ಆಜ್ಞೆ ಮಾಡಿದ್ದಾರೆ.

ಭಾರತದ ಬಿಕ್ಕಟ್ಟು ಬಗೆಹರಿಸಲು ಬ್ರಿ॥ರ ಮನವಿ

ಲಂಡನ್ನಿನ ಬಿಷಪ್ ಆಫ್ ಬರ್ಮಿಂಗ್‌ಹ್ಯಾಂ ಪ್ರೊ॥ ಹೆರಾಲ್ಡ್ ಲಾಸ್ಕಿ ಮೊದಲಾದ ನೂರು ಮಂದಿಗಳು ಬ್ರಿಟಿಷ್ ಸರ್ಕಾರಕ್ಕೆ ಒಂದು ಮನವಿ ಮಾಡಿಕೊಂಡು ಭಾರತದ ರಾಜಕೀಯ ಬಿಕ್ಕಟ್ಟು ಬಹಳ ವಿಷಮಗೊಂಡಿದೆಯೆಂದೂ, ಇದನ್ನು ಬಗೆಹರಿಸಲು ಬ್ರಿ॥ ಮತ್ತು ಭಾರತದ ನಾಯಕರು ಸಹಕರಿಸಿ, ಒಂದು ವ್ಯವಸ್ಥೆಯನ್ನು ಮಾಡುವ ಕಾಲ ಒದಗಿದೆಯೆಂದು ತಿಳಿಸಿದ್ದಾರೆ.

ಬರ್ಲಿನ್ ನಗರವು ಬೈಲು ಪ್ರದೇಶವೆ ?

ಮಿತ್ರ ಧಾಳಿಯ ಹೆದರಿಕೆಯಿಂದ ಬರ್ಲಿನ್ ನಗರವನ್ನು ಬೈಲು ಪ್ರದೇಶವಾಗಿ ಸಾರಲಾಗುವುದೆಂದೂ ಅಲ್ಲಿನ ಸರ್ಕಾರಿ ಆಫೀಸ್ ಮತ್ತು ಇತರ ಸಂಸ್ಥೆಗಳನ್ನು ಮ್ಯೂನಿಚ್, ಪ್ರೇಗ್ ಮುಂತಾದ ಸ್ಥಳಗಳಿಗೆ ಸಾಗಿಸಲಾಗುವುದೆಂದು ವದಂತಿ ಹಬ್ಬಿದೆ.

ಇಟಲಿಗೆ ಜರ್ಮನ್ ವಿದೇಶಾಂಗ ಮಂತ್ರಿಗಳ ಭೇಟಿ

ಜರ್ಮನಿ ವಿದೇಶಾಂಗ ಮಂತ್ರಿಯಾದ ವಾನ್ ರಿಬ್ಬನ್ ಟ್ರಾಫ್‌ರವರು ಉತ್ತರ ಇಟಲಿಗೆ ಭೇಟಿಯಿತ್ತು ಅಲ್ಲಿ ವಿದೇಶಾಂಗ ಮಂತ್ರಿಯನ್ನು ಕಂಡು ಮಾತುಕತೆ ನಡೆಸಿದರೆಂದು ವರದಿಯಾಗಿದೆ

ಬರ್ಲಿನ್ ಖಾಲಿ ಮಾಡಲಾಗುತ್ತಿದೆ

ಬರ್ಲಿನ್ ನಗರವನ್ನು ಖಾಲಿ ಮಾಡುತ್ತಿದ್ದರೂ ಎಲ್ಲಾ ಹೆಂಗಸರು ಮಕ್ಕಳು ಮ[illegible]ಗಳನ್ನು ನಗರದಿಂದ ಬೇರೆ ಕಡೆಗೆ ಸಾಗಿಸಲಾಗುವುದೆಂದೂ ಡಾ॥ ಗೊಬೆಲ್ಸ್‌ರವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ವೈಸರಾಯ್ ವಿಂಡ್ಸರ್‌ರವರೇ ?

ಆಸ್ಟ್ರೇಲಿಯಾ ದೇಶದ ಮುಂದಿನ ಗ॥ ಜ॥ ಪದವಿಗೆ ಡ್ಯೂಕ್ ಆಫ್ ವಿಂಡ್‌ಸರ್‌ರವರನ್ನು ನೇಮಿಸಲಾಗುವುದೆಂದು ವದಂತಿ ಹೊರಟಿದೆ.

ಪ್ಯಾಲಿನಾದಲ್ಲಿ ಅಮೇರಿಕನ್ ಸೈನ್ಯ ದಳ

ಸಿಸಲಿಯ ಮುಖ್ಯ ಕೇಂದ್ರ ರಣಕ್ಷೇತ್ರವಾದ ಪ್ಯಾಲಿನಾವನ್ನು ಅಮೇರಿಕ ಸೈನ್ಯ ಪಡೆಗಳು ಹಿಡಿದಿವೆ. ಸೈನ್ಯಗಳು ಪಟ್ಟಣದ ಒಳಭಾಗವನ್ನು ಆಕ್ರಮಿಸುತ್ತಿವೆ

"ಮೇಲ್" ಪತ್ರಿಕೆ ಮೇಲೆ ದಾವೆ

ಮದರಾಸಿನ ಆಂಗ್ಲ ದಿನಪತ್ರಿಕೆಯಾದ "ಮೇಲ್" ಮಾಲೀಕರಾದ ಅಸೋಸಿಯೇಟೆಡ್ ಪಬ್ಲಿಷರ್ಸ್ ಮೇಲೆ ಮಿ. ಆರ್. ಆರ್. ಶಾಲ್ಬರ್ ಎಂಬುವವರು ತಮಗೆ ಬರಬೇಕಾದ ೬೨೦೦ ರೂ ಸಂಬಳದ ದಾವೆ ಹೂಡಿದ್ದು ಇದರಲ್ಲಿ ಜಸ್ಟಿಸ್ ಬೆಲ್‌ರವರು ತೀರ್ಪಿತ್ತು ಎರಡು ತಿಂಗಳ ಸಂಬಳವನ್ನೂ ಮತ್ತು ತಮ್ಮ ದೇಶಕ್ಕೆ ಹೋಗುವ ಖರ್ಚನ್ನೂ ಕೊಡಬೇಕೆಂದು ತಿಳಿಸಿದರು

ಗಾಂಧೀಜಿಯವರೇ ಶಾಂತಿಸ್ಥಾಪಕರು

ಶ್ರೀ॥ ಚಿ॥ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಮದ್ರಾಸು ವೆಲ್ಲಿಂಗ್‌ಡನ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ "ಮಹಾತ್ಮಾ ಗಾಂಧಿಯವರು ದೊಡ್ಡ ಶಾಂತಿಸ್ಥಾಪಕರು. ಅವರು ಭಾರತ ಸಂಸ್ಕೃತಿ ಮತ್ತು ನಾಗರೀಕತೆಯ ಪ್ರತಿನಿಧಿಗಳಾಗಿರುವರು. ಪ್ರಾಂತ್ಯಗಳಲ್ಲಿ ಕೂಡಲೇ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗಬೇಕು. ಭಾರತದ ಪ್ರತಿನಿಧಿಗಳು ಶಾಂತಿ ಸಮ್ಮೇಳನದಲ್ಲಿ ಇರುವುದು ಅತ್ಯಗತ್ಯ. ಮಹಾತ್ಮ ಗಾಂಧಿಯವರು, ಇನ್ನು ಮುಂದೆ ಯುದ್ಧವೇ ಇಲ್ಲದಂತೆ ಮಾಡಲು ಸಮರ್ಥರಾಗಿರುವರು" ಎಂಬುದಾಗಿ ತಿಳಿಸಿದರು.

ಗಾಂಧಿ ಅಕಾಡಮಿ

ಗಾಂಧಿಯವರ ತತ್ವ ಮತ್ತು ಬೋಧನೆಗಳನ್ನು ದೇಶದಲ್ಲಿ ಹರಡಲು ಬೊಂಬಾಯಿನಲ್ಲಿ ಗಾಂಧಿ ಅಕಾಡಮಿ ಎಂಬ ನೂತನ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಶ್ರೀ ಕೆ. ಮುನ್ಷಿಯವರು ಅಧ್ಯಕ್ಷರಾಗಿಯೂ, ಮೈಸೂರಿನವರಾದ ಶ್ರೀ ವೈ.ಜಿ. ಕೃಷ್ಣಮೂರ್ತಿಯವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ದಸ್ತಗಿರಿ

ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಶ್ರೀ ಗಣಾದ, ಎ. ಎಲ್. ಉಪಾಧ್ಯಾಯ, ಎಂ. ಎಸ್. ರಾಮರಾವ್ ಮತ್ತು ವಿ. ಆರ್ ಕ್ರೊಲಾಲ್ ಇವರುಗಳನ್ನು ದಸ್ತಗಿರಿ ಮಾಡಲಾಗಿದೆ.

ಖಾಸಗಿ ಅಧ್ಯಕ್ಷರು

ಚಿಕ್ಕಮಗಳೂರು ಪೌರಸಭೆಯ ಖಾಸಗಿ ಅಧ್ಯಕ್ಷರಾಗಿ ಡಾ॥ ಕೆ. ಆರ್. ಭಾಗವತರವರನ್ನು ಚುನಾಯಿಸಲಾಗಿದೆ

ಬಹುಮಾನ

ಮಂಗಳೂರಿನ ಜಮೀನುದಾರರಾದ ಶ್ರೀ ಚಂದ್ರದೇವ್ ಎಂಬ ಮರಿಗೆ ಸಶಸ್ತ್ರರಾದ ದರೋಡೆಕಾರರ ಗುಂಪನ್ನು ಓಡಿಸಿದುದರ ಫಲವಾಗಿ ಕಿಂಗ್ ಜಾರ್ಜ್ ಮೆಡಲನ್ನು ಬಹುಮಾನವಾಗಿ ಕೊಡಲಾಯಿತು.

ಅಕ್ಕಿ ಅಭಾವ ಇಲ್ಲ

ಬೆಂಗಳೂರಿನಲ್ಲಿ ಅಕ್ಕಿ ಅಭಾವ ಉಂಟಾಗಲು ನಿಜವಾಗಿಯೂ ಯಾವ ಕಾರಣಗಳು ಇಲ್ಲ. ಕಳೆದ ತಿಂಗಳು ೨೫೦೦೦ ಮೂಟೆ ಅಕ್ಕಿಯನ್ನು ಒದಗಿಸಿದ್ದರೂ ಅಕ್ಕಿ ಇಲ್ಲವೆಂಬ ಕೂಗು ಕೇಳಬರಲು ಹಲವು ವ್ಯಾಪಾರಿಗಳ ದುರ್ನೀತಿಯೇ ಕಾರಣವೆಂಬುದು ಪತ್ತೆ ಮಾಡಲ್ಪಟ್ಟಿತು, ಸುಮಾರು ೪೫ ಕ್ಕೆ ಮೇಲ್ಪಟ್ಟು ಲೈಸೆನ್ಸುಗಳನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ಆಹಾರ ಸರಬರಾಯಿ ಕಾರ್ಯದರ್ಶಿಗಳು ತಿಳಿಸುತ್ತಾರೆ. ಅಕ್ಕಿಯ ಸರಬರಾಯಿ ಇನ್ನಷ್ಟು ಹೆಚ್ಚಾಗುವಂತೆ ಸರ್ಕಾರಿ ಸಂಘಗಳ ಮುಂತಾದ ಸಂಸ್ಥೆಗಳ ಮೂಲಕ ಅಕ್ಕಿಯು ಅಧಿಕವಾಗುವಂತೆ ಮಾಡಲು ತಕ್ಕ ಕಾರ್ಯಕ್ರಮವನ್ನ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಟಾಗೂರ್ ದಿನಾಚರಣೆ

ಮೈಸೂರು ೮

ಮೈಸೂರು ವಿಶ್ವವಿದ್ಯಾಲಯದ ಸಂಘದವರು ನಿನ್ನೆ ಸಾಯಂಕಾಲ ಡಾ॥ ರವೀಂದ್ರನಾಥ್ ಟಾಗೂರ್‌ರವರ ದಿನಾಚರಣೆಯನ್ನು ನೆರವೇರಿಸಿದರು. ಮಹಾರಾಜಾ ಕಾಲೇಜಿನ ಫಿಲಾಸಫಿ ಪ್ರೊ॥ ರಾದ ಡಾ॥ ಪುರುಷೋತ್ತಮ್‌ರವರು ಅಗ್ರಾಸನವಹಿಸಿದ್ದರು. ಶ್ರೀಗಳಾದ ಭರತರಾಜ್‌ಸಿಂಗ್, ರಾಮಸ್ವಾಮಿ ಶಾಸ್ತ್ರಿ, ರಾಜಗೋಪಾಲ್, ರಾಘವಾಚಾರ್ ಮೊದಲಾದವರು ಕವಿಗಳ ಜೀವನ ಚರಿತ್ರೆಯ ವಿಷಯವಾಗಿ ಭಾಷಣ ಮಾಡಿದರು.

ಗ್ರಾಮಾಭಿವೃದ್ಧಿ ಯೋಜನೆ

ಮೈಸೂರು ಜಿಲ್ಲೆಯಲ್ಲಿ ಗ್ರಾಮಾಭಿವೃದ್ಧಿ ಕಾರ್ಯವನ್ನು ಇನ್ನೂ ಹೆಚ್ಚಾಗಿ ನಡೆಸಲು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳಲು, ನಿನ್ನೆ ಮಧ್ಯಾಹ್ನ ಜಿಲ್ಲಾಧಿಕಾರಿಗಳಾದ ಶ್ರೀ ರಣಜೋಢ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತ್ತು. ಜಿಲ್ಲಾ ಅಮಲ್ದಾರರುಗಳು, ಸಬ್ ಡಿವಿಜನ್ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಗ್ರಾಮಾಭಿವೃದ್ಧಿ ಸ್ಪೆಷಲ್ ಆಫೀಸರಾದ ಶ್ರೀ ರಾಮಚಂದ್ರ ಜೋಂಧಳೇಕರಯವರು ಗ್ರಾಮಾಭಿವೃದ್ಧಿ ಕಾರ್ಯಕ್ರಮದ ವಿವರಣೆಯನ್ನು ಮಾಡಿದರು.

ಪ್ರತಿಬಂಧಕಾಜ್ಞೆ

ಬೆಂಗಳೂರು ೭

ಬೆಂಗಳೂರು ನಗರದಲ್ಲಿಯೂ ಮತ್ತು ನಗರದ ೫ ಮೈಲಿ ಸುತ್ತಲೂ ಆಗಸ್ಟ್ ೩॥ ಸಿರಿಂದ ೧ ತಿಂಗಳಕಾಲ ಸಭೆ, ಮೆರವಣಿಗೆಗಳಾವುವೂ ನಡೆಯಲಾಗದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಅಂಗಡಿ, ಹೋಟೆಲ್ ಮೊದಲಾದ ಜನೋಪಯುಕ್ತ ಸಂಸ್ಥೆಗಳನ್ನು ಮುಚ್ಚಬಾರದೆಂದೂ ನಿಷೇಧಾಜ್ಞೆಯಾಗಿದೆ.

ಟಿಪ್ಪಣಿ ಬರೆಸಕೂಡದು

ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ನೋಟ್ಸುಗಳನ್ನ ಉರುಹೊಡೆದು ಒಂದೇ ತರಹ ಉತ್ತರ ಬರೆಯುವುದರಿಂದ, ವಿದ್ಯಾರ್ಥಿಗಳ ಬುದ್ಧಿವಂತಿಕೆ ತಿಳಿಯಲು ಕಷ್ಟವಾಗಿದೆ. ಇನ್ನು ಮುಂದೆ ಅಧ್ಯಾಪಕರುಗಳು ಇಂಟರ್ ಮತ್ತು ಬಿ. ಎ. ತರಗತಿಗಳಿಗೆ ನೋಟ್ಸನ್ನು ಬರೆಸ ಕೂಡದೆಂದು ಮಹಾರಾಜಾ ಕಾಲೇಜಿನ ಅಧಿಕಾರಿಗಳು ತಿಳಿಸಿರುವುದಾಗಿ ವರದಿಯಾಗಿದೆ.

ಜರ್ಮನಿಯಿಂದ ತಪ್ಪಿಸಿಕೊಂಡು ಹೋಗಲುಯತ್ನಿಸಿದ ೬೯ ಜನ ಬ್ರಿಟಿಷ್‌ಯುದ್ಧ ಕೈದಿಗಳನ್ನು ಜರ್ಮನರು ಗುಂಡಿನ ಬಲಿಗೆ ಗುರಿಮಾಡಿದಾರೆಂದು ಕಾಮನ್ಸ್ ಸಭೆಯಲ್ಲಿ ತಿಳಿಸಲಾಯಿತು

ಬ್ರಿಟಿಷ್ ವಿಮಾನಗಳು ಹ್ಯಾಂಬರ್ಗ್ ಮೇಲೆ ಪುನಃ ಧಾಳಿ ಮಾಡಿವೆಯೆಂದು ವರದಿಯಾಗಿದೆ. ರೂರ್ ಪ್ರದೇಶವನ್ನೊಳಗೊಂಡಿರುವ ಜರ್ಮನಿಯಲ್ಲಿರುವ ಅನೇಕ ಮಿಲಿಟರಿ ರಾಜ್ಯಗಳ ಮೇಲೂ ಧಾಳಿ ಮಾಡಲಾಯಿತೆಂದು ಹೇಳಲಾಗಿದೆ

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ತಾ|| ೯-೮-೪೩ ರಿಂದ ೧೫-೮-೪೩ ರ ವರೆಗೆ

ಮೇಷ... ಈ ವಾರ ನಿಮಗೆ ವಾಕ್‌ಸ್ಫೂರ್ತಿ, ಸುಖಭಂಗ, ಸರ್ಕಾರಿ ಕೆಲಸದಲ್ಲಿ ಅಪಜಯ, ವ್ಯಾಪಾರಸ್ಥರಿಗೆ ನಷ್ಟ, ತಾ|| ೯, ೧೪ ಉತ್ತಮ

ವೃಷಭ . ಧನ ನಷ್ಟ, ಮಿತ್ರರ ಭೇಟಿ, ಶರೀರಕ್ಕೆ ಅಸ್ವಸ್ಥಬಾಧೆ, ಸರ್ಕಾರಿ ಕೆಲಸದಲ್ಲಿ ಜಯ, ವ್ಯಾಪಾರದಲ್ಲಿ ಲಾಭ. ತಾ|| ೯, ೧೧ ಶುಭ.

ಮಿಥುನ... ಧನಕ್ಕೆ ಅಡಚಣೆ, ಶತ್ರುಗಳ ಬಾಧೆ, ಸರ್ಕಾರಿ ಕೆಲಸದಲ್ಲಿ ಅಪಜಯ, ವ್ಯಾಪಾರಸ್ಥರಿಗೆ ಲಾಭ ತಾ|| ೧೨, ೧೩ ಒಳ್ಳೆಯ ದಿನಗಳು.

ಕಟಕ ... ದೇಹಕ್ಕೆ ಅಸ್ವಸ್ಥಬಾಧೆ, ಬಂಧುಗಳಿಗೆ ಅನಾರೋಗ್ಯ, ಸರ್ಕಾರಿ ಕೆಲಸದಲ್ಲಿ ಅಪಜಯ, ವ್ಯಾಪಾರದಲ್ಲಿ ಲಾಭ ತಾ|| ೧೩, ೧೫ ಉತ್ತಮ

ಸಿಂಹ ... ಆದಾಯಕ್ಕಿಂತ ಖರ್ಚು ಜಾಸ್ತಿ, ಕೆಲಸದಲ್ಲಿ ವಿಘ್ನ, ವ್ಯಾಪಾರದಲ್ಲಿ ನಷ್ಟ. ೯, ೧೪ ಉತ್ತಮ.

ಕನ್ಯಾ... ಧನಲಾಭ, ಖರ್ಚು ಜಾಸ್ತಿ ಸರ್ಕಾರಿ ಕೆಲಸದಲ್ಲಿ ಜಯ. ವ್ಯಾಪಾರಸ್ಥರಿಗೆ ಲಾಭ, ಧರ್ಮಕಾರ್ಯಗಳಲ್ಲಿ ವಿಘ್ನ. ತಾ|| ೧೦, ೧೧ ಒಳ್ಳೆಯ ದಿನಗಳು.

ತುಲಾ.... ಈ ವಾರ ನಿಮಗೆ ಲಾಭ ಹೆಚ್ಚು, ಸ್ನೇಹಿತರಿಂದ ಸಹಾಯ, ಕೆಲಸದಲ್ಲಿ ಸಿದ್ಧಿ, ವ್ಯಾಪಾರದಲ್ಲಿ ಹೆಚ್ಚು ಲಾಭ, ತಾ|| ೧೨, ೧೩ ಶುಭ ದಿನಗಳು.

ವೃಶ್ಚಿಕ... ವ್ಯಥೆ, ಕಲಹ, ಶುಭಕೆಲಸಗಳು ನಡೆಯುವಿಕೆ, ಸರ್ಕಾರಿ ಕೆಲಸಗಳಲ್ಲಿ ವಿಘ್ನ, ವ್ಯಾಪಾರಸ್ಥರಿಗೆ ಲಾಭ. ತಾ|| ೧೧, ೧೪ ಉತ್ತಮ.

ಧನುಸ್ಸು... ನಿಮ್ಮ ರಾಶಿಯವರಿಗೆ ಎಲ್ಲ ಕೆಲಸದಲ್ಲಿಯೂ ವಿಘ್ನ, ಧನಕ್ಕೆ ತೊಂದರೆ, ಕೆಲಸಗಳಲ್ಲಿ ಅಪಜಯ, ವ್ಯಾಪಾರದಲ್ಲಿ ನಷ್ಟ ಉಂಟಾಗುತ್ತೆ. ತಾ|| ೯, ೧೩ ಶುಭ ದಿನಗಳು.

ಮಕರ... ಈ ವಾರ ಹೆಚ್ಚು ಗಡಿಬಿಡಿ, ಧನ ಪ್ರಾಪ್ತಿ, ಉದರ ಬಾಧೆ, ಸರ್ಕಾರಿ ಕೆಲಸದಲ್ಲಿ ವಿಘ್ನ, ವ್ಯಾಪಾರದಲ್ಲಿ ಲಾಭ. ತಾ|| ೧೦, ೧೧ ಉತ್ತಮ.

ಕುಂಭ.... ಸುಖ ಭಂಗ, ಬಂಧುಗಳಿಂದ ವ್ಯಥೆ, ಧನದ ತೊಂದರೆ, ಸರ್ಕಾರಿ ಕೆಲಸದಲ್ಲಿ ಜಯ, ವ್ಯಾಪಾರಿಗಳಿಗೆ ನಷ್ಟ, ಸಂಬಂಧಿಕರಲ್ಲಿ ಮನಸ್ತಾಪ. ತಾ|| ೧೨, ೧೩ ಒಳ್ಳೆಯ ದಿನಗಳು.

ಮೀನ.... ಹೆಚ್ಚಿನ ಉತ್ಸಾಹ, ಧನಾಗಮ ಉಂಟಾದರೂ ಹೆಚ್ಚು ಖರ್ಚು, ರಾಜಕಾರ್ಯದಲ್ಲಿ ವಿಘ್ನ, ವ್ಯಾಪಾರದಲ್ಲಿ ಲಾಭ. ತಾ|| ೧೨, ೧೩, ೧೪ ಉತ್ತಮ.

ಜಪಾನಿನ ನೌಕಾ ಬಲ ಕಡಿಮೆಯಾಗುತ್ತಿದೆ

ಜಪಾನಿನ ಹಡಗುಕಟ್ಟುವ ಕೈಗಾರಿಕೆ ಇಳಿಮುಖವಾಗುತ್ತಿದೆ. ಇದರಿಂದವರ ಸ್ವಪ್ನ ಸಾಮ್ರಾಜ್ಯದ ಪ್ರಪಂಚವನ್ನೇ ಗೆಲ್ಲುವ ಆಸೆ ನಾಶವಾಗುವುದು ದೊಡ್ಡ ಸಂಗತಿಯಲ್ಲ.

ಅವರು ಕಳೆದು ಕೊಂಡಿರುವ ಸಾಮ್ರಾಜ್ಯವನ್ನು ಗೂಡಿಸಿಕೊಳ್ಳಲು ಕಡೇಪಕ್ಷಕ್ಕೆ ೩೦ ಲಕ್ಷ ಟನ್ ನೌಕಾಶಕ್ತಿಯು ಅವಶ್ಯಕತೆಯಿದೆ.

ಜಪಾನರು ದಂಡಯಾತ್ರೆ ಕೇವಲ ೧೧ ಲಕ್ಷ ಟನ್ ನೌಕಾಶಕ್ತಿಯಿಂದ ಮೊದಲುಮಾಡಿದರು. ೧೯೪೨ರಲ್ಲಿ ೩ ಲಕ್ಷ ಟನ್ ನೌಕಾಶಕ್ತಿ ನಾಶವಾಯಿತು. ಈ ವರ್ಷದಲ್ಲಿ ಅದಕ್ಕಿಂತಲೂ ಹೆಚ್ಚಿನ ನಷ್ಟ ಅವರಿಗಾಗಿದೆ. ಜಪಾನರು ನಷ್ಟ ಕೂಡಿಸಿಕೊಳ್ಳಲು ಪ್ರತಿವರ್ಷ ತಯಾರಿಸುತ್ತಿರುವ ಕೇವಲ ೬ ಲಕ್ಷ ಟನ್‌ಗಳಷ್ಟು ಮಾತ್ರ. ಈ ನಷ್ಟ ಕೂಡಿಸಿಕೊಳ್ಳಲು ಚೀನ ಮತ್ತು ಮಲಯದ ಬಂದರುಗಳಲ್ಲಿ ಮುಳುಗಿರುವ ಹಡಗುಗಳನ್ನು ತೆಗೆಯಲು ಪ್ರಯತ್ನಿಸುತ್ತಿರುವುದಲ್ಲದೆ ಮುರಿದು ಬಿದ್ದ ಮಿತ್ರ ವಿಮಾನಗಳಲ್ಲಿಯ ಮರವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಹೇಳಲಾಗಿದೆ.

ಚಿತ್ರತಾರೆಯ ದಸ್ತಗಿರಿ ಮತ್ತು ಖುಲಾಸೆ

ಅಥೆನ್ಸ್ ನಗರದಲ್ಲಿ ಸುಪ್ರಸಿದ್ಧ ನಟಿಯಾದ ಸ್ಕೇತಪ್ರಭಾ ಪೃಥಾಗ್‌ಳನ್ನು ಪೋಲೀಸರು ದಸ್ತಗಿರಿ ಮಾಡಿ ಆ ಮೇಲೆ ಬಿಡುಗಡೆ ಮಾಡಿದರೆಂದು ವರದಿಯಾಗಿದೆ. ಆ ಊರಿನಲ್ಲಿ ಈಕೆಯು ನರ್ತನಕ್ಕಾಗಿ ಹೋಗಿದ್ದಳು. ರಂಗಭೂಮಿಯಲ್ಲಿ ಆಕೆಯು ಒಂದು ನರ್ತನದ ನಂತರ ಇನ್ನೊಂದು ನರ್ತನಕ್ಕೆ ಉಡುಪನ್ನು ಬದಲಾಯಿಸಿಕೊಳ್ಳಲು ಆಕೆಗೆ ಸರಿಯಾಗಿ ಜಾಗವೇ ಇಲ್ಲವೆಂಬುದಾಗಿ ಆಕೆಯು ಬಂದು ಪ್ರೇಕ್ಷಕವರ್ಗಕ್ಕೆ ತಿಳಿಸಿ, ಆ ಕಾರಣದಿಂದ ತಾನು ನರ್ತನವನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಿಬಿಟ್ಟಳು. ರಂಗಭೂಮಿಗೆ ಸೇರಿದ ಪ್ರದೇಶದ ಒಂದು ಭಾಗವನ್ನು ಪೋಲೀಸ್ ಹುದ್ದೇದಾರರು ಆಕ್ರಮಿಸಿ ಕೊಂಡಿದ್ದುದೇ ಹೀಗೆ ಸ್ಥಳವಿಲ್ಲದುದಕ್ಕೆ ಕಾರಣವಾಯಿತು. ಈ ವಿಷಯದಲ್ಲಿ ಆಕೆಗೂ ಪೋಲೀಸ್ ಅಧಿಕಾರಿಗಳಿಗೂ ವಾಗ್ವಾದ ನಡೆದು ಕೊನೆಗೆ ಆಕೆಯು ಬ್ರಿಟಿಷ್ ರಾಜನಿಗೆ ಅವಮಾನ ತೋರಿಸಿದಳೆಂಬ ಕಾರಣದ ಮೇಲೆ ಆಕೆಯನ್ನು ದಸ್ತಗಿರಿ ಮಾಡಿಬಿಟ್ಟರು. ಆ ಮೇಲೆ ಪೋಲೀಸರೇ ಯಾವ ಷರತ್ತೂ ಇಲ್ಲದೆ ಆಕೆಯನ್ನು ಬಿಟ್ಟು ಬಿಟ್ಟರು.

" ನಯಿ ದುನಿಯಾ "

ರಾಜಧಾನಿಯ ರಣಜಿತ್ ಚಿತ್ರಮಂದಿರದಲ್ಲಿ ಈ ಚಿತ್ರ ಪ್ರದರ್ಶಿತವಾಗುತ್ತಿದೆ. ಮುಂಬಯಿ ಸಿನೇಸಂಸ್ಥೆಯವರು ಇದನ್ನು ತಯಾರಿಸಿದರು. ಸಂಭಾಷಣೆಗೆ ಉಪಯೋಗಿಸಿ ಕೊಂಡಿರುವ ಹಿಂದೀ ಭಾಷೆ ಸರಳವಾಗಿದೆ. ಸ್ಪಷ್ಟವಾಗಿ ಕೇಳಿಸುತ್ತದೆ. ಸಂಗೀತ, ನರ್ತನ ಇವುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿಲ್ಲ. ಜಯರಾಜ್ ಮತ್ತು ಅಜೂರಿ ಇವರಿಬ್ಬರನ್ನು ಸೂಕ್ತ ಪಾತ್ರಗಳಿಗೆ ಚುನಾಯಿಸಲಾಗಿದೆ. ಅವರಿಬ್ಬರ ಅಭಿನಯದಲ್ಲಿ ಲೋಪ ದೋಷಗಳು ತೀರಾ ವಿರಳ. ನಾಯಕಿಯ ಪಾತ್ರಕ್ಕೆ ಸಮರ್ಥಳೊಬ್ಬಳ ಅವಶ್ಯಕತೆ ಕಂಡು ಬರುತ್ತದೆ. ಕಥೆ ಹೆಚ್ಚು ಸಹಜವಲ್ಲದಿದ್ದರೂ, ಹಾಸ್ಯ ಸನ್ನಿವೇಶಗಳು ನೋಡುಗರ ಮನ ಸೆಳೆಯುವುವು. ಸನ್ನಿವೇಶಕ್ಕೆ ತಕ್ಕ ದೃಶ್ಯಗಳ ಜೋಡಣೆ ಕಲಾದೃಷ್ಟಿಯಿಂದ ಸಂಪೂರ್ಣ ಮೆಚ್ಚಿಗೆಗೆ ಪಾತ್ರವಾಗಿದೆ.

ಕಲಿಯುಗದ ಸ್ವಯಂವರ

ಸ್ಪೈಜ್‌ಬಾದಿನಲ್ಲಿ ನಡೆದ ವಿವಾಹ ಸಂದರ್ಭದಲ್ಲಿ ವರನಿಗೆ ಧನುರ್ವಿದ್ಯೆಯ ಪರೀಕ್ಷೆ ಏರ್ಪಡಿಸಿದ್ದರು! ಜನ ಸಮೂಹವು ಪ್ರದರ್ಶನೆಯಲ್ಲಿ ನೆರೆದಿತ್ತು. ವಧು, ವರನ ಕೈಗೊಂದು ಬಾಣ ಕೊಟ್ಟಳು. ವರನು ಬಾಣದಿಂದ ದಾರದಿಂದ ನೇತುಬಿಟ್ಟಿದ್ದ ನಿಂಬೆಹಣ್ಣನ್ನು ದಾರ ಕೀಳದಂತೆ ಕತ್ತರಿಸಬೇಕು. ವರನ ಮೊದಲನೆ ಗುರಿ ತಪ್ಪಿತು. ೨ ನೇ ಬಾರಿ ವರನಿಗೆ ಜಯಮಾಲೆ ಹಾಕಿ ವಧುವಿನ ಪುಷ್ಪಮಾಲೆ ಕೊರಳಿಗೆ ಪುರೋಹಿತರ ವೇದಘೋಷಣದೊಡನೆ ಕನ್ಯಾಪ್ರಧಾನ ಸಮಾರಂಭ ನಡೆಯಿತು.

ವರನ ಜಾತಕದಲ್ಲಿ ಯಾವನೋ ಗ್ರಹ ಕ್ರೂರನಿದ್ದನಂತೆ, ಆ ದೋಷ ನಿವಾರಣಾರ್ಥವಾಗಿ ವರನಿಗೆ ಈ ಪರೀಕ್ಷೆ ಇಟ್ಟಿರಂತೆ.

ಕೊಡಲಿಯೊಡನೆಪ್ರೇಮಪಾ:

ಹೆಣ್ಣಿನ ಪ್ರೀತಿಗಾಗಿ ಸಾಮ್ರಾಜ್ಯವನ್ನೇ ಬಲಿಗೊಟ್ಟ ರಾವಣನಂಥವರು ನಮ್ಮಲ್ಲಿ ಇಲ್ಲದೆಹೋಗಿಲ್ಲ. ಹೆಣ್ಣೆಂದು ಮೃಗ, ಪಕ್ಷಿ ಪ್ರಾಣಿಸಂಪನ್ನೇ ರಾಮಿಸಿದ ಮಹನೀಯರು ಜಗತ್ತಿನಲ್ಲಿಲ್ಲದೆ ಇರಲಿಲ್ಲ. ಆದರೆ ಕೊಡಲಿಯನ್ನು ಪ್ರೀತಿಸಿ ಸಾವಿನ ಮೊಸಲು ಹೊದವನ ವಿಚಿತ್ರ ಕಥೆಯಿದು.

ನವನಗರದ ಒಬ್ಬ ರೈತ. ೬೦ ಕ್ಕೆ ಮೀರಿದ ವಯಸ್ಸು. ಆದರೂ ಭೋಗಾಭಿಲಾಷೆ ತಪ್ಪಿರಲಿಲ್ಲ. ಹೇಗೋ ಅವನಿಗೆ ಕೊಡಲಿಯನ್ನು ಸ್ತ್ರೀಗೆ ಬದಲು ಉಪಯೋಗಿಸಲು ಮುದನಿಸಿತು, ಉಪಯೋಗಿಸಿದ. ಕೊಡಲಿ ಕಡಿಯಲೆಂದೇ ಜನ್ಮತಾಳಿದ್ದು; ಇವನ ಜೀವದ ಬುಡಕ್ಕೇ ಏಟುಹಾಕಿತು. ಆದರೆ ಡಾಕ್ಟರರ ಕೃಪೆಯಿಂದ ಶಸ್ತ್ರಚಿಕಿತ್ಸೆನಡೆದು ಉಳಿದುಕೊಂಡ

ಧಾತುಪುಷ್ಟಿ ಮತ್ತು ಶಕ್ತಿವರ್ಧಕ!

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯನಷ್ಟ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯವನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಮಾನಸಿಕ ಉತ್ಸಾಹಗಳನ್ನು ಕೊಡುತ್ತವೆ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ

184, ಚೈನಾ ಬಜಾರುರಸ್ತೆ, ಮದರಾಸು

ಏಜೆಂಟರು : ಅಶೋಕಾ ಫಾರ್ಮಸಿ ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

The Benares Textile Emporium

(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಜರತಾರಿ ಮತ್ತು ರೆಡಿಮೇಡ್ ಡ್ರೆಸ್ ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿಯಲ್ಲಿ ತೆರೆಯಲಾಗಿದೆ. ಬನಾರಸ್ ಸೀರೆಗಳು ಎಲ್ಲಾ ಹೊಸ ನಮೂನೆಯಲ್ಲಿ ಸಿಕ್ಕುತ್ತವೆ.

ಈ ದಿನವೇ ಬಂದು ಪರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್ ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮೇಲ್ದರ್ಜೆಯ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ.

Edited, printed and published by A R. Nagarajan, at the Sadhvi Press, D.Subbiah Road, Mysore.

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದ:—

ಮೈಸೂರು ತಾ|| 7-8-1[?]

ನೋಟೀಸ್

ಇದರಿಂದ ಸೈಕಲ್ ಮಾಲೀಕರುಗಳಿಗೆ ತಿಳಿಸುವುದೇನೆಂದರೆ, 2850 ರ ವರ್ಷದ ಮತ್ತು 2100 ರ ವರೆಗಿನ ಪೂರ್ತಿ ವರ್ಷದ ಸೈಕಲ್ ಬಿಲ್ಲೆಗಳು ಮೇಲ್ಕಂಡ ಆಫೀಸಿನಲ್ಲಿ ಸಿದ್ಧವಾಗಿರುತ್ತೆ. ಡೂಪ್ಲಿಕೇಟ್ ಚೀಟಿ ಪಡೆದಿರತಕ್ಕವರುಗಳು 14-8-43 ರೊಳಗಾಗಿ ತಮ್ಮ ಚೀಟಿಗಳನ್ನು ಆಫೀಸಿಗೆ ಹಾಜರುಪಡಿಸಿ ಬಿಲ್ಲೆಗಳನ್ನು ಪಡೆಯತಕ್ಕದ್ದು. ವಾಯಿದೆ ಮೀರಿ ಬರುವ ಚೀಟಿಗಳಿಗೆ ಗಮನಕೊಡಲಾಗುವುದಿಲ್ಲ.

(ಸಹಿ) ಬಿ. ಎಸ್. ರಾಘವೇಂದ್ರರಾವ್

ಪ್ರೆಸಿಡೆಂಟ್

ಸಂಪುಟ ೨] ಮಂಗಳವಾರ ೧೦—೮—೪೩ [ಸಂಚಿಕೆ ೨೧

ಸಿಸಿಲಿಯಲ್ಲಿ ಜರ್ಮನರ ಹಿಂದೋಟ

ರೋಂ ನಗರವನ್ನು ನಿರ್ಜನ ಪ್ರದೇಶ ಮಾಡಲು ಯೋಜನೆ

ಜರ್ಮನಿ ರಕ್ಷಣೆಗಾಗಿ ಜಪಾನಿನ ಸಹಾಯವೇ ?

ವಿದ್ಯಾರ್ಥಿಗಳ ಮುಷ್ಕರ

ಮೈಸೂರು ೧೦

ಗಾಂಧಿಜಿ ಮೊದಲಾದ ಕಾಂಗ್ರೆಸ್ ನಾಯಕರನ್ನು ಬಂಧಿಸಿ ನಿನ್ನೆ ದಿನಕ್ಕೆ ಒಂದು ವರ್ಷವಾದ ಸಂಬಂಧದಲ್ಲಿ ಮಹಾರಾಜಾ, ಇಂಟರ್ ಕಾಲೇಜುಗಳ ಮತ್ತು ಇತರ ಹೈಸ್ಕೂಲ್ ವಿದ್ಯಾರ್ಥಿಗಳು ಶಾಲೆಗೆ ಮುಷ್ಕರ ಹೂಡಿದ್ದು, ಕಾಲೇಜಿನ ಮುಂಭಾಗದಲ್ಲಿ ಸಭೆ ನಡೆಸಿ ನಾಯಕರನ್ನು ಬಿಡುಗಡೆಮಾಡಬೇಕೆಂದು ನಿರ್ಣಯಮಾಡಿದರು.

ಸಾಯಂಕಾಲ ವಿದ್ಯಾರ್ಥಿಗಳು ಮಂದವಾಗಿ ಚಾಮುಂಡಿ ಬೆಟ್ಟಕ್ಕೆ ಹೋಗಿ ಅಲ್ಲಿ ಶ್ರೀ ಅಮ್ಮನವರ ಪೂಜೆನಡೆಸಿ, ನಾಯಕರುಗಳಿಗೆ ದೀರ್ಘ ಆಯಸ್ಸನ್ನು ಕೊಡುವಂತೆ ಪ್ರಾರ್ಥಿಸಲಾಯಿತು.

ಸ್ಪೆಷಲ್ ಆಫೀಸರ ನೇಮಕ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯುವ ಯೋಜನೆಯ ಬಗ್ಗೆ ವ್ಯವಸಾಯ ಇಲಾಖೆಯ ಶ್ರೀ ಎಂ. ನಾರಾಯಣ ರೆಡ್ಡಿಯವರನ್ನು ಸ್ಪೆಷಲ್ ಆಫೀಸರಾಗಿ ನೇಮಿಸಲಾಗಿದೆ ಎಂದು ಗೊತ್ತಾಗಿದೆ

ಹೊಸ ನಾಯಕತ್ವ ಬೇಕು

"ಭಾರತದ ರಾಜಕೀಯ ಸಮಸ್ಯೆ ಸಂದಿಗ್ಧಕ್ಕೆ ಈಗ ಸಕಾಲ ಒದಗಿದೆ. ರಾಜ್ಯಾಂಗ ಬಿಕ್ಕಟ್ಟಿನಿಂದ ಉಂಟಾಗಿರತಕ್ಕ ನಿರಾಶೆ ಮನೋಭಾವವನ್ನು ಕೊನೆಗಾಣಿಸಬೇಕು" ಎಂಬುದಾಗಿ ಮದ್ರಾಸಿನ ಮಾಜಿ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಜನಾರ್ಧನರವರು ಮದ್ರಾಸಿನ ಯುವಕರ ಸಮ್ಮೇಳನದಲ್ಲಿ ತಿಳಿಸಿದರು.

ಕಾಂಗ್ರೆಸ್ ತನ್ನ ಕಾರ್ಯದಲ್ಲಿ ಸೋತಿತು. ಕಾಂಗ್ರೆಸ್ ನಾಯಕರ ಸ್ವಾರ್ಥತ್ಯಾಗಕ್ಕೆ, ಕಾಂಗ್ರೆಸ್ಸಿಗಿರುವ ಜನತಾ ಬೆಂಬಲಕ್ಕೆ ತಕ್ಕ ಫಲವನ್ನು ಕಾಂಗ್ರೆಸ್ ಪಡೆಯಲಿಲ್ಲ ಅವಕ್ಕೆ ಮೂಲಭೂತವಾದ ತತ್ವಗಳಲ್ಲಿನ ದೋಷವೂ ಕಾರ್ಯವಿಧಾನದ ಅಸಾಮರ್ಥ್ಯದ ದೋಷವೂ ಕಾರಣವಾಗಿರಬೇಕು. ಮುಖ್ಯ ಸನ್ನಿವೇಶ ಒದಗಿದಾಗ ಕಾಂಗ್ರೆಸ್ ನಾಯಕರು ಹಿಂದೆಗೆದರು. ರಾಷ್ಟ್ರದ ಈ ಹಿರಿಯ ನಾಯಕರು ಕೊನೆಯ ಹಂತಕ್ಕೆ ಬಂದು ನಿಂತಿದ್ದಾರೆ. ಯುವಕರು ಮುಂದೆ ಬಂದು ಹಳೆಯ ನಾಯಕರ ಸೂತ್ರಗಳನ್ನು ತಾವು ವಹಿಸಿಕೊಂಡು ಹೊಸ ನಾಯಕತ್ವವನ್ನು ತೋರಿಸಬೇಕಾಗಿದೆ. ಹೊಸ ರಾಷ್ಟ್ರಕ್ಕೆ ತಕ್ಕ ಹೊಸ ನಾಯಕರುಗಳೂ ಹೊಸ ನೀತಿಗಳೂ ಬೇಕು. ನಮ್ಮ ರಾಜಕೀಯ ಪಕ್ಷಗಳೇಕೆ ಅನೇಕ ವಿಷಯಗಳಲ್ಲಿ ಏಕಾಭಿಪ್ರಾಯಕ್ಕೆ ಬಂದಿಲ್ಲ ? ಅನೇಕ ವಿಷಯಗಳಲ್ಲಿ ಸೋತಿವೆ ಎಂಬುವನ್ನು ನಾವು ಮರೆಯಬಾರದು. ಹಿಂಜರಿಯಬಾರದು ಎಂಬುದಾಗಿ ತಿಳಿಸಿದರು.

ಬೊಂ॥ ವಿಶ್ವವಿದ್ಯಾಲಯಕ್ಕೆ ಉದಾರ ದಾನ

ಬೊಂಬಾಯಿ. ವಿಶ್ವವಿದ್ಯಾನಿಲಯದಲ್ಲಿ ಟೆಕ್ನಾಲಜಿ ವಿಭಾಗವನ್ನು ತೆರೆಯಲು ರಾವ್ ಬಹದ್ದೂರ್ ... ಕರಮ್‌ಚಂದ ಕೊಟಕ್ ... ಲಕ್ಷ ರೂಪಾಯಿಗಳ ದಾನ ಮಾಡಿದ್ದಾರೆ.

ಜಪಾನಿಗೆ ಆತ್ಮರಕ್ಷಣೆ ಕಾಲವು ಒದಗಿದೆ

ಮಿತ್ರ ವಿಮಾನಗಳು ವಿಧ್ವಂಸನೀಯ ನ್ಯೂಗಿನಿ ಮತ್ತು ಕೂಲಂಬರಾಂಗ ದ್ವೀಪದಲ್ಲಿರುವ ವಿಲಾ ಮೇಲೆ ೬೫ ಟನ್ ಬಾಂಬುಗಳನ್ನು ಹಾಕಿ ಧಾಳಿ ಮಾಡಿವೆ. ಮುಂದಾವನ್ನು ಆಕ್ರಮಿಸಿಬಿಟ್ಟ ದಂಡನಾಯಕರು ಜಪಾನ್ ದ್ವೀಪದ ಮೇಲೂ ಧಾಳಿ ನಡೆಸುವುದಾಗಿ ತಿಳಿಸುತ್ತಾರೆ. ಜಪಾನರು ತಮ್ಮ ಎಲ್ಲಾ ಭಾಗಗಳಲ್ಲಿಯೂ ಆತ್ಮರಕ್ಷಣೆ ಮಾಡಿಕೊಳ್ಳುವ ಪ್ರಸಂಗ ಉಂಟಾಗಿದೆ ಎಂದು, ನ್ಯೂಯಾರ್ಕ್ ಅರ್ಥರ್‌ನವರು ತಿಳಿಸಿದ್ದಾರೆ

ಬಲ್ಗೇರಿಯಾವು ವಿಮಾನ ಧಾಳಿ ಸಿದ್ಧತೆ ನಡೆಸುತ್ತಿದೆ

ಬಲ್ಗೇರಿಯಾ ದೇಶವು ವಿಮಾನ ಧಾಳಿ ಸಿದ್ಧತೆ ಮಾಡುತ್ತಿದೆಯೆಂದೂ, ಸೋಫಿಯಾದಲ್ಲಿರುವ ಎಲ್ಲಾ ... ಭಾರಿಸಲು ಅಧಿಕಾರಿಗಳನ್ನೆಲ್ಲಾ ಬೇರೆ ಪ್ರದೇಶಕ್ಕೆ ಸಾಗಿಸಬೇಕೆಂದೂ ತಿಳಿಸಿದ್ದಾರೆ

ಇಟಲಿ ಸಿದ್ಧತೆ

ರೋಂ ನಗರವನ್ನು ಬೈಲು ಪ್ರದೇಶವಾಗಿ ಮಾಡಲು ಸಿದ್ಧತೆ ನಡೆಯುತ್ತಿದೆಯೆಂದೂ ವೆನಿಸ್ ಮತ್ತು ಲೆಂಬಾರ್ಡಿ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ವಿಮಾನ ರಕ್ಷಣೆ ಮಾಡಲಾಗುತ್ತಿದೆಯೆಂದೂ ಮತ್ತು ಈ ಪ್ರದೇಶಗಳಲ್ಲಿ ಹೆಚ್ಚಾಗಿ ಜರ್ಮನ್ ಸೈನಿಕರು ಇರುವರೆಂದು ಹೇಳಲಾಗಿದೆ. ಈ ಪ್ರದೇಶದಿಂದ ಶತ್ರುವನ್ನು ಪ್ರತಿಭಟಿಸಲಾಗುವುದೆಂದು ಕೇಳಲಾಗಿದೆ

ಗ್ರೀಸ್, ಯುಗೋಸ್ಲೇವಿಯಾ ಪ್ರಜೆಗಳ ಸಮಾಧಾನ

ಗ್ರೀಸ್ ... ಬಿಡುಗಡೆಯ ಒದಗಿ ಬರುತ್ತಾಗಿದೆಯೆಂದೂ, ಬಹಳ ಗೋಳಾಟ ಪಡುತ್ತಿರುವ ಗ್ರೀಸ್ ಯುಗೋಸ್ಲೇವಿಯಾ ಜನರು ... ಯಿಂದ ಅಭ್ಯುದಯಹೊಂದಬೇಕೆಂದು ... ಪ್ರಜೆಗಳಿಗೆ ... ತಿಳಿಸಿದ್ದಾರೆ

ಬಾರ್ಸಿಲೋನಾ ಬಳಿ ರಷ್ಯನರು

ರಷ್ಯನರು ... ಹತ್ತಿರ ... ಹೇಳಲಾಗಿದೆ

ಚೀನಾಕ್ಕೆ ಸಹಾಯದ ಬಗ್ಗೆ ಡಾ॥ ಸೂಂಗ್‌ರ ಭಾಷಣ

ಚೀನಾದ ವಿದೇಶಾಂಗ ಸಚಿವರಾದ ಡಾ॥ ಟಿ. ವಿ. ಸೂಂಗ್‌ರವರು ಲಂಡನ್ನಿನಲ್ಲಿ ಮಾಡಿದ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಈ ರೀತಿ ತಿಳಿಸುತ್ತಾರೆ.

"ಭಾರತದಿಂದ ಚೀನಾಕ್ಕೆ ಕಳುಹಿಸತಕ್ಕ ಯುದ್ಧ ಸಾಮಗ್ರಿಗಳ ಬಿಕ್ಕಟ್ಟನ್ನು ಹೆಚ್ಚಿಸುತ್ತಿದ್ದೇವೆ. ಈಗ ಪರಿಸ್ಥಿತಿಯು ಅನುಕೂಲಕರವಾಗಿ ಕಂಡು ಬರುತ್ತದೆ. ಚೀನೀ ಸೈನ್ಯಗಳ, ರಸ್ತೆಗಳ ಮೇಲೆ ಬ್ರಿಟಿಷ್ ಮುತ್ತಿಗೆ ನಡೆಸಲು ತಕ್ಕಷ್ಟು ಯುದ್ಧ ಸಾಮಗ್ರಿಗಳನ್ನು ಸರಬರಾಯಿ ಮಾಡಲು ಭೂಮತ್ತು ಸಮುದ್ರ ಮಾರ್ಗಗಳನ್ನು ನಾವು ತೆರೆಯಬೇಕಾಗಿದೆ"

ಚೀಣಾದಲ್ಲಿ ಪ್ರವಾಹ

ಚೈನಾದಲ್ಲಿ ವಿಪರೀತ ಮಳೆಯಾಗಿ, ಎಲ್ಲೋ ನದಿಗಳು ಒಡೆದು ೮೦ ಪ್ರಾಂತ್ಯಗಳಿಗಿಂತ ಹೆಚ್ಚಾಗಿ ಪ್ರವಾಹಕ್ಕೆ ಈಡಾಗಿವೆ ಯೆಂಬ ವರದಿಯಾಗಿದೆ.

ಪತ್ರಿಕೆ ಮೇಲೆ ಆಜ್ಞೆ

ನವದೆಹಲಿಯಲ್ಲಿರುವ 'ಹಿಂದೂಸ್ಥಾನ್ ಟೈಮ್ಸ್' ಎಂಬ ಇಂಗ್ಲಿಷ್ ದಿನ ಪತ್ರಿಕೆಯ ಆಫೀಸಿಗೆ ನಿನ್ನೆಯ ದಿನ ಪೋಲೀಸ್ ಹೋಗಿ ಆ ದಿನದ ಪತ್ರಿಕೆಯು ಹೊರಗೆ ಕಳಿಸುವುದಕ್ಕೆ ಮುಂಚೆ ಚೀಫ್ ಕಮೀಷನರ ಅನುಮತಿ ಬೇಕೆಂಬ ಆಜ್ಞೆಯನ್ನು ಪೋಲೀಸರು ಜಾರಿಮಾಡಿದರು. ಪೋಲೀಸ್ ಆ ದಿನದ ಕೆಲವು ಪತ್ರಿಕೆಯನ್ನು ತೆಗೆದುಕೊಂಡು ಹೋಗಿ, ಸ್ವಲ್ಪ ಕಾಲದನಂತರ ಜನಗಳಿಗೆ ಕೊಡಬಹುದೆಂದು ಒಪ್ಪಿ ಮಾಡಿದರು

ಬಟ್ಟೆ ಸರಬರಾಜು

ಅಸ್ಸಾಂ ಪ್ರಾಂತ್ಯದಲ್ಲಿ ಸ್ಟ್ಯಾಂಡರ್ಡ್ ಬಟ್ಟೆ ... ವರ್ಷಕ್ಕೆ ಒಬ್ಬ ಮನುಷ್ಯನಿಗೆ ... ಬಟ್ಟೆ ಮಾತ್ರ ಕೊಡಲಾಗುವುದು. ... ಅಜ್ಞೆ ಮೂಲಕ ... ಈ ವಿಷಯದಲ್ಲಿ ನಿಯಮಿತ ಕೇಂದ್ರಗಳಲ್ಲಿ ಮಾತ್ರ ಬಟ್ಟೆ ಪಡೆಯಬಹುದು. ... ಬಟ್ಟೆಯನ್ನು ಬೇರೆಯವರಿಗೆ ಕೊಡಲಾಗದೆಂದು ಆಜ್ಞೆಯಾಗಿದೆ.

ಬೊಂಬಾಯಿನಲ್ಲಿ ೩೦೦ ಮಂದಿ ದಸ್ತಗಿರಿ

ಬೊಂಬಾಯಿನಲ್ಲಿ ನಿನ್ನೆಯ ದಿವಸ ಮೆರವಣಿಗೆ ಹೋಗಲು ಯತ್ನಿಸಿದರೆಂದು ೬೦ ಜನಗಳನ್ನು ಪೋಲೀಸರು ದಸ್ತಗಿರಿ ಮಾಡಿದರು. ಆಗಸ್ಟ್ ೬ ನೇ ತಾ॥ ನಿಂದ ೯ ರವರೆಗೆ ಬೊಂಬಾಯಿನಲ್ಲಿ ಒಟ್ಟು ೩೦೦ ಜನರ ದಸ್ತಗಿರಿಯಾಗಿದೆಯೆಂದು ವರದಿಯಾಗಿದೆ.

ಆಕ್ಷೇಪಕರವಾದ ಸಾಹಿತ್ಯವನ್ನು ಇಟ್ಟುಕೊಂಡಿದ್ದರೆಂದು ಜನ್ಮಭೂಮಿ ಪತ್ರಿಕೆಯ ಸಂಪಾದಕರಾದ ಶ್ರೀ ಅಮೃತಲಾಲ್ ಸೇಟ್ ರವರ ಕುಮಾರ ಜಯಂತ್ ಸೇಟ್‌ರವರನ್ನೂ ದಸ್ತಗಿರಿ ಮಾಡಲಾಯಿತು.

ಪದಾರ್ಥಗಳನ್ನು ಕೊಳ್ಳಕೂಡದು

ಪೂರ್ವ ಅಸ್ಸಾಂ ಕ್ಷೇತ್ರದಲ್ಲಿರುವ ಅಮೆರಿಕ ಸೈನಿಕರು ಜನಗಳಿಗೋಸ್ಕರ ಇಟ್ಟಿರುವ ಬಟ್ಟೆ ಅಥವಾ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಕೂಡದೆಂದು ಆಜ್ಞೆ ಮಾಡಲಾಗಿದೆ.

ಸಿಸಿಲಿಯಲ್ಲಿ ಜರ್ಮನರ ಹಿಂದೋಟ

ಸಿಸಿಲಿಯಲ್ಲಿ ಬ್ರಿ॥ ೮ ನೆಯ ಸೈನ್ಯವು ಎಟ್ನಾ ಬೆಟ್ಟದ ಮುಖ್ಯ ಪೈಕಿಯ ಕೇಂದ್ರವಾದ ಅಡ್ರೋನೊ ನಗರವನ್ನ ವಶಪಡಿಸಿಕೊಂಡಿದೆ. ಈ ನಗರದ ಆಕ್ರಮಣದಿಂದ ಜರ್ಮನರಿಗೆ ಮುಖ್ಯ ಸರಬರಾಜು ಕತ್ತರಿಸಿದಂತಾಗಿದೆ. ಪಾಟರ್ನೊ ಉತ್ತರ ಭಾಗದಲ್ಲಿರುವ ೩ ಪಟ್ಟಣಗಳನ್ನು ಆಕ್ರಮಿಸಿಕೊಳ್ಳಲಾಗಿದೆ. ಎಟ್ನಾದ ಪಶ್ಚಿಮದಲ್ಲಿರುವ ಜರ್ಮನಿ ಸಂರಕ್ಷಣ ಸ್ಥಾನಗಳನ್ನು ಭೇಧಿಸಿ, ಮಿತ್ರರು ಮುನ್ನುಗ್ಗುತ್ತಿದ್ದಾರೆ.

ಜರ್ಮನ್ ಸೈನ್ಯಕ್ಕೆ ಗಂಡಾಂತರ

ಮೆಸ್ಸೀನಾ ಜಲಸಂಧಿಯಲ್ಲಿ ಮೂರು ಜರ್ಮನ್ ಡಿವಿಜನ್ ಸೈನ್ಯವು ಮಿತ್ರ ಸೈನಿಕರಿಂದ ತಪ್ಪಿಸಿಕೊಳ್ಳಲಾರದೆ ಸಿಕ್ಕಿಬಿದ್ದಿದ್ದಾರೆಂದು ವರದಿಯಾಗಿದೆ.

ಮಿಶ್ರ ಮಂತ್ರಿಮಂಡಲ ಬಗ್ಗೆ ಮಹಾ ಸಭೆ ನಿರ್ಧಾರ

ಅಖಿಲ ಭಾರತ ಹಿಂದೂ ಮಹಾ ಸಭೆ ಕಾರ್ಯಕಾರಿ ಮಂಡಲಿಯು ಪ್ರಾಂತ್ಯಗಳಲ್ಲಿ ಸ್ಥಾಪನೆಯಾಗಬೇಕೆಂದಿರುವ ಮಿಶ್ರ ಮಂತ್ರಿಮಂಡಲ ವಿಷಯದಲ್ಲಿ ಈ ರೀತಿ ನಿರ್ಧರಿಸಿದೆ. ಹಿಂದೂ ಮಹಾ ಸಭೆಯು ಎಲ್ಲಾ ಅಲ್ಪಸಂಖ್ಯಾತರನ್ನು ನೆರವೇರಿಸುವ ಸಂಪೂರ್ಣ ನೆರವಿಕೆ ಇಲ್ಲದಿದ್ದರೂ ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿಮಂಡಲ ರಚನೆಗೆ ಹಿಂದೂ ಮಹಾ ಸಭೆಯು ತನ್ನ ಸಮ್ಮತಿಯನ್ನು ಕೊಡುವುದು.

ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿಮಂಡಲ ರಚನೆಗೆ ಮತ್ತು ... ಮಹಾ ಸಭೆಯ ... ವಿರೋಧಿಸುವ ಅಥವಾ ... ಮಹಾ ಸಭೆಯ ... ಮಂತ್ರಿಗಳು ... ಸಭೆಯ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗುವುದು.

ವರ್ಗಾವರ್ಗಿ

ಬೆಂಗಳೂರು ೯

ತುಮಕೂರು ಜಿಲ್ಲೆಯ ಪ್ರೈ|| ಸಾ|| ರಾದ ಶ್ರೀ. ಟಿ. ವೆಂಕಟಪತಿರೆಡ್ಡಿಯವರನ್ನು ಸಿವಿಲ್ ಸಪ್ಲೈ ಇಲಾಖೆಗೂ ಕಡೂರು ಜಿಲ್ಲಾ ಪ್ರೈ|| ಸಾ|| ರಾದ ಶ್ರೀ. ಡಿ. ಆರ್ ಚನ್ನದುರ್ಗಯ್ಯನವರನ್ನು ಮೈಸೂರು ಸಬ್ ಡಿವಿಷನ್ ಆಫೀಸರನ್ನಾಗಿ ವರ್ಗಾಯಿಸಲಾಗಿದೆ.

ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟಿನ ಆರೋಗ್ಯ ಶಿಕ್ಷಣ ಬ್ಯೂರೋವಿನ ಶ್ರೀ. ಕೇಶವಾದ್ರಿಯವರನ್ನು ಶಿವಮೊಗ್ಗ ಜಿಲ್ಲಾ ಆರೋಗ್ಯಾಧಿಕಾರಿಗಳನ್ನಾಗಿಯೂ, ಬೆಂಗಳೂರು ಜಿಲ್ಲಾ ಆರೋಗ್ಯಾಧಿಕಾರಿಗಳಾದ ಬಿ. ನಾರಾಯಣರಾಯರನ್ನು ಶ್ರೀ ಕೇಶವಾದ್ರಿಯವರ ಸ್ಥಾನಕ್ಕೂ, ಶಿವಮೊಗ್ಗ ಆರೋಗ್ಯಾಧಿಕಾರಿಗಳಾದ ಶ್ರೀ ವಿ. ರಾಮಕೃಷ್ಣರವರನ್ನು ಭದ್ರಾವತಿ ಭಾಗದ ಪ್ರಯೋಗಿಕ ಕ್ಷೇತ್ರದ ... ಆಸ್ಪತ್ರೆಗಳನ್ನು ವ್ಯವಸ್ಥೆ ಮಾಡಲು ನೇಮಿಸಲಾಗಿದೆ.

ಭರತಪುರಕ್ಕೆ ಆಹ್ವಾನ

ಧರ್ಮ ಪ್ರಕಾಶ ಎಲ್. ಎಸ್. ವೆಂಕಟಯ್ಯನವರು ಭರತಪುರದ ದಿವಾನರ ಆಹ್ವಾನದ ಮೇಲೆ ಶೀಘ್ರದಲ್ಲಿಯೇ ಭರತಪುರಕ್ಕೆ ಪ್ರಯಾಣ ಮಾಡುವರೆಂದು ವರದಿಯಾಗಿದೆ.

ಉದಾರ ದಾನ

ಕರ್ನಾಟಕ ಪರಿಷತ್ತಿಗೆ ಧರ್ಮಪ್ರಕಾಶ ಎಲ್. ಎಸ್. ವೆಂಕಾಜಿಯವರು ಮತ್ತು ಸಿಕಂದರಾಬಾದಿನ ಶ್ರೀ ಎಂ.ಜಿ. ಲಕ್ಷ್ಮೀನರಸುರವರು ತಲಾ ಒಂದು ಸಾವಿರ ರೂಪಾಯಿಗಳ ಉದಾರ ದಾನ ಮಾಡಿದ್ದಾರೆ.

ಪತ್ರಿಕೆಯ ಬಹಿಷ್ಕಾರ ರದ್ದಾಯಿತು

ಲಂಡನ್ನಿನ ಕಮ್ಯೂನಿಸ್ಟ್ ಪಕ್ಷದ ವೃತ್ತಪತ್ರಿಕೆಯಾದ "ಡೈಲಿ ವರ್ಕರ್" ಮೇಲೆ ಗವರ್ನಮೆಂಟಿನವರು ಹಾಕಿದ್ದ ಬಹಿಷ್ಕಾರವನ್ನು ರದ್ದುಗೊಳಿಸಲಾಗಿದೆ.

ಆಹಾರ ಪರಿಸ್ಥಿತಿ ಬಹಳ ವಿಷಮಗೊಂಡಿದೆ

ಭಾರತ ಸರ್ಕಾರದ ಆಹಾರ ಸಚಿವರಾದ ಸರ್ ಅಜೀಜುಲ್ ಹಕ್ಕರು ಕೇಂದ್ರ ಸಭೆಯಲ್ಲಿ ಆಹಾರ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆಯನ್ನು ಇತ್ತರು.

"ಭಾರತವು ಆಹಾರ ಅಭಾವ ಪರಿಸ್ಥಿತಿಯಲ್ಲಿ ಅತ್ಯಂತ ಕಷ್ಟಾವಸ್ಥೆಯನ್ನು ಮುಟ್ಟಿದೆಯೆಂದೂ, ಈ ಅಭಾವದಿಂದ ಜಗತ್ತಿನಲ್ಲಿ ಯಾವಭಾಗಕ್ಕೂ ಬೀಳದಷ್ಟು ಭಾರತಕ್ಕೆ ಇಂದು ತಗುಲಿದೆಯೆಂದೂ ತಿಳುಹಿಸಿದರು. ಈ ವರ್ಷ ಭಾರತಕ್ಕೆ ೨೦ ಲಕ್ಷ ಟನ್ನಿನಷ್ಟು ಅಕ್ಕಿ ಅಭಾವ ಸಂಭವಿಸಿದೆಯೆಂದು ತಿಳಿಸಿ, ಬೊಂಬಾಯಿ, ಕೊಚಿನ್, ತಿರುವಾಂಕೂರುಗಳಿಗೆ ಅಭಾವವು ಬಹಳವಾಗಿದೆಯೆಂದು ತಿಳಿಸಿದರು. ಅಲ್ಲದೆ, ಈ ಪರಿಸ್ಥಿತಿಯನ್ನು ಸರಿಪಡಿಸಲು ಕೇಂದ್ರ ಸರ್ಕಾರವು ಕೈಕೊಂಡ ಕಾರ್ಯಕ್ರಮವನ್ನು ವಿವರಿಸಿ ಕಾರ್ಯಸಾಧನೆಗೆ ಪ್ರಾಂತ ಸರ್ಕಾರ ಮತ್ತು ಜನಗಳ ಸಹಕಾರವು ಅಗತ್ಯ" ಎಂದು ತಿಳಿಸಿರುತ್ತಾರೆ.

ಲಾಟರಿ ಹಾಕಿಸಿ ಮೋಸ ಪಡಿಸಿದ್ದಕ್ಕೆ ದಸ್ತಗಿರಿ

ಕಲ್ಕತ್ತಾದಲ್ಲಿ ಕೆಲವು ಜನರ ಕೈಲಿ ಲಾಟರಿ ಹಾಕಿಸಿ ಆದ. ಒಂದು ದೊಡ್ಡ ಸಂಸ್ಥೆ ಲಾಟರಿಯೆಂದು ನಂಬಿಸುತ್ತಿದ್ದರು. ಗುಪ್ತ ಪೋಲೀಸರು ಈ ಲಾಟರಿ ಭವನವನ್ನು ಶೋಧಿಸಿದಾಗ, ಮೂರು ಜನರನ್ನು ದಸ್ತಗಿರಿ ಮಾಡಿ, ಅಪಾದಿತರನ್ನು ಕೋರ್ಟಿನಲ್ಲಿ ಹಾಜರುಮಾಡಲಾಯಿತು ಮ್ಯಾ||ರುಇವರನ್ನು ಜೈಲಿನಲ್ಲಿ ಇಡುವಂತೆ ಆಜ್ಞೆ ಮಾಡಿರುವರು. ಮುಂದಿನ ತನಿಖೆ ನಡೆಯುತ್ತಿರುವದೆಂದು ತಿಳಿದುಬಂದಿದೆ.

ಜರ್ಮನಿಗೆ ಜಪಾನೀಯರ ಸಹಾಯವೇ!

ಜರ್ಮನಿಯ ಪರಿಸ್ಥಿತಿಯು ತುಂಬಾ ವಿಷಮಗೊಂಡಿರುವದರಿಂದ ತನ್ನ ರಕ್ಷಣೆಗಾಗಿ ಜಪಾನಿನ ಸಹಾಯ ಪಡೆಯಬಹುದೆಂದು ಹೇಳಲಾಗಿದೆ.

ಜ|| ಡಿಗಾಲರ ಅಶಾದಾಯಕ ಭಾಷಣ

ಫ್ರೆಂಚ್ ಮತ್ತು ರಷ್ಯನ್ ಸಂಬಂಧಗಳ ವಿಷಯವಾಗಿ ಜ|| ಡಿಗಾಲರು ಮಾತನಾಡುತ್ತಾ, "ರಷ್ಯನ್ ಜನಗಳ ಬಗ್ಗೆ ಫ್ರೆಂಚರಿಗೆ ಹೆಚ್ಚು ಸಂಪ್ರಮವಿರುವುದು. ಯುದ್ಧಾನಂತರ ಫ್ರೆಂಚರಿಗೂ ರಷ್ಯನರಿಗೂ ಹೆಚ್ಚಿನ ನಿಕಟ ಸಂಬಂಧ ಬೆಳೆಯುವುದು. ಇದರಿಂದ ಜಗತ್ತಿಗೆ ತುಂಬಾ ಅನುಕೂಲವಾಗುವುದು. ಅಂತರ್‌ರಾಷ್ಟ್ರೀಯ ಸಹಕಾರದಲ್ಲಿ ತಮ್ಮ ಸ್ಥಿತಿಗತಿಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ಫ್ರೆಂಚರಿಗೆ ಸಂಪೂರ್ಣ ಬೆಂಬಲವಿದೆ. ಆದರೆ ಈ ವಿಚಾರದಲ್ಲಿ ಫ್ರಾನ್ಸ್ ತಾನು ಯಾರೊಡನೆ ಈಗ ಸಹಕರಿಸಿ ಯುದ್ಧ ನಡೆಸುತ್ತಿವೆಯೋ ಅವರೊಡನೆ ಸಮಾಲೋಚನ ಮಾಡಿಯೇ ತೀರುವುದು. ರಷ್ಯನರ ಬಗ್ಗೆ ಫ್ರೆಂಚರಿಗೆ ಗಾಢವಾದ ತಿಳುವಳಿಕೆ ಇರುವುದು" ಎಂದು ಹೇಳಿದರು.

ಫ್ರಾನ್ಸಿನಲ್ಲಿ ಅಶಾಂತಿ

ಪ್ಯಾರಿಸ್‌ನಗರದಲ್ಲಿ ನಾಜಿ ಸೈನಿಕರಿಗೂ ಫ್ರೆಂಚ್ ಪ್ರಜೆಗಳಿಗೂ ಘರ್ಷಣೆಯುಂಟಾಗಿ ಜರ್ಮನ್ ಸೈನಿಕರಿಗೆ ಕೊಟ್ಟಿದ್ದ ರಜವನ್ನು ರದ್ದು ಪಡಿಸಿರುವರು ಮತ್ತು ಜರ್ಮನ್ ಸೈನಿಕರು ಪ್ಯಾರಿಸ್ಸಿನ ಮುಖ್ಯ ಬೀದಿಗಳಲ್ಲಿ ಮೊರ್ಟಾರುಗಳನ್ನು ಇಟ್ಟುಕೊಂಡು ಪಹರೆ ನಡೆಸುತ್ತಿರುವುದಾಗಿ ಅಲ್ಜಿರಿಯಸ್‌ನಲ್ಲಿ ಇರುವ ಸ್ವತಂತ್ರ ಫ್ರೆಂಚ್ ಸಂಸ್ಥೆಯು ತಿಳಿಸುತ್ತದೆ.

ಫ್ಯಾಸಿಸ್ಟ್ ವಿರುದ್ಧ ಬಂದಿಗಳ ಬಿಡುಗಡೆ

ಫ್ಯಾಸಿಸ್ಟ್ ವಿರುದ್ಧ ಅಭಿಪ್ರಾಯಕ್ಕಾಗಿ ದಸ್ತಗಿರಿ ಮಾಡಿದ್ದವರನ್ನು ಬಿಡುಗಡೆಮಾಡಲಾಯಿತೆಂದೂ, ಆದರೆ ಸೋಲಿನ ಮನೋಭಾವವುಳ್ಳವರಿಗೆ ಮತ್ತು ರಾಷ್ಟ್ರಕ್ಕೆ ವಿರುದ್ಧ ಕಾರ್ಯಕ್ರಮ ಕೈಕೊಳ್ಳುವವರಿಗೆ ಶಿಕ್ಷೆ ತಪ್ಪುವುದಿಲ್ಲವೆಂದು ಇಟಲಿಯ ಪ್ರಧಾನಿಯವರು ಒಂದು ಹೇಳಿಕೆಯಲ್ಲಿ ಸೂಚಿಸಿದ್ದಾರೆ.

ಅಮೇರಿಕದಲ್ಲಿ ಹೆಚ್ಚು ವಿಮಾನ ತಯಾರಿಕಾ ಕ್ರಮ

ಅಮೇರಿಕಾದಲ್ಲಿ ತಿಂಗಳಿಗೆ ೭೦೦೦ ವಿಮಾನಗಳನ್ನು ತಯಾರಿಸಲಾಗುತ್ತಿದೆ. ಪ್ರಪಂಚದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ವಿಮಾನ ನಿರ್ಮಾಣ ಕಾರ್ಯವು ನಡೆಸೇ ಇರುವುದಿಲ್ಲ. ಬಾಂಬರುಗಳ ಸಂಖ್ಯೆಯೂ ಹೆಚ್ಚುತ್ತಿರುವುದು. ಜೂನ್ ತಿಂಗಳ ಸಂಖ್ಯೆಗಿಂತ ಶೇಕಡ ೮ ರಷ್ಟು ಹೆಚ್ಚಿಗೆ ವಿಮಾನಗಳನ್ನು ತಯಾರಿಸಲಾಗುತ್ತಿದೆ.

ಹಿಂದೂ ತರುಣರು ಹೆಚ್ಚಾಗಿ ವಿಮಾನದಳಕ್ಕೆ ಸೇರಬೇಕು

ಅಖಿಲ ಭಾರತ ಹಿಂದೂ ಮಹಾಸಭೆ ಕಾರ್ಯಸಮಿತಿಯು ಬೊಂಬಾಯಿನಲ್ಲಿ ನೆರೆದ ಮುಂದಿನ ಸಭೆಯಲ್ಲಿ ಶ್ರೀ ಸಾವರ್ಕರ್ ರಾಜೀನಾಮೆ ವಿಷಯವನ್ನು ಪರಿಶೀಲಿಸುವವರೆಗೂ ಅವರು ಅಧ್ಯಕ್ಷರಾಗಿರತಕ್ಕದೆಂದು ನಿರ್ಧರಿಸಲಾಯಿತು. ವಿಕ್ರಮಶಕೆಯನ್ನು ಸ್ಥಾಪಿಸಿದ ವಿಕ್ರಮಾದಿತ್ಯನ ದ್ವಿತೀಯ ಸಹಸ್ರ ವಾರ್ಷಿಕೋತ್ಸವವನ್ನು ಆಚರಿಸಲು ಹಿಂದುಗಳು ಕೂಡಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಲಾಗಿ ಶ್ರೀ ಜಿ. ವಿ ಗಾಡ್ಗೀಲ್‌ರವರು ವಿಮಾನ ಅಪಘಾತದಿಂದ ಮೃತರಾದುದಕ್ಕಾಗಿ ಅನುತಾಪ ಸೂಚಿಸಿ, ಹಿಂದೂ ತರುಣರು ಅವರ ಮಾದರಿಯನ್ನನುಸರಿಸಿ ಹೆಚ್ಚು ಹೆಚ್ಚಾಗಿ ವಿಮಾನದಳಕ್ಕೆ ಸೇರಬೇಕೆಂದು ಸೂಚಿಸಲಾಯಿತು. ಜಯಪುರ ಸಂಸ್ಥಾನದ ಆಡಳಿತವನ್ನು ಟೀಕಿಸಿ, ಹಿಂದುಗಳ ಸ್ಥಾನಮಾನದ ಬಗ್ಗೆ ಸರ್ ಮಿರ್ಜಾ ಇಸ್ಮಾಯಿಲರು ಮಾಡಿರುವ ವಾಗ್ದಾನವನ್ನು ಅವರನ್ನ ನಡೆಸಿಕೊಟ್ಟಿಲ್ಲದಿರುವುದು ಸರಿಯಾದುದಲ್ಲವೆಂದು ಸೂಚಿಸಲಾಯಿತು.

EXPERT IN WORLD MEDICINES

ಹುಕಿಂ ದೇಶದ ಚಕ್ರವರ್ತಿಗಳಿಂದಲೂ ರಾಜ ಮಹಾರಾಜರುಗಳಿಂದಲೂ ಸನ್ಮಾನ ಪಡೆದು ಪ್ರಸಿದ್ಧರಾಗಿರುವ ವೈದ್ಯನಿಪುಣರು

ಈಗ ನಿಮ್ಮ ಊರಿನಲ್ಲಿ ನಿಮ್ಮ ಸೇವೆಗಾಗಿ ಸಿದ್ಧರಾಗಿದ್ದಾರೆ

ನಿಶ್ಶಕ್ತಿ, ಮೇಹ, ಮೂಲವ್ಯಾಧಿ, ಪಾಶ್ವವಾಯು, ವಾತರೋಗ, ಕೆಮ್ಮು, ಉಬ್ಬಸ, ಮೂತ್ರ ಮತ್ತು ವೀರ್ಯ ದೋಷಗಳು ಅಲ್ಲದೆ ಹೊಟ್ಟೆಯ ಯಕೃತ್ತು ಮತ್ತು ರಕ್ತ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಖಾತರಿಯಾದ ಚಿಕಿತ್ಸೆಮಾಡುವ ನಿಪುಣರು. ನೀವು ಒಂದುಸಾರಿ ನಮ್ಮಲ್ಲಿಗೆ ಬಂದು ನಮ್ಮ ವೈತನ್ಯವನ್ನು ಹೊಂದುವಿರಿ.

ನಷ್ಟವಾದ ವೀರ್ಯವನ್ನು ಪುನಃ ಪಡೆಯಲು ಅಪೂರ್ವ ಸಮಯ

ಚಿಕಿತ್ಸೆಯ ಕಾಲ—

ಬೆಳಗ್ಗೆ 9 ರಿಂದ 12½ ಘಂಟೆಯವರೆಗೆ

ಸಂಜೆ 5 ರಿಂದ 9 ಘಂಟೆಯವರೆಗೆ

ನ್ಯೂ ರಾಯಲ್ ಡಿಸ್ಪೆನ್ಸರಿ

ಅಶೋಕ ರೋಡ್ (ದೊಡ್ಡ ಗಡಿಯಾರದ ಬಳಿ), ಮೈಸೂರು.

Edited, printed and published by A. R. Nagarajan at the Sadhvi Press, D. Subbiah Road, Mysore.

The Benares Textile Emporium

(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ನ್ಯೂ ಸಯ್ಯಾಜಿರಾವ್ ರೋಡಿನಲ್ಲಿ ಬುಯಲರಿ ಮತ್ತು ರೆಡಿಮೇಡ್ ಡ್ರೆಸ್ ವ್ಯಾಪಾರಿಗಳಾದ ಜಿ. ಪಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿಯಲ್ಲಿ ತೆರೆಯಲಾಗಿದೆ. ಬನಾರಸ್ ಬೆಲೆಗೇ ಎಲ್ಲಾ ಹೊಸ ನಮೂನೆಯಲ್ಲಿ ಸಿಕ್ಕುತ್ತವೆ.

ಈ ದಿನವೇ ಬಂದು ಪರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

೩೦-೦-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಬೆಲ್ಲ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ.

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದ:—

ಮೈಸೂರು ತಾ|| 7-8-1943

ನೋಟೀಸ್

ಇದರಿಂದ ಸೈಕಲ್ ಮಾಲೀಕರುಗಳಿಗೆ ತಿಳಿಸುವುದೇನೆಂದರೆ, 2850 ಅಂತ ವರ್ಷದ ಮತ್ತು 2400 ರ ವರೆಗಿನ ಪೂರ್ವ ವರ್ಷದ ಸೈಕಲ್ ಬಿಲ್ಲೆಗಳು ಈ ಮೇಲ್ಕಂಡ ಆಫೀಸಿನಲ್ಲಿ ಸಿದ್ಧವಾಗಿರುತ್ತೆ. ಡೂಪ್ಲಿಕೇಟ್ ಚಲಾ ಪಡೆದಿರತಕ್ಕ ಮಾಲೀಕರುಗಳು 14-8-43 ರೊಳಗಾಗಿ ತಮ್ಮ ಚಲಾಗಳನ್ನು ಆಫೀಸಿಗೆ ಹಾಜರ್‌ಪಡಿಸಿ ಬಿಲ್ಲೆಗಳನ್ನು ಪಡೆಯತಕ್ಕದ್ದು. ನಾಯಿದೆ ಮೀರಿ ಬರುವ ಚಲಾಗಳಿಗೆ ಗಮನಕೊಡಲಾಗುವುದಿಲ್ಲ.

(ಸಹಿ) ಬಿ. ಎಸ್. ರಾಘವೇಂದ್ರರಾವ್

ಪ್ರೆಸಿಡೆಂಟ್

ಸಂಪುಟ ೨] ಬುಧವಾರ ೧೧—೮—೪೩ [ಸಂಚಿಕೆ ೨೨

ರಷ್ಯಾ ಮೇಲೆ ಜಪಾನ್ ಯುದ್ಧವೇ ?

ಪಶ್ಚಿಮ ಯೂರೋಪಿನಲ್ಲಿ ತೃತೀಯ ರಣರಂಗದ ಆರಂಭ
ನಾರ್ವೆ ಮತ್ತು ಫಿನ್‌ಲೆಂಡನ್ನು ಜರ್ಮನರು ಬಿಡುವರೇ ?

ದಿವಾನರು

ಮೈಸೂರು ೧೧

ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ಪೌರಸಭಾಧ್ಯಕ್ಷರೊಡನೆ ನಿನ್ನೆಯ ದಿವಸ ನಗರದ ಹಲವು ಭಾಗಗಳಿಗೆ ಭೇಟಿಯಿತ್ತರು. ಮುಂದಿನ ತಿಂಗಳು ನಡೆಯಲಿರುವ ವಸ್ತು ಪ್ರದರ್ಶನದ ಕಾರ್ಯಕ್ರಮವನ್ನೂ ಪರಿಶೀಲಿಸಿದರು. ಈ ದಿನ ಬೆಂಗಳೂರಿಗೆ ಪ್ರಯಾಣಮಾಡುವರು.

ಭಾಷಣ

ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲಿನ ವಿದ್ಯಾರ್ಥಿ ಸಂಘದ ಪ್ರಾರಂಭ ಭಾಷಣವನ್ನು ಸರ್ ಸಿ. ವಿ. ರಾಮನ್‌ರವರು ೧೪-೮-೪೩ ನೇ ಶನಿವಾರ ಸಾಯಂಕಾಲ ೬ ಗಂಟೆಗೆ ಮಾಡುವರು. ಶ್ರೀ ಕೆ. ಗುರುದತ್ತ್‌ರವರು ಅಧ್ಯಕ್ಷತೆ ವಹಿಸುವರು.

ಹೆಂಡತಿ ದುರ್ನಡತೆಗೆ ಗಂಡನ ಆತ್ಮಹತ್ಯೆ

ರಾಜಧಾನಿಯ ಸಣ್ಣದಕೇರಿ ನಿವಾಸಿ, ೩೫ ವರ್ಷದ ಸಿದ್ಧಯ್ಯನೆಂಬುವನು ಸಂತೇಪೇಟೆ ಶ್ರೀ ದಾಸಪ್ಪನ ಎಣ್ಣೆ ಅಂಗಡಿ ಹಿಂಭಾಗದ ಕೊಠಡಿಯೊಂದರಲ್ಲಿ ನಿನ್ನೆ ಬೆಳಗಿನ ಜಾವ ನೇಣು ಹಾಕಿಕೊಂಡು ಮೃತನೊಂದಿದನೆಂದು ವರದಿಯಾಗಿದೆ.

ತನ್ನ ಹೆಂಡತಿಯ ದುರ್ನಡತೆಯನ್ನು ಸಹಿಸಲಾರದೆ ಪ್ರಾಣ ಬಿಟ್ಟನೆಂದು ಹೇಳಲಾಗಿದೆ. ದೇವರಾಜ ಪೋಲೀಸರು ಮುಂದಿನ ಕ್ರಮ ನಡೆಸಿದರು.

ನಿರಾಶ್ರಿತ ಜನರಿಗೆ ಸಹಾಯ

ಸೆಂಟ್ರಲ್ ರಿಕ್ರೂಟಿಂಗ್ ಆಫೀಸರಾದ ಮಿ|| ವಿಲಿಯಮ್ಸ್‌ರವರು ರಾಜಧಾನಿಗೆ ಆಗಸ್ಟ್ ೧೬ ನೇ ತಾ|| ಆಗಮಿಸಿ, ಬರ್ಮಾ ಮತ್ತು ಮಲೆಯಾ ನಿರಾಶ್ರಿತ ಜನಗಳನ್ನು ಭೇಟಿಮಾಡಿ, ಅವರ ಕುಂದುಕೊರತೆಗಳನ್ನು ನಿವಾರಿಸುವರು.

ಫುಟ್ ಬಾಲ್ ಆಸೋಸಿಯೇಷನ್

ಮೈಸೂರು ಫುಟ್ ಬಾಲ್ ಅಸೋಸಿಯೇಷನಿಗೆ, ಶ್ರೀ ಬಿ. ಟಿ. ಶ್ರೀನಿವಾಸಯ್ಯಂಗಾರ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ. ವೆಚ್. ಕೃಷ್ಣರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರನ್ನು ಕಾರ್ಯದರ್ಶಿಯಾಗಿಯೂ ೧೯೪೩-೪೪ ನೇ ವರ್ಷಕ್ಕೆ ಚುನಾಯಿಸಲಾಗಿದೆ.

ಅಂಗಡಿ ಕೆಲಸಗಾರರ ಸಭೆ

ರಾಜಧಾನಿಯಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಒಂದು ಸಂಘವನ್ನು ಸ್ಥಾಪಿಸಲು ಈ ದಿನ ಸಾಯಂಕಾಲ ೭-೩೦ ಗಂಟೆಗೆ ಸಂತೇಪೇಟೆ ಶ್ರೀರಾಮ ಮಂದಿರದಲ್ಲಿ ಶ್ರೀ ... ಎನ್. ಸಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು.

— —

ವಿಶ್ವಕರ್ನಾಟಕ ಪುನಃ ಹೊರಡುವುದು

" ವಿಶ್ವ ಕರ್ನಾಟಕ " ದಿನ ಪತ್ರಿಕೆಯು ... ಸರ್ಕಾರದವರು ಭಾರತ ರಕ್ಷಣಾ ಶಾಸನರೀತ್ಯಾ ನಿಷ್ಠೆಸಿದ್ದರಷ್ಟೆ. ಈ ದಿನದಿಂದ ಪತ್ರಿಕೆಯು ಪುನಃ ಹೊರಡುವುದೆಂದು ತಿಳಿದಿದೆ.

ಗಾಂಧೀಜಿ ಪತ್ರಗಳನ್ನು ಪ್ರಕಟಿಸಬೇಕು

ಪಾರ್ಲಿಮೆಂಟಿನ ಲೇಬರ್ ಸದಸ್ಯರಾದ ಮಿ|| ಸೋರೆನ್‌ಸನರವರು " ಮ್ಯಾಂಚೆಸ್ಟರ್ ಗಾರ್ಡಿಯನ್ " ಪತ್ರಿಕೆಗೆ ಒಂದು ಪತ್ರ ಬರೆದು ಈ ರೀತಿ ತಿಳಿಸಿದ್ದಾರೆ.

ಗಾಂಧೀಜಿಗೂ ಇಂಡಿಯಾ ಸರ್ಕಾರಕ್ಕೂ ನಡೆದಿರುವ ಪತ್ರವ್ಯವಹಾರವನ್ನು ಪ್ರಕಟಿಸಲಾಗುವುದಿಲ್ಲ ಮತ್ತು ಗಾಂಧೀಜಿಯವರಿಗೆ ಯಾವ ಅನುಕೂಲತೆಗಳನ್ನೂ ಕಲ್ಪಿಸಲಾಗುವುದಿಲ್ಲವೆಂದು ಮಿ|| ಎಮರಿಯವರು ತಿಳಿಸಿರುವುದು ಆಶ್ಚರ್ಯಕರವಾಗಿದೆ. ಸ್ವಾತಂತ್ರ್ಯಗಳನ್ನು ಪ್ರೀತಿಸುವವರೂ ಹಾಗೂ ರಾಜ್ಯಾಂಗ ಬಿಕ್ಕಟ್ಟು ಬಗೆಹರಿಸಬೇಕೆಂದು ಅಪೇಕ್ಷಿಸುವವರೂ ಈ ಬಗ್ಗೆ ಉಪೇಕ್ಷೆ ಭಾವನೆ ತಾಳುವುದು ವಿಷಾದಕರವಾಗಿದೆ. ಶೀಘ್ರ ಹಸ್ತಕ್ಷೇಪ ಅವಶ್ಯವೇ ಆಗಿದೆ. ಈಗಿನ ಪರಿಸ್ಥಿತಿ ನಿವಾರಣೆಗೆ ೪ ಅಂಶಗಳು ಅಗತ್ಯ. ಅವಾವುವೆಂದರೆ ಗಾಂಧೀಜಿಯು ಒಳಗಾಗಿರುವ ಕಾಯಿದೆ ಒಡನೆ ರದ್ದುಪಡಿಸುವ ಪತ್ರ ಪ್ರಕಟಿಸುವುದು. ಗಾಂಧೀಜಿಯೂ ಮತ್ತು ಇತರ ನಾಯಕರೂ ಸಾರ್ವಜನಿಕವಾಗಿ ಹೇಳಿಕೆಗಳನ್ನು ಮಾಡಲು ಅನುಮತಿ ಕೊಡಬೇಕು; ಕಾಂಗ್ರೆಸ್ ನಾಯಕರೊಡನೆ ಇತರ ಮುಖಂಡರು ಭೇಟಿಮಾಡಲು ಅವಕಾಶ ಕೊಡಬೇಕು; ಛಡಿ ಏಟಿನ ಶಿಕ್ಷೆ ರದ್ದು ಮಾಡಬೇಕು.

— —

ಪೋಲೀಸರ ಮೇಲೆ ದುಂಡಾವೃತ್ತಿ

ಹೊಣಸೂರಿನ ಸೇತುವೆ ಬಳಿ ರಹದಾರಿ ಇಲ್ಲದೆ ಸಕ್ಕರೆ, ಭತ್ತ ಮತ್ತು ಹುರುಳಿ ಚೀಲಗಳನ್ನು ಸಾಗಿಸುತ್ತಿದ್ದ ಲಾರಿಯೊಂದನ್ನು (ನಂ. ಮೈ ಎ. ೧೭೬೬) ಪಿ. ಸಿ. ಶ್ರೀನಿವಾಸಾಚಾರ್ ಎಂಬ ಪೋಲೀಸ್ ಕಾನ್‌ಸ್ಟೇಬಲ್‌ರವರು ೩೦-೭-೪೩ ನೇ ದಿವಸ ತಡೆದು ಅವರನ್ನು ಲಾರಿಯಿಂದ ತಳ್ಳಿ, ನಿಲ್ಲಿಸದೆ ಹೊರಟರೆಂದು ಸಯ್ಯದ್ ಅಬ್ದುಲ್ ಖಾದರ್, ಶಿವಪ್ಪ ಮತ್ತು ಅಬ್ದುಲ್ ಸಲಾಂ ಎಂಬುವರ ಮೇಲೆ ಪೋ. ಐ. ಪಿ. ಸಿ. ೧೮೬ ನೇ ಸೆ| ಪ್ರಕಾರ ಕೇಸು ರಿಜಿಸ್ಟರ್ ಮಾಡಿದ್ದಾರೆ.

ಪ|| ಯೂರೋಪಿನಲ್ಲಿ ತೃತೀಯ ರಣರಂಗ

ಪಶ್ಚಿಮ ಯೂರೋಪಿನಲ್ಲಿ ೩ ನೇ ರಣರಂಗವನ್ನು ಶೀಘ್ರದಲ್ಲಿಯೇ ಆರಂಭಿಸಲಾಗುವುದೆಂದು ಅಮೇರಿಕಾ ಯುದ್ಧ ವಾರ್ತಾ ಸಂಸ್ಥೆಯ ಮಿ|| ಡೇವಿಸ್‌ರವರು ತಿಳಿಸಿದ್ದಾರೆ. ಮೆಡಿಟರೇನಿಯನ್ ಕ್ಷೇತ್ರದಲ್ಲಿ ನಡೆಯುತ್ತಿರುವ ಚಟುವಟಿಕೆಯು ತೃತೀಯ ರಣರಂಗವೆಂದು ತಿಳಿಸಿದ್ದಾರೆ.

—

ರಷ್ಯಾ ಜಪಾನ್ ಯುದ್ಧವೆ ?

ಅತಿ ಶೀಘ್ರದಲ್ಲಿಯೇ ಜಪಾನ್ ರಷ್ಯಾದ ಮೇಲೆ ಯುದ್ಧ ಸಾರುವುದೆಂದು, " ಮ್ಯಾಡ್ರಿಡ್ " ಪತ್ರಿಕೆಯೊಂದು ತಿಳಿಸುತ್ತದೆ. ಜಪಾನಿನ ರಾಯಭಾರಿ ಮತ್ತು ಹಿಟ್ಲರನ ಭೇಟಿಯಲ್ಲಿ ಈ ವಿಷಯವಾಗಿ ಮಾತುಕತೆ ನಡೆಯಿತೆಂದು ಹೇಳಲಾಗಿದೆ.

—

ನಾರ್ವೆ ಫಿನ್‌ಲೆಂಡ್ ಬಿಡುವರೆ

ನಾರ್ವೆ ಮತ್ತು ಫಿನ್‌ಲೆಂಡನ್ನು ಜರ್ಮನರು ಬಿಟ್ಟು ಹೊರಟುಹೋಗಬಹುದೆಂದು ಹೇಳಲಾಗಿದೆ.

— —

ಸಿಸಲಿಯಲ್ಲಿ ಜರ್ಮನರ ಕೊನೆಯ ಕಾಲ

ಸಿಸಲಿಯಲ್ಲಿ ಮುಖ್ಯ ಜರ್ಮನ್ ಸಂರಕ್ಷಣ ಕೇಂದ್ರವಾದ ರೆಂಡಾಜೋಕ್ಕೆ ಮಿತ್ರಸೇನೆಗಳು ಮುತ್ತಿಗೆ ಹಾಕಿವೆಯೆಂದು ವರದಿಯಾಗಿದೆ. ಎಟ್ನಾ ಪರ್ವತದ ಪಶ್ಚಿಮ ಭಾಗದಲ್ಲಿ ಬ್ರಿಟಿಷ್ ಸೈನ್ಯವು ಬ್ರೋಂಟೇ ನಗರದಿಂದ ಮುಂದೆ ಸಾಗಿ ಬಹು ಮುಖ್ಯವಾದ ರಸ್ತೆ ಜಂಕ್ಷನಿಗೆ ಕೇವಲ ೫ ಮೈಲಿ ದೂರದಲ್ಲಿದೆ. ಅಮೇರಿಕನ್ ಸೈನ್ಯವು ಟ್ರೋಯಿನ ನಗರದಿಂದ ನುಗ್ಗಿ ರೆಂಡಾಜೋಕ್ಕೆ ಆಕ್ರಮಣವನ್ನು ಮಾಡಿದೆ.

ಸಿಸಲಿಯ ಮಧ್ಯ ಕೇಂದ್ರಸ್ಥಾನ ಪ್ರದೇಶಗಳಲ್ಲಿ ಅನೇಕ ವಿಮಾನಗಳು ಘೋರ ಕಾಳಗ ನಡೆಸಿದವು.

ಸಿಸಲಿಯಲ್ಲಿರುವ ಜರ್ಮನ್ ಸೇನೆಗೆ ಕೊನೆಯ ಕಾಲ ಸಮೀಪಿಸಿದೆಯೆಂದು ... ತಿಳಿಸಿದ್ದಾರೆ.

ಲಂಡನ್ನಿನಲ್ಲಿ ಆಗಸ್ಟ್ ದಿನಾಚರಣೆ

ಲಂಡನ್ನಿನಲ್ಲಿ ಕಾಂಗ್ರೆಸ್ ನಾಯಕರ ಬಂಧನದ ವಾರ್ಷಿಕ ದಿನವನ್ನು ಇಂಡಿಯಾ ಲೀಗ್ ಆಶ್ರಯದಲ್ಲಿ ಆಚರಿಸಲಾಯಿತು. ಪಾರ್ಲಿಮೆಂಟಿನ ಕಾರ್ಮಿಕ ಸದಸ್ಯರಾದ ಮಿ|| ರೆಜಿನಾಲ್ಡ್ ಸೋರೆನ್‌ಸನ್‌ರವರು ಅಲ್ಲಿ ಮಾತನಾಡುತ್ತಾ ಭಾರತೀಯ ಮುಖಂಡರೊಡನೆ ಪುನಃ ಸಂಧಾನಗಳನ್ನು ಆರಂಭಿಸಲು ಮತ್ತು ಹಿಂದಿನ ವಾತಾವರಣವನ್ನು ಬದಲಾಯಿಸಲು ಸರ್ವ ಪ್ರಯತ್ನ ಮಾಡುತಲಿದ್ದೇವೆ. ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರ ಬಗ್ಗೆ ವೈಸರಾಯ್ ಮತ್ತು ಮಿ|| ಅಮೆರಿಯವರು ಅನುಸರಿಸುವ ನೀತಿಯನ್ನು ಪ್ರತಿಭಟಿಸಿ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಬೇಕೆಂದೂ, ಮತ್ತು ನೂತನ ವೈಸರಾಯರು ಈ ಬಿಕ್ಕಟ್ಟನ್ನು ಪರಿಹಾರ ಮಾಡಬೇಕೆಂಬುದಾಗಿ ಕೋರುವ ಠರಾವು ಸಭೆಯಲ್ಲಿ ಅಂಗೀಕರಿಸಲಾಯಿತು.

ಕಳುವು

ಬಸವನಗುಡಿ ಟ್ರಿನಿಟಿಸ್ ಬಂಗಲೆಯಲ್ಲಿ ಆಹಾರ ಪ್ರಚಾರ ಸಮಿತಿಯವರು ಶಿಕ್ಷಣ ಶಿಬಿರವನ್ನು ನಡೆಸುತ್ತಿದ್ದವರ್ಗೆ ೯-೮-೪೩ ನೇ ರಾತ್ರಿ ೪೫ ರೂ. ಬೆಲೆ ಬಾಳುವ ಪಾತ್ರೆ ಮತ್ತು ಇತರ ಸಾಮಾನುಗಳು ಕಳುವಾಗಿದೆಯೆಂದು ಪೋಲೀಸರಿಗೆ ವರದಿಯಾಗಿದೆ.

ಆಹಾರ ಕೊಳ್ಳಲು ಸಹಾಯ

ಪ್ರಾಂತ್ಯ ಸರ್ಕಾರಗಳಿಗೆ ಆಹಾರ ಪದಾರ್ಥಗಳನ್ನು ಕೊಳ್ಳುವ ಸಲುವಾಗಿ ಇಂಡಿಯಾ ಸರ್ಕಾರದವರು ಇದುವರೆಗೆ ೧೭ ಕೋಟಿ ರೂಪಾಯಿಗಳನ್ನು ಕೊಟ್ಟಿರುವರೆಂದು ತಿಳಿದುಬಂದಿದೆ.

ಅಕಸ್ಮಾತ್ ಮರಣ

ನಂಜನಗೂಡು ತಾ|| ಸಿಂಧುವಳ್ಳಿಯಲ್ಲಿ ಕಳೆದ ೫ ನೇ ತಾ|| ಸಾಯಂಕಾಲ ಸಣ್ಣಯ್ಯನೆಂಬುವನು ಹಿಂದೆ ತೆಗೆಯಲು ಮರಹತ್ತಿದ್ದಾಗ ಅಕಸ್ಮಾತ್ ಬಿದ್ದು ಮರಣ ಹೊಂದಿದನೆಂದು ವರದಿಯಾಗಿದೆ.

" ನಿಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ "

" ಮಿತ್ರ ವಿಮಾನಗಳು ನಡೆಸುವ ಧಾಳಿಗಳಿಂದ ನಿಮ್ಮನ್ನು ಪಾರುಮಾಡಿ ರಕ್ಷಿಸಲು ಸಾಧ್ಯವಿಲ್ಲ " ಎಂಬುದಾಗಿ ರೋಂ ರೇಡಿಯೋ ಇಟಲಿ ಜನರಿಗೆ ತಿಳಿಸಿದೆ.

ಫುಡ್ ಅಸಿಸ್ಟೆಂಟ್ ಅಧಿಕಾರಿಗಳು

ಈ ಕೆಳಗೆ ಕಂಡ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟ್‌ರನ್ನಾಗಿ ನೇಮಿಸಲಾಗಿದೆ—

ಶ್ರೀ ಬಿ ಟಿ. ಕೆಂಪಣ್ಣನವರನ್ನು ಮಂಡ್ಯದ ಜಿಲ್ಲೆಗೂ, ಮಿ|| ಅಬ್ದುಲ್ ರಜಾಕ್‌ರವರನ್ನು ಮೈಸೂರಿಗೂ, ಶ್ರೀ ಕೆ. ಆರ್. ಮರುದೇವೇಗೌಡರನ್ನು ಕಡೂರಿಗೂ, ಮಿ|| ಸಯ್ಯದ್ ಅಬ್ದುಲ್ ಘನಿಯವರನ್ನು ಬೆಂಗಳೂರಿಗೂ, ಶ್ರೀ ಆರ್. ರಂಗಯ್ಯನವರನ್ನು ಚಿತ್ರದುರ್ಗಕ್ಕೂ, ಶ್ರೀ ಎ. ಪಿ. ತಿಮ್ಮಯ್ಯನವರನ್ನು ಕೋಲಾರಕ್ಕೂ, ಶ್ರೀ ವಿ. ಹೆಚ್. ವೆಂಕಟಪ್ಪನವರನ್ನು ... ಗೂ, ಶ್ರೀ ಎಸ್. ... ರವರನ್ನು ಶಿವಮೊಗ್ಗಕ್ಕೂ, ಶ್ರೀ ... ರವರನ್ನು ... ಗೂ ... ನೇಮಿಸಲಾಗಿದೆ.

ಆಹಾರ ಸಮಸ್ಯೆಯ ನೂತನ ಯೋಜನೆ

ಮೈಸೂರು ಸರ್ಕಾರದ ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಎಸ್. ನಾರಾಯಣರಾಯರು ಆಹಾರ ಪದಾರ್ಥಗಳ ಬಗ್ಗೆ ಒಂದು ಪ್ರಕಟನೆ ಹೊರಡಿಸಿದ್ದಾರೆ

"ಸರ್ಕಾರದವರು ಪ್ರಜೆಗಳಿಗೆ ಅಗತ್ಯವಾಗಿ ಬೇಕಾದ ಆಹಾರ ಧಾನ್ಯಗಳು ದೊರೆಯುವಂತೆ ಮಾಡಲು ಅನೇಕ ವಿಧವಾದ ಪ್ರಯತ್ನ ... ನಿರೀಕ್ಷಿತವಾದ ಫಲಿತಾಂಶ ಒದಗಲಿಲ್ಲ ... ದಾಸ್ತಾನು ... ಆಹಾರ ಧಾನ್ಯಗಳನ್ನು ಕಂಟ್ರೋಲ್ ದರಗಳಿಗೆ ಮಾರಲು ತಪ್ಪುತ್ತಿದ್ದಾರೆ. ಆದುದರಿಂದ ಸರ್ಕಾರದವರು ಇನ್ನೂ ಕಠಿಣವಾದ ಕಾರ್ಯಕ್ರಮವನ್ನು ಕೈಗೊಳ್ಳಬೇಕಿದೆ. ಪ್ರಜೆಗಳ ಅಭಿಪ್ರಾಯವೆಂದು ಬಹಳವಾಗಿ ಗೊತ್ತಾಗಿದೆ. ಈ ಭೂಮಿಯಿಂದ ಆಹಾರ ಧಾನ್ಯಗಳನ್ನು ಯಾರೇ ಬಚ್ಚಿಟ್ಟಿದ್ದರೂ ಸಹ ಸರ್ಕಾರದವರು ಅದನ್ನು ಸ್ವಾಧೀನ ಪಡಿಸಿಕೊಂಡು ಸಾಧ್ಯವಾದ ಮಟ್ಟಿಗೆ, ಸರ್ಕಾರಿ ಡಿಪೋಗಳ ಮೂಲಕ ಅವು ಜನಗಳಿಗೆ ಮಾರಾಟವಾಗುವಂತೆ ಏರ್ಪಾಡಾಗಬೇಕೆಂದೇ ಜನಾಭಿಪ್ರಾಯವಾಗಿದೆ.

ಸರ್ಕಾರದವರು ಈ ವಿಷಯಗಳನ್ನು ತೀವ್ರಾಸಕ್ತಿಯಿಂದ ಪರ್ಯಾಲೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಇನ್ನೂ ಹೆಚ್ಚು ಕಟ್ಟುನಿಟ್ಟಾದ ಏರ್ಪಾಡುಗಳನ್ನು ಮಾಡಿ ಜಾರಿಗೆ ತರುವ ಕಾಲ ಒದಗಿದೆ".

ಈ ನೂತನ ವ್ಯವಸ್ಥೆಯ ಮುಖ್ಯಾಂಶಗಳಿವು.

1943 ನೇ ಆಗಸ್ಟ್ 9 ನೇ ತಾರೀಖಿನಿಂದ ಆಹಾರ ಸ್ವಾಧೀನದಲ್ಲಿ ಮುಂದೆ ಸೂಚಿಸಿರುವುದಕ್ಕಿಂತ ಹೆಚ್ಚು ಪರಿಮಾಣಗಳಲ್ಲಿ ಭತ್ತ, ಅಕ್ಕಿ, ರಾಗಿ ಮತ್ತು ಜೋಳ ಇದ್ದರೂ, ಅವರು ತಮ್ಮಲ್ಲಿರುವ ಆ ಹೆಚ್ಚಿನ ಪರಿಮಾಣಗಳನ್ನು ವಿಧಾಯಕವಾದ ನಮೂನೆಗಳಲ್ಲಿ ಬರೆದು ಕಳುಹಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆ ನಮೂನೆಗಳನ್ನು ಆಯಾ ಗ್ರಾಮದ ಶ್ಯಾನುಭೋಗರಿಂದ ಪಡೆಯಬಹುದು. ಪಟ್ಟಣಗಳಲ್ಲಿಯೂ ಮತ್ತು ನಗರಗಳಲ್ಲಿಯೂ ಎಲ್ಲಾ ರೆವಿನ್ಯೂ ಇನ್ಸ್‌ಪೆಕ್ಟರುಗಳಿಂದಲೂ ನಮೂನೆಗಳನ್ನು ಪಡೆಯಬಹುದು.

	ಪಲ್ಲಗಳು		ಪಲ್ಲಗಳು
ಅಕ್ಕಿ	7	ರಾಗಿ	10
ಭತ್ತ	14	ಜೋಳ	10

ಯಾರೊಬ್ಬರೇ ಆಗಲಿ ನ್ಯಾಯವಾಗಿ ತಮ್ಮ ಸ್ವಂತ ಉಪಯೋಗಕ್ಕೆ ಬೇಕಾದಷ್ಟು ಆಹಾರ ಧಾನ್ಯಗಳನ್ನು ಅವರು ಅಗತ್ಯವಾಗಿ ತಮ್ಮಲ್ಲಿಟ್ಟುಕೊಂಡಿರಲು ಅವಕಾಶವಿರುವಂತೆ ಮೇಲ್ಕಂಡ ಪರಿಮಾಣಗಳನ್ನು ಗೊತ್ತು ಮಾಡಲಾಗಿದೆ. ಅದಲ್ಲದೆ ಇನ್ನೂ ಹೆಚ್ಚಿಗೆ ಪರಿಮಾಣದಲ್ಲಿ ಆಹಾರ ಧಾನ್ಯಗಳು ತಮ್ಮ ಉಪಯೋಗಕ್ಕೆ ಬೇಕಾಗಿದ್ದಲ್ಲಿ ಅಂತಹವರಿಗೆ ಡೆಪ್ಯುಟಿ ಕಮೀಷನರವರು ಪರ್ಮಿಟು ಕೊಡಬಹುದು. ಈ ಮೂಲಕ ರೈತ ಸ್ವಾಮ್ಯದಾರರುಗಳೂ ಕೈಗಾರಿಕೆ ಕಾರ್ಖಾನೆಗಳ ಮ್ಯಾನೇಜರುಗಳೂ ಸಹ ತಮ್ಮ ಕೈಕೆಳಗೆ ಇರುವ ನೌಕರರುಗಳಿಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಒದಗಿಸಿಕೊಳ್ಳಲು ಅವಕಾಶವಿದೆ.

ಮೇಲೆ ನಮೂದಿಸಿರತಕ್ಕ ಹೇಳಿಕೆಗಳನ್ನು 1943 ನೇ ಇಸವಿ ಆಗಸ್ಟ್ 9 ನೇಯ ತಾರೀಖಿನಿಂದ 22 ದಿವಸಗಳೊಳಗಾಗಿ ಆಯಾಯ ಪ್ರದೇಶದಲ್ಲಿರುವ ಶ್ಯಾನುಭೋಗರಿಗೂ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರಿಗೂ ಕೊಡತಕ್ಕದ್ದು.

ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಿರುವವರು ತಮ್ಮಲ್ಲಿರುವ ಹೆಚ್ಚಿಗೆ ಧವಸವನ್ನು ಸರ್ಕಾರಕ್ಕೆ ಮಾರಬೇಕೆಂದು ಕೋರಿದೆ. ರಾಗಿ ಮತ್ತು ಜೋಳಕ್ಕೆ ಪಲ್ಲ ಒಂದಕ್ಕೆ ಈಗಿನ ಕಂಟ್ರೋಲ್ ರೇಟಿಗಿಂತ ಸಾಧಾರಣವಾಗಿ 3 ರೂಪಾಯಿ ಕಡಿಮೆಯಿದ್ದಂತೆ ಹೆಚ್ಚಿಗೆ ದರವನ್ನು ಕೊಡಲಾಗುವುದು. ಹೊಸದಾಗಿ ಧಾರಣೆಗಳನ್ನು ಹೆಚ್ಚಿಸಿರುವ ಪ್ರದೇಶಗಳನ್ನು ಬಿಟ್ಟು ಮಿಕ್ಕ ಪ್ರದೇಶಗಳಲ್ಲಿ ಒಂದು ಪಲ್ಲ ಅಕ್ಕಿಗೆ ಸಾಧಾರಣವಾಗಿ 3 ರೂಪಾಯಿ ಕಡಿಮೆಯಿದ್ದಂತೆ ಹೆಚ್ಚಿಗೆ ದರವನ್ನು ಕೊಡಲಾಗುವುದು. ಈಗಿನ ದರಗಳನ್ನು ಹೆಚ್ಚಿಸಿರುವ ಪ್ರದೇಶಗಳಲ್ಲಿ ಈ ಹೆಚ್ಚಿಗೆ ದರವು ಪ್ರಮಾಣಾನುಸಾರ ಕಡಮೆಯಾಗುವುದು.

ಹೊಸ ವ್ಯವಸ್ಥೆ ಜಾರಿಗೆ ಬಂದ ತಾರೀಖಿನಿಂದ 31 ದಿನಗಳ ಅವಧಿಯ ವರೆಗೆ ಮಾರಾಟ ಮಾಡಲು ಯಾರು ಯಾರು ಧವಸಗಳನ್ನು ತಂದು ಒಪ್ಪಿಸುವರೋ ಅವರಿಂದ ಕೊಳ್ಳುವ ಸದರಿ ಆಹಾರ ಧಾನ್ಯಗಳಿಗೆ ಮಾತ್ರವೇ ಮೇಲೆ ಹೇಳಿರುವ ಹೆಚ್ಚಿನ ದರಗಳಲ್ಲಿ ಸರ್ಕಾರದವರು ಕ್ರಯವನ್ನು ಕೊಡುವರು. ಈ ದರಗಳನ್ನು ಮತ್ತಷ್ಟು ಹೆಚ್ಚಿಸುವುದೇ ಇಲ್ಲ. ಧಾನ್ಯಗಳನ್ನು ತಂದು ಒಪ್ಪಿಸಿದರೆ ಅದಕ್ಕಾಗಿ ಅವರಿಗೆ ತಮ್ಮ ... ದರದಿಂದ ಕ್ರಯದ ಮೊಬಲಗು ನಗದಾಗಿ ಪಾವತಿಯಾಗುತ್ತದೆ.

ಹೆಚ್ಚಿಗೆ ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಿರತಕ್ಕವರು, ತಮ್ಮಲ್ಲಿರುವ ಪರಿಮಾಣಗಳನ್ನು ವಿಧಾಯಕವಾದ ನಮೂನೆಗಳಲ್ಲಿ ಬರೆದು ತಿಳಿಸದೆ ಹೋದರೆ ಅಥವಾ ಹಾಗೆ ತಿಳಿಸುವುದರಲ್ಲಿ ಸುಳ್ಳು ಸಂಗತಿಗಳನ್ನು ತಿಳಿಸಿದರೆ ಅಥವಾ ಸರ್ಕಾರದವರು ಕೊಡಲು ಸಿದ್ಧವಾಗಿರುವ ಹೆಚ್ಚಿನ ದರಗಳಲ್ಲಿ ಕ್ರಯದ ಮೊಬಲಗನ್ನು ಪಡೆದು ಸರ್ಕಾರಕ್ಕೆ ಮಾರದೆ ತಪ್ಪಿದರೆ ಸರ್ಕಾರದವರು ಇಂಡಿಯಾ ದೇಶದ ರಕ್ಷಣಾ ನಿಬಂಧನೆಗಳ ಮೇರೆಗೆ ಅವುಗಳನ್ನು ಬಲಾತ್ಕಾರವಾಗಿ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುವುದು. ಹಾಗೆ ಸರ್ಕಾರದವರು ಸ್ವಾಧೀನಪಡಿಸಿಕೊಂಡ ಆಹಾರ ಧಾನ್ಯಗಳಿಗೆ ಕೊಡತಕ್ಕ ಕ್ರಯದ ಮೊಬಲಗು ದಾಸ್ತಾನು ಇಟ್ಟವರು ತಾವಾಗಿಯೇ ಅವುಗಳನ್ನೊಪ್ಪಿಸಿ ಮಾರಾಟ ಮಾಡಿದ್ದರೆ ಅವರಿಗೆ ದೊರೆಯುತ್ತಿದ್ದ ಕ್ರಯದ ಮೊಬಲಗಿಗಿಂತಲೂ ಕಡಿಮೆಯಾಗುತ್ತದೆ. ಅಲ್ಲದೆ ದಾಸ್ತಾನನ್ನು ಸಾಗಿಸಿದ ಖರ್ಚು ಮತ್ತು ತಗಲಬಹುದಾದ ಇತರ ಖರ್ಚುಗಳನ್ನೆಲ್ಲಾ ಮುರಿತಾ ಮಾಡಿ ಉಳಿದ ಕ್ರಯದ ಮೊಬಲಗನ್ನು ಕೊಡಲಾಗುತ್ತದೆ.

ಹೊಸ ವ್ಯವಸ್ಥೆ ಜಾರಿಗೆ ಬಂದ ತಾರೀಖಿನಿಂದ 3 ತಿಂಗಳು ಕಾಲ 5 ಸೇರಿಗೆ ಮೇಲ್ಪಟ್ಟು ಯಾವ ಬಾಬಿನ ಮನುಷ್ಯನೇ ಆಗಲೀ ಭತ್ತ, ಅಕ್ಕಿ, ರಾಗಿ ಮತ್ತು ಜೋಳಗಳಲ್ಲಿ ವ್ಯಾಪಾರ ಮಾಡಕೂಡದು. ಆದರೆ ಅಪ್ಪಣೆ ಪಡೆದು 50 ಸೇರಿನವರೆಗೆ ವ್ಯಾಪಾರ ಮಾಡಲು ವಿನಾಯಿತಿ ಉಂಟು. ಸರ್ಕಾರದವರು ಅಥವಾ ಅವರ ಪರವಾಗಿ ಸರ್ಕಾರಿ ಡಿಪೋವಿನ ಅಥವ ಸರ್ಕಾರಿ ಡಿಪೋವಿಗೆ ಆಹಾರ ಪದಾರ್ಥಗಳನ್ನು ಸಾಗಿಸುವುದು ಹೊರತು ಬೇರೆ ಇನ್ನಾರಾದರೂ ಆಹಾರಪದಾರ್ಥಗಳನ್ನು ಸಾಗಿಸಕೂಡದು.

ಈ ರೀತಿ ಶೇಖರಿಸಿದ ಆಹಾರ ಪದಾರ್ಥಗಳನ್ನು ಕೂಡಲೇ ಸಾರ್ವಜನಿಕರ ಉಪಯೋಗಕ್ಕೆ ಮಾರಲು ಇಡಲಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿಯೂ ಮತ್ತು ಪಟ್ಟಣ ಪ್ರದೇಶಗಳಲ್ಲಿಯೂ ಸಾಕಾದಷ್ಟು ಸರ್ಕಾರಿ ಡಿಪೋಗಳನ್ನು ತೆರೆಯಲಾಗುವುದು. ಸದರಿ ಡಿಪೋಗಳನ್ನು ಸಾಧ್ಯವಾದ ಮಟ್ಟಿಗೆ ದಾಸ್ತಾನು ಡಿಪೋಗಳ ಹತ್ತಿರ ಇಡಲು ಏರ್ಪಾಡು ಮಾಡಲಾಗುವುದು. ತಮಗೆ ಬೇಕಾಗುವುದಕ್ಕಿಂತ ಹೆಚ್ಚು ಧವಸವನ್ನು ಶೇಖರಿಸುವುದಕ್ಕಾಗಲಿ ಮತ್ತು ಈ ಮೂಲಕ ವ್ಯಾಪಾರ ಮಾಡಿ ಲಾಭ ಸಂಪಾದಿಸುವುದಕ್ಕಾಗಲಿ ಅವಕಾಶವಿಲ್ಲದಂತೆ ಆಹಾರ ಪದಾರ್ಥಗಳನ್ನು ಹಂಚಲು ಏರ್ಪಾಡು ಮಾಡಲಾಗುವುದು.

ಈ ಹೊಸ ವ್ಯವಸ್ಥೆಯ ಫಲಿತಾಂಶದಿಂದ ದೊರಕಿದ ಆಹಾರ ಪದಾರ್ಥಗಳನ್ನು ಕ್ರಮವರಿತು ಹಂಚಿ ಉಳಿದಿರತಕ್ಕ ಇತರ ದೊಡ್ಡ ಪಟ್ಟಣಗಳಲ್ಲೂ "ರೇಷನಿಂಗ್" ಪದ್ಧತಿಯನ್ನು ಜಾರಿಗೆ ತರಲು ಆಲೋಚಿಸಲಾಗಿದೆ.

ಫುಟ್ ಬಾಲ್

ರಾಜಧಾನಿಯಲ್ಲಿ ನಡೆಯುತ್ತಿರುವ ... ಫುಟ್‌ಬಾಲ್ ಪಂದ್ಯದಲ್ಲಿ ರೋವರ್ಸ್ ಕ್ಲಬ್ಬಿನವರು ದೊಡ್ಡಿಗುಂಟೆ ಕ್ಲಬ್ಬನ್ನು 2-0 ಗೋಲುಗಳಿಂದ ಸೋಲಿಸಿದರು.

ಬಿನ್ನಿಮಿಲ್ಸ್ ಕ್ಲಬ್ಬಿನವರು ಬೆಂಗಳೂರು ... ವಾರ್ಲ್ಸ್ ಕ್ಲಬ್ಬನ್ನು ಡ್ರಾ ಪಂದ್ಯ ೧-೦ ಗೋಲಿನಿಂದ ಸೋಲಿಸಿದರು.

ಆಕಾಶವಾಣಿ

ಆಗಸ್ಟ್ ೧೧ ನೇ ಬುಧವಾರ

...೮-೧೦ ಸಾಹಿತ್ಯವ್ಯಾಸಂಗಗೋಷ್ಠಿ ಹರಿಶ್ಚಂದ್ರಕಾವ್ಯ ೮-೩೦ ವೀಣಾವಾದನ ವಿದ್ವಾನ್ ಜಿ. ಎಸ್. ದಂಡಪಾಣಿ.

೧೨ ನೇ ಗುರುವಾರ

... ೮-೩೦ ಸಿಟೀಲುವಾದನ : ವಿದ್ವಾನ್ ಭುವನೇಶ್ವರಯ್ಯ.

ಆಸ್ಟ್ರೇಲಿಯಾಕ್ಕೆ ಶತ್ರುಧಾಳಿ ಭೀತಿ ತಪ್ಪಿದೆ

ನ್ಯೂ ಜಾರ್ಜಿಯಾ ಮತ್ತು ಗೌಡ ಕೆನಾಲ್‌ಗಳನ್ನು ಮಿತ್ರರು ಆಕ್ರಮಿಸಿದುದರಿಂದ ಆಸ್ಟ್ರೇಲಿಯಾದ ಪೂರ್ವಭಾಗ ಮತ್ತು ಉತ್ತರ ಭಾಗಗಳಿಗೆ ಜಪಾನರ ಧಾಳಿಯ ಭೀತಿ ತಪ್ಪಿರುವುದೆಂದು ಟೋಕಿಯೋ ರೇಡಿಯೋ ಒಪ್ಪಿಕೊಂಡಿದೆ.

Edited, printed and published by A. R. Nagaraja at the Sadhvi Press, D.Subbiah Road, Mysore.

The Benares Textile Emporium
(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಜುಯಲರಿ ಮತ್ತು ರೆಡಿಮೇಡ್ ಶ್ರೇಷ್ಠಿಗಳಾದ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಬಳಿಯಲ್ಲಿ ತೆರೆಯಲಾಗಿದೆ. ಬನಾರಸ್ ಜರಿಗೆ ಎಲ್ಲಾ ಹೊಸ ನಮೂನೆಯಲ್ಲಿ ಸಿಕ್ಕುತ್ತೆ.

ಈ ದಿನವೇ ಬಂದು ಪರೀಕ್ಷಿಸಿರಿ.

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದ:—

ಮೈಸೂರು ತಾ॥ 7-8-1943

ನೋಟೀಸ್

ಇದರಿಂದ ಸೈಕಲ್ ಮಾಲೀಕರುಗಳಿಗೆ ತಿಳಿಸುವುದೇನೆಂದರೆ, 2850 ಅರ್ಧ ವರ್ಷದ ಮತ್ತು 1400 ರ ವರೆಗಿನ ಪೂರ್ತಿ ವರ್ಷದ ಸೈಕಲ್ ಬಿಲ್ಲೆಗಳು ಈ ಮೇಲ್ಕಂಡ ಆಫೀಸಿನಲ್ಲಿ ಸಿದ್ಧವಾಗಿರುತ್ತೆ. ಲೈಸೆನ್ಸ್ ಫೀಸು ಕಟ್ಟತಕ್ಕ ಮಾಲೀಕರುಗಳು 11-8-43 ರೊಳಗಾಗಿ ತಮ್ಮ ರಸೀತಿಗಳನ್ನು ಆಫೀಸಿಗೆ ಹಾಜರುಪಡಿಸಿ ಬಿಲ್ಲೆಗಳನ್ನು ಪಡೆಯತಕ್ಕದ್ದು. ತಾರೀಖು ಮೀರಿ ಬರುವ ಅರ್ಜಿಗಳಿಗೆ ಗಮನಕೊಡಲಾಗುವುದಿಲ್ಲ.

(ಸಹಿ) ಬಿ. ಎಸ್. ರಾಘವೇಂದ್ರರಾವ್
ಪ್ರೆಸಿಡೆಂಟ್

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.— ಚಿಲ್ಲರೆಯಾಗಿ ಮುಂಜೂರ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ.

ಸಂಪುಟ ೨] ಗುರುವಾರ ೧೪—೧—೪೩ [ಸಂಚಿಕೆ ೨೭

ರೋಂ ನಗರದ ಮೇಲೆ ನಾಜಿ ಆಕ್ರಮಣವೇ ?

ಮುಂದಿನ ಮಿತ್ರ ದಂಡಯಾತ್ರೆ ಬಗ್ಗೆ ಊಹಾಪೋಹಗಳು

ಖಾರ್ಕೋವ್ ನಗರಕ್ಕೆ ಗಂಡಾಂತರ

ಸಚಿವರ ಆಗಮನ

ಮೈಸೂರು ೧೩

ನರಸಿಂಹರಾಜು ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ರಾಜಧಾನಿಗೆ ಈ ದಿನ ಆಗಮಿಸಿದರು. ತಾ॥ ೨೦ ರಲ್ಲಿ ನಡೆಯುವ ಮೈಸೂರು ಯುದ್ಧ ನಿಧಿ ಪ್ರದರ್ಶನ ಸಂಬಂಧವಾಗಿ ಮಾಡಲ್ಪಟ್ಟಿರುವ ವ್ಯವಸ್ಥೆಗಳನ್ನು ಸಚಿವರು ಈ ಸಂಜೆ ಪರಿಶೀಲಿಸುವರು.

ಕೆಲಸಗಾರರ ಸಂಘ

ರಾಜಧಾನಿಯಲ್ಲಿ ಅಂಗಡಿ ಮತ್ತು ಇತರ ಕಛೇರಿಗಳಲ್ಲಿ ಕೆಲಸ ಮಾಡುವವರೆಲ್ಲರೂ ನಿನ್ನೆ ಸಂಜೆ ಸಂತೇಪೇಟೆ ಶ್ರೀರಾಮಮಂದಿರದಲ್ಲಿ ಸಭೆ ನಡೆಸಿ, ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಶ್ರೀ [illegible] ಎ. ಸಂಗಪ್ಪನವರು ಅಗ್ರಾಸನ ವಹಿಸಿದ್ದರು. ರಾಜಧಾನಿಯ ಅನೇಕ ವರ್ತಕರುಗಳೂ ಮತ್ತು ಕೆಲಸಗಾರರೂ ಹಾಜರಿದ್ದರು. ಶ್ರೀಗಳಾದ ಘನಕೋಟಿಶೆಟ್ಟಿಯವರು, ಮಾಲಯ್ಯ, ಚೌಡಯ್ಯ ಮೊದಲಾದವರು ಮಾತನಾಡಿ, ಕೆಲಸಗಾರರ ಕುಂದುಕೊರತೆಗಳನ್ನು ನಿವಾರಿಸಲು ಒಂದು ಸಂಘ ಅವಶ್ಯಕವೆಂದು ತಿಳಿಸಿದರು. [illegible] ಅರ್ಧ ದಿವಸ ರಜಾ ಕೊಡಬೇಕೆಂಬ ವಿಷಯವೂ ಚರ್ಚಿಸಲಾಯಿತು. [illegible] ಒಳಗೊಂಡ ಒಂದು ಸಮಿತಿಯು [illegible]ಚಿಸಲಾಯಿತು.

ವರ್ತಕರ ಸಂಘ

ಮೈಸೂರು ವರ್ತಕರ ಸಂಘದವರು ರಾಜಧಾನಿಯ ಕೆಲಸಗಾರರಿಗೆಲ್ಲಾ ಭಾನುವಾರ ಅರ್ಧ ದಿವಸ ರಜಾ ಕೊಡಬೇಕೆಂದು ತೀರ್ಮಾನಿಸಿದ್ದಾರೆ.

ವಿಶ್ವವಿದ್ಯಾಲಯ ಸಂಘ

ಮೈಸೂರು ವಿಶ್ವವಿದ್ಯಾನಿಲಯ ಸಂಘದಲ್ಲಿ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರವರು [illegible] ವ ಹಡೀಜ ದೇಸಾಯಿಯವರ ಭಾವಚಿತ್ರವನ್ನು ೧೫-೧-೪೩ನೇ ದಿನ ಸಂಜೆ [illegible] ಗಂಟೆಗೆ ಅನಾವರಣ ಮಾಡುತ್ತಾರೆ.

ಪ್ರಭಾತ್ ಸಾಹಿತ್ಯ ನಾಟಕ ಸಂಘ

ನಿನ್ನೆಯ ಸಂಜೆ ಟಿ. ಬಸವನಪ್ಪನವರ ಸ್ಕೂಲಿನಲ್ಲಿ ಪ್ರಭಾತ್ ಸಂಘದ ಸಭೆಯು ಶ್ರೀ ಎಸ್. ಮುರುಗೇಂದ್ರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯಕಲಾಪಗಳನ್ನು ಜರುಗಿಸಲು, ಎಂ. ಕವಿ.ಟಿಯು ರಚಿತವಾಯಿತು. ಶ್ರೀ [illegible] ಬಸವರಾಜ ಅರಸಿನವರು, ಅಧ್ಯಕ್ಷರು. [illegible] ಕೆ ವಿ. ಶ್ರೀನಿವಾಸಮೂರ್ತಿಯವರು, ಉಪಾಧ್ಯಕ್ಷರು. ಶ್ರೀ ಎಂ ಆರ್. ಸೀತಾರಾಮರವರು, ಕಾರ್ಯದರ್ಶಿಗಳು. ಶ್ರೀ [illegible] ಗಳು ಖಜಾಂಚಿ. [illegible] ಗಳಲ್ಲಿ ಶ್ರೀಗಳಾದ, ಎಸ್. ಸುಬ್ಬಣ್ಣ, ಜಿ. ವೆಂಕಟಸುಬ್ಬಯ್ಯ, [illegible] ರಾಮಚಂದ್ರಸ್ವಾಮಿ, ಎ. ಸಿ. ಸುಂದರರಾವ್, ಎಸ್. ಕೃಷ್ಣಸ್ವಾಮಿ, [illegible] ಶ್ರೀನಿವಾಸಾಚಾರ್, ಎಸ್, ಪ. [illegible] ಸ್ವಾಮಿ ಮತ್ತು ಎಸ್ ಎ. [illegible] ಗಳು ಸದಸ್ಯರು. [illegible] ಘೋರಿ [illegible] ನಾಟಕಗಳನ್ನು [illegible] ನಾಟಕ [illegible] ಪ್ರದರ್ಶ[illegible] ತೀರ್ಮಾನಿಸಲಾಯಿತು.

ಪುರಿಗಡಲೆ ಸಾಗಿಸಿದ್ದಕ್ಕೆ ಶಿಕ್ಷೆ

ಕೋಡಗಿನ [illegible] ಶೆಟ್ಟಿ, [illegible] ಮಾಗಡಿ [illegible] ಸರಹದ್ದಿಗೆ ೧೭೦ ಸೇರು ಪುರಿಗಡಲೆಯನ್ನು [illegible] ದಿಂದ ಆ [illegible] ಆಫೀಸರ್ ಶ್ರೀ [illegible] ಜುಲ್ಮಾನೆ [illegible].

ಉಪಾಧ್ಯಾಯರಿಗೆ ಹೊಡೆದುದಕ್ಕೆ ಶಿಕ್ಷೆ

ಕೃಷ್ಣರಾಜನಗರದ [illegible] ಶ್ರೀ [illegible] ಎಂಬುವರನ್ನು, [illegible] ಹೊಡೆದನೆಂಬ [illegible] ಜುಲ್ಮಾನೆ ವಿಧಿಸಲಾ[illegible] ಪುನಃ ಪ್ರವೇಶ [illegible] ಉಪಾಧ್ಯಾಯರು [illegible] ಹೊಡೆದ ರೆಂದು ಅವರ ಮೇಲೆ ಆಪಾದನೆ.

ಚಾಕುವಿನಿಂದ ಹೊಡೆದ ಪ್ರಸಂಗ

ಕೃಷ್ಣರಾಜನಗರ ತಾ॥ ಮೊಸಳೆ ಗ್ರಾಮದ ಕೃಷ್ಣಯ್ಯ [illegible] ಎಂಬುವನು [illegible] ಮತ್ತು [illegible] ಚಾಕುವಿನಿಂದ ಹೊಡೆದನು, [illegible] ನೆಂದು ಆತನ ಮೇಲೆ ಪೋಲೀಸರು [illegible].

ಪ್ರಥಮ ಪರೀಕ್ಷೆ ಇಲ್ಲ

[illegible] ಪ್ರಥಮ [illegible] ವಿದ್ಯಾರ್ಥಿ [illegible] ಗಳ [illegible] ಮಾಡಿದ್ದಾರೆ.

ಅಧಿಕಾರಿಗಳ ನೇಮಕ

[illegible]

ಟರ್ಕಿ ಯುದ್ಧಕ್ಕೆ ಇಳಿಯುವುದೇ ?

ಮೆಡಿಟರೇನಿಯನ್ ಕ್ಷೇತ್ರದಲ್ಲಿ ಕೆಲವು ವಿಜಯಗಳುಂಟಾದಲ್ಲಿ ಟರ್ಕಿಯು, ಆಗ ಬ್ರಿಟನ್ನಿನೊಂದಿಗೆ ಸಹಕರಿಸಿ ಯುದ್ಧ ಆರಂಭಿಸುವ [illegible] ಸಿದ್ಧವಾಗಿದೆ [illegible] ಅಂಕರ [illegible] ಸೇರ್ಪಡೆ ಇಲ್ಲ" ಎಂಬುದಾಗಿ ಟರ್ಕಿ ಪತ್ರಿಕೆಯೊಂದು ತಿಳಿಸುತ್ತದೆ.

ಲಿಬ್ಯದ ಸ್ವತಂತ್ರ ಸಮಿತಿ

ಅಲ್ಜೀರಿಯಾದಲ್ಲಿ ಸ್ಥಾಪಿಸಿರುವ ಫ್ರೆಂಚ್ ನವರ ಸ್ವತಂತ್ರ ಸಮಿತಿಯನ್ನು ಬ್ರಿಟಿಷ್ ಅಮೆರಿಕ ಸರ್ಕಾರವು ಅಧಿಕೃತವಾಗಿ [illegible] ದಾಗಿದೆ.

ಜೈರೋಕಿಗೆ ಗಂಡಾಂತರ

ಮಾಸ್ಕೋದಿಂದ [illegible] ಕೇವಲ [illegible] ಮೈಲಿ ದೂರದಲ್ಲಿವೆ. ಉತ್ತರ, ದಕ್ಷಿಣ [illegible] ಜೈರೋಕಿ [illegible].

ಜರ್ಮನರು ಓಡುತ್ತಿದ್ದಾರೆ

ರಷ್ಯನರು ಖಾರ್ಕೋವ್ ನಗರಕ್ಕೆ [illegible] ಖಾರ್ಕೋವ್ [illegible] ಜರ್ಮನ [illegible] ಹಿಂದಕ್ಕೆ [illegible] ಖಾರ್ಕೋವ್ [illegible] ರಷ್ಯನ್ನರು [illegible] ರವ.

ಗಾಂಧೀಜಿ ಪತ್ರ ಬಹಿರಂಗ ಪಡಿಸಲಾಗುವುದಿಲ್ಲ

ಗಾಂಧೀಜಿಯವರು ಬರೆದ ಪತ್ರ[illegible] ಪಡಿಸಲಾಗುವುದಿಲ್ಲ [illegible] ಕೇಂದ್ರ ಶಾಸನಸಭೆಯಲ್ಲಿ [illegible] ಮಿ॥ ಮ್ಯಾಕ್ಸ್‌ವೆಲ್‌ರು ತಿಳಿಸಿದರು.

ಫ್ರೂಟ್ ಬಾಲ್

[illegible] ಫುಟ್ ಬಾಲ್ ಪಂದ್ಯದಲ್ಲಿ ನಿನ್ನೆ ಸಂಜೆ ಬಾಂಬೆ ಯೂನಿಯನ್ನಿನವರು, ಮೈಸೂರು ಮುಸ್ಲಿಂ ಕ್ಲಬ್ಬನ್ನು [illegible] ಗೋಲಿನಿಂದ ಸೋಲಿಸಿದರು.

ನೂತನ ಮಿತ್ರ ದಂಡಯಾತ್ರೆ

ಮೆಡಿಟರೇನಿಯನ್ ಮತ್ತು ಇತರ ಭಾಗಗಳಲ್ಲಿ ದಂಡಯಾತ್ರೆಗಾಗಿ ಭಾರೀ ರಚನೆ ನಡೆಸಲಾಗುತ್ತಿವೆಯೆಂದು ಮಿ॥ ಚರ್ಚಿಲ್ಲರು ಭವಿಷ್ಯ ನುಡಿದದ್ದು ಫಲಕಾರಿಯಾಗಿದೆ ಯೆಂದು ಹೇಳಲಾಗಿದೆ. ಮುಂದೆ ಮಿತ್ರರು ಯಾವ ಭಾಗದಲ್ಲಿ ಮತ್ತು ಯಾವ ಕಾಲದಲ್ಲಿ ದಂಡಯಾತ್ರೆ ಮಾಡುವ ವಿಚಾರದಲ್ಲಿ ಊಹಾಪೋಹ ಪ್ರಾರಂಭವಾಗಿದೆ. [illegible] ಜನರಲ್ ಮತ್ತು [illegible] ಆಗ [illegible] ಪತ್ರಿಕೆ [illegible] ಮೇಲೆ [illegible] ಸಂಭವವಿದೆಯೆಂದು ಹೇಳಲಾಗಿದೆ.

ಅಧಿಕಾರಿಗಳ ಮೇಲೆ ಅಪಾದನೆ

[illegible] ಅಧಿಕಾರಿಗಳನ್ನು [illegible] ಎಂದು ವರದಿಯಾಗಿದೆ.

ಇಟಲಿಯನ್ನು ಜರ್ಮನರು ಆಕ್ರಮಿಸುವರೇ ?

ಇಟಲಿಯನ್ನು ಸಂಪೂರ್ಣವಾಗಿ [illegible] ಜರ್ಮನರು [illegible] ಮಾರ್ಷಲ್ [illegible] ಯವರು [illegible] ರೋಂ ನಗರದಲ್ಲಿ ೧೦,೦೦೦ ಸೈನ್ಯವನ್ನು [illegible] ರೋಂ ನಗರವನ್ನು [illegible] ಎಂದು ಹೇಳಲಾಗಿದೆ.

ಬೆಳ್ಳುಳ್ಳಿ ಸಾಗಿಸಲಾಗದು

[illegible] ಮಾಡಿದ್ದಾರೆ.

ಪಾಕಿಸ್ತಾನದ ಬಗ್ಗೆ ಸಂಶಯ ತೋರುವವರಿಗೆ ಬಹುಮಾನ

ಬೆಂಗಳೂರು —

[illegible] ಪಾಕಿಸ್ತಾನದ ಬಗ್ಗೆ [illegible] ಬಹುಮಾನ ಕೊಡಲ್ಪಡುವುದಾಗಿಯೂ, [illegible] ಶ್ರೀ [illegible]

[illegible]

ರಾಜಕೀಯ ಬಿಕ್ಕಟ್ಟು ಬಗೆಹರಿಯಬೇಕು

[illegible]

ವಸ್ತಗಿರಿ

[illegible] ಶ್ರೀ ಎಸ್. [illegible]

ವರ್ಗಾವರ್ಗಿ

[illegible] ಶ್ರೀ [illegible] ವರ್ಗಾಯಿಸಲಾಗಿದೆ.

ಪೋಲೀಸರಿಗೆ ಶಿಕ್ಷೆ

[illegible] ಶಿಕ್ಷೆ ಮತ್ತು [illegible] ವಿಧಿಸಿದ್ದಾರೆ.

ಪ್ರವಾಹದಿಂದ ಅಪಾರ ನಷ್ಟ

[illegible]

ಜರ್ಮನಿ ಮೇಲೆ ಭೀಕರ ಧಾಳಿ

[illegible]

ಮಿತ್ರ ಧಾಳಿ ಪರಿಣಾಮ

[illegible]

ಇಟಲಿಯಿಂದ ಜರ್ಮನ್ ಸೈನ್ಯ ವಾಪಸು ?

ಇಟಲಿಯನ್ನು ಮಿತ್ರ ಸೈನ್ಯಕ್ಕೆ ಬಿಟ್ಟುಕೊಡಲು ಅವಕಾಶ ಕೊಡುವುದಿಲ್ಲವೆಂಬುದಾಗಿ ಇಟಲಿ ಸರ್ಕಾರದ ಭಾಗಕ್ಕೆ ಕೊಡ[illegible] ಜರ್ಮನ್ ಸೈನ್ಯವನ್ನು ದಕ್ಷಿಣ [illegible] ಇಟಲಿಯಿಂದ ವಾಪಸು [illegible] ಜರ್ಮನರು ಒಪ್ಪಿದ್ದಾರೆಂದು ವರದಿಯಾಗಿದೆ.

ಈಗ ರೋಂ ನಗರದಲ್ಲಿ ಜರ್ಮನ್ [illegible] ಈ ವಿಷಯವಾಗಿ ಮಾತುಕತೆ ನಡೆಯುತ್ತಿದೆಯೆಂದು ಹೇಳಲಾಗಿದೆ. ಇಟಲಿಯಿಂದ ಜರ್ಮನ್ ಸೈನ್ಯವನ್ನು ವಾಪಸು [illegible] ಇಟಾಲಿಯನ್ ಪ್ರಜೆಗಳನ್ನು [illegible] ಜರ್ಮನಿಯಿಂದ ಇಟಾಲಿಯನ್ ಕೆಲಸಗಾರರನ್ನು ವಾಪಸು ಕಳಿಸುವುದು, ಈ ವಿಚಾರಗಳಲ್ಲಿ ಜರ್ಮನರು [illegible] ಚರ್ಚಿಸಲಾಗುತ್ತಿದೆಯೆಂದು ಹೇಳಲಾಗಿದೆ.

ಇಟಲಿ ಮಂತ್ರಿಮಂಡಲದಲ್ಲಿ ತೊಂದರೆ

ಇಟಲಿಯಲ್ಲಿ ಕೇವಲ ಇತ್ತೀಚೆಗೆ ಸ್ಥಾಪಿಸಲಾದ ಬಡೋಗ್ಲಿಯೊ ಮಂತ್ರಿಮಂಡಲಿಯಲ್ಲಿ ಬಿಕ್ಕಟ್ಟು ಉಂಟಾಗಿದೆಯೆಂದೂ, [illegible] ಮಂತ್ರಿಗಳು ರಾಜೀನಾಮೆ ಕೊಟ್ಟಿರುವರೆಂದೂ ವರದಿಯಾಗಿದೆ.

[illegible] ಜಿನೋವಾ ನಗರದಲ್ಲಿ [illegible] ಉಂಟಾಗಿದೆಯೆಂದು ಹೇಳಲಾಗಿದೆ.

ಇಟಲಿಗೆ ಜರ್ಮನ್ ಸಹಾಯ

[illegible] ಇಟಲಿ ನಡೆಯುತ್ತಿದ್ದ [illegible] ಇಟಲಿಯು ಯುದ್ಧ ನಡೆಸುವುದೆಂದು ಹೇಳಲಾಗಿದೆ.

ಹಿಟ್ಲರನ ವಸತಿಗೆ ಭೀತಿ ?

ಹಿಟ್ಲರನು ವಾಸವಾಗಿರುವ ಮ್ಯೂನಿಚ್ ನಗರದ [illegible] ಮ್ಯೂನಿಚ್ ಪತ್ರಿಕೆಯು [illegible]

ಚರ್ಚಿಲ್ ರೂಸ್ವೆಲ್ಟ್ ಭೇಟಿ

ಮಿ॥ ಚರ್ಚಿಲ್ಲರು ಈಗ ಕೆನಡಾದಲ್ಲಿ [illegible] ಮಿ॥ ಮೆಕೆಂಜಿ ಕಿಂಗ್‌ರೊಡನೆ [illegible] ಎಂದು ಪ್ರಕಟವಾಗಿದೆ. [illegible] ಚರ್ಚಿಲ್–ರೂಸ್ವೆಲ್ಟರ ಭೇಟಿ [illegible] ರಾಷ್ಟ್ರಗಳ ಮೇಲೆ ಕೂಡಲೇ [illegible] ಕ್ರಮ ಕೈಗೊಳ್ಳಲಾಗುವುದೆಂದು ಹೇಳಲಾಗಿದೆ.

ರೂಸ್ವೆಲ್ಟ್–ಚರ್ಚಿಲ್ ಸಂಭಾಷಣೆಯಲ್ಲಿ [illegible] ಆಂಗ್ಲ-ಅಮೆರಿಕ [illegible] ಇಟಲಿಯನ್ನು ಯುದ್ಧದಿಂದ [illegible] ಬಗ್ಗೆ ಮತ್ತು ಬ್ರಿಟನ್ ಅಮೆರಿಕನ್ ರಾಷ್ಟ್ರಗಳಿಗೆ ಒಪ್ಪಿಗೆಯಾಗುವ [illegible] ಜರ್ಮನರು ಶಾಂತಿ ಭಿಕ್ಷೆ ಬೇಡುವಂತೆ ಮಾಡಲು ಯಾವ ಕಾರ್ಯಕ್ರಮ ಕೈಗೊಳ್ಳಬೇಕೆಂಬ ವಿಷಯಗಳನ್ನು [illegible] ಲಾಗುವುದೆಂದು ಹೇಳಲಾಗಿದೆ.

ಇಟಲಿಯ ಹಿಂಸಾಕೃತ್ಯ

ಯುಗೋಸ್ಲಾವಿಯ ಜನರನ್ನು ಇಟಾಲಿಯನ್ನರು ಚಿತ್ರಹಿಂಸೆ ಮಾಡುತ್ತಿದ್ದಾರೆಂದು [illegible] ಬಂಧಿಸಿ, [illegible] ಹೇಳಲಾಗಿದೆ. [illegible] ಇಟಾಲಿಯನ್ನರು [illegible] ವರದಿಯಾಗಿದೆ.

ಜಪಾನ್ ಸೈನ್ಯದಲ್ಲಿ ದಕ್ಷತೆ ಇಲ್ಲ

ಜಪಾನ್ ಸೈನ್ಯದಲ್ಲಿ [illegible] ಜಪಾನ್ ಉಪಮಂತ್ರಿಯಾದ [illegible] ಟೋಕಿಯೋ [illegible] ಸೈನ್ಯದ ದಕ್ಷತೆ ಕಡಿಮೆಯಾಗಿದೆಯೆಂದು [illegible] ಹೇಳಿದ್ದಾರೆ.

Edited, printed and published by A. R. Nagarajan at the Sadhvi Press, D.Subbiah Road, Mysore.

ಡಿ ಸೆಂಟಿ ಸ್ಪೈಡರ್

ಉಪಯೋಗಿಸಿರಿ. ಆಮಶಂಕೆ, ಅತಿಸಾರಗಳಿಗೆ ಖಾತರಿಯಾದ ಔಷಧ. ಎಲ್ಲಾ ವ್ಯಾಪಾರಿಗಳಲ್ಲೂ ಮತ್ತು ಸ್ಟೋರುಗಳಲ್ಲೂ ಸಿಗುತ್ತದೆ. 1 ಪ್ಯಾಕೆಟ್ 2 ಆಣೆ.

The Benares Textile Emporium
(opposit to Chamundeswari Talkies)
Purchase Direct from Benareswalas
ಬನಾರಸ್‌ರವರ ಕಲಾಬತ್ತು ಜವಳಿ ಅಂಗಡಿ

[illegible] ಡಿ. ಸಿ. ಸೂರ್ಯನಾರಾಯಣಶೆಟ್ಟಿ, [illegible] ಸನ್ಸ್ ರವರ [illegible]

ಈ ದಿನವೇ ಬಂದು ಪರೀಕ್ಷಿಸಿರಿ.

ಶ್ರೀ [illegible]

ನಮ್ಮಲ್ಲಿ [illegible]

[illegible]

ಡಾ. ಕೃಷ್ಣಪ್ಪ [illegible]

ಸಂಪುಟ ೨] ಶುಕ್ರವಾರ ೧೩-೮-೪೩ [ಸಂಚಿಕೆ ೨೪

ಬಲ್ಗೇರಿಯಾದಲ್ಲಿ ರಾಜಕೀಯ ದಂಗೆಯೆ ?

ಭಾರತದಲ್ಲಿ ಯುದ್ಧ ಕೈದಿಗಳಿಗಾಗಿ ೧೫೧೨ ಲಕ್ಷ ರೂ. ಖರ್ಚು

ಮೂರು ರಾಷ್ಟ್ರಗಳೂ ಸೇರಿ ಯುದ್ಧ ನಡೆಸಲು ಜಪಾನ್ ಮಂತ್ರಿಗಳ ಯೋಜನೆ

ಸಚಿವರ ಪ್ರವಾಸ

ಮೈಸೂರು ೧೩

ಕೈಗಾರಿಕೆ ಮತ್ತು ಸಪ್ಲೈ ಸಚಿವರಾದ ಎಂ. ಎ. ಶ್ರೀನಿವಾಸನ್‌ರವರು ಈ ದಿನ ...ಪುರ, ಕಾಕನಕೋಟೆಗೆ ಪ್ರಯಾಣ ಬೆ...ಸಿದರು.

ಕಳ್ಳನಿಗೆ ಶಿಕ್ಷೆ

ರಾಜಧಾನಿಯ ದೇಶೀಯ ವಿದ್ಯಾಶಾಲೆ...ಲ್ಲಿ ಗಾಂಧೀಜಿ ಫೋಟೋ ವಗೈರೆಗಳನ್ನು ...ಳ್ಳತನ ಮಾಡಿದ್ದ ನರಸಿಂಹ ಎಂಬವ...ಗೆ ಸಿಟಿ ನ್ಯಾಯಾಧೀಶರು ೨ ವರ್ಷ ಕಠಿ...ಣ ಶಿಕ್ಷೆ ವಿಧಿಸಿದರು.

ಹಸು ಕಳ್ಳ ಸಿಕ್ಕಿಬಿದ್ದ

ಬೊಬ್ಬನಾಯಕನ ಹಳ್ಳಿ ಮಾದ ಎಂ...ಬವನು ಬೆಳ್ಳಿಕಟ್ಟೆಗೆ ಬಳಿ ೨ ಹಸುಗಳ...ನ್ನು ಕದ್ದು ತೆಗೆದುಕೊಂಡು ಹೋಗುತ್ತಿ...ದ್ದನೆಂದು ದೇವರಾಜ ಪೋಲೀಸರು ಆತ...ನನ್ನು ಈ ದಿನ ಬೆಳಿಗ್ಗೆ ದಸ್ತಗಿರಿ ಮಾಡಿ...ದರು.

ದೊಣ್ಣೆಯಿಂದ ಹೊಡೆತ

ನಂಜನಗೂಡು ತಾ|| ತಗಡೂರು ಗ್ರಾ...ಮದಲ್ಲಿ ಕಳೆದ ೧೦ ನೇ ತಾ|| ದಿನ ಸಂಜೆ ...ನಾಗಚಂದ್ರಶರ್ಮ ಎಂಬುವರನ್ನು ಬಸ...ಯ್ಯ ಎಂಬುವನು ತನ್ನ ಮನೆಯಲ್ಲಿ ದೊ...ಣ್ಣೆಯಿಂದ ಹೊಡೆದು ತೀವ್ರ ಗಾಯಪಡಿಸಿ...ದನೆಂದು ಪೋಲೀಸರಿಗೆ ವರದಿಯಾಗಿದೆ

ಜಮೀನಿನಲ್ಲಿ ಹೊಡೆದಾಟ

ಮಳವಳ್ಳಿ ತಾ|| ಯರಗಂಬಳ್ಳಿ ಶ್ರೀ ...ಚ್. ವಿ. ರಾಮರಾಯರ ಜಮೀನಿನಲ್ಲಿ ನಂಜೆ...ಶಿವ ಮತ್ತು ಇತರ ೪ ಮಂದಿಗಳು ಕಳೆದ ...ನೇ ತಾ|| ದಿನ ಆಕ್ರಮ ಪ್ರವೇಶಮಾಡಿ ...ವರಾವ್, ಮಹಂಕದೇವರು ಬಸವಲಿಂ...ಗದೇವರು ಇವರುಗಳನ್ನು ದೊಣ್ಣೆಯಿಂದ ಹೊಡೆದು ಗಾಯಪಡಿಸಿದರೆಂದು ಪೋಲೀಸ...ರಿಗೆ ವರದಿಯಾಗಿದೆ. ಅವರುಗಳ ಮೇಲೆ ಪೋಲೀಸರು ಕೇಸು ರಿಜಿಸ್ಟರ್ ಮಾಡಿ...ದ್ದಾರೆ.

ರಹದಾರಿಯಿಲ್ಲದೆ ರಾಗಿ ಸಾಗಿಸುತ್ತಿದ್ದರು

ತಗಡೂರು ಗ್ರಾಮದ ಅಂಕಶೆಟ್ಟಿ ಎಂ...ಬುವರು ರಹದಾರಿಯಿಲ್ಲದೆ ದೊಡ್ಡಹಳ್ಳಿ ಸ...ರಹದ್ದಿನಿಂದ ೫ ಮೂಟೆ ರಾಗಿಯನ್ನು ಸಾ...ಗಿಸುತ್ತಿದ್ದುದನ್ನು ಪೋಲೀಸರು ಪತ್ತೆಹಚ್ಚಿ ...ಮುಂದಿನ ಕ್ರಮ ನಡೆಸುತ್ತಿದ್ದಾರೆ.

ತಲೆಗೆ ಕೊಡಲಿ ಪೆಟ್ಟು

ಮುಸ್ಲಿಂ ಲೀಗಿನವರು ಸುಲ್ತಾಂ ಉರ...ಸು ನಾವಣೆಯಲ್ಲಿ ಲೀಗಿಗೆ ಆದ ವಿಜಯದ ...ಸತ್ಸವಕ್ಕಾಗಿ ಮೆರವಣಿಗೆ ಹೋಗುತ್ತಿದ್ದಾಗ ಮುಸ್ಲಿಂಲೀಗ್ ಸ್ವಯಂಸೇವಕನೊ...ಬ್ಬನ ತಲೆಗೆ ಕೊಡಲಿಯಿಂದ ಯಾರೋ ಹೊಡೆದರೆಂದು ವರದಿಯಾಗಿದೆ.

ಚೀಣಾದಲ್ಲಿ ಶತ್ರು ವಿಮಾನ ನಾಶ

ಚೀಣಾದಲ್ಲಿ ೧೯೩೭ ರಿಂದ ಒಟ್ಟು ೧೫೦೦ ...ಶತ್ರು ವಿಮಾನಗಳನ್ನು ಹೊಡೆದುರುಳಿಸಿರು...ವರಾಗಿಯೂ, ಅವುಗಳಲ್ಲಿ ೫೦೦ ರನ್ನು ಚೀ...ನೀಯರೇ ನಾಶಮಾಡಿರುವರೆಂದೂ ಪ್ರಕಟಿ...ಸಲಾಗಿದೆ

ಯುದ್ಧ ಕೈದಿಗಳಿಗೆ ೧೫೧೩ ಲಕ್ಷ ರೂ. ಖರ್ಚು

ಭಾರತದಲ್ಲಿ ಇಡಲಾಗಿರುವ ಯುದ್ಧ ಕೈದಿಗಳಿಗಾಗಿ ಈ ಮೂರು ವರ್ಷಗಳಲ್ಲಿ ಒಟ್ಟು ೧೫೧೩ ಲಕ್ಷ ರೂ. ಗಳು ಖರ್ಚಾಗಿದೆಯೆಂದು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ತಿಳಿಸಲಾಯಿತು.

ಭಾರತದಲ್ಲಿರುವ ಅಮೇರಿಕಾ ಸೈನ್ಯದ ಖರ್ಚನ್ನು ಅಮೇರಿಕಾ ಸರ್ಕಾರದವರೇ ವಹಿಸಿರುವರೆಂದು ತಿಳಿಸಲಾಯಿತು.

ಇಂಗ್ಲೆಂಡ್ ಮೇಲೆ ಧಾಳಿ

ನೈರುತ್ಯ ಇಂಗ್ಲೆಂಡ್ ತೀರ ಪ್ರದೇಶದ ಮೇಲೆ ಜರ್ಮನ್ ವಿಮಾನಗಳು ಧಾಳಿ ನಡೆಸಿ, ಅನೇಕ ಬಾಂಬುಗಳನ್ನು ಸುರಿಸಿದುವೆಂದೂ ಸ್ವಲ್ಪ ಸಾವು ನೋವುಗಳುಂಟಾದುವೆಂದೂ ವರದಿಯಾಗಿದೆ.

ಆಕ್ಸಿಸ್ ಸಮಾಲೋಚನೆ

ಜರ್ಮನಿ, ಇಟಲಿ ಮತ್ತು ಜಪಾನ್ ಸೇರಿ ಯುದ್ಧ ನಡೆಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲು ಜಪಾನಿನ ವಿದೇಶಾಂಗ ಮಂತ್ರಿಯು ಜರ್ಮನಿ ಮತ್ತು ಇಟಲಿ ರಾಯಭಾರಿಗಳೊಡನೆ ಟೋಕಿಯೋದಲ್ಲಿ ಭೇಟಿಮಾಡಿ ಮಾತುಕತೆ ನಡೆಸಿದರೆಂದು ಜಪಾನ್ ವಾರ್ತೆ ತಿಳಿಸುತ್ತದೆ.

ಬಲ್ಗೇರಿಯಾ ರಷ್ಯನ್ ರಾಷ್ಟ್ರಕ್ಕೆ ಸೇರುವುದೆ

ಬ್ರಿಯಾನ್ಸ್ಕ ಮತ್ತು ಖಾರ್ಕೋವ್ ನಗರಗಳ ಪತನವಾದ ಕೂಡಲೆ ಬಲ್ಗೇರಿಯಾದಲ್ಲಿ ದಂಗೆಯಾಗುವುದೆಂದೂ, ಬೋರಿಸ್ ದೊರೆಗಳನ್ನು ಮತ್ತು ಅವರ ಸರ್ಕಾರವನ್ನೂ ಓಡಿಸಿ, ಪ್ರಜಾಪ್ರಭುತ್ವ ಸ್ಥಾಪನೆಯಾಗುವುದೆಂದು ವರದಿಯಾಗಿದೆ.

ಅಲ್ಲದೆ ರಷ್ಯದೊಡನೆ ಬಲ್ಗೇರಿಯಾ ಸೇರಲಾಗುವುದೆಂದು ಹೇಳಲಾಗಿದೆ

ಉದಾರ ದಾನ

ನವಸಾರಿಯಲ್ಲಿ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸಲು ಸರ್ ಹೋಮಿ ಮೆಹತಾರವರು ೨ ಲಕ್ಷ ರೂ. ದಾನಮಾಡಿದ್ದನ್ನು ಬರೋಡಾ ಸರ್ಕಾರ ಸ್ವೀಕರಿಸಿದೆ.

ಕಾಂ|| ಇಲ್ಲದೆ ಒಪ್ಪಂದವಾಗಲಾರದು

ನ್ಯೂಸ್ ಕ್ರಾನಿಕಲ್ ಪತ್ರಿಕೆಯು ವೈಸರಾಯರು ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ಮಾಡಿದ ಭಾಷಣದ ಮೇಲೆ ಟೀಕೆ ಮಾಡುತ್ತಾ ಹೀಗೆ ತಿಳಿಸುತ್ತದೆ.

"ಲಾರ್ಡ್ ಲಿನ್‌ಲಿತ್‌ಗೋರವರ ವಾದವು ತಿಳಿಯಲಿಲ್ಲವಷ್ಟೆ. ಗಾಂಧೀಜಿ ಮತ್ತು ಕಾಂಗ್ರೆಸ್ ಜಯಿಸಿಲ್ಲವೆಂದು ಅವರು ನಟಿಸುತ್ತಾರೆ. ಅದು ವಾಸ್ತವಾಂಶಕ್ಕೆ ದೂರವಾದುದು. ನಾಯಕರೆಲ್ಲ ಒಟ್ಟುಸೇರಿ ಸಮಾಲೋಚನೆ ನಡೆಸಬೇಕೆಂದು ಅವರೇ ಹೇಳಿದ್ದಾರೆ. ಅವರೆ ಗಾಂಧೀಜಿ ಮತ್ತು ಇತರ ಮುಖಂಡರು ತಮ್ಮ ಸ್ನೇಹಿತರೊಂದಿಗೆ ಸ್ವತಂತ್ರವಾಗಿ ಮಾತುಕತೆ ನಡೆಸಲು ಅವರು ಅವಕಾಶವನ್ನು ಏಕೆ ಕಲ್ಪಿಸಿಕೊಟ್ಟಿರುವುದಿಲ್ಲ? ಇದರ ಅರ್ಥವೇನು?"

ದೋಣಿ ಅಪಘಾತ

ಘೋಟ್ ನಾಗಪುರದ ಕೋಯಿಲ್ ನದಿಯಲ್ಲಿ ಹೋಗುತ್ತಿದ್ದ ಒಂದು ದೋಣಿ ಮುಗುಚಿಕೊಂಡಿತು. ಅದರಲ್ಲಿದ್ದ ೫೭ ಮಂದಿ ಮರಣಹೊಂದಿದರೆಂದು ವರದಿಯಾಗಿದೆ.

ಬ್ರಿಟನ್ ಮೇಲೆ ಜರ್ಮನ್ ಧಾಳಿಮಾಡಬಹುದು

"ಜರ್ಮನ್ ಸೈನ್ಯವು ಇನ್ನೂ ಬಲವಾಗಿದೆ ನಾವು ಇನ್ನೂ ಮುಖ್ಯವಾದ ಶತ್ರುವನ್ನು ಸೋಲಿಸಬೇಕಾಗಿದೆ. ಜರ್ಮನಿಯು ತನ್ನ ಗಂಡಾಂತರವನ್ನು ಲಕ್ಷಿಸದೆ ಬ್ರಿಟನ್ ಮೇಲೆ ಬಾರಿ ಧಾಳಿ ನಡೆಸಬಹುದು" ಎಂದು ಲಂಡನ್ನಿನ ಹೋಂ ಸೆಕ್ರೆಟರಿ ಮಂತ್ರಿಗಳಾದ ಮಿ|| ಹರ್ಬರ್ಟ್ ಮಾರಿಸನ್‌ರವರು ಎಚ್ಚರಿಕೆ ಕೊಟ್ಟಿರುವರು. ಪೂರ್ವ ರಣರಂಗದಲ್ಲಿ ಜರ್ಮನಿಯು ವಿಟು ಹಿಮ್ಮೆಟ್ಟಿದ್ದರೂ ಕೂಡ, ಪುನಃ ಭೀಕರ ಪ್ರತಿಭಟನೆ ನಡೆಸಬಹುದೆಂದು ಹೇಳಿದ್ದಾರೆ.

ನಾಜಿಗಳಿಗೆ ಪ್ರಕಟಣೆ

ಸ್ವಿಟ್ಜರ್ಲೆಂಡ್ ಬ್ಯಾಂಕುಗಳಲ್ಲಿ ಇಟ್ಟಿರುವ ಜರ್ಮನರು ಹಣವನ್ನೆಲ್ಲಾ ಈ ವಾರಾಂತ್ಯದೊಳಗೆ ವಾಪಸು ಪಡೆಯುವುದೆಂದು ಆ ರಾಷ್ಟ್ರೀಯ ಬ್ಯಾಂಕಿಂಗ್ ಪತ್ರಗಳಿಗೆ ಜಾಹಿರುವರದಿ ಬಂದಿರುವುದಾಗಿ ಪ್ರಕಟಿಸಲಾಗಿದೆ

ಬ್ರಿಯಾನ್ಸ್ಕ ಮುತ್ತಿಗೆ

ಬ್ರಿಯಾನ್ಸ್ಕಿಗೆ ೩೦ ಮೈಲೀ ದೂರದಲ್ಲಿರುವ ಜರ್ಮನ್ ಕಡೆ ಸಂರಕ್ಷಣಾ ಸ್ಥಾನವಾದ ಕರಚೋವ್ ನಗರದ ಹತ್ತಿರ ರಷ್ಯನರು ಬಂದಿದ್ದಾರೆಂದೂ, ಅಲ್ಲಿ ಭೀಕರ ಕದನ ನಡೆಯುತ್ತಿದೆಯೆಂದೂ ವರದಿಯಾಗಿದೆ

ಬ್ರಿಯಾನ್ಸ್ಕ ಮುತ್ತಿಗೆ ಹಾಕಲು ರಷ್ಯನ್ ಸೈನ್ಯವು ಎಲ್ಲಾ ಭಾಗಗಳಿಂದಲೂ ನುಗ್ಗುತ್ತಿವೆಯೆಂದು ಹೇಳಲಾಗಿದೆ. ಖಾರ್ಕೋವ್ ನಗರದ ಪಶ್ಚಿಮ ಭಾಗದಲ್ಲಿ ರಷ್ಯನರು ಮತ್ತಷ್ಟು ದೂರ ನುಗ್ಗಿದ್ದಾರೆ ಆ ನಗರದ ನೈರುತ್ಯ ದಿಕ್ಕಿನಲ್ಲಿ ಪೋಲ್ಟಾವಕ್ಕೆ ಇರುವ ರೈಲ್ವೆಮಾರ್ಗವನ್ನು ಕತ್ತರಿಸಲಾಗಿದೆ.

ಜರ್ಮನರು ನಗರಗಳನ್ನು ತ್ಯಜಿಸುತ್ತಿದ್ದಾರೆ

ಪಶ್ಚಿಮ ಮತ್ತು ವಾಯುವ್ಯ ಜರ್ಮನಿಯ ನಗರಗಳ ಮೇಲೆ ಮಿತ್ರಧಾಳಿ ಮಾಡಿದುದರ ಫಲವಾಗಿ ಸುಮಾರು ೪೦ ಲಕ್ಷ ಜನರು ಆ ಪ್ರದೇಶಗಳನ್ನು ತ್ಯಾಗ ಮಾಡಿರುವುದಾಗಿ ವರದಿಯಾಗಿದೆ.

ಹ್ಯಾಂಬರ್ಗ್ ನಗರ ಪುನರ್ರಚನೆ

ಹ್ಯಾಂಬರ್ಗ್ ನಗರದಲ್ಲಿ ಹೈಫಸ್ ಎಂಬ ಉಪದ್ರವ ಹರಡಿದೆಯೆಂದೂ ಮತ್ತು ಮಿತ್ರ ಧಾಳಿಯಿಂದ ನಾಶವಾದ ಆ ನಗರವನ್ನು ಪುನರ್ರಚಿಸಲಾಗುವುದಿಲ್ಲವೆಂದು ವರದಿಯಾಗಿದೆ.

ಬರ್ಲಿನ್ ನಗರ ಖಾಲಿ ಮಾಡಿದೆ

ಬರ್ಲಿನ್ ನಗರವನ್ನು ಕೆಲವು ಜರ್ಮನಿಯ ಮಂತ್ರಿಗಳು ಬಿಡುತ್ತಿರುವರೆಂದೂ, ಈಗಾಗಲೆ ಯುದ್ಧ ಮಂತ್ರಿ ಮತ್ತು ಇತರ ಕಛೇರಿಗಳನ್ನು ಜರ್ಮನಿಯ ಯಾವುದೋ ಒಂದು ನಗರಕ್ಕೆ ವರ್ಗಾಯಿಸಲಾಗಿದೆಯೆಂದು ವರದಿಯಾಗಿದೆ.

ಮಿಲಿಟರಿ ಅಧಿಕಾರಿಗಳಿಗೆ ಶಿಕ್ಷೆ

ಇಂಡಿಯನ್ "ಆರ್ಮಿ ಆರ್ಡಿನೆನ್ಸ್ ಕಾರ್ಪ್ಸ್" ಕ್ಯಾಪ್ಟನ್ ಪಿ. ಜೆ. ಪ್ಲೆಚರ್ ಎಂಬುವರು ಸರ್ಕಾರದ ಪೆಟ್ರೋಲನ್ನು ದುರುಪಯೋಗ ಪಡಿಸಿದರೆಂಬ ಅಪವಾದನೆಯ ಮೇಲೆ ೪ ವರ್ಷ ಕಠಿಣಶಿಕ್ಷೆ ವಿಧಿಸಲಾಗಿದೆ

ಪರಿಹಾರ ದ್ರವ್ಯ

ಅಜ್ಮೀರ್, ಮೇವಾರ್ ಪ್ರವಾಹದಲ್ಲಿ ನೊಂದವರಿಗೆ ಸಹಾಯವಾಗಿ ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆಯವರು ೧೨,೦೦೦ ರೂ ಕೊಟ್ಟಿರುವರು.

ಬಿಡುಗಡೆ

ಭಾರತ ರಕ್ಷಣಾ ಶಾಸನದ ೨೬ ನೇ ಸೆಕ್ಷನ್ ಪ್ರಕಾರ ಬಂಧಿಸಲ್ಪಟ್ಟ ಶ್ರೀ ಕೇಶವ ತಲವಾಡೆಕರವರನ್ನು ಬಿಡುಗಡೆ ಮಾಡಲು, ಬೊಂಬಾಯಿ ಸರ್ಕಾರ ಆಜ್ಞೆ ಮಾಡಿದೆ.

ನಾಜಿ ಕೃತ್ಯ

ಪೋಲೆಂಡಿನ ಲುಬ್ಲಿನ್ ಪ್ರಾಂತ್ಯದಲ್ಲಿ ಜರ್ಮನಿ ಸೈನ್ಯದ ೧೮ ಸೈನಿಕರನ್ನು ಪೋಲಿಷ್ ಪ್ರಜೆಗಳು ನಾಶಪಡಿಸಿದರೆಂದು ಜರ್ಮನರು ಆ ಪ್ರಾಂತ್ಯದ ೮೦ ಹಳ್ಳಿಗಳನ್ನು ನಿರ್ಮೂಲ ಮಾಡಿ, ೬೨,೦೦೦ ಜನರನ್ನು ಕೊಲೆಮಾಡಿದರೆಂದು ಹೇಳಲಾಗಿದೆ.

ಫುಟ್ ಬಾಲ್

೮ ನೇ ತಾ|| ಫುಟ್ ಬಾಲ್ ಪಂದ್ಯದಲ್ಲಿ ಸಿಪ್ಪೇ ಸಂಜೆ ಮೈಸೂರು ಪೋಲೀಸ್ ಕ್ಲಬ್ಬಿನವರೂ ಮತ್ತು ಬೆಂಗಳೂರು ಟಸ್ಕರ್ಸ್ ಕ್ಲಬ್ಬಿನವರೂ ಒಂದೊಂದು ಗೋಲು ಹೊಡೆದುದರಿಂದ ಪಂದ್ಯವು ಡ್ರಾ ಆಯಿತು.

ಇದ್ದಿಲು ರವಾನೆಗೆ ಪ್ರತಿಬಂಧಕ

ಬೆಂಗಳೂರು ೧೮

ಮೈಸೂರು ಸಂಸ್ಥಾನದೀಚೆ ಹೊರಕ್ಕೆ ಯಾವ ಬಗೆಯ ಇದ್ದಿಲನ್ನೂ ರವಾನಿಸಬಾರದೆಂದೂ, ಈ ಆಜ್ಞೆಯನ್ನು ಮೀರಿದವರಿಗೆ ೩ ವರ್ಷ ಸಜಾ ಶಿಕ್ಷೆ ಅಥವಾ ದಂಡ, ಅಥವಾ ಇವೆರಡನ್ನೂ ವಿಧಿಸಲ್ಪಡುತ್ತದೆಂದೂ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಬಿಡುಗಡೆ

ಮೈಸೂರು ಕಾಂಗ್ರೆಸ್ ಸಭೆಯ ಸದಸ್ಯರಾದ ಶ್ರೀ ಕೆ. ರಾಘವೇಂದ್ರರಾಯರನ್ನೂ ಮತ್ತು ಇತರ ನಾಲ್ಕು ಮಂದಿ ರಾಜಕೀಯ ಬಂದಿಗಳನ್ನೂ ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಲಾಗಿದೆ.

೪೦೦ ರೂ. ಬಹುಮಾನ

ಶ್ರೀ ಶ್ರೀರಂಗ ಅವರಿಂದ "ಪ ರಳ ಮನೆಗೆ" ಎಂಬ ಪುಸ್ತಕಕ್ಕೆ ದೇವರಾಜ ಬಹದ್ದೂರ್ ನಿಧಿಯಿಂದ ಈ ವರ್ಷ ೪೦೦ ರೂ. ಬಹುಮಾನ ಕೊಡಲಾಗಿದೆ.

ಕಳ್ಳನಿಗೆ ಶಿಕ್ಷೆ

ಅಬ್ದುಲ್ ಸಾಬ್ ಎಂಬುವನು ನೆಲಮಂಗಲದ ತಾಲ್ಲೂಕು ಆಫೀಸಿನಲ್ಲಿ ಅಬ್ದುಲ್ ಸತ್ತಾರನ ಗಡಿಯಾರವನ್ನು ಕದ್ದುದಕ್ಕಾಗಿ ಒಂದು ವರ್ಷ ಕಠಿನ ಶಿಕ್ಷೆ ವಿಧಿಸಲಾಗಿದೆ.

ಆ ಕಾ ಶ ವಾ ಣಿ

ಆಗಸ್ಟ್ ೧೪ ನೇ ಶನಿವಾರ

...೮-೩೦ ಕೀರ್ತನ : ಭಕ್ತ ಮಾರ್ಕಂಡೇಯ : ಸೋಸಲೆ ನಾರಾಯಣದಾಸ್.

ನಗರಗಳಲ್ಲಿ ರೇಷನಿಂಗ್ ಜಾರಿ

ಫ ತರ್ಸ್ಟ ನ ಎಲ್ಲಾ ನಗರಗಳಲ್ಲಿ ರೇಷನಿಂಗ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಭಾರತ ಸರ್ಕಾರವು ನಿರ್ಧರಿಸಿದೆ. ರೇಷನಿಂಗ್ ಪದ್ಧತಿ ... ನಗರದಲ್ಲಿ ರೇಷನಿಂಗ್ ಪದ್ಧತಿ ... ಪ್ರಾಥಮಿಕ ... ಪ್ರತಿನಿಧಿಗಳಿಗೆ ಶಿಕ್ಷಣ ಕೊಡುವ ... ಕೈಗೊಳ್ಳಲಾಗುವುದು.

ಪ್ರವಾಹದ ಹಾವಳಿ

ರಾವಲ್ಪಿಂಡಿ ಜಿಲ್ಲೆಯ ಅನೇಕ ನದಿಗಳಲ್ಲಿ ಪ್ರವಾಹ ಬಂದು ಅನೇಕ ಜನರು, ಜಾನುವಾರುಗಳು ಮರಣಹೊಂದಿರುವುದಾಗಿ ವರದಿಯಾಗಿದೆ. ಸೋಹನ್ ನದೀ ತೀರದಲ್ಲಿದ್ದ ಅನೇಕ ಹಳ್ಳಿಗಳು ಕೊಚ್ಚಿ ಹೋಗಿ ವಿಶೇಷ ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ.

ಕಾಂಗ್ರೆಸ್ ಧ್ವಜ ಹಾರಿಸಿದ್ದಕ್ಕೆ ಶಿಕ್ಷೆ

ಕಳೆದ ೯ ನೇ ತಾ... ದಿನ ಬೊಂಬಾಯಿನಲ್ಲಿ ಸೆಕ್ರೆಟೇರಿಯಟ್ ಭವನವನ್ನು ಪ್ರವೇಶಿಸಿ ಕಾಂಗ್ರೆಸ್ ಧ್ವಜವನ್ನು ಹಾರಿಸಲೆತ್ನಿಸಿದರೆಂದು ಶ್ರೀ ಎಸ್. ಪಿ. ಪಂಡೇಯರ್ ಎಂಬುವರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು. ಕಾಂಗ್ರೆಸ್ ಧ್ವಜವನ್ನು ಹಿಡಿದುಕೊಂಡು ಮೆರವಣಿಗೆ ಹೊರಟಿದ್ದ ಅಪರಾಧಕ್ಕಾಗಿ ೧೦ ಜನರಿಗೆ ತಲಾ ೫ ತಿಂಗಳು ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು.

ಶತ್ರು ಸ್ಥಾನಗಳ ಮೇಲೆ ಧಾಳಿ

ಜರ್ಮನಿಯ ಮುಖ್ಯ ಕೈಗಾರಿಕಾ ಕೇಂದ್ರವಾದ ನ್ಯೂರೆಂಬರ್ಗ್ ಮೇಲೆ ಬ್ರಿಟಿಷ್ ವಿಮಾನಗಳು ಭೀಕರ ಧಾಳಿ ಮಾಡಿ ಬಾಂಬುಗಳ ಸುರಿಮಳೆ ಸುರಿಸಿದುವು.

ಬ್ರಿಟಿಷ್ ಸಿಸಿಲಿಯಲ್ಲಿದ್ದ ಎರಡು ಶತ್ರು ಹಡಗುಗಳ ಮೇಲೆ ಧಾಳಿ ನಡೆಸಿ ೪ ಹಡಗುಗಳನ್ನು ನಾಶಮಾಡಲಾಯಿತೆಂದು ಹೇಳಲಾಗಿದೆ. ಇಟಲಿ ನೌಕಾ ಕೇಂದ್ರವಾದ ನೇಪಲ್ಸ್ ಮೇಲೂ ಧಾಳಿ ಮಾಡಲಾಯಿತು.

ಭಾರತೀ ನಿಯೋಗಕ್ಕೆ ನಿರಾಕರಣೆ

ದಕ್ಷಿಣ ಆಫ್ರಿಕದ ಭಾರತೀಯರ ಹಕ್ಕುಗಳನ್ನು ಕ್ರಮವಾಗಿ ಪಡೆಕ್ಕಿರುವ ನಿರ್ಬಂಧಗಳ ವಿಚಾರವಾಗಿ ಚರ್ಚಿಸಲು ಅಲ್ಲಿನ ಕಾಂಗ್ರೆಸ್ ನಿಯೋಗವನ್ನು ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರವರು ನಿರಾಕರಿಸಿದ್ದಾರೆ. ಈ ವಿಷಯದ ಬಗ್ಗೆ ದಕ್ಷಿಣ ಆಫ್ರಿಕ ಕಾಂಗ್ರೆಸ್ ಸಂಸ್ಥೆಯವರು ಇತರ ರಾಷ್ಟ್ರಗಳೊಡನೆ ಮಾತನಾಡಿಕೊಂಡು ಆ ಮೂಲಕ ಫೀಲ್ಡ್‌ಗೂ ... ಯಿರುವ ಕಾರಣ ಭೇಟಿಕೊಡಲಾಗುವುದಿಲ್ಲವೆಂದು ತಿಳಿಸಿದ್ದಾರೆ.

---

೧೫೦ ನಾಜಿ ಸೇನಾನಿಗಳ ಸಂಹಾರ

ರಷ್ಯಾ ರಣರಂಗದಲ್ಲಿ ಒಟ್ಟು ಇದುವರೆಗೆ ೧೫೦ ಮಂದಿ ಜರ್ಮನ್ ಸೇನಾನಿಗಳ ಸಂಹಾರವಾಗಿದೆಯೆಂದು ಪ್ರಾವ್ದ ಪತ್ರಿಕೆಯು ತಿಳಿಸುತ್ತದೆ. ವೈದ್ಯಕೀಯ ಕಾರಣಗಳಿಗಾಗಿ ಕಳೆದ ೬ ತಿಂಗಳಲ್ಲಿ ರಷ್ಯಾ ರಣರಂಗದಿಂದ ವರ್ಗಾಯಿಸಬೇಕೆಂದು ೫೦ ಸಾವಿರಕ್ಕಿಂತ ಹೆಚ್ಚು ಜರ್ಮನರ ಅರ್ಜಿಗಳನ್ನು ನಿರಾಕರಿಸಲಾಗಿದೆಯೆಂದು ವರದಿಯಾಗಿದೆ.

ಚರ್ಚಿಲ್-ರೂಸ್ವೆಲ್ಟರ ಭೇಟಿ

ಪ್ರೆಸಿಡೆಂಟ್ ರೂಸ್ವೆಲ್ಟರು ಕ್ವಿಬೆಕ್‌ಗೆ ಹೋಗಿ ಮಿ॥ ಚರ್ಚಿಲ್‌ರನ್ನು ಭೇಟಿಮಾಡಿ ಮಾತುಕತೆ ನಡೆಸುವರೆಂದು ವದಂತಿಯಾಗಿದೆ.

ಮಿತ್ರ ವಿಮಾನ ಕಾರ್ಯಾಚರಣೆ

"ಒಂದು ಅಮೇರಿಕ ವಿಮಾನ ನಷ್ಟಹೊಂದಿದರೆ ಅದಕ್ಕೆ ಪ್ರತಿಯಾಗಿ ೯ ಜಪಾನ್ ವಿಮಾನಗಳನ್ನು ಬಲಿ ತೆಗೆದುಕೊಳ್ಳಲಾಗುತ್ತದೆ" ಎಂದು ಚೀಣದಲ್ಲಿರುವ ಅಮೆರಿಕ ವಿಮಾನಪಡೆ ನಾಯಕರು ತಿಳಿಸಿರುವರು. ಕಳೆದ ೧೩ ತಿಂಗಳಿಂದ ಚೀಣಾ ಯುದ್ಧರಂಗದಲ್ಲಿ ೫೪೬ ಶತ್ರು ವಿಮಾನಗಳನ್ನು ನಾಶಮಾಡಲಾಗಿದೆ. ಆ ಅವಧಿಯಲ್ಲಿ ೫೧ ಅಮೆರಿಕ ವಿಮಾನಗಳು ನಷ್ಟವಾಗಿರುವುವೆಂದು ವಿಮಾನ ಪಡೆ ನಾಯಕರು ತಿಳಿಸಿರುವರು.

ಶತ್ರು ನೌಕೆಗಳಿಗೆ ನಷ್ಟ

ನೈರುತ್ಯ ಪೆಸಿಫಿಕ್‌ನಲ್ಲಿರುವ ನೌಕೆಗಳ ಮೇಲೆ ಮಿತ್ರ ವಿಮಾನಗಳು ಅಗಾಧ ಧಾಳಿ ನಡೆಸಿದುವು.

ನ್ಯೂಗಿನಿಯ ಉತ್ತರದಲ್ಲಿರುವ ನ್ಯೂ ಐರ್ಲೆಂಡಿನ ಬಳಿ, ೧ ಕ್ರೂಯಿಸರ್ ಮತ್ತು ೧ ಡಿಸ್ಟ್ರಾಯರ್ 'ಜಪಾನ್ ನೌಕೆ' ಮೇಲೂ ಧಾಳಿ ಮಾಡಿದುವು. ೫೦೦ ಪೌಂಡು ಬಾಂಬುಗಳ ಹೊಡೆತಕ್ಕೆ ಸಿಕ್ಕಿ, ೧ ವ್ಯಾಪಾರಿ ನೌಕೆ ಮುಳುಗಿತು. ನ್ಯೂ ಬ್ರಿಟನ್ ಬಳಿ ೪ ಹಡಗುಗಳು ಮುಳುಗಿದುವು.

---

೩೦೦ ಮಂದಿ ಬಿಡುಗಡೆ

ಆಗಸ್ಟ್ ೯ ನೇ ತಾರೀಖು ದಿನಾಚರಣೆ ಸಂಬಂಧವಾಗಿ ಬೊಂಬಾಯಿ ನಗರದಲ್ಲಿ ಒಟ್ಟು ೩೦೦ ಮಂದಿ ದಸ್ತಗಿರಿ ಮಾಡಿದ್ದವರನ್ನು ಬಿಡುಗಡೆ ಮಾಡಲಾಗಿದೆ.

ರಾಜಕೀ ಬಂದಿಗಳ ಬಿಡುಗಡೆ

ಸಾರ್ವಜನಿಕ ಶಾಂತಿಗೆ ಭಂಗ ತರದಂತಹ ಕಾಂಗ್ರೆಸ್ ಬಂದಿಗಳನ್ನು ಬಿಡುಗಡೆಮಾಡಲು ಪಂಜಾಬ್ ಸರ್ಕಾರ ಆಲೋಚಿಸುತ್ತಿದೆಯೆಂದು ಹೇಳಲಾಗಿದೆ.

Edited, printed and published by A. R. Nagaraja at the Sadhvi Press, D Subbiah Road, Mysore.

The Benares Textile Emporium
(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಬುರುಡಿ ಮತ್ತು ರೆಡಿಮೇಡ್ ಡ್ರೆಸ್ ಇಟ್ಟಿರುವ ಟಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿ ಪಕ್ಕದಲ್ಲಿ ತೆರೆಯಲಾಗಿದೆ. ಬನಾರಸ್ ಜರಿಗೆ ಎಲ್ಲಾ ಹೊಸ ನಮೂನೆಗಳೂ ಸಿಕ್ಕುತ್ತವೆ.

ಈ ದಿನವೇ ಬಂದು ಪರೀಕ್ಷಿಸಿರಿ.

ಶ್ರೀ ಯು ರ ಸಾ ಕ ಯ ರ್ ಕ್ಯಾ ಗಿ

೩೦॥ ೧೮-೧೯-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್. ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ... ಅಕ್ಕಿ ಸಹಾ ದೊರೆಯುತ್ತದೆ.

ನ್ಯೂ ಅಪೇರಾ ಟಾಕೀಸ್

೧೩—೮—೪೩ ರಿಂದ ೩ ನೇ ವಾರ

★ ಸತಿ ಸುಕನ್ಯ ★

(ತಮಿಳು ಭಾಷೆ)

ದಕ್ಷಿಣದೇಶದ ನಟಿ ... ಅಭಿನಯ ... ನೋಡಿ

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಚರ್ಮದ ಮೇಲೆ ಬರುವ ರೋಮ ರಂಧ್ರಗಳನ್ನೆಲ್ಲಾ ಹೊಲಸು ಮೈಧೂಳಿನ ಕೊಳೆಯನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಹರ್ಷವನ್ನುಂಟುಮಾಡುವುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಭಾನುವಾರ ೧೫-೮-೪೩ [ಸಂಚಿಕೆ ೨೩೩

ಸಿಸಲಿಯನ್ನು ಆಕ್ಸಿಸ್ ತ್ಯಜಿಸುತ್ತಿದೆ

ಸಿಸಲಿಯನ್ನು ಜರ್ಮನರು ಖಾಲಿಮಾಡುತ್ತಿರುವರು

ಜಗಳವನ್ನು ತಪ್ಪಿಸಲು ಹೋದ ವಿದ್ಯಾರ್ಥಿಯ ಪ್ರಾಣತ್ಯಾಗ

ಮಹಿಳಾ ಸಮ್ಮೇಳನ

ಮೈಸೂರು ೧೪

ಮೈ॥ ಸಂಸ್ಥಾನದ ಮಹಿಳಾ ಸಮ್ಮೇಳನವು ಬರುವ ಅಕ್ಟೋಬರ್ ೩ನೆಯ ವಾರದಲ್ಲಿ ರಾಜಧಾನಿಯಲ್ಲಿ ನಡೆಯಲಿದೆ. ನವಜೆರ್ ಮಹಾರಾಣಿಯವರು ಅಧ್ಯಕ್ಷತೆ ವಹಿಸುವರೆಂದು ತಿಳಿಯಬರುತ್ತದೆ.

ಅಧಿಕಾರಿಗಳ ನೇಮಕ

ಇತ್ತೀಚಿಗೆ ಸರ್ಕಾರದವರು ಆಹಾರ ಧಾನ್ಯ ದಾಸ್ತಾನದ ಬಗ್ಗೆ ಮಾಡಿದ ಆಜ್ಞೆ ಮೇಲೆ, ರಾಜಧಾನಿಯಲ್ಲಿ ದಾಸ್ತಾನು ಹೇಳಿಕೆಯ ಪಡೆಯಲು, ಜಿಲ್ಲಾಧಿಕಾರಿಗಳು ಎಂಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರುಗಳನ್ನು ನೇಮಿಸಿದ್ದಾರೆ. ಈ ಕೆಳಗಿನ ಜಾಗಗಳಲ್ಲಿ ಬೆಳಗ್ಗೆ ೯ ರಿಂದ ೧೧, ಸಂಜೆ ೫ ರಿಂದ ೭ ಗಂಟೆವರೆಗೆ ಅಧಿಕಾರಿಗಳು ಹೇಳಿಕೆಯನ್ನು ಪಡೆಯುತ್ತಾರೆ. ದೇವರಾಜ ಪೋಲೀಸ್ ಸ್ಟೇಷನ್ (ಶ್ರೀ ಪಿ. ರಾಘವೇಂದ್ರರಾವ್) ನಲವಪ್ಪನ ಛತ್ರ (ಶ್ರೀ ಟಿ ಎನ್. ವೇಣುಗೋಪಾಲ) ಒಂಟಿಕೊಪ್ಪಲು (ಶ್ರೀ ಕೆ. ಎಸ್. ಶ್ರೀನಿವಾಸ ಶೆಟ್ಟಿ), ಕೃಷ್ಣರಾಜ ಪೋಲೀಸ್ ಸ್ಟೇಷನ್ (ಶ್ರೀ. ಡಿ.ಸಿ ಭದ್ರಪ್ಪ) ಫೋರ್ಟ್ ಪೋಲೀಸ್ ಸ್ಟೇಷನ್ (ಶ್ರೀ. ಟಿ. ದೇವರಾಜೆ ಅರಸ್), ಸೀನೀರುಕಟ್ಟೆ ಡಿಪೋ (ಶ್ರೀ. ಪಿ ಪಾರ್ಥಸಾರಥಿ), ಮಂಡಿ ಪೋ॥ ಸ್ಟೇಷನ್ (ಮಿ ಪೀರ್ ಜಗೋರಿ), ಹುಡಿಗಾ ಸರ್ಕಾರೀ ಡಿಪೋ (ಶ್ರೀ ಎಂ ವೆಂಕಟರಾಲು ನಾಯ್ಡು), ಲಷ್ಕರ್ ಪೋಲೀಸ್ಟೇಷನ್ (ಶ್ರೀ. ಹನುಮಂತ ಪ್ರಸಾದ್), ನರಸಿಂಹರಾಜ ಪೋ॥ ಸ್ಟೇಷನ್ (ಮಿ॥ಮಹಮದ್ ಅಬ್ದುಲ್ ವಾಹಬ್), ಹರಿಣಗೆರೆ ಶಿಶು ಸಂರಕ್ಷಣಾ ಕೇಂದ್ರ (ಶ್ರೀ ಬಿ ಕೆಂಪಬೋರೇಗೌಡ), ಸಜರ್‌ಬಾದ್ ಪೋ॥ ಸ್ಟೇಷನ್ (ಶ್ರೀ ಎ ಮಲ್ಲೇಗೌಡ), ಇಟ್ಟಿಗೆ ಗೂಡು ಪ್ರೈಮರಿ ಸ್ಕೂಲು (ಶ್ರೀ. ಎಂ.ಎಸ್. ಗುರುಸಿದ್ದಯ್ಯ) ಚಾಮರಾಜ ಪೋ॥ಸ್ಟೇಷನ್ (ಶ್ರೀ. ಎ. ಅನಂತಯ್ಯಂಗಾರ್), ಸಹಕಾರ ಸಂಘದ ಆಫೀಸು (ಶ್ರೀ. ಅನಂದಸಿಂಗ್), ಮೈನಾರು ಡಿಪೋ ಬಳಿಯಿರುವ ಹಳೇ ಉಕ್ಕಡ (ಶ್ರೀ. ಟಿ ಎಂ. ವರ್ಗೀಸ್), ಜಿಲ್ಲಾಧಿಕಾರಿಗಳ ಆಫೀಸ್ (ಶ್ರೀ. ನಾರಾಯಣ ನರ್ಸಿಂಗ್, ಸಿ. ಎಸ್. ರಾಮಣ್ಣ, ಪಿ. ಸುಬ್ಬರಾವ್, ಆರ್. ಸೀತ ರಾಮಯ್ಯ).

[ಇದು ನಮಗೆ ನೆನ್ನೆ ಸಂಜೆ ೫ ಗಂಟೆಗೆ ತಲುಪಿದ್ದರಿಂದ ಈ ದಿನ ಪ್ರಕಟಿಸಲಾಗಿದೆ]

ವಿದ್ಯಾರ್ಥಿಯ ವಿಷಾದ ಮರಣ

ಸಿಲ್ಹಟ್ ಜಿಲ್ಲೆಯ ಯಬೈಸಿಗಾಂ ಎಂಬ ಹಳ್ಳಿಯಲ್ಲಿ ಎರಡು ಪಕ್ಷದವರಿಗೆ ಬಂದ ಜಮೀನು ಸಂಬಂಧದ ಜಗಳವನ್ನು ನಿವಾರಿಸ ಹಡಿಸಲು ಹೋಗಿ ವಿದ್ಯಾರ್ಥಿಯೊಬ್ಬನು ಗಾಬರಿ ಕಾರ ಏಟು ಮತ್ತು ಭರ್ಜಿ ಇರಿತದಿಂದ ಮೃತಿ ಹೊಂದಿದನು

ಮೈಸ್ತ್ರಾಯರಿಗೆ ಶರತ್‌ಚಂದ್ರಬೋಸರ ಕಾಗದ

ಬಂಧನದಲ್ಲಿರುವ ಶ್ರೀ॥ ಶರತ್ಚಂದ್ರ ಬೋಸರು ವೈಸರಾಯರಿಗೆ ಒಂದು ಕಾಗದವನ್ನು ಬರೆದು ಅವರಲ್ಲಿ ತಮಗೆ ಕೊಡುತ್ತಿರುವ ಚಿಕಿತ್ಸೆಯ ಮತ್ತು ಆಹಾರದ ದುಸ್ಥಿತಿಗಳ ಬಗ್ಗೆ ತಮ್ಮ ಸಲಹೆ ಕೊಟ್ಟಿರುವರೆಂದು ಗೊತ್ತಾಗಿದೆ

ಸಿಸಲಿಯನ್ನು ಆಕ್ಸಿಸ್ ತ್ಯಜಿಸುತ್ತಿದೆ

ಸಿಸಲಿಯನ್ನು ಆಕ್ಸಿಸ್ ಸೈನಿಕರು ತ್ಯಜಿಸುತ್ತಿದ್ದಾರೆಂದು ವರದಿಯಾಗಿದೆ. ಸಿಸಿಲಿಗೂ ಇಟಲಿಗೂ ಮಧ್ಯೆ ಇರುವ ಇಕ್ಕಟ್ಟಾದ ಮೆಸ್ಸೀನ ಕೊಲ್ಲಿಯಲ್ಲಿ ೨೦ ಚಿಕ್ಕ ಹಡಗುಗಳು ಸಂಚರಿಸುತ್ತಿವೆಯೆಂದೂ, ಇವುಗಳಲ್ಲಿ ತಮ್ಮ ಸೈನಿಕರನ್ನೂ, ಸಾಮಾನುಗಳನ್ನೂ ಕಳುಹಿಸುತ್ತಿರುವರೆಂದು ಹೇಳಲಾಗಿದೆ. ಆಕ್ಸಿಸ್ ದಿಕ್ಕಿನಲ್ಲಿರುವ ಸಮುದ್ರ ತೀರ ಪ್ರದೇಶವನ್ನು ಕೂಡ ಉಪಯೋಗಿಸುತ್ತಿರುವರೆಂದು ಗೊತ್ತಾಗಿದೆ

ಕೊಲೋನಿನ ಮೇಲೆ ಧಾಳಿ

ಕೊಲೋನಿನ ಮೇಲೆ [illegible] ನಡೆಸಿದ ಧಾಳಿಯ ಫಲವಾಗಿ ಆ ಕೇಂದ್ರನಗರದ [illegible] ಪ್ರದೇಶದಲ್ಲಿ [illegible] ಬೆಂಕಿ ಬಿದ್ದಿತೆಂದೂ, ೧೦ [illegible] ಸಂಭವಿಸಿರುವುದೆಂದೂ ಪ್ರಕಟವಾಗಿದೆ

ಅಮೇರಿಕನ್ ವಿಮಾನ ಧಾಳಿ

ಜರ್ಮನಿಯ ಮೇಲೆ ಹಗಲು ಬಾಂಬುಗಳ ಉಗ್ರಧಾಳಿ ನಡೆಸಿದವು. [illegible] ನಲ್ಲಿರುವ ಕೃತಕ ರಬ್ಬರ್ ತಯಾರಿಕೆಗಳ ಮೇಲೂ ಮತ್ತು ಜೋನ್ [illegible] ಗಾಢ ಮುತ್ತಿಗೆ ನಡೆಸಿದವು. ಧಾಳಿ ನಡೆಸುವಾಗ ಜರ್ಮನ್ ಫೈಟರುಗಳು ಪ್ರತಿಭಟಿಸಿದರ ಪರಿಣಾಮವಾಗಿ ೨೦ ಫೈಟರುಗಳನ್ನು ಹೊಡೆದು ಕೆಳಗುರುಳಿಸಲಾಯಿತು. ಅನೇಕ ಅಗ್ನಿ ಜ್ವಾಲೆಗಳು ಕಾಣಿಸಿಕೊಂಡು ಹೆಚ್ಚು ನಷ್ಟವುಂಟಾಗಿ ವರದಿಯಾಗಿದೆ

ಉತ್ತರ ಫ್ರಾನ್ಸಿನ [illegible] ವಿಮಾನಗಳು ಧಾಳಿ ನಡೆಸಿದವೆಂದೂ ಆ ಕಾರ್ಯಾಚರಣೆಯಲ್ಲಿ ೨೫ ಮಿತ್ರವಿಮಾನಗಳು ನಷ್ಟವಾಗಿಲ್ಲವೆಂದೂ ಪ್ರಕಟಿಸಲಾಗಿದೆ

ಪ್ರಾರ್ಥನಾ ದಿನಾಚರಣೆ

ಯುದ್ಧದ ೫ನೇ ವರ್ಷದ ಆರಂಭದ ಸೂಚನೆಗಾಗಿ ಭಾರತದಲ್ಲಿ ಸಮಸ್ತ ಕೋಮಿನವರೂ ಸಪ್ಟೆಂಬರ್ ೫ನೇ ತಾರೀಖು ಪ್ರಾರ್ಥನಾ ದಿನಾಚರಣೆ ನಡೆಸಬೇಕೆಂದು ವೈಸರಾಯರು ವಿನಂತಿ ಮಾಡಿಕೊಂಡಿರುವರು

ಜಪಾನೀ ನೌಕಾ ದುರ್ಗತಿ

ಜಪಾನೀ ನೌಕಾ ಪಡೆಯ ಪರಿಸ್ಥಿತಿಯನ್ನು ಚರ್ಚಿಸುತ್ತಾ, "ಡೈಲಿ ಟೆಲಿಗ್ರಾಫ್" ಪತ್ರಿಕೆಯಲ್ಲಿ ಈ ರೀತಿ ಪ್ರಕಟವಾಗಿದೆ:—

"ಈಗಾಗಲೇ ಜಪಾನು ಕ್ರೂಯಿಸರ್ ಮತ್ತು ಅನೇಕ ಡಿಸ್ಟ್ರಾಯರುಗಳನ್ನು ಕಳೆದುಕೊಂಡಿದೆ. ಇದನ್ನು ನೋಡಿದರೆ ಇಟಲಿಗೆ ಬಂದ ದುರ್ಗತಿಯೇ ಜಪಾನೀ ನೌಕಾ ಪಡೆಗೂ ಬರಲಿರುವಂತೆ ಕಾಣಬರುತ್ತದೆ. ಜಪಾನು ೨೩ ಕ್ರೂಯಿಸರ್, ೧೧೩ ಡಿಸ್ಟ್ರಾಯರ್‌ಗಳೊಡನೆ ಯುದ್ಧವನ್ನಾರಂಭಿಸಿತು. ಯುದ್ಧದಲ್ಲಿ ಈಗ ೬೪ ಯುದ್ಧ ನೌಕಾ ಬಲವೆಂದರೆ ೨೦ ಕ್ರೂಯಿಸರ್ ಮತ್ತು ೬೦ ಡಿಸ್ಟ್ರಾಯರ್ ನೌಕೆಗಳು ಮಾತ್ರ. ಅಮೇರಿಕಾ ನೌಕಾ ಪಡೆಯಂತೆಯೇ ಜಪಾನೂ ಹಡಗುಗಳನ್ನು ಕಟ್ಟುತ್ತಿದೆ. ಆದುದರಿಂದ ಜಪಾನೀ ನೌಕಾಪಡೆಗೆ ಆತ್ಮಹತ್ಯಾಕಾಲ ಸನ್ನಿಹಿತವಾಗಿದೆ"

ಪಶ್ಚಿಮ ಆಫ್ರಿಕಾ ಪತ್ರಿಕಾ ಕರ್ತರು

ಪಶ್ಚಿಮ ಆಫ್ರಿಕದಿಂದ ಬ್ರಿಟನ್ನಿಗೆ ಬಂದು ಪತ್ರಿಕೋದ್ಯೋಗಿಗಳ ತಂಡದ ಒಂದಿಬ್ಬರ ನಾಯಕರು "ನಮಗೆ ಪ್ರಜಾಸತ್ತೆಯೊಂದರ ಆಸೆ, ಅದ್ದರಿಂದಲೇ ಈ ಸಮರದಲ್ಲಿ ನಾವು ಪೂರ್ಣವಾಗಿ ಮಿತ್ರಪಕ್ಷ ವಹಿಸಿದ್ದೇವೆ" ಎಂದು ತಿಳಿಸಿರುವರೆಂದು ವರದಿಯಾಗಿದೆ

ಮಹಾತ್ಮರ ಬಿಡುಗಡೆ ಎಂದು ?

ಮಹಾತ್ಮ ಗಾಂಧಿಯವರ ಬಿಡುಗಡೆಯು ಬಗೆಹರಿಸದೆ [illegible] ಎಂದು ಪಂಡಿತ [illegible] ವಿಸ್ಮಯಪಟ್ಟಿರುವರು.

ಆಕಾಶವಾಣಿ

[illegible] ಸರ್ ಸಿ. ವಿ. [illegible] 'ಆಕಾಶವಾಣಿ' [illegible] ವಿಷಯದ ಮೇಲೆ ಭಾಷಣ ಮಾಡುವರು.

ಸುಳ್ಳುಸುದ್ದಿ ಹರಡಿದ ಪಾತ್ರಧಾರರಿಗೆ ಶಿಕ್ಷೆ

ಬೆಂಗಳೂರು ೧೩

ಸ್ಥಳೀಯ ಹೋಟೆಲೊಂದರಲ್ಲಿ [illegible] ನಡೆದು ಒಬ್ಬ ಸಿಪಾಯಿಯು ಕೊಲೆಯಾದನೆಂದು ಸುಳ್ಳುಸುದ್ದಿ ಹರಡಿದ ಅಪರಾಧಕ್ಕಾಗಿ [illegible] ದಿನ ಪತ್ರಿಕೆಯೊಂದರ [illegible] ಸ್ಪೆಷಲ್ ಕೋರ್ಟು ದಂಡ ವಿಧಿಸಲಾಯಿತು. ದಂಡ ಕೊಡದಿದ್ದರೆ ಒಂದು ತಿಂಗಳ ಸಾದಾ ಸಜ ವಿಧಿಸಲಾಗಿದೆ.

ಮೊಕದ್ದಮೆ ಹೂಡಲಾಗಿದೆ

ಪಬ್ಲಿಕ್ ಸರ್ವೀಸ್ ಕಮಿಷನರ್ ರವರ ಆಫೀಸಿಗೆ ಸೇರಿದ [illegible] ಗುಮಾಸ್ತ ಶ್ರೀ॥ [illegible] ಕೃಷ್ಣ ಅರ್ಸ್, ರಾಮರಾಜ ಅರ್ಸ್ ಮತ್ತು [illegible] ಎಂಬುವರು ಪಡೆದ [illegible] ಸೆಂಟ್ರಲ್ ಪೋಲೀಸರು [illegible] ಮೊಕದ್ದಮೆ ಹೂಡಿರುತ್ತಾರೆ.

ಪೌರ ಸಭಾ ಚುನಾವಣೆ

ಬೆಂಗಳೂರು ಪೌರ ಸಭೆಯ ಚುನಾವಣೆಯು ಸೆಪ್ಟೆಂಬರ್ [illegible] ನಡೆಯುವುದೆಂದೂ, [illegible] ನವೆಂಬರ್ ೧೧ನೇ ತಾರೀಖು ಎಂದು ಸರ್ಕಾರದ ಆಜ್ಞೆಯಾಗಿದೆ.

ಅನೈತಿಕ ವ್ಯವಹಾರಕ್ಕೆ ಶಿಕ್ಷೆ

[illegible] ಮತ್ತು [illegible] ಎಂಬುವರು [illegible] ಅತ್ಯಾಚಾರಗಳಿಗೆ ಎಳೆಯುತ್ತಿದ್ದರೆಂಬ ಅಪಾದನೆಯಮೇಲೆ ಸಿಟಿ ಮ್ಯಾಜಿಸ್ಟ್ರೇಟರು ತಲಾ ಒಂದು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಲೇಷ್ಲರ್ ಕಾರ್ಡುಗ ಮೊಕದ್ದಮೆ

ಬೆಂಗಳೂರು ಸಿಟಿಯ ಮೈಸೂರು ಕೆಫೆ ಮಾಲೀಕರಾದ [illegible] ಮತ್ತು ಇನ್ನೂ ಮೂವರ ಮೇಲೆ ಜಿಲ್ಲಾಧಿಕಾರಿಗಳ ಆಜ್ಞೆಗೆ ವಿರುದ್ಧವಾಗಿ ಗೊತ್ತಾದ ಕಾಲ [illegible] ಡಿಕ್ಲರೇಷನ್ ಕೊಡದಿದ್ದುದಕ್ಕೆ ಭಾರತ ರಕ್ಷಣಾ ಶಾಸನದ ಪ್ರಕಾರ ನಗರ ನ್ಯಾಯಾಧೀಶರ ಮುಂದೆ ಮೊಕದ್ದಮೆ ನಡೆಯುತ್ತಿದೆ.

ಫಿಲಿಪ್ಪೈನಿಗೆ ಸ್ವಾತಂತ್ರ್ಯ

ಜಪಾನ್ [illegible] ಫಿಲಿಪ್ಪೈನಿಗೂ ಯೋಗ್ಯ ಸ್ಥಾನ ಕೊಡುವುದಾಗಿ ಜಪಾನ್ ಮುಖ್ಯಮಂತ್ರಿ [illegible] ಬಗ್ಗೆ ಭಾಷಣದಲ್ಲಿ ತಿಳಿಸಿದ್ದಾರೆ.

೧,೧೦೦ ಬಿಲ್ಡಿಂಗುಗಳು ಪತ್ತೆಯಿಲ್ಲ

[illegible] ಅನೇಕ ಬೀದಿಗಳಲ್ಲಿ [illegible] ೧,೧೦೦ ಬಿಲ್ಡಿಂಗುಗಳು [illegible] ಪತ್ತೆ [illegible] ತೋರಿದರು.

ದಪ್ಪ ಸೇರೆ ಸೈನಿಕರು

[illegible] ಸೈನಿಕರನ್ನು ಹಿಡಿಯಲಾಗಿದೆ [illegible] ವರದಿಯಾಗಿದೆ

ಪ್ರಕಟಣೆ

[illegible]

ವ್ಯವಸ್ಥಾಪಕ.

ಸಂಗೀತ ಶಿಕ್ಷಣ ಅವಶ್ಯಕತೆ

ಸತಿ ತಂಬೂಚೆಟ್ಟಿಯವರ ಭಾಷಣ

ಮೈಸೂರು, ೧೪

ಸಂಘಸೆಗೂಡಿನ ಆಶ್ರಯ ದಲ್ಲಿ ನವರಾ ಜನ ವಾರ್ಷಿಕೋತ್ಸವವು ಈ ದಿನ ಸಂಜೆ ರಸಿಡೆನ್ಸಿ ಬಂಗಲೆಯಲ್ಲಿ ಅತಿ ವಿಜೃಂಭಣೆ ಯಿಂದ ನೆರವೇರಿಸಲ್ಪಟ್ಟಿತು. ಶ್ರೀಮನ್ಮ ಹಾರಾಜರವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಟಿ. ತಂಬೂಚೆಟ್ಟಿಯವರ ಧರ್ಮಪತ್ನಿ ಯವರಾದ ಶ್ರೀಮತಿ ಟಿ. ತಂಬೂಚೆಟ್ಟಿಯ ವರು ಅಧ್ಯಕ್ಷತೆ ವಹಿಸಿದ್ದರು.

ಸಮಾಜದ ಅಧ್ಯಕ್ಷಿಣಿಯವರು ಸ್ವಾಗತ ಬಯಸಿ, ಸಮಾಜದ ಕಾರ್ಯಕ್ರಮ ವನ್ನು ವಿವರಿಸಿದರು.

ನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿದರು.

'ಈ ಪ್ರಮುಖ ನಗರದಲ್ಲಿ ಮಹಿಳೆಯರ ಅಭ್ಯುದಯಕ್ಕಾಗಿ ಕಲೆಗಳಲ್ಲಿ ಆಸಕ್ತಿ ವಹಿಸ ಬೇಕೆಂದು ಜೊತೆಗೆ ಅವರು ತಮ್ಮ ಜ್ಞಾನ ಕ್ಕಾಗಿ ವಿದ್ಯಾಭ್ಯಾಸ ಅಂಗವಾಗಿ ಈ ದಿವ್ಯ ಗಾನ ಕಲೆಯನ್ನು ಕಲಿಸಿ ಕೊಡುವ ಸಮಾಜವಾದ ಇಂಥ ಒಂದು ಸಮಾಜವಿರುವುದು ನನಗೆ ನಿಜಕ್ಕೂ ಆನಂ ದವನ್ನುಂಟು ಮಾಡಿದೆ.

ಎಲ್ಲ ಸಾಧನೆಗಳಲ್ಲಿ ನ ಮ್ಮ ಗಾನ ಕಲೆಗೆ ಅತ್ಯುನ್ನತ ಸ್ಥಾನವನ್ನು, ಗೌರವವನ್ನೂ ಕೊಡುತ್ತೇನೆ. ಗಾನವು ನಮ್ಮ ಮನಸ್ಸ ನ್ನೂ, ಆಲೋಚನೆಗಳನ್ನೂ, ಕ್ರಿಯಾಶಕ್ತಿ ಯನ್ನೂ ಪವಿತ್ರಗೊಳಿಸಿ ನಮ್ಮನ್ನು ನಾದ ಬ್ರಹ್ಮನ ಸನ್ನಿಧಿಗೆ ಒಯ್ಯುವ ಒಂದು ಸ್ವ ರ್ಗೀಯ ಸಾಧನವಾಗಿರುತ್ತದೆ. ಗಾನವ ನ್ನು ಪ್ರೀತಿಸದವರು ಯಾರು? ಎಂಥ ಅನಾಗರಿಕ ಹೃದಯಗಳನ್ನಾಗಲೀ ಪರವ ಶಗೊಳ್ಳುವ, ಕಲ್ಲುಬಂಡೆಗಳನ್ನು ಮೃದು ಗೊಳಿಸುವ ಶಕ್ತಿ ಗಾನಕ್ಕಿದೆ; ಪ್ರಬಲವಾದ ಮ ರಗಳನ್ನು ಬಗ್ಗಿಸುವ ಅಪೂರ್ವ ಮಹಿಮೆ ಗಾನಕಲೆಗೆ ಇರುತ್ತದೆಂದು ಇಂಗ್ಲೀಷ್ ಕ ವಿ ಹೇಳಿದ್ದಾನೆ ಮ್ಯಾಕ್ಸಿಮಿಲಿಯನ್ ಗಾನವು ಸೃಷ್ಟಿಯ ಮುಖ್ಯವಾದುದೆಂದೂ, ಜನ್ನ ತ್ಯಾಗಂಥದ ಪ್ರಾರ್ಥನೆಯೆಂದೂ ಮತ್ತು ಇದೇ ಜಗತ್ತೇ ಮುಂದೆ ಎಂದಾದರೊಂದು ದಿನ ಮೋಕ್ಷವಿತ್ತು ಪಡೆಯಬೇಕಾದ ದಿವ್ಯಗಾ ನದ ಒಂದು ಚಿಹ್ನೆಯೆಂದೂ' ಕರೆದಿದ್ದಾನೆ.

ಆದ್ದರಿಂದ ನನ್ನ ಸ್ವಾನುಭವದಿಂದಲೂ ನಾನು ನಿಮಗೆ ಒತ್ತಿ ಹೇಳುವುದೇನೆಂದರೆ, ತಾಯಿತಂದೆಗಳು, ಹೆಣ್ಣು ಮಕ್ಕಳಿಗೆ ಸಂ ಗೀತ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಬಹು ಉತ್ಸಾಹವನ್ನು ವಹಿಸಬೇಕೆಂದು ಏಕೆಂದರೆ, ಅದು ಪ್ರತಿಯೊಬ್ಬ ಹೆಣ್ಣುಮ ಗಳೂ ಹೊಂದಬೇಕಾದ ಒಂದು ವಿ ಶೇಷ ಸಾಧನೆಯಾಗಿರುವುದಲ್ಲದೆ, ಅ ಲ್ಲದೆ ಅದು ಇಂದಿನ ಮತ್ತು ಮುಂದಿನ ಜೀವ ನದಲ್ಲಿ ಸುಖಸಂತೋಷಗಳನ್ನು ಪಡೆಯಲು ಸಹಾಯಕವಾಗುತ್ತದೆ.

ಈ ವಿಷಯ ನನ್ನ ಕರ್ತವ್ಯ. ಸಮಾಜದ ಹಿರಿಯರಾಗಿ ಬಂದಿರುವ ನಿಮಗೆ ಈ ಸಂದೇಶವನ್ನು ಕೊ

ಡಲು ಬಯಸುತ್ತೇನೆ. ನಿಮ್ಮಲ್ಲಿ ಅನೇಕರು ಬಹುಕಾಲದಿಂದ ತಮ್ಮ ಹೆಣ್ಣು ಮಕ್ಕಳಿಗೆ ದೇಶೀಯ ಸಂಗೀತದ ಜೊತೆಗೆ, ಪಾಶ್ಚಾತ್ಯ ಸಂಗೀತವನ್ನು ಕಲಿಸಬೇಕೆಂದು ನಾನು ಸೂಚಿಸುತ್ತೇನೆ. ಹಾಗೆ ಮಾಡುವುದರಿಂದ ಕಲಿಯುವ ದೊರೆಯಬಹುದಾದ ಆನಂದ ದ ಜೊತೆಗೆ ಪಾಶ್ಚಾತ್ಯಸಂಗೀತದ ಧ್ವನಿ ಸಾಮರಸ್ಯದೊಡನೆ ಪೌರಸ್ತ್ಯ ಸಂಗೀತದ ನ ಯವಾಧುರ್ಯವೂ ಸಂಗಮಿಸಿ ನಮ್ಮ ಗಾ ನಸಂಪತ್ತು ವಿಕಾಸಗೊಂಡು ಪುನರುಜ್ಜೀವಿ ತವಾಗುತ್ತದೆ.

ಇಂಥ ಒಂದು ಸಾಮಾಜಿಕ ಸಮ್ಮೇಳ ದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದು ಕೊಂಚ ಸಾಹಸಕರವಾಗಿ ತೋರಿದರೂ, ಒಂದೆರಡು ವಿಷಯಗಳ ಕಡೆಗೆ ನಿಮ್ಮ ಗಮ ನವನ್ನು ಸೆಳೆಯಲು ಬಯಸುತ್ತೇನೆ. ನಾ ನು ಪಾಶ್ಚಾತ್ಯ ದೇಶಗಳಲ್ಲಿ ಕೈಗೊಂಡ ಪ್ರವಾಸಗಳಲ್ಲಿ ಅಲ್ಲಿನ ಜನಾಂಗಗಳು ಸಂಗೀತ ಶಾಸ್ತ್ರಕ್ಕೆ ಕೊಟ್ಟಿರುವ ಅ ಗ್ರಸ್ಥಾನದ ಪ್ರಾಶಸ್ತ್ಯ ಮತ್ತು ಅದರ ಬೆಳವಣಿಗೆಗೆ ಕೊಡುತ್ತಿರುವ ಶ್ರದ್ಧೆಯಿಂದ ಕೂಡಿದ ಗಮನ ಇವೆರಡೂ ನನಗೆ ಖಚಿತ ವಾಗಿ ತೋರಿಬಂದವು. ಸಂಗೀತ ಶಾಸ್ತ್ರ ಧ ನ ಪಿನ್ನಿನ ಹೆಣ್ಣು ಮಕ್ಕಳ ಶಾಲೆಗಳಿಗಾಗಲೀ ಸಂಸ್ಥೆಗಳಿಗೇ ಆ ದೇಶಗಳಲ್ಲಿಲ್ಲ. ಮ ಕ್ಕಳುಗಳು ಕೇವಲ ೬ನೇ ವಯಸ್ಸಿನಲ್ಲೇ ಅವಳ ಮನೋಧರ್ಮಕ್ಕನುಸಾರವಾಗಿ ಬಾ ಯಿ ಹಾಡುಗಾರಿಕೆಯನ್ನಾಗಲೀ, ವಾದ್ಯಗ ಳನ್ನು ಬಾರಿಸುವುದನ್ನಾಗಲೀ ಕಲಿಯಲು ಮೊದಲುಮಾಡಿ, ೧೮ ನೇ ವಯಸ್ಸು ತುಂ ಬುವುದರೊಳಗಾಗಿ ಸಂಗೀತ ಶಾಸ್ತ್ರದಲ್ಲಿ ಪ್ರಾವೀಣ್ಯ ಪತ್ರಿಕೆಯನ್ನು ಪಡೆಯುತ್ತಾಳೆ. ಪ್ರತಿಯೊಂದಿನ ಎಲ್ಲಾ ಶಾಲೆಗಳಲ್ಲೂ, ಸಂ ಗೀತ ಸಂಸ್ಥೆಗಳಲ್ಲೂ, ಸಂಗೀತ ಶಾಸ್ತ್ರದ 'ಡಿಪ್ಲೊಮಾ'ಗಳನ್ನು ಕೊಡುತ್ತಾರೆ. ಅಲ್ಲದೆ ಪ್ರ ಪಂಚದ ಎಲ್ಲಾ ಭಾಗಗಳಲ್ಲೂ ಗೌರವಿಸ ಲ್ಪಡುತ್ತವೆ. ಇತ್ತೀಚೆಗೆ ನಮ್ಮ ಭರತ ಖಂಡದಲ್ಲೂ ಸಂಗೀತ ಶಾಸ್ತ್ರಾಭ್ಯಾಸದ ವಿ ಚಾರದಲ್ಲಿ ಜನರು ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಇದು ಆದಾ ಜನಕ ವಾದ ಒಂದು ಶುಭಸೂಚನೆಯಾಗಿದೆ. ಆ ದರೆ ಈ ಅಭಿರುಚಿಗೆ ಒಂದು ಸಂತತವಾದ ಪ್ರೋತ್ಸಾಹಶಕ್ತಿ ಇರಬೇಕು. ಕುಗ್ಗದ ಉತ್ಸಾಹವಿರಬೇಕು. ಜಾಣ್ಮೆಯಿಂದ ಆಳ ವಡಿಸಿದ ವ್ಯವಸ್ಥೆ ಇರಬೇಕು. ನಮ್ಮ ದೇ ಶದ ನಾನಾ ಕೇಂದ್ರಗಳಲ್ಲಿ ಸಂಗೀತ ವಿದ್ಯಾ ಲಯಗಳು ಅಧಿಕಸಂಖ್ಯೆಯಲ್ಲಿ ಹೆಚ್ಚಬೇ ಕೆಂದೂ, ಹೆಣ್ಣುಮಕ್ಕಳಿಗೆ ಅವರ ವಿದ್ಯಾ ಭ್ಯಾಸದ ಪ್ರಮುಖ ಅಂಗವಾಗಿ ಶೀಘ್ರವೇ ಸಂಗೀತ ಅಭ್ಯಾಸವು ನಡೆಯಬೇಕೆಂದು ನಾನು ಹೃತ್ಪೂರ್ವಕವಾಗಿ ಬಯಸುತ್ತೇನೆ. ಇಂದಿನ ಸ್ಪರ್ಧೆಯಲ್ಲಿ ಜಯಶೀಲರಾಗಿ ಬ ಹುಮಾನಗಳನ್ನು ಪಡೆದ ಹೆಣ್ಣುಮಕ್ಕಳ ಕಾಂತಿಯುಕ್ತವಾದ ಮುಖಗಳನ್ನು ನೋಡಿ ನಾನು ತುಂಬಾ ಹರ್ಷಗೊಂಡಿದ್ದೇನೆ ಮತ್ತು ನಾನು ಅವರನ್ನು ಅಭಿನಂದಿಸು

ತ್ತೇನೆ. ಅವರ ಇಂದಿನವಿಜಯವು ಮುಂದೆ ಅವರು ಗಾನ ಕಲೆಯನ್ನು ಪ್ರೌಢವಾಗಿ ಅ ಭ್ಯಾಸ ಮಾಡಿ ತಮ್ಮ ತಮ್ಮ ಅಭಿರುಚಿ ಮತ್ತು ಶಕ್ತಿಗೆ ಅನುಸಾರವಾಗಿ ಪೂರ್ಣತೆ ಯನ್ನು ಸಾಧಿಸಲು ಸಾಧಕವಾಗಿ ಪ್ರಕಾಶ ಕಾಗಲೆಂದೂ, ಆ ಗುರಿಯನ್ನು ಅವರು ಮ ರೆಯದಿರಲೆಂದೂ ಹೇಳ ಬಯಸುತ್ತೇನೆ. ಬಹುಮಾನಗಳನ್ನು ಪಡೆಯದ, ಇತರರೂ ತಮ್ಮ ಪ್ರಯತ್ನವನ್ನು ಮಧ್ಯದಲ್ಲಿ ಕೈಬಿಡ ಬಾರದೆಂದೂ, ಸಂತತ ಪ್ರಯತ್ನಕ್ಕೆ ಪ್ರತಿ ಫಲವಿದ್ದೇಯಿರುವುದೆಂದೂ ದೃಢ ಮನಸ್ಸಿ ನಿಂದ ಸಂಗೀತಾಭ್ಯಾಸವನ್ನು ಮುಂದುವರಿ ಸುವರೆಂದು ನಂಬಿರುತ್ತೇನೆ.

ನೀವು ನನ್ನನ್ನು ಬಹಳ ಆದರದಿಂದ ಸ್ವಾಗತಿಸಿದ್ದಕ್ಕಾಗಿ ನಿಮಗೆ ನಾನು ತುಂಬಾ ಕೃತಜ್ಞಳಾಗಿದ್ದೇನೆ. ಈ ಸಂಜೆ ಈ ಮ ಹೋತ್ಸವದಲ್ಲಿ ನಿಮ್ಮೊಂದಿಗೆ ಕಳೆದಿರುವುದು ಸಹಜವಾದ ಆನಂದವನ್ನುಂಟುಮಾಡಿದೆ. ನಿಮ್ಮ ಗಾಯನ ಸಮಾಜಕ್ಕೆ ವಿಜಯಾಭ್ಯು ದಯಗಳನ್ನು ಬಯಸುವುದಲ್ಲದೆ, ಸಮಾ ಜವು ಚೆನ್ನಾಗಿ ಕೆಲಸಮಾಡಿ ಗಾನಕಲೆಯ ಜ್ಞಾನ ಸಂಪತ್ತನ್ನು ಜನರಿಗೆ ದೊರಕಿಸಿ ಕೊಡಲೆಂದೂ, ಈ ಊರಿನ ತಾಯಂದಿರಿ ಗೂ, ಮತ್ತು ಹೆಣ್ಣುಮಕ್ಕಳಿಗೂ ಸಮಾ ಜವು ತುಂಬ ಪ್ರಯೋಜನಕಾರಿಯಾದ ಸಂ ಸ್ಥೆಯಾಗಿ ಪರಿಣಮಿಸಲೆಂದೂ ಹಾರೈಸು ತ್ತೇನೆ."

ಜರ್ಮನ್ ಧಾಳಿಯಿಂದ ೧೬೭ ಮಂದಿ ಮರಣ

ಜುಲೈ ತಿಂಗಳಲ್ಲಿ ಜರ್ಮನರು ಬ್ರಿಟನ್ನಿ ನ ಮೇಲೆ ಧಾಳಿ ಮಾಡಿದ ಪರಿಣಾಮವಾ ಗಿ ೧೬೭ ಮಂದಿ ಸತ್ತರೆಂದೂ, ಇತರ ಸ್ವ ಕೆ ೧೧೮ ಮಂದಿ ಹೆಂಗಸರು ಮಕ್ಕಳೆಂದು ಗೊತ್ತಾಗಿದೆ.

ಜಪಾನೀ ಹಡಗುಗಳ ಮೇಲೆ ಧಾಳಿ

ನ್ಯೂ ಡಿಲ್ಹಿ.— ಜಯವದಲ್ಲಿ ಅನೇಕ ನ್ಯ ಲ್ಟಿ ಬೈರೋಸೋ ಬಂದರನ್ನು ಸವೀಪಿಸಿ ನೈರುತ್ಯ ಪೆಸಿಫಿಕ್ ಸಾಗರದಲ್ಲಿ ಮತ್ತು ಜಪಾನೀ ಹಡಗುಗಳ ಮೇಲೆ ಧಾಳಿ ಮಾಡಲಾಯಿತು. ಸೆಲೆಬೆಸ್, ಟಿಮಾರು ಸಾಲಮಾವಗಳಲ್ಲಿರುವ ಶತ್ರು ಸ್ಥಾನಗಳ ಮೇಲೂ ಬಾಂಬುಗಳನ್ನು ಹಾಕಲಾಯಿತು.

ಟಿ. ಸಿ. ನಟರಾಜ್ ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇ ಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔ ಷಧಿಗಳೆಲ್ಲವೂ ಸದಾ ದೊರೆಯುತ್ತವೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ಮನೆ, ಜಮೀನು ಮತ್ತು ಷೇರು

ಕೊಳ್ಳುವವರೂ, ಮಾರುವವರೂ ನಮ್ಮಲ್ಲಿ ವಿಚಾರಿಸಿ.

ಬಿ. ಆರ್. ಲಕ್ಷ್ಮಣಶೆಟ್ಟಿ

ದಿ ಎಸ್ಟೇಟ್ ಬ್ರೋಕರೇಜ್ ಹೌಸ್, ಸಯ್ಯಾಜಿರಾವ್ ರಸ್ತೆ, ಮೈಸೂರು.

The Benares Textile Emporium

(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಜುಬಿಲಿ ಮತ್ತು ರೆಡಿಮೇಡ್ ಡ್ರೆಸ್ ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗ ಡಿಯಲ್ಲಿ ತೆರೆಯಲಾಗಿದೆ. ಬನಾರಸ್ ಬೆಲೆಗೇ ಎಲ್ಲಾ ಹೊಸ ನಮೂನೆಯಲ್ಲಿ ಸಿಕ್ಕುತ್ತವೆ.

ಈ ದಿನವೇ ಬಂದು ಪರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸದಾ ದೊರೆಯುತ್ತವೆ.

ಚಿನ್ನ, ಬೆಳ್ಳಿ ಒಡವೆಗಳಿಗೆ ಬೆಳ್ಳಿಯ ಪಾತ್ರೆಗಳಿಗೆ

ಲಾಲ್

ಅಶೋಕ ರೋಡ್ (ದೊಡ್ಡಪೇಟೆ) ಮೈಸೂರು

ಸಂಪುಟ ೨] ಸೋಮವಾರ ೧೬-೮-೪೩ [ಸಂಚಿಕೆ ೨೬

ರೋಂ ನಗರ ನಿರ್ಜನ ಪ್ರದೇಶ

ಮಿತ್ರರ ದ್ವಿತೀಯ ರಣರಂಗ ಶೀಘ್ರದಲ್ಲಿ ಆರಂಭ

ಖಾರ್ಕೋವ್ ನಗರದ ಬೀದಿಗಳಲ್ಲಿ ಕದನ

ಕಳ್ಳನಿಗೆ ಶಿಕ್ಷೆ

ಮೈಸೂರು ೧೬

ರಾಜಧಾನಿಯ, ಶ್ರೀ ಕೃಷ್ಣಾ ಸಿನಿಮಾ ಮಂದಿರದ ಹತ್ತಿರ ಮಹಮದ್ ಗೌಸ್ ರವರ ಅಂಗಡಿಯಿಂದ ೧ ಕಬ್ಬಿಣದ ಆ... ಕದ್ದನೆಂದು, ವೆಂಕಟರಾಮ್ ರವರಿಗೆ ಸಿಟಿ ನ್ಯಾಯಾಧೀಶರು ೬ ತಿಂಗಳ ಕಠಿನ ಶಿಕ್ಷೆ ವಿಧಿಸಿದರು. ಆರಂಭದಲ್ಲಿ ... ಸಲ ಶಿಕ್ಷೆ ಆಗಿತ್ತು.

ಹುಲಿ ಹಾವಳಿ

ನಂಜನಗೂಡು ತಾಲ್ಲೂಕು ಹೊನ್ನೆ... ದಲ್ಲಿ ೧೧-೮-೪೩ ನೇ ದಿವಸ ದನಗಳು ಮೇಯುತ್ತಿರುವಾಗ್ಗೆ, ಒಂದು ಹುಲಿಯು ದನಗಳ ಮೇಲೆ ಬಿದ್ದು ನಂತರ ಅಲ್ಲಿದ್ದ ... ಗೌಡನ ಮೇಲೆ ಬಿದ್ದು ಅವನಿಗೆ ... ಗಾಯಗಳನ್ನುಂಟುಮಾಡಿತು. ಅವನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ.

ನೂ|| ಕರ್ನಾಟಕ ಸಂಘ

ರಾಜಧಾನಿಯ ಹೊಯ್ಸಳ ಕರ್ನಾಟಕ ಸಂಘವು ಹುಣ್ಣಿಮೆಯ ದಿವಸ ಸಹಕಾರಭವನದಲ್ಲಿ ... ನಹಳ್ಳಿ ಶ್ರೀ ನಾರಾಯಣ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಒಂದು ಸಂಘವನ್ನು ಸ್ಥಾಪಿಸಿದರು. ಶ್ರೀ ಎನ್. ... ನಾರಾಯಣರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಕೆ. ಗೋಪಾಲಕೃಷ್ಣ ಶಾಸ್ತ್ರಿಗಳನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಜಿ. ಆರ್. ರಾಮಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

ಸಂಘದ ಅಭಿವೃದ್ಧಿಗಾಗಿ ಒಟ್ಟು ೧೦೦೦ ... ಚಂದಾ ಹಣ ವಸೂಲಾಯಿತು.

ಠಾಗೂರ್ ದಿನಾಚರಣೆ

ಮಿತ್ರ ಸಂಘದವರು ನಿನ್ನೆಯ ಸಂಜೆ ಠಾಗೂರ್ ದಿನಾಚರಣೆಯನ್ನು ಶ್ರೀ|| ಎಂ. ... ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಸಂಘದ ಸದಸ್ಯರುಗಳಾದ ಶ್ರೀ|| ... ಕೆ. ವಿ. ರಂಗರಯ್ಯಂಗಾರ್, ಟಿ. ರಾಮಚಂದ್ರರಾವ್, ಎ. ಶ್ರೀನಿವಾಸನ್, ವೈ. ... ವೆಂಕಟೇಶ್ವರಯ್ಯಂಗಾರ್, ಎಸ್. ದಕ್ಷಿಣಾಮೂರ್ತಿ, ಬಿ. ಆಂಜನೇಯುಲು ಇವರುಗಳು ಕವಿಗಳ ವಿಚಾರ ಕುರಿತು ಮಾತನಾಡಿದರು.

ಮಾಧ್ವ ಸಂಘ

ನೇಟ್ಕಲ್ಲಿನ ಸಂಘದವರು ಶ್ರೀ ರಾಘವೇಂದ್ರ ಸ್ವಾಮಿಗಳ ಪುಣ್ಯ ದಿನದ ಪ್ರಯುಕ್ತ ೧೮-೮-೪೩ ರ ಸಾಯಂಕಾಲ ೬-೩೦ಕ್ಕೆ ಉತ್ತರಾದಿ ಮಠದಲ್ಲಿ ಮಧುರೆಯ ಶ್ರೀ ಶ್ರೀನಿವಾಸಾಚಾರ್ಯರು "ಮಂತ್ರಾಲಯ ಪ್ರಭು ಶ್ರೀ ..." ಎಂಬುದರ ಮೇಲೆ ಉಪನ್ಯಾಸ ಮಾಡುವರು.

ಫುಟ್‌ಬಾಲ್

ಅಖಿಲ ಭಾರತ ಫುಟ್‌ಬಾಲ್ ಪಂದ್ಯದಲ್ಲಿ ನಿನ್ನೆ ಸಂಜೆ ಮೈಸೂರು ಟ್ರೂಪಿನವರು ಬೆಂಗಳೂರು, ... ಟೀಮನ್ನು ೨ ಗೋಲುಗಳಿಂದ ಸೋಲಿಸಿದರು. ... ಟೀಮಿನವರು ಮೈಸೂರು ... ರವರ ... ೩ ಗೋಲುಗಳಿಂದ ಸೋಲಿಸಿದರು.

ರೋಂ ನಗರ ನಿರ್ಜನ ಪ್ರದೇಶ.

ಮಿತ್ರ ಧಾಳಿಯ ಪರಿಣಾಮದಿಂದ ಇಟಲಿ ಸರ್ಕಾರವು ರೋಂ ನಗರವನ್ನು ನಿರ್ಜನ ಪ್ರದೇಶವಾಗಿ ಘೋಷಿಸಿದೆ.

ಶತ್ರು ವಿಮಾನ ಕಾರ್ಖಾನೆ ಮೇಲೆ ಧಾಳಿ

ಆಸ್ಟ್ರಿಯಾ ದೇಶದಲ್ಲಿರುವ ಶತ್ರು ವಿಮಾನ ಕಾರ್ಖಾನೆ ಕೇಂದ್ರವಾದ ವಿನ್ನಾದಲ್ಲಿ ಮಿತ್ರ ವಿಮಾನಗಳು ಭೀಕರ ಧಾಳಿ ನಡೆಸಿ, ಸಾವಿರಾರು ಪೌಂಡ್ ಬಾಂಬುಗಳನ್ನು ಸುರಿಸಿವೆ. ಮಧ್ಯ ಪ್ರಾಚ್ಯದಿಂದ ಪ್ರಯಾಣ ಬೆಳೆಸಿದ ವಿಮಾನಗಳು ಈ ಶತ್ರುವಿನ ಸ್ಥಾನಗಳ ಮೇಲೆ ಧಾಳಿ ಮಾಡಿದ್ದು ಇದೇ ಮೊದಲನೇ ಸಾರಿ ಎಂದು ವರದಿಯಾಗಿದೆ.

ವಿಮಾನ ಕಾರ್ಖಾನೆಗೆ ಅಪಾರ ನಷ್ಟವುಂಟಾಗಿ, ಬೆಂಕಿಯಿಂದ ಉರಿಯುತ್ತಿದೆಯೆಂದು ಹೇಳಲಾಗಿದೆ.

ಕಳ್ಳತನ

ಗುಂಡ್ಲುಪೇಟೆ ತಾ|| ಲಕ್ಕೂರು ಗ್ರಾಮದ ಗುರುಸ್ವಾಮಿ ಆರಾಧ್ಯರ ಮನೆಯಲ್ಲಿ ಇದೇ ಮಾಹೆ ೧೩ ನೆಯ ತಾ|| ಮಧ್ಯಾಹ್ನ ಯಾರೋ ಮನೆಗೆ ನುಗ್ಗಿ ೧೭೦ ರೂ. ಬೆಲೆಬಾಳುವ ಚಿನ್ನ, ಬೆಳ್ಳಿ ಒಡವೆಗಳನ್ನು ಅಪಹರಿಸಿರುವರೆಂದು ಪೋ|| ವರದಿಯಾಗಿದೆ.

ದಿನಸಿಗಾಗಿ ಮುಂಗಡ ಹಣ ಕೊಡಕೂಡದು

ರಹದಾರಿಯಿಲ್ಲದೆ ಯಾರೇ ಆಗಲೀ ಆಹಾರ ದಿನಸಿಗಳನ್ನು ಕೊಳ್ಳಲು ಮುಂಗಡ ಹಣವನ್ನು ಕೊಡಕೂಡದೆಂದು ಭಾರತ ಸರ್ಕಾರವು ಪ್ರಕಟಿಸಿದೆ. ದಿನಸಿಗಳ ಬೆಲೆ ಏರಿತವನ್ನು ತಡೆಗಟ್ಟುವುದಕ್ಕೂ ಮತ್ತು ವ್ಯಾಪಾರ ಹಿತ ದೃಷ್ಟಿಯಿಂದಲೂ ಈ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಧಾನ್ಯ ಶೇಖರಿಸುವುದು, ಮತ್ತು ಲಾಭದ ದುರಾಸೆಯಿಂದ ಮಾಡುವ ವ್ಯಾಪಾರಗಳೂ ತಪ್ಪಾಗಿಯೇ ಕಡಿಮೆ. ಬೆಲೆಗಳು ಮಾರಬೇಕಾಗುತ್ತದೆ. ಆದರೆ ಈಗಾಗಲೇ ರಹದಾರಿ ಪಡೆದು ನ್ಯಾಯ ರೀತ್ಯ ವ್ಯಾಪಾರ ನಡೆಸುತ್ತಿರುವವರಿಗೆ ಯಾವ ತೊಂದರೆಯೂ ... ಇದಿಲ್ಲ.

ದ್ವಿತೀಯ ರಣರಂಗ

ದ್ವಿತೀಯ ರಣರಂಗವನ್ನು ಶೀಘ್ರದಲ್ಲಿಯೇ ಆರಂಭಿಸುವ ಸಂಭವವು ಕಂಡುಬರುತ್ತಿದೆಯೆಂದು ಹೇಳಲಾಗಿದೆ. ಈ ವರ್ಷ ದೊಳಗಾಗಿ ಯೂರೋಪಿನ ಮೇಲೆ ದಂಡಯಾತ್ರೆ ನಡೆಸಲಾಗುವುದೆಂದೂ, ಕ್ವಿಬೆಕ್ಕಿನಲ್ಲಿ ಇದರ ವಿಚಾರವಾಗಿ ಮಿತ್ರರು ಸಮ್ಮೇಳನ ನಡೆಸುತ್ತಿರುವರೆಂದೂ ವರದಿಯಾಗಿದೆ.

ರಷ್ಯ ರಣಕ್ಷೇತ್ರದಲ್ಲಿ ಜರ್ಮನರನ್ನು ಸಂಪೂರ್ಣ ನಾಶಮಾಡಲು, ಸ್ಟಾಲಿನ್ನರು ಹಂಚಿಕೆ ಹಾಕಿರುವರೆಂದೂ, ಅದನ್ನು ಫಲಕಾರಿಯಾಗಿ ಮಾಡಲು ಮಿತ್ರರು ಶೀಘ್ರದಲ್ಲಿ ಶತ್ರುವಿನ ರಣಾಂಕಕ್ಕೆ ಹತ್ತು ಸೈನ್ಯ ಕಳುಹಿಸಿ ರುವಂತೆ ತಡೆಯಬೇಕೆಂದು ಹೇಳಲಾಗಿದೆ.

ಖಾರ್ಕೋವ್ ನಗರ ಭೇದಿಸಲಾಯಿತು

ಖಾರ್ಕೋವ್ ನಗರಕ್ಕೆ ರಷ್ಯನರು ನುಗ್ಗಿ ಉತ್ತರ ಭಾಗದ ರಸ್ತೆಗಳಲ್ಲಿ ಭೀಕರ ಕದನ ನಡೆಸುತ್ತಿರುವರೆಂದು ವರದಿಯಾಗಿದೆ.

ಬ್ರಿಯಾನ್ಸ್ಕ್‌ಗೆ ೨೫ ಮೈಲಿ ಪೂರ್ವದಲ್ಲಿರುವ ಶತ್ರುವಿನ ಕೊನೆಯ ಸ್ಥಾನವಾದ ಕರಾಚೆವ್ ನಗರವು ಬೀಳುವುದರಲ್ಲಿದೆಯೆಂದೂ, ಇನ್ನೊಂದೆ ಬ್ರಿಯಾನ್ಸ್ಕ್ ನಗರದಲ್ಲಿರುವ ಶತ್ರು ಸೈನಿಕರಿಗೆ ಗಂಡಾಂತರ ಉಂಟಾಗಿದೆಯೆಂದೂ ಎರಡು ಪಾರ್ಶ್ವದಿಂದಲೂ ಆ ನಗರವನ್ನು ಮುತ್ತಲು ರಷ್ಯನರು ಪ್ರಯತ್ನಿಸುತ್ತಿದ್ದಾರೆಂದು ವರದಿಯಾಗಿದೆ.

ಬರ್ಲಿನ್ ಖಾಲಿಯಾಗುತ್ತಿದೆ

ಬರ್ಲಿನ್ ನಗರವನ್ನು ಜನಗಳು ಖಾಲಿ ಮಾಡುವುದಕ್ಕೆ ಸಹಾಯ ಮಾಡಲು ಪೋಲೀಸು ಮತ್ತು ಇತರ ಅಧಿಕಾರಿಗಳ ದಳವನ್ನು ರಚಿಸಲಾಗಿದೆಯೆಂದೂ, ಇದುವರೆಗೆ ೧೦ ಲಕ್ಷ ಜನರು ಬರ್ಲಿನ್ ನಗರವನ್ನು ಬಿಟ್ಟು ಹೋಗಿರುವರೆಂದೂ ವರದಿಯಾಗಿದೆ.

೨೦ ಸಾವಿರ ರೂ. ದಂಡ

ಅಕೋಲಾ ವರ್ತಕರೊಬ್ಬರು ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಿ ಬೆಟ್ಟದ ಬೆಲೆಗೆ ಮಾರುತ್ತಿದ್ದರೆಂಬ ಅಪಾದನೆ ಮೇಲೆ ಅವರಿಗೆ ೨೦ ಸಾವಿರ ರೂಪಾಯಿ ದಂಡ ವಿಧಿಸಲಾಯಿತು.

ಆಕಸ್ಮಿಕ ಮರಣ

ಗುಂಡ್ಲುಪೇಟೆ ತಾ|| ಸಾತೀಗ್ರಾಮದಲ್ಲಿ ೧೦-೮-೪೩ ನೇ ಸಂಜೆ, ಗುರುಮಲ್ಲನ ಮಗ ... ನೀರು ಸೇದುತ್ತಿರುವಾಗ ಬಾವಿಯಲ್ಲಿ ಬಿದ್ದು ಮರಣ ಹೊಂದಿರುವುದಾಗಿ ಪೋಲೀಸರಿಗೆ ವರದಿಯಾಗಿದೆ.

ಅಕ್ಕಿ ರಫ್ತು ಮಾಡುತ್ತಿಲ್ಲ

ಕಲ್ಕತ್ತಾದಿಂದ ಇತ್ತೀಚೆಗೆ ದಕ್ಷಿಣ ಆಫ್ರಿಕಕ್ಕೆ ಅಕ್ಕಿಯನ್ನು ರಫ್ತು ಮಾಡಿದ ಸುದ್ದಿ ನಿಜವಲ್ಲವೆಂದು ಭಾರತ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ದಕ್ಷಿಣ ಆಫ್ರಿಕಾದ ಬಂದರಿನಲ್ಲಿರುವ ಭಾರತೀಯ ನೌಕೆಯ ಉಪಯೋಗಿಕರಿಗೆ ಮಾತ್ರ ಈ ವರ್ಷ ೩೬೭ ಟನ್ ಅಕ್ಕಿಯನ್ನು ಕಳುಹಿಸಲಾಯಿತೆಂದೂ, ನಂತರ ಯಾವ ರಫ್ತು ಆಗಿಲ್ಲವೆಂದು ತಿಳಿಸಿದ್ದಾರೆ.

ರಷ್ಯಾಕ್ಕೆ ಆಹ್ವಾನವಿಲ್ಲ

ಚರ್ಚಿಲ್ ಮತ್ತು ರೂಸ್ವೆಲ್ಟ್ ಸಮ್ಮೇಳನದಲ್ಲಿ ಸ್ಟಾಲಿನ್ ಅಥವಾ ರಷ್ಯ ಪ್ರತಿನಿಧಿಗಳು ಭಾಗ ವಹಿಸುವರೆಂಬ ಸುದ್ದಿಗೆ ಆಧಾರವಿಲ್ಲವೆಂದೂ, ರಷ್ಯ ಸರ್ಕಾರಕ್ಕೆ ಈ ಸಭೆಗೆ ಬರಲು ಯಾವ ಆಹ್ವಾನ ಕೊಟ್ಟಿಲ್ಲವೆಂದು ರಷ್ಯಾದ "ಟಾಸ್" ವಾರ್ತೆಯು ತಿಳಿಸುತ್ತದೆ.

ಬ್ರಿ|| ಸಾಮ್ರಾಜ್ಯವನ್ನು ಆಳಲು ನೂತನ ಸಂಸ್ಥೆ

ಯುದ್ಧಾನಂತರ ಬ್ರಿಟಿಷ್ ಚಕ್ರಾಧಿಪತ್ಯವನ್ನು ಆಳಲು ಒಂದು ಶ್ರೇಷ್ಠ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಆಸ್ಟ್ರೇಲಿಯಾ ಪ್ರಧಾನಿಗಳು ಸೂಚಿಸಿದ್ದಾರೆ.

ಇಟಲಿ ಮೇಲೆ ಯುದ್ಧಾರಂಭ

ಸಿಸಿಲಿಯಲ್ಲಿರುವ ರೆಂಡಾಜೊ ನಗರ ಪತನವಾಗಿರುವುದು ಮತ್ತು ಮಿತ್ರರ ಅವಿಚ್ಛಿನ್ನವಾದ ಧಾಳಿಯೂ ಇವುಗಳು ಇಟಲಿ ಮೇಲೆ ಯುದ್ಧ ಪ್ರಾರಂಭವಾಗಿರುವ ಸೂಚನೆಯೆಂದು ಹೇಳಲಾಗಿದೆ. ಇದರಿಂದ ಬಡೋಗ್ಲಿಯೋ ಸರ್ಕಾರ ಭಯವಾಗಿಲ್ಲವೆಂದೂ, ಅದು ಶೀಘ್ರದಲ್ಲಿಯೇ ಸೋಲುವ ಸಂಭವವಿರುವುದೆಂದು ಹೇಳಲಾಗಿದೆ.

ಸಿಸಲಿಯಲ್ಲಿ ಅಂತ್ಯ ಯುದ್ಧ

ಸಿಸಲಿ ಕದನವು ಅಂತ್ಯ ಗಟ್ಟವನ್ನು ಮುಟ್ಟಿದೆಯೆಂದು ಹೇಳಲಾಗಿದೆ. ಆಕ್ಸಿಸ್ ಸೈನ್ಯಗಳು ಹಿಂದಿನಿಂದ ಘೋರ ಕದನ ನಡೆಸುತ್ತಿದ್ದು, ಮುಂದಿನಿಂದ ಜನಗಳನ್ನೂ ಮತ್ತು ಸಾಮಗ್ರಿಗಳನ್ನೂ ಮೆಸ್ಸಿನಾ ಕೊಲ್ಲಿಯಿಂದ ಹೊರಕ್ಕೆ ಸಾಗಿಸುತ್ತಿದೆ. ತಪ್ಪಿಸಿಕೊಂಡು ಹೋಗುತ್ತಿರುವ ರಸ್ತೆ ಮತ್ತು ಮೆಸ್ಸಿನಾ ಬಂದರುಗಳ ಮೇಲೂ ಮಿತ್ರರು ಅಗಾಧ ಧಾಳಿ ನಡೆಸುತ್ತಿದ್ದಾರೆ.

ಎಟ್ನಾ ಪರ್ವತವು ಸಂಪೂರ್ಣವಾಗಿ ಮಿತ್ರರ ವಶದಲ್ಲಿದೆ. ಸಿಸಲಿಯ ಉತ್ತರ ತೀರ ಭಾಗದಲ್ಲಿರುವ ಫಿಲಿಯಾನೋ ನಗರವನ್ನೂ ಮತ್ತು ಇತರ ನಾಲ್ಕು ನಗರಗಳನ್ನೂ ಮಿತ್ರರು ವಶಪಡಿಸಿಕೊಂಡಿದ್ದಾರೆ.

ಬ್ರಿಟಿಷ್ ಎಂಟನೇ ದಳವು ಇಲ್ಲಿಯವರೆಗೆ ಒಟ್ಟು ೩೦ ಸಾವಿರ ಸೈನಿಕರನ್ನು ಸೆರೆ ಹಿಡಿದಿದೆ.

ಮಿತ್ರ ಬಲ ಹೆಚ್ಚಾಗುತ್ತಿದೆ

"ಸಿಸಲಿ ಯುದ್ಧದ ಕೊನೆಯಾಗುತ್ತಿದೆ. ಶತ್ರುವಿನ ಭೂ, ನೌಕಾ ಮತ್ತು ವಿಮಾನ ಬಲವು ನಮಗಿಂತ ಹೆಚ್ಚಾಗಿದೆ. ನಮ್ಮ ಸಾಧ್ಯವಾಗುವ ವರೆಗೂ ಹೋರಾಡುತ್ತೇವೆ" ಎಂಬುದಾಗಿ ಜರ್ಮನ್ ರೇಡಿಯೋ ತಿಳಿಸುತ್ತದೆ.

ವಾರ ಭವಿಷ್ಯ

(ಶ್ರೀ ಸಿದ್ಧಾನಂದ ಸ್ವಾಮಿಗಳವರಿಂದ)

ತಾ॥ ೧೬-೮-೪೩ ರಿಂದ ೨೨-೮-೪೩ ರವರೆಗೆ

ಮೇಷ – ಸುಖ ಬಹಳ ಉತ್ತಮ, ಉದ್ಯೋಗದಲ್ಲಿ ಪ್ರಗತಿಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರ ಸುಖ ಉತ್ತಮ ಆದರೆ, ಪರರಿಂದ ಸ್ವಲ್ಪ ತೊಂದರೆ. ತಾ॥ ೧೬, ೧೭, ೨೧, ೨೨ ಅನುಕೂಲ

ವೃಷಭ – ಪರಸ್ಪರ ಮತಭೇದ ಉದ್ಯೋಗದಲ್ಲಿ ಪ್ರಗತಿ ಕುಂಠಿತ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಪ್ರವಾಸ ತೊಂದರೆ ತಾ॥ ೧೬, ೧೭, ೧೮, ೧೯ ಅನುಕೂಲ

ಮಿಥುನ – ಸ್ವಾದಂಪತ್ಯ ಸುಖದಲ್ಲಿ ವಿರಸ. ಉದ್ಯೋಗದಲ್ಲಿ ಹೆಚ್ಚು ಪ್ರಗತಿ ಪ್ರತಿಷ್ಠೆ ಮತ್ತು ಲಾಭ. ತಾ॥ ೧೬, ೧೭, ೧೮, ೧೯ ಅನುಕೂಲ

ಕರ್ಕ – ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಮನಸ್ಸಿಗೆ ಚಿಂತೆ. ಪ್ರವಾಸದಲ್ಲಿ ಸುಖ. ತಾ॥ ೧೮, ೧೯, ೨೦, ೨೨ ಉತ್ತಮ

ಸಿಂಹ – ಪ್ರಗತಿ ಮತ್ತು ದಾಂಪತ್ಯ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ. ತಾ॥ ೧೬, ೧೭, ೨೧, ೨೨ ಒಳ್ಳೆಯ ದಿನಗಳು

ಕನ್ಯಾ – ಅಸ್ವಸ್ಥತೆ, ಸ್ತ್ರೀ ಸುಖ ಅನುಕೂಲ ಮಿತ್ರತ್ವದಲ್ಲಿ ವಿರೋಧ. ತಾ॥ ೧೮, ೧೯, ೨೦ ಉತ್ತಮ.

ತುಲಾ – ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ. ಒಳ್ಳೆ ಯಶಸ್ಸು. ಮಿತ್ರ ಸುಖ, ಪ್ರವಾಸ ಉತ್ತಮ ತಾ॥ ೧೬, ೧೭, ೨೧, ೨೨ ಅನುಕೂಲ.

ವೃಶ್ಚಿಕ – ದಾಂಪತ್ಯ ಸುಖ ಹಿತಕರ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಬಹಳ ಉತ್ತಮ. ಆದರೆ ಕೆಲಸಗಳ ಬಗ್ಗೆ ಸಂಶಯ. ಪ್ರವಾಸಕ್ಕಿಂತ ಪತ್ರವ್ಯವಹಾರ ಉತ್ತಮ. ತಾ॥ ೧೮, ೧೯, ೨೦ ಉತ್ತಮ

ಧನು – ಸ್ತ್ರೀ ವರ್ಗದಲ್ಲಿ ಅಸುಖ. ಉದ್ಯೋಗದಲ್ಲಿ ಪ್ರಗತಿಪ್ರತಿಷ್ಠೆ ಮತ್ತು ಲಾಭ ಉತ್ತಮ ಮನಸ್ಸಿನಲ್ಲಿ ಉತ್ಸಾಹ. ತಾ॥ ೧೬, ೧೭, ೨೧, ೨೨ ಒಳ್ಳೆಯ ದಿನಗಳು

ಮಕರ – ದಾಂಪತ್ಯ ಸುಖ ಹಿತಕರ ಉದ್ಯೋಗದಲ್ಲಿ ಲಾಭ, ಪ್ರವಾಸ ತೊಂದರೆ ತಾ॥ ೧೬, ೧೭, ೧೮, ೧೯ ಉತ್ತಮ

ಕುಂಭ – ಸ್ವಲ್ಪ ದೊಡ್ಡ ವಿಷಯದಲ್ಲಿ ವಾಗ್ವಾದ. ದಾಂಪತ್ಯ ಸುಖ ಉತ್ತಮ ಆದರೆ ಖರ್ಚುಗಳ ಜೋರು ಹೆಚ್ಚು. ಪ್ರವಾಸ ಹಿತಕರ ತಾ॥ ೧೮, ೧೯, ೨೦, ೨೨ ಒಳ್ಳೆಯ ದಿನಗಳು

ಮೀನ – ಮನಸ್ಸು ಉದ್ವೇಗ, ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆ ಮತ್ತು ಲಾಭ ಕಡಿಮೆ ತಾ॥ ೧೮, ೧೯, ೨೦, ೨೧ ಅನುಕೂಲ

ಜರ್ಮನ್ ರಾಯಭಾರಿಗಳ ಸಮ್ಮೇಳನ

ಯೂರೋಪಿನಲ್ಲಿರುವ ಎಲ್ಲ ಜರ್ಮನ್ ಮಿಲಿಟರಿ ಅಧಿಕಾರಿಗಳ ಮತ್ತು ರಾಯಭಾರಿಗಳ ಸಮ್ಮೇಳನವೊಂದು ಯುದ್ಧದ ಪರಿಸ್ಥಿತಿಯನ್ನು ಪರಿಶೀಲಿಸಲು ನಡೆಯಲಿದೆಯೆಂದು ವರದಿಯಾಗಿದೆ. ಈ ಸಮ್ಮೇಳನವಾದ ನಂತರ, ಬರ್ಲಿನ್‍ನಲ್ಲಿರುವ ಜಪಾನಿ ರಾಯಭಾರಿಯು ಟೋಕಿಯೋಕ್ಕೆ ಹೋಗಿ ಯೂರೋಪಿನ ಸ್ಥಿತಿಯನ್ನು ಸರ್ಕಾರಕ್ಕೆ ವಿವರಿಸುವರೆಂದು ಹೇಳಲಾಗಿದೆ. ಯೂರೋಪಿನಿಂದ ಜಪಾನು ಹೊರಟಿತೆಂಬ ಈಗಾಗಲೇ ಕೋಲಾಹಲದಲ್ಲಿರುವ ಜರ್ಮನ್ ವಾರ್ತಾ ಸಂಸ್ಥೆಯನ್ನು ರದ್ದುಪಡಿಸಿ, ಬರ್ಲಿನ್ ನಗರಕ್ಕೆ ಕಳುಹಿಸಲಾಗಿದೆ.

ಜರ್ಮನರು ಖಾರ್ಕೋವ್‌ನಿಂದ ಹಿಮ್ಮೆಟ್ಟುತ್ತಿದ್ದಾರೆ

೧೩ ದಿನಗಳ ಕಾಲ ಜರ್ಮನ್ ನಗರವನ್ನು ಮುತ್ತಿ, ಒಂದು ಭಾಗವನ್ನು ಒಳಕ್ಕೆ ನುಗ್ಗಿ, ವಾರೋನೆಜ್, ಜರ್ಮನರು ಆ ನಗರದಿಂದ ಹಿಮ್ಮೆಟ್ಟುತ್ತಿದ್ದಾರೆಂದೂ ವರದಿಯಾಗಿದೆ

ಕಲ್ಕತ್ತಾದಿಂದ ಅಕ್ಕಿ ರಫ್ತು

ದೇಶದ ಯಾವ ಭಾಗದಿಂದಲೂ ಹೊರದೇಶಗಳಿಗೆ ಅಕ್ಕಿಯನ್ನು ಕಳುಹಿಸುವುದಿಲ್ಲವೆಂದು ಬಂಗಾಳ ಸರ್ಕಾರವು ಪ್ರಕಟಿಸಿದ್ದರೂ ಕೂಡ ನೂರ್ನೂರು ಅಕ್ಕಿ ಮೂಟೆಗಳನ್ನು ಕಲ್ಕತ್ತಾದಿಂದ ದಕ್ಷಿಣ ಆಫ್ರಿಕಾಕ್ಕೆ ಅಧಿಕ ಸಂಖ್ಯೆಯಲ್ಲಿ ಕಳುಹಿಸಲ್ಪಟ್ಟಿವೆಯೆಂದು ಬಂಗಾಳ ರಾಷ್ಟ್ರೀಯ ವಾಣಿಜ್ಯ ಸಂಘದವರು, ಮುಸ್ಲಿಂ ವ್ಯಾಪಾರಿ ಸಂಘದವರು ಮತ್ತು ಮಾರವಾಡಿ ಸಂಘದವರು, ಈರೀತಿ ಸರ್ಕಾರದವರಿಗೆ ತಂತಿ ಕಳಿಸಿ, ಇದನ್ನು ತಕ್ಷಣವೇ ನಿಲ್ಲಿಸಬೇಕೆಂದು ಕೋರಿದ್ದಾರೆ.

ಇಟಲಿ ರಾಯಭಾರಿಯ ದಸ್ತಗಿರಿ

ಬರ್ಲಿನ್ನಿನಲ್ಲಿರುವ ಇಟಾಲಿಯನ್ ರಾಯಭಾರಿಯಾದ ಸಿನರ್ ಅಲ್ಫೆರಿ ಎಂಬುವರನ್ನು ದಸ್ತಗಿರಿ ಮಾಡಲಾಗಿದೆ.

ಬೊಂಬಾಯಿ ಪ್ರಾಂತ್ಯದಲ್ಲಿ ರೇಷನಿಂಗ್

ಬೊಂಬಾಯಿ ಪ್ರಾಂತ್ಯದಲ್ಲಿ ೧೧ ಸಾವಿರಕ್ಕಿಂತ ಹೆಚ್ಚಾಗಿ ಜನಗಳಿರುವ ಪಟ್ಟಣಗಳಲ್ಲೆಲ್ಲಾ ರೇಷನಿಂಗ್ ಜಾರಿಗೆ ತರಲು ಪಕ್ಷ ಏರ್ಪಾಡು ನಡೆಯುತ್ತಿದೆ.

ಕೈಗಾರಿಕೆ 'ಸಬ್‌ಸ್ಪ್' ಅವಶ್ಯಕತೆ

ಬೆಂಗಳೂರು ೧೫

ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಜೋಡಣೆಯ ಸಭೆಯು ಸರಜರಾಯಿ ನಡೆ ಸರಕಾರ ಶ್ರೀ॥ ಎಂ ಎ ಶ್ರೀನಿವಾಸನವರ ಅಧ್ಯಕ್ಷತೆಯಲ್ಲಿ ನಡೆದು, ಸಂಸ್ಥಾನದ ಮುಖ್ಯ ಕೈಗಾರಿಕೆ ನಗರಗಳಲ್ಲಿರುವ ಕೈಗಾರಿಕೆ 'ಸಬರ್ಬ್ಸ್' ಗಳನ್ನು ಏರ್ಪಡಿಸುವುದಲ್ಲದೆ ನಗರ ಮಧ್ಯದಲ್ಲಿ ಜನ ನಿಬಿಡವಾದ ಸ್ಥಳಗಳಿಂದ ಅತಿಯಾದ ಹೆಚ್ಚು ದೃಷ್ಟಿಯಿಂದ ಆತಿ ಶಬ್ದ ಕೊಡುವ ಯಂತ್ರಗಳನ್ನು ದೂರ ಸಾಗಿಸುವುದು. ಸಾಧ್ಯವಾದರೆ ಅದೇ ಪ್ರಾಯ ಪಟ್ಟಿ ಬೆಂಗಳೂರು ನಗರದ ವಿಷಯವನ್ನು ಪರಿಶೀಲಿಸಿ, ಒಂದು ಉಪಸಮಿತಿಯನ್ನು ನೇಮಿಸಲಾಯಿತು. ಟೆಕ್ನಿಕಲ್ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮವನ್ನು ವರದಿ ಮಾಡಲು ಪತ್ತೊಂದು ಉಪಸಮಿತಿ ರಚಿಸಲಾಯಿತು

ಪರಿಹಾರ ಪ್ರಶ್ನೆ

ಬಂಗಾಳದಲ್ಲಿ ಆಹಾರವಿಲ್ಲದೆ ನರಳುತ್ತಿರುವ ಜನರ ಸಹಾಯಕ್ಕಾಗಿ ಸರ್ ದೊರಾಬ್ಜಿ ಟಾಟಾಟ್ರಸ್ಟ್‌ನಿಂದ ೫೦ ಸಾವಿರ ರೂಗಳನ್ನೂ ಮತ್ತು ಟಾಟಾ ಕಬ್ಬಿಣ ಕಾರ್ಖಾನೆಯವರು ೫೦ ಸಾವಿರ ರೂಗಳನ್ನೂ ಕೊಟ್ಟಿರುವರು

ಜಮ್ಷೆಡ್-ಜೀವಾಜ್ ಪ್ರವಾಹ ನಿಧಿಗೆ ಸರ್ ಟಾಟಾ ಟ್ರಸ್ಟಿನವರು ೧೫ ಸಾವಿರ ರೂ ದಾನ ಮಾಡಿದ್ದಾರೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಪ್ರಭಾವಶಾಲಿ ಜೀವನಿ ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತಾ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ.

ಋತು ಕಾಲದಲ್ಲಿ, ಅಥವ ಅವೇಳೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುತ್ತದು, ಅಕ್ರಮ ಋತುಸ್ರಾವ ಮುಂತಾದುವುಗಳನ್ನು 'ಜೀವನಿ' ಜಾಗ್ರತೆ ಪರಿಹರಿಸುತ್ತದೆ

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತಹೀನತೆ, ನರಗಳ ದೌರ್ಬಲ್ಯ, ಬೆನ್ನು ನೋವು, ಸೊಂಟನೋವು, ಗರ್ಭಸ್ರಾವ, ಬಂಜೆತನಗಳಿಗೆ ಜೀವನಿ ಅತ್ಯಂತ ಯುಕ್ತವಾದುದು.

ಮೈಸೂರ್ಪಲ್ಲವರಿಗೆ ಸ್ಟಾಲಿನರ ಪತ್ರ

ಕೆನಡಾದಲ್ಲಿ ನಡೆಯುತ್ತಲಿರುವ ಚರ್ಚಿಲ್-ರೂಸ್‌ವೆಲ್ಟ್ ಸಮ್ಮೇಳನಕ್ಕೆ ಸ್ಟಾಲಿನರು ಒಂದು ಪತ್ರವನ್ನು ಕಳುಹಿಸಿರುವರೆಂದು ವರದಿಯಾಗಿದೆ. ಈ ಸಮ್ಮೇಳನದಲ್ಲಿ ಅಮೇರಿಕ, ಇಂಗ್ಲೆಂಡ್ ಮತ್ತು ರಷ್ಯಾ ಮೂರು ದೇಶಗಳೂ ಸೇರಿ ಚರ್ಚೆ ನಡೆಸಬೇಕು ಕಾರ್ಯಕ್ರಮ ಕೈಗೊಳ್ಳಲು ಪರ್ಯಾಲೋಚನೆ ನಡೆಸಲಾಗುವುದೆಂದೂ, ಸ್ಟಾಲಿನ್ ಮತ್ತು ಪಾರ್ಕ್ ಮಿತ್ರರಿಗೂ ಯಾವ ವ್ಯತ್ಯಾಸ ಅಥವಾ ಅಸಮಾಧಾನ ಇಲ್ಲವೆಂದೂ ಹೇಳಲಾಗಿದೆ.

ಶ್ರೀ ಶ್ರೀಕಂಠೇಶ್ವರ ಸ್ಪರ್ಧೆ ನಂ. ೨೧

ಸರಿಯಾದ ಉತ್ತರ

ಎಡದಿಂದ ಬಲಕ್ಕೆ:— 1 ಸಂಪಿಗೆ, 2 ಸ್ಥಾನದ, 4 ನಯನ, 7 ಕಳ, 8 ಗುಟ, 9 ಜನ, 13 ನರಟು [ಹರಟು], 14 ನಮಃ, 15 ಚಮರ.

ಮೇಲಿನಿಂದ ಕೆಳಕ್ಕೆ:— 1 ಸಂಶಯ, 2 ಸ್ಥಾನ, 3 ದವಳ, 5 ಯದ, 6 ಮಗಟ, 7 ಕನಕ, 10 ಬಡಿಸ, 11 ನರ, 12 ಸಂಚಾರ.

ಮ್ಯಾನೇಜರ್

WANTED AGENTS

JAYA CROSS WORDS IN ENGLISH

Ask for free Coupons from 20th Sep. '43

Apply:- Manager

Jaya Cross Words,

Sivarampet, Mysore

Edited, printed and published by A. R. Nagarajan, at the Sadhvi Press, D Subbiah Road, Mysore.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಸ್ಪಯಂ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ,

184, ಚೈನಾ ಬಜಾರ್ ರಸ್ತೆ, ಮದರಾಸು.

ಏಜೆಂಟರು : ಆರೋಗ್ಯ ಫಾರ್ಮಸಿ

ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

ಸ್ತ್ರೀಯರ ಸೌಕರ್ಯಕ್ಕಾಗಿ

ಈ ... ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಸ್ವಚ್ಛ ಉಪಯೋಗಿಸಿ.

ಡಿ. ಪುಟ್ಟಣ್ಣಯ್ಯ ಧನಸುಮಂಡಿ, ದೇವರಾಜ ಮಾರ್ಕೆಟ್ಟು, ಮೈಸೂರು

ಸೂಚನೆ. - ಚಿಲ್ಲರೆಯಾಗಿ ... ಸಹ ಕೊಡುತ್ತೇವೆ.

The Benares Textile Emporium

(opposit to Chamundeswari Talkies)

Purchase Direct from Benareswalas

ಬನಾರಸ್‌ನವರ ಕಲಾಬತ್ತು ಜವುಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಜುಯಲರಿ ಮತ್ತು ರೆಡಿಮೇಡ್ ಡ್ರೆಸ್ ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿಯಲ್ಲಿ ತೆರೆಯಲಾಗಿದೆ ಬನಾರಸ್ ಬೆಲೆಗೇ ಎಲ್ಲಾ ಹೊಸ ನಮೂನೆಗಳು ಸಿಕ್ಕುತ್ತವೆ

ಮರಣ

ಮೈಸೂರು ೧೬.

ಮೈಸೂರು ಅಶೋಕ ದೇವಲಾಪುರದ ತೋಟದಲ್ಲಿ ಕಳ್ಳತನ ಮಾಡಲು ಯತ್ನಿಸಿದ ಚೋಟು ಎಂಬುವನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಗಿತ್ತು. ಆದರೆ ನಿನ್ನೆ ದಿನ ಮರಣ ಹೊಂದಿದನೆಂದು ವರದಿಯಾಗಿದೆ.

ಮಹದೇವ್ ದೇಸಾಯಿ ದಿನಾಚರಣೆ

ಮೈಸೂರಿನ ರಸ್ತೆಯಲ್ಲಿರುವ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳವರ ವಿದ್ಯಾರ್ಥಿ ನಿಲಯದ ಸಂಘದವರು ಮಹದೇವ್ ದೇಸಾಯಿ ದಿನಾಚರಣೆಯನ್ನು ೧೮-೪-೪೫ ನೇ ಬುಧವಾರ ಸಂಜೆ ೬-೩೦ ಗಂಟೆಗೆ ಆಚರಿಸುವರು. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರವರು ಅಧ್ಯಕ್ಷತೆ ವಹಿಸುವರು.

ಭಾಷಣ

ಶ್ರೀ. ಜೆ. ಬಿ. ಮಲ್ಲಾರಾಧ್ಯರು ಇದಿನ ರಾತ್ರಿ ೭-೪೫ ಗಂಟೆಗೆ 'ಆಕಾಶ ವಾಣಿ' ಮೂಲಕ ರಾಷ್ಟ್ರೀಯ ರಕ್ಷಣಾ ಬಲದ ವಿಚಾರವಾಗಿ ಭಾಷಣ ಮಾಡುವರು.

ಮುಸೋಲಿನಿ ಮರಣವೆ?

ಮುಸೋಲಿನಿಯು ಲೇಗ್ ಹಾರ್ನಿನಿಂದ ಹೊರಟು ಇಟಲಿ ಸಬ್ ಮೆರೀನ್ ಒಂದರಲ್ಲಿ ಇದ್ದನೆಂದೂ, ಅದು ಮಿತ್ರ ಧಾಳಿಗೀಡಾಗಿ ಮುಳುಗಿತೆಂದೂ, ಅದರ ಜೊತೆಗೆ ಮುಸೋಲಿನಿ ಸಹ ನೀರುಪಾಲಾದನೆಂದೂ 'ನ್ಯೂಯಾರ್ಕ್ ಪೋಸ್ಟ್' ಪತ್ರಿಕೆ ತಿಳಿಸುತ್ತದೆ.

ಮಿತ್ರ ವಿಮಾನ ಧಾಳಿ

ಉತ್ತರ ಫ್ರಾನ್ಸಿನ ಮೇಲೆ ಅಮೆರಿಕನ್ ವಿಮಾನಗಳ ಭೀಕರ ಧಾಳಿನಡೆಸಿ ಎಂಟು ನೂರು ವಿಮಾನಗಳನ್ನು ನಾಶಮಾಡಲಾಯಿತೆಂದು ವರದಿಯಾಗಿದೆ.

ನಾಜಿ ರಾಕ್ಷಸೀ ಕೃತ್ಯ

ಜರ್ಮನರು ಓಸ್ಲೋ ನಗರವನ್ನು ಆಕ್ರಮಿಸಿಕೊಂಡಿದ್ದಾಗ ನಡೆಸಿದ ರಾಕ್ಷಸೀ ಕೃತ್ಯವು ಹೊರಬಿದ್ದಿದೆ. ೧೬ ವರ್ಷದ ಸಾವಿರಾರು ಬಾಲಕ ಬಾಲಕಿಯರು ಜರ್ಮನಿಗೆ ಹೋಗಿ ದುಡಿಯಲು ಸಮ್ಮತಿಸದಿದ್ದುದಕ್ಕಾಗಿಯೂ ಇತರ ವಿಧದಲ್ಲಿ ಸಹಾಯ ನೀಡಲು ನಿರಾಕರಿಸಿದ್ದಕ್ಕಾಗಿಯೂ ಅವರನ್ನು ಬಹಿರಂಗವಾಗಿ ಕೊಲೆಮಾಡಲಾಯಿತು.

ಮಿಲಾನ್ ನಗರದ ದುರವಸ್ಥೆ

ಮಿಲಾನ್ ನಗರದ ಮೇಲೆ ಮಿತ್ರರ ಧಾಳಿಯು ಅವಿಚ್ಛಿನ್ನವಾಗಿ ಆಮುಗಿರ ಪರಿಣಾಮವಾಗಿ, ಬಹಳ ದುರವಸ್ಥೆಗೆ ಈಡಾಗಿದೆ. ರೈಲ್ವೆ ಸ್ಟೇಷನ್ ಮತ್ತು ಮತ್ತು ಇತರ ಭಾಗಗಳಿಗೆ ಬಹಳ ನಷ್ಟವುಂಟಾಗಿ ಸಂಚಾರಕ್ಕೆ ಸಾಧ್ಯವಿಲ್ಲ. ಕೈಗಾರಿಕೆ ಪ್ರದೇಶವೆಲ್ಲ ಉರಿಯುತ್ತಿದೆ. ಸಾವಿರಾರು ಕೆಲಸಗಾರರು ನಗರವನ್ನು ಬಿಡುತ್ತಿದ್ದಾರೆ. ನಗರದ ಜನರು ರಾಜಿನಾಮೆ ಇತ್ತಿದ್ದಾರೆ. ಜನರು ಶಾಂತಿ ಬೇಕೆಂದು ಪ್ರದರ್ಶನ ನಡೆಸುತ್ತಿದ್ದಾರೆ.

ಎಣ್ಣೆ ಗಣಿಗಳ ಮೇಲೆ ಧಾಳಿ

ಬೋರ್ನಿಯೋ ದ್ವೀಪದ ಬಲಿಕ್‌ಪಪಾನ್ ಎಣ್ಣೆಗಣಿಗಳ ಮೇಲೆ ಅಮೆರಿಕ ವಿಮಾನಗಳು ಧಾಳಿಮಾಡಿ ಅಪಾರ ನಷ್ಟ ಉಂಟು

ಉತ್ತರ ಇಟಲಿಯಲ್ಲಿ ಜರ್ಮನ್ ಸಿದ್ಧತೆ

ಸಂಪುಟ ೨] ಮಂಗಳವಾರ ೧೭--೪--೪೫ [ಸಂಚಿಕೆ ೨೭

ಇಟಲಿ ಸೈನ್ಯ ಉತ್ತರ ಇಟಲಿಯನ್ನೆಲ್ಲಾ ಬಿಡುತ್ತಿವೆ

ಬ್ರೆನ್ನರ್‌ನಿಂದ ಜರ್ಮನರು ಓಡುತ್ತಿದ್ದಾರೆ

ಜರ್ಮನರ ಪಲಾಯನ

ವ್ರಿಯಾಸ್ಟ್‌ಗೆ ೫೦ ಮೈಲಿ ದೂರದಲ್ಲಿರುವ ಕೊನೆಯ ಶತ್ರು ಸ್ಥಾನವಾದ ಕಾರಾಚೌ ವನ್ನು ರಷ್ಯನರು ಕೈವಶ ಮಾಡಿಕೊಂಡಿದ್ದಾರೆ. ಬ್ರೆನ್ನರ್ ಬಳಿ ಜರ್ಮನರ ಪ್ರತಿಭಟನೆ ಹೆಚ್ಚಾಗಿದೆಯೆಂದೂ ಹೇಳಲಾಗಿದೆ. ಆದರೂ ರಷ್ಯನರ ಧಾಳಿಯನ್ನು ಎದುರಿಸಲಾರದೆ ಜರ್ಮನರು ಅನೇಕ ಯುದ್ಧ ಸಾಮಗ್ರಿಗಳನ್ನು ನಾಶಮಾಡಿ ಓಡುತ್ತಿದ್ದಾರೆ. ಶತ್ರು ತ್ಯಜಿಸಿದ ಒಂದು ರೈಲ್ವೆ ಸ್ಟೇಷನಲ್ಲಿ ಸಾವಿರಾರು ಪೆಟ್ರೋಲ್ ಪೀಪಾಯಿಗಳೂ ಮತ್ತು ಇತರ ಯುದ್ಧ ಸಾಮಗ್ರಿಗಳೂ ರಷ್ಯನರ ಕೈವಶವಾಗಿದೆ.

ಸ್ಲೊವಾಕಿಯದ ಪೂರ್ವ ಭಾಗದಲ್ಲಿ ರಷ್ಯನರು ಹೆಚ್ಚು ಹೆಚ್ಚಾಗಿ ಸೈನ್ಯವನ್ನು ತರುತ್ತಿದ್ದಾರೆಂದೂ, ಆ ಪ್ರದೇಶದಲ್ಲಿ ಭೀಕರ ಕದನ ನಡೆಯುತ್ತಿದೆಯೆಂದೂ ಹೇಳಲಾಗಿದೆ

ಜಪಾನೀ ವಿಮಾನಗಳ ನಾಶ

ನ್ಯೂಗಿನಿ ಮತ್ತು ಸಾಲೊಮನ್ಸ್ ಪ್ರದೇಶದಲ್ಲಿ ಒಟ್ಟು ೪೮ ಜಪಾನೀ ವಿಮಾನಗಳನ್ನೂ ಮತ್ತು ೨೫ ಸಣ್ಣ ಶತ್ರು ಹಡಗುಗಳನ್ನೂ ನಾಶಮಾಡಲಾಯಿತೆಂದು ವರದಿಯಾಗಿದೆ

ಫ್ರಾನ್ಸಿನಲ್ಲಿ ಪ್ರಜಾ ಸಂಖ್ಯೆ ಇಳಿಮುಖ

ಯುದ್ಧವಾರಂಭವಾದಾಗಿನಿಂದ ಫ್ರಾನ್ಸಿನಲ್ಲಿ ಜನನಕ್ಕಿಂತ ಮರಣವೇ ಹೆಚ್ಚಾಗಿದೆಯೆಂದೂ, ೧೯೪೩ ರಲ್ಲಿ ಒಟ್ಟು ೩ ಲಕ್ಷ ಜನ ಸಂಖ್ಯೆ ಕಡಿಮೆಯಾಗಿದೆಯೆಂದೂ, ಮಕ್ಕಳ ಸಾವಿನ ಸಂಖ್ಯೆಯು ಸಾವಿರಕ್ಕೆ ೭೦ ರಷ್ಟು ಹೆಚ್ಚಾಗಿದೆಯೆಂದು ಗೊತ್ತಾಗಿದೆ

ಅಂಡಮಾನ್ ದ್ವೀಪಗಳ ಮೇಲೆ ಧಾಳಿ

ಜಪಾನ್ ಆಕ್ರಮಣದಲ್ಲಿರುವ ಅಂಡಮಾನ್ ದ್ವೀಪಗಳಲ್ಲಿರುವ ಜಪಾನ್ ದ್ವೀಪಗಳ ಮೇಲೆ ಅಮೆರಿಕನ್ ವಿಮಾನಗಳು ಭೀಕರ ಧಾಳಿ ನಡೆಸಿ, ಶತ್ರು ರಾಣ್ಯ ಮತ್ತು ಇತರ ಸ್ಥಾನಗಳಿಗೆ ಅಪಾರ ನಷ್ಟವನ್ನು ಮಾಡಿ ಬೆಂಕಿ ಜ್ವಾಲೆಯುಂಟಾಗಿ ೫೦ ಮೈಲಿದೂರ ಕಾಣುತ್ತಿತ್ತೆಂದು ವರ

ಉತ್ತರ ಇಟಲಿಯನ್ನು ತ್ಯಜಿಸಲಾಗುವುದೆ

ಉತ್ತರ ಇಟಲಿಯನ್ನು ಇಟಾಲಿಯನರು ತ್ಯಜಿಸುವರೆಂದೂ, ಈಗಾಗಲೇ ವೆರೋನಾ ನಗರದಲ್ಲಿದ್ದ ಇಟಲಿ ಸೈನ್ಯವು ನಗರವನ್ನು ತ್ಯಜಿಸಿದೆಯೆಂದೂ, ಆ ಪಟ್ಟಣವು ಜರ್ಮನರ ಮುಖ್ಯ ಕೇಂದ್ರವಾಗಿದೆಯೆಂದೂ ಹೇಳಲಾಗಿದೆ. ಜರ್ಮನರು ಪೋ ನದಿಯಿಂದ ಹಿಡಿದು ಉತ್ತರ ಇಟಲಿಯನ್ನೆಲ್ಲಾ ಕೋಟೆ ಕೊತ್ತಲಗಳಿಂದ ಭದ್ರಪಡಿಸುತ್ತಿದ್ದಾರೆಂದೂ ಜರ್ಮನಿಯಿಂದ ಅಸಂಖ್ಯಾತ ಯುದ್ಧ ಸಾಮಗ್ರಿಗಳು ಬ್ರೆನ್ನರ್ ಗಡಿಯಿಂದ ಇಟಲಿಗೆ ಸಾಗಿಸಲಾಗಿದೆಯೆಂದೂ ವರದಿಯಾಗಿದೆ

ಜರ್ಮನರಿಗೆ ಆವಳಿ ಕಾಟ

ಬರ್ಲಿನ್ನಲ್ಲಿರುವ ಜರ್ಮನರಿಗೆ ಮಿತ್ರ ಧಾಳಿ ಮತ್ತು ರಷ್ಯಾ ಈ ಆವಳಿ ಕಾಟದಿಂದ ಬುದ್ಧಿ ಭ್ರಮಣೆಯುಂಟಾಗಿದೆಯೆಂದು ಬರ್ಲಿನ್ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.

ಆಹಾರ ಪದಾರ್ಥಗಳ ಹತೋಟಿ ಆಜ್ಞೆ

ಭಾರತ ಸರ್ಕಾರದವರು ಆಹಾರ ಪದಾರ್ಥಗಳ ಸಂಚಾರದ ಮೇಲಿನ ಹತೋಟಿ ಆಜ್ಞೆಯನ್ನು ಬಂಗಾಳ, ಬಿಹಾರ್ ಮತ್ತು ಒರಿಸ್ಸಾ ಪ್ರಾಂತ್ಯದಲ್ಲಿ ಪುನಃ ಜಾರಿಗೆ ತಂದಿರುವರು

ಮಿಲಾನ್ ನಗರ ಚೂರಾಗುತ್ತಿದೆ

ಇಟಲಿ ಮೇಲೆ ಬ್ರಿಟಿಷ್ ವಿಮಾನಗಳು ಪುನಃ ಧಾಳಿ ನಡೆಸಿವೆಯೆಂದು ವರದಿಯಾಗಿದೆ. ಮಿಲಾನ್ ಮತ್ತು ಕೋಮೋ ನಗರಗಳ ಮೇಲೆ ಒಂದೇ ದಿವಸದಲ್ಲಿ ಎರಡು ಬಾರಿ ಧಾಳಿ ನಡೆಸಲಾಯಿತು. ಟ್ರಾಮ್ ಮತ್ತು ಇತರ ಯುದ್ಧ ಕಾರ್ಖಾನೆಗಳು ನಾಶವಾದವು

ಮಿಲಾನ್ ನಗರದಲ್ಲಿ ಸೈನಿಕರೂ ಮತ್ತು ಕಾರ್ಖಾನೆ ಕೆಲಸಗಾರರೂ ಪರಸ್ಪರ ಹೊಡೆದಾಟದಲ್ಲಿ ೪೦ ಜನ ಸತ್ತರೆಂದೂ, ಕೆಲಸಗಾರರೆಲ್ಲರೂ ಮುಷ್ಕರ ಹೂಡಿದ್ದಾರೆಂ

ಖಾದಿಕೇಂದ್ರಕ್ಕೆ ದ್ರವ್ಯ ಸಹಾಯ

ಬೆಂಗಳೂರು ೧೬

ಚಿತ್ರದುರ್ಗ ಜಿಲ್ಲೆಯ ಖಾದಿ ಕೇಂದ್ರದ ಅಭಿವೃದ್ಧಿಗಾಗಿ ಸರ್ಕಾರದ ಸಹಾಯ ಕೋರಲು ಶ್ರೀಗಳಾದ ವೆಂಕಟಗಿರಿರಾಯರು, ಎಂ. ವೀರಬಸಪ್ಪನವರು, ಮತ್ತು ಇತರರು ದಿವಾನರಲ್ಲಿ ನಿಯೋಗ ಹೋಗಿ, ಚಿತ್ರದುರ್ಗ ಬೋರ್ಡಿನವರು ೧೯೪೩ ರಲ್ಲಿ ಖಾದಿ ಕೇಂದ್ರವನ್ನು ಸ್ಥಾಪಿಸಿ ೧೯೪೫ ರ ವರೆಗೆ ೧೨,೦೦೦ ರೂ. ಗಳನ್ನು ವೆಚ್ಚಮಾಡಿದೆಯೆಂದೂ, ೧೯೪೪ ರಲ್ಲಿ ಇದರ ಕೆಲಸ ಕಾರ್ಯಗಳು ವಿಸ್ತರಿಸಿ ಸರ್ಕಾರದಿಂದ ೧೦,೦೦೦ ರೂ. ಗಳು ಕೈಗಾರಿಕೆ ಸಾಲ ಪಡೆಯಲು ಅನುಕೂಲವಾಯಿತೆಂದೂ, ಇದರಿಂದ ಹಲವು ಕೇಂದ್ರಗಳು ಸ್ಥಾಪನೆಯಾದವೆಂದು ತಿಳಿಸಿದರು. ಇದನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲು ಸರ್ಕಾರದವರು ೩೫,೦೦೦ ರೂ. ಗಳನ್ನು ಸಾಲವಾಗಿ ಕೊಡಬೇಕೆಂದು ಕೋರಿದರು. ದಿವಾನರು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು.

ಪೌರ ಸಭೆಗೆ ಸಾಲ

ಬಿ. ವಿ. ಕೃಷ್ಣಯ್ಯಂಗಾರ್ ರಸ್ತೆಯ ಮತ್ತು ಆಲ್ಬರ್ಟ್ ಶ್ರೀನಿವಾಸಾಚಾರ್ ರಸ್ತೆಯ ಬದಿಗೂ ಎರಡು ಲಕ್ಷ ಆರವತ್ತು ನಾಲ್ಕು ಸಾವಿರ ರೂ.ಗಳ ಜಮೀನನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೂ ಮತ್ತು ಗಾಂಧಿನಗರದಲ್ಲಿ ೫೭೮೦ ರೂ. ಬೆಲೆ ಬಾಳುವ ಆಸ್ತಿಗಳನ್ನು ಆಕ್ವೈರ್ ಮಾಡಿಕೊಳ್ಳುವುದಕ್ಕೂ ಸರ್ಕಾರದವರು ಪೌರ ಸಭೆಗೆ ಲಕ್ಷ ರೂ. ಸಾಲ ಕೊಟ್ಟಿದ್ದಾರೆ. ಒಚ್ಚರಿಗೆ ಪಟ್ಟಿಗಳನ್ನು ಕಟ್ಟಲು ಪೌರ ಸಭೆಯು ೪೪-೪೫ ನೇ ವರ್ಷದ ಬಡ್ಜೆಟ್ಟಿನಲ್ಲಿ ೧,೦೦೦೦ ರೂ. ಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ

ನೂತನ ಹುದ್ದೆ

ಪೂನಾದಲ್ಲಿ ಮಿಲಿಟರಿ ಅಕೌಂಟ್ಸ್‌ಗಾಗಿ ನೇಮಿಸಲಾಗಿರುವ ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಲೆಕ್ಚರರಾದ ಬಿ. ಹೆಚ್. ಸುಬ್ಬರಾಯರು ಪೂನಾಕ್ಕೆ ಪ್ರಯಾಣ ಬೆಳೆಸಿದರು.

ಕತ್ತಿಯಿಂದ ಇರಿತ

ಕಲ್ಪಾಸ್ ಪೇಟೆಯಲ್ಲಿ ಜಾತ್ರೆಯಲ್ಲಿ ಎಂಬಾಕೆಯನ್ನು ಆಕೆಯ ಗಂಡ ಹೊಡೆದು ಇರಿದುದರಿಂದ, ಅದರ ಪರಿಣಾಮವಾಗಿ ಆಕೆಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತೆಂದೂ ಗೊತ್ತಾಗಿದೆ.

ಸ್ಟಾಲಿನ್ನರಿಗೆ ಕ್ರೈಮಿಯ ಸಮ್ಮೇಳನದ ವರದಿ

ಕ್ರೈಮಿಯಲ್ಲಿ ನಡೆದ ರೂಸ್ವೆಲ್ಟ್-ಚರ್ಚಿಲ್ಲರ ಸಮ್ಮೇಳನದಲ್ಲಿ ಇಂಗ್ಲೆಂಡ್ ವಿದೇಶಾಂಗ ಮಂತ್ರಿಯಾದ ಮಿ|| ಈಡನ್‌ರನ್ನೂ ಮತ್ತು ಅಮೆರಿಕದ ಎಡ್ವರ್ಡ್ ಸ್ಟೆಟಿನಿಯಸ್‌ರನ್ನೂ ಈ ಸಮ್ಮೇಳನದಲ್ಲಿ ನಡೆದನಂತರ ರಷ್ಯಕ್ಕೆ ಕಳುಹಿಸಲಾಗಿದೆಯೆಂದು ವರದಿಯಾಗಿದೆ. ಮಿತ್ರ ಕೈಗೊಂಡ ಕಾರ್ಯಾಚರಣೆಯನ್ನು ಇವರು ಸ್ಟಾಲಿ

ಹಂಗೇರಿ ಕೆಲಸಗಾರರಿಗೆ ಎಚ್ಚರಿಕೆ

ಅಮೇರಿಕ ವಿಮಾನಗಳು ಹಂಗೇರಿಯ ಮೇಲೆ ಬಂದು, ಜರ್ಮನರಿಗಾಗಿ ಕಾರ್ಖಾನೆಗಳಲ್ಲಿ ಕೆಲಸಮಾಡುತ್ತಿರುವವರನ್ನು ಬಿಟ್ಟು ಹೋಗಬೇಕೆಂದು ಎಚ್ಚರಿಕೆಕೊಟ್ಟಿವೆ. ಬುಡಾಪೆಸ್ಟ್ ನಗರ ಜನರಿಗೆ ಅನೇಕ ಪ್ರಕಾರದ ಕರಪತ್ರಗಳಲ್ಲಿ ಮೇಲೆ ... ಕಾರ್ಖಾನೆಗಳ ... ಸ್ಥಾನದ ... ಎಚ್ಚರಿಕೆ ಕೊಡಲಾಗಿದೆ

ಸ್ನೇಹಪ್ರಭಾ ದಾಂಪತ್ಯ ವಿಚ್ಛೇದನ

ಪ್ರಸಿದ್ಧ ಸಿನಿಮಾ ನಟನಟಿಯರಾದ ಸ್ನೇಹಪ್ರಭಾ ಕಿಶೋರ್‌ಸಾಹು ದಾಂಪತ್ಯ ವಿಚ್ಛೇದ ... ಪ್ರಕರಣದಲ್ಲಿ ನಾಗಪುರದ ಸೈಕೋರ್ಟಿನವರು ಸ್ನೇಹಪ್ರಭಾ ಪ್ರಧಾನಳಿಗೆ ... ಇದರಲ್ಲಿ ... ಕಿಶೋರ್‌ಸಾಹು ... ತನಗೆ ... ಸಂತತಿ ... ಗಳು ದೊರೆಯಲಿಲ್ಲವೆಂದೂ, ಅದಕ್ಕೆ ಸ್ನೇಹಪ್ರಭಾ ... ಕಾರಣವೆಂದೂ ... ಆಕೆ ... ಸ್ನೇಹಪ್ರಭಾ ... ಇರುವೆನೆಂದೂ ವಾದಿಸಿದ್ದಳು

ಅವರ ನ್ಯಾಯಾಧೀಶರು ಸ್ನೇಹಪ್ರಭಾ ಳಗೆ ... ಆಕೆಯು ವೈದ್ಯ ಪರೀಕ್ಷೆಗೆ ಒಪ್ಪದೆ ನ್ಯಾಯ ... ಪರಿಶೀಲನೆ ಮಾಡಿದರೆಂದು ... ಆಕೆ ... ಎರಡೂ ಕೋರ್ಟಿನ ವೆಚ್ಚವನ್ನು ಕೊಡಬೇಕೆಂದು ಆಜ್ಞೆ ಮಾಡಿದರು

ನವಾಬ್ ಯಾರ್ ಜಂಗರಿಗೆ ಗಡೀಪಾರು

ಶ್ರೀನಗರದಲ್ಲಿ ನಡೆಯಲಿದ್ದ ಮುಸ್ಲಿಂ ಸಮ್ಮೇಳನಕ್ಕೆ ಬಂದಿದ್ದ ಅಖಿಲ ಭಾರತ ಸಂಸ್ಥಾನಿಕ ಮುಸ್ಲಿಂ ಸಮ್ಮೇಳನದ ಅಧ್ಯಕ್ಷರಾದ ನವಾಬ್ ಬಹದ್ದೂರ್ ಯಾರ್ ಜಂಗ್‌ರನ್ನು ಕಾಶ್ಮೀರದಿಂದ ಗಡೀಪಾರು ಮಾಡಲಾಯಿತು. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಇವರು ತಿರಸ್ಕರಿಸಿ, ಶಾಪು ನವಾಬ್ ಬಹದ್ದೂರ್ ಯಾರ್ ಜಂಗ್‌ರಾಗಿ ... ಆ ಬಳಿಕ ... ದಾರಿಯೂ ... ಆಜ್ಞೆ ... ಪ್ರತಿಭಟಿಸಿದರು ಆದರೆ ಪೋಲೀಸರು ತಮಗೆ ಮ್ಯಾಜಿಸ್ಟ್ರೇಟರು ಕೊಟ್ಟ ... ನವಾಬ್ ಬಹದ್ದೂರ್ ಯಾರ್ ಜಂಗ್‌ರನ್ನು ಗಡೀಪಾರು ಮಾಡಿ ಬಿಟ್ಟು ಬಂದರು.

ಭಾರತಕ್ಕೆ ಫಿಲಿಪ್ಸರು

ಪ್ರೆಸಿಡೆಂಟ್ ರೂಸ್ವೆಲ್ಟರ ಪ್ರತಿನಿಧಿಗಳಾದ ಮಿ|| ವಿಲಿಯಂ ಫಿಲಿಪ್ಸರು ಬೇಸಿಗೆಯ ಅಂತ್ಯದ ವೇಳೆಗೆ ಪುನಃ ಭಾರತಕ್ಕೆ ಬರಬಹುದೆಂದು ಗೊತ್ತಾಗಿದೆ.

ಪತ್ರಿಕೆ ಆಫೀಸ್ ಶೋಧನೆ

ಲಕ್ನೋದ 'ಅಧಿಕಾರ' ಎಂಬ ಪತ್ರಿಕೆ ಆಫೀಸನ್ನು ಮತ್ತು ಅದರ ಮಾಲೀಕರ ಮನೆಯನ್ನೂ ಪೋಲೀಸರು ಶೋಧಿಸಿದರು ಆ ಪತ್ರಿಕೆಯ ಸಂಪಾದಕರಾದ ... ಎಂಬವರನ್ನು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ, ಅಲ್ಲಿ ವಿಚಾರಣೆ ನಡೆಸಿದನಂತರ ಬಿಡುಗಡೆ ಮಾಡಲಾಯಿತು.

ಮುಸ್ಸೋಲಿನಿಗೆ ಗಂಡಾಂತರ

ಅಮೇರಿಕ ಸೈನ್ಯವು ಮುಸ್ಸೋಲಿನಿಯ ಕೇವಲ ೭೦ ಮೈಲಿ ದೂರದಲ್ಲಿದೆಯೆಂದು ವರದಿಯಾಗಿದೆ

---

೧೦ ಮಂದಿಗೆ ಮರಣ ದಂಡನೆ

ಒಬ್ಬರ ... ಜಿಲ್ಲೆಯ ... ಹಳ್ಳಿಯ ಮ್ಯಾಜಿಸ್ಟ್ರೇಟರಾದ ಬಸವಣ್ಣ ಗೌಡರು ಮತ್ತು ಅವರ ಇಬ್ಬರು ಮಕ್ಕಳು ಮತ್ತು ಇಬ್ಬರು ಸೇವಕರನ್ನು ಕೊಲೆ ಮಾಡಿದರೆಂಬ ಆಪಾದನೆ ಮೇಲೆ ಒಬ್ಬ ಮುಖ್ಯ ... ಮತ್ತು ಇತರ ೯ ಮಂದಿಗೆ ಮರಣ ದಂಡನೆ ವಿಧಿಸಲಾಯಿತು

ಹಾಲಿವುಡ್ ನಟಿಯ ಮದುವೆ

ಪ್ರಸಿದ್ಧ ಹಾಲಿವುಡ್ ಸಿನಿಮಾ ನಟಿಯಾದ ಇಸ್ಟೆಲ್ ಜ್ಯುಯೆಲ್ ಎಂಬಾಕೆಯು ಭಾರತೀಯ ನರ್ತಕರಾದ ಚಂದ್ರಕಾಂತರನ್ನು ಮದುವೆಯಾಗುವರೆಂದು ವರದಿಯಾಗಿದೆ.

ಬ್ರಿ|| ಮತ್ತು ಅಮೇರಿಕನ್ ವಿಮಾನ ಕಾರ್ಯಾಚರಣೆ

ಇಟಲಿಯ ಉತ್ತರದಲ್ಲಿ ಮಿಲಾನ್ ಎಂಬಲ್ಲಿನ ಶತ್ರು ಸ್ಥಾನಗಳ ಮೇಲೆ ಮಿತ್ರ ವಿಮಾನಗಳು ಅತಿ ಉಗ್ರ ಧಾಳಿ ಮಾಡಿದವು ... ಯುದ್ಧ ಕ್ಷೇತ್ರದಲ್ಲಿ ಬಾಂಬುಗಳು ... ಅನ್ನ ... ನಾಶಮಾಡಲಾಯಿತು.

ಇರಾನಿ ಕ್ಷೇತ್ರದಲ್ಲಿ ಬ್ಯೂಫೈಟರ್ ವಿಮಾನಗಳು ಧಾಳಿ ಮಾಡಿ ... ೯೦ ಮೋಟರುಗಳನ್ನೂ, ... ಒಂದು ... ನಾಶ ಮಾಡಿದವು ... ವರದಿಯಾಗಿದೆ

ಚಿತ್ರ ವಿಮರ್ಶೆ 'ರಾಣಿ'

ಈ ಚಿತ್ರವನ್ನು ಶ್ರೀ ಬರುವಾರವರು ತಯಾರಿಸಿದ್ದಾರೆ. ಬರುವಾರವರು ರಾಜಕುಮಾರರು. ವಿದೇಶಗಳಲ್ಲೆಲ್ಲಾ ಸಂಚರಿಸಿ ಬಂದಿರುವರು ಇವರು ಕಲ್ಕತ್ತಾದಲ್ಲಿ ನ್ಯೂ ಥಿಯೇಟರ್ಸ್ ಸಂಸ್ಥೆಯಲ್ಲಿ ದಿಗ್ದರ್ಶಕರಾಗಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅಲ್ಲಿ ಕೆಲಸ ಬಿಟ್ಟು, ಬೊಂಬಾಯಿಗೆ ಬಂದು ತಮ್ಮದೇ ಸ್ವಂತ ಚಿತ್ರ ತಯಾರಿಕಾ ಸಂಸ್ಥೆಯನ್ನು ಸ್ಥಾಪಿಸಿದರು. 'ರಾಣಿ' ಈ ಚಿತ್ರವು ಇವರು ತಯಾರಿಸಿದ ೨ ನೇ ಚಿತ್ರ ಇವರು ದಿಗ್ದರ್ಶನದ ವಿಧಾನವು ವಿ.ಕ್ಷ... ದಿಗ್ದರ್ಶನ ಗಳಂತಿರುವುದಿಲ್ಲ ಇವರದೇ ಒಂದು ರೀತಿ ಈ ಚಿತ್ರದಲ್ಲೂ ಇವರು ತಮ್ಮದೇ ಆದ ಆ ಒಂದು ವಿಧಾನವನ್ನು ಉಳಿಸಿಕೊಂಡು ಬಂದಿದ್ದಾರೆ. ಮಾಲತಿ ಎಂಬ ಹೆಣ್ಣಿಗೆ ಅವಳೂರು ... ಮದುವೆ ನಿಂತುಹೋಗುವುದು. ಆ ಹೆಣ್ಣು ಜೀವನದಲ್ಲಿ ಜಿಗುಪ್ಸೆಗೊಂಡು ದೇಶಾಂತರ ಹೊರಟುಹೋಗುವಳು ತನ್ನ ಹೆಸರನ್ನು ರಾಣಿ ಎಂದು ಬದಲಾಯಿಸಿಕೊಂಡು ಕೂಲಿಸಾಲಿಯಲ್ಲಿ ಜೀವನ ನಡೆಸುವಳು. ರಾಜನೆಂಬ ಒಬ್ಬ ... ರಾಣಿಗೂ ವಿಶ್ವಾಸ ಬೆಳೆಯುವುದು. ನಡುವೆ ಕೆಲವು ಘಟನೆಗಳು ನಡೆದು ಕೊನೆಗೆ ರಾಜ-ರಾಣಿಯರು ವಿವಾಹಿತರಾಗುವರು. ಈ ಕಥೆಯನ್ನು ಬರುವಾರವರು ಹಾಸ್ಯ ಪಾತ್ರಗಳನ್ನು ಬೆರಸಿ ಚಿತ್ರಿಸಿರುವರು. ಬರುವಾರರು ನಾಯಕನ ಪಾತ್ರವನ್ನು ವಹಿಸಿರುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತವೆ ಸೊಂಪ ಜೀವಿಗಳ ಬಾಯಿಂದ ಎಂತೆಂಥ ಬೆಲೆಯ ಮಾತುಗಳು ಹೊರಡುವುವೋ, ಅದನ್ನು ಕೆಲವು ಪಾತ್ರಗಳ ಬಾಯಿಂದ ಹೊರಟಿವೆ ಒಟ್ಟಿನಲ್ಲಿ ತನಾಸೆಯಾಗಿ ಕುಳಿತು ಚಿತ್ರವನ್ನು ನೋಡಬಹುದು.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮುಬಟ್ಟುತ್ತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ತೀವ್ರವಾಗಿ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ವೃದ್ಧಿಸಿ, ಮನಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 181, ಚೈನಾ ಬಜಾರುರಸ್ತೆ, ಮದರಾಸು.

ಏಜೆಂಟರು: ಅಶೋಕಾ ಫಾರ್ಮಸಿ ಹಳೇಮೈಸೂರುಬ್ಯಾಂಕುರಸ್ತೆ, ಮೈಸೂರು

ಲಂಚ ನೌಕರರಿಗೆ ಶಿಕ್ಷೆ

ಮಾಂಟ್ಗೊಮರಿ ಪೋಸ್ಟಾಫೀಸಿನಲ್ಲಿ ೪ ಸಾವಿರ ರೂಪಾಯಿಗಳ ಕಳುವಿನ ಆಪಾದನೆ ಮೇಲೆ ಅಲ್ಲಿನ ಪೋಸ್ಟ್ ಮಾಸ್ಟರ್ ಡೆಪ್ಯುಟಿ ಪೋಸ್ಟ್ ಮಾಸ್ಟರ್ ಮತ್ತು ಇತರ ಇಬ್ಬರು ನೌಕರರಿಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ೧೦೦ ರೂ. ಗಳ ಜುಲ್ಮಾನೆ ವಿಧಿಸಲಾಯಿತು.

ಶತ್ರು ಯುಬೋಟುಗಳ ನಾಶ

ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಒಟ್ಟು ೯೦ ಶತ್ರು ಯುಬೋಟುಗಳನ್ನು ನಾಶಮಾಡಲಾಗಿದೆಯೆಂದೂ, ಅಮೇರಿಕ ನೌಕಾ ಬಲವು ಈ ವರ್ಷದಲ್ಲಿ ಮಿಲಿಯ ಟನ್ನುಗಳಷ್ಟು ಹೆಚ್ಚಾಗಿದೆಯೆಂದು ವರದಿಯಾಗಿದೆ.

ಅಂಗಡಿ ಲೂಟಿಯಲ್ಲಿ ಮೂರು ಮಂದಿ ಮರಣ

ಅಹಮದಾಬಾದಿನಲ್ಲಿ ದವಸ ಧಾನ್ಯ ಅಂಗಡಿಯೊಂದನ್ನು ೧೦೦ ಜನರ ಗುಂಪೊಂದು ಲೂಟಿ ಮಾಡಿತು ಆಗ ಪೋಲೀಸರು ಹತೋಟಿಗೆ ತರಲು ಗುಂಡು ಹಾರಿಸಿದುದರ ಪರಿಣಾಮವಾಗಿ ೩ ಜನರು ಸತ್ತರೆಂದು ವರದಿಯಾಗಿದೆ.

Edited, printed and published by A. R. Nagaraja at the Sadhvi Press, D Subbiah Road, Mysore.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಪ್ರಧಾನವಾದ ಜೀವನಿ ಔ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತಾ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ಗಂಡೌಷಧ.

ಋತು ಕಾಲದಲ್ಲಿ, ಅಧಿಕ ಅನಿಯಮಿತ ರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಬಹಿಷ್ಟೆ ಮುಂತಾದುವುಗಳನ್ನು 'ಜೀವನಿ' ಜಾಗ್ರತೆ ಪರಿಹರಿಸುತ್ತದೆ

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣವಿಕಾರಗಳ 'ಜೀವನಿ' ಪ್ರಶಸ್ತವಾದುದು

ರಕ್ತಹೀನತೆ, ನರಗಳ ದೌರ್ಬಲ್ಯ, ಬೆನ್ನುನೋವು, ಸೊಂಟನೋವು, ಗರ್ಭಸ್ರಾವ, ಬಂಜೆತನಗಳಿಗೆ ಜೀವನಿ ಅತ್ಯಂತ ಯುಕ್ತವಾದುದು.

The Benares Textile Emporium
(opposit to Chamundeswari Talkies)
Purchase Direct from Benareswalas

ಬನಾರಸ್‌ದವರ ಕಲಾಬತ್ತು ಜವಳಿ ಅಂಗಡಿ

... ಬಯಲಿಗೆ ಮತ್ತು ರಿಡಿಸ್ಯೂರ್ಡ್ ಡ್ರೆಸ್ ... ಟಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿ ...

ಈ ದಿನವೇ ಒಂದು ಪರೀಕ್ಷಿಸಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೦ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿವಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.— ಚಿಲ್ಲರೆಯಾಗಿ ಸಂಸ್ಕರಿತ ಸಕ್ಕರೆ, ಕಲ್ಲುಸಕ್ಕರೆ, ಒಣಾ ಪಕ್ಕಡಿ ಸ

ಸುಮಾನಿ ಮೇಲೆ ದಸ್ತಗಿರಿ

ಮೈಸೂರು ೧೮

ಟಿ ನರಸೀಪುರದ ಪೋಲೀಸರು ಮೈಸೂರು ನಗರದ ಒ. ದಾಸ್ ಎಂಬುವನ ಹತ್ತಿರ ಎರಡು ರೂ ಗಳ ಕರೆನ್ಸಿ ನೋಟುಗಳು ಇದ್ದುದನ್ನು ಕಂಡು, ಅವನನ್ನು ಗುಮಾನಿ ಮೇಲೆ ಹೆಂಡದ ಅಂಗಡಿ ಬಳಿ ದಸ್ತಗಿರಿ ಮಾಡಿ ಮುಂದಿನ ವಿಚಾರಣೆ ಕ್ರಮ ನಡೆಸುತ್ತಿದ್ದಾರೆ.

ಮಿತ್ರ ಮಂಡಳಿ

ಹಳೇ ಅಗ್ರಹಾರದ ಮಿತ್ರ ಮಂಡಳಿ ಯವರ ಸಾಹಿತ್ಯೋತ್ಸವವು ೨೦-೮-೪೩ ನೇ ಭಾನುವಾರ ಸಂಜೆ ೬ ಗಂಟೆಗೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಡಾ॥ ಎಂ. ಹೆಚ್. ಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಟಾಗೂರ್ ದಿನಾಚರಣೆ

ರಾಜಧಾನಿಯ ಶಾರದಾ ವಿಲಾಸ ಹೈಸ್ಕೂಲಿನಲ್ಲಿ ನಿನ್ನೆ ಸಂಜೆ ಕವಿ ರವೀಂದ್ರನಾಥ ಟಾಗೂರ್ ರವರ ದಿನಾಚರಣೆಯು ನಡೆಯಿತು. ಶ್ರೀ॥ ಎಂ. ಯಾದವನಾರಾಯಣರವರು, ಶ್ರೀ॥ ಬಿ. ಎಸ್. [illegible] ಉಪನ್ಯಾಸ ಮಾಡಿದರು. ಶ್ರೀ॥ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಅಕ್ಷರ ಪ್ರಚಾರ ಸಂಘ

ಮೈಸೂರು ನಗರದ ಅಕ್ಷರ ಪ್ರಚಾರ ಸಮಿತಿಯವರು ಕೈಗೊಂಡಿರುವ "ಸಮಸ್ತ ನಗರಗಳಲ್ಲಿರುವವರನ್ನು ಅಕ್ಷರಸ್ಥರನ್ನಾಗಿ ಮಾಡಿ" ಎಂಬ ನೂತನ ಕಾರ್ಯಕ್ರಮದ ಪ್ರಾರಂಭ ಭಾಷಣವನ್ನು, ಶ್ರೀ. ಆರ್. [illegible]ರವರು ತಾ॥ ೨೦-೮-೪೩ ಸಂಜೆ ೬ ಗಂಟೆಗೆ ಬನುಮಯ್ಯ ಹೈಸ್ಕೂಲಿನಲ್ಲಿ ನೆರವೇರಿಸುವರು.

ವೈಶ್ಯ ಪತ್ರಿಕೆಯ ವಾರ್ಷಿಕೋತ್ಸವ

ರಾಜಧಾನಿಯ ವಾರ ಪತ್ರಿಕೆಯಾದ ವೈಶ್ಯ ಪತ್ರಿಕೆ ಯ ತೃತೀಯ ವಾರ್ಷಿಕೋತ್ಸವವು ೨೨-೮-೪೩ ನೇ ಭಾನುವಾರ ಸಂಜೆ ೬-೩೦ ಗಂಟೆಗೆ ಆರ್ಯವೈಶ್ಯ [illegible] ಭವನದಲ್ಲಿ, ರಾಜಸೇವಾಸಕ್ತ ವಾಸುದೇವ ಸುಬ್ಬರಾವ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಡುವುದು.

ಆಲೂಗಡ್ಡೆ ಕ್ಷಾಮ

ಬೆಂಗಳೂರು ನಗರದಲ್ಲಿ ದಿನಕ್ಕೆ ೧೫೦೦ ಮೂಟೆ ಆಲೂಗಡ್ಡೆ ಆವಶ್ಯಕವಾಗಿ ಬೇಕಾಗಿದೆ. ಆದರೆ ಈಗ ೩೦೦ ಮೂಟೆ ಮಾತ್ರ ಸಿಕ್ಕುತ್ತಿದೆ. ಮದ್ರಾಸ್ ಸರ್ಕಾರದವರ ಪ್ರತಿಬಂಧಕ ಆಜ್ಞೆಯೇ ಇದಕ್ಕೆ ಕಾರಣವೆಂದೂ, ಇದನ್ನು ತಪ್ಪಿಸಬೇಕೆಂದೂ ವರ್ತಕರು ಸರ್ಕಾರದವರಲ್ಲಿ ಮನವಿಮಾಡಿಕೊಂಡಿರುವರು.

ಮುಸಲ್ಮಾನರ ದಸ್ತಗಿರಿ

[illegible] ಮತ್ತು ಇತರ ಇಬ್ಬರು ಮುಸಲ್ಮಾನರು "ಹಿಂದೂಸ್ಥಾನ್ ರೆಡ್ ಆರ್ಮಿ" ಎಂಬ ಆಕ್ಷೇಪಕರವಾದ ನೋಟೀಸುಗಳನ್ನು [illegible] ಹಂಚಿದ ಮೇಲೆ ಸಹಾಯ ದಸ್ತಗಿರಿಮಾಡಲ್ಪಟ್ಟು ಅವರ ಮೇಲೆ ಕೇಸನ್ನು ಹೂಡಲಾಗಿದೆ.

ಸಂಪುಟ ೨] ಬುಧವಾರ ೧೮-೮-೪೩ [ಸಂಚಿಕೆ ೩೮

ಆಕ್ಸಿಸ್ ಸೈನ್ಯ ಸಿಸಲಿಯನ್ನು ತ್ಯಜಿಸಿತು

ಪೂರ್ವ ಯೂರೋಪಿನಲ್ಲಿ ಮಿತ್ರ ದಂಡಯಾತ್ರೆಯ ಸೂಚನೆ
ಜರ್ಮನ್ ಬಂದಿ ಶಿಬಿರಕ್ಕೆ ನಾರ್ವೆ ಸೈನ್ಯಾಧಿಕಾರಿಗಳ ರವಾನೆ

ಔಷಧಿಗಳ ಬೆಲೆ ಏರೋಟ

ಭಾರತ ಸರ್ಕಾರದವರು ಇ ಲಪ ಬೆಲೆಗೆ ಔಷಧಿಗಳನ್ನೊದಗಿಸಬೇಕೆಂದು ಅಭಿಪ್ರಾಯಿಸಿದೆ. ಈಗ ವ್ಯಾಪಾರಿಗಳು ಔಷಧಗಳ ಮೇಲೆ ವಿಶೇಷ ಲಾಭ ಪಡೆಯುತ್ತಿರುವರು. ಔಷಧ ತಯಾರಿಸುವವರೂ ಮತ್ತು ವರ್ತಕರೂ ಸಹ ಸಾರ್ವಜನಿಕ ಹಿತಕ್ಕೆ ವಿರೋಧವಾಗಿ ಬೆಲೆಯನ್ನು ಏರಿಸಿರುವರು. ಆದ್ದರಿಂದ ಔಷಧಿಗಳ ಮೇಲೆ ಬೆಲೆ ಏರೋಟ ಮಾಡಬೇಕೆಂದು ನಿರ್ಧರಿಸಲಾಗಿದೆಯೆಂದು ಟಾಗಾಗಿ ಇಂಡಿಯಾ ಸರ್ಕಾರದ ಡಿಸ್ಟ್ರಿಕ್ಟ್ ಸಪ್ಲೈ ಇಲಾಖೆಯ [illegible] ಡಾ॥ ಎಂ. ಎನ್. [illegible] ಬೇರಿಯ ಔಷಧ ತಯಾರಕರ ಸಮ್ಮೇಳನದಲ್ಲಿ ತಿಳಿಸಿದರು.

ಮದ್ರಾಸ್ ಪೌರ ಸಭೆಯ ಘಟನೆ

ಮದರಾಸ್ ಪೌರ ಸಭೆಯಲ್ಲಿ ಪುಣೆ ಠರಾವನ್ನು ಶ್ರೀ ಸತ್ಯಮೂರ್ತಿ ರವರ ಜ್ಞಾಪಕಾರ್ಥವಾಗಿ "ಸತ್ಯಸಾಗರ" ಎಂಬ ಹೆಸರನ್ನು ಇಡಬೇಕೆಂದು ತಂದ ನಿರ್ಣಯ ಅಂಗೀಕಾರವಾಗಿದೆ, ಕಾಂಗ್ರೆಸ್ ಸದಸ್ಯರೆಲ್ಲ ಸಭೆಯನ್ನು ತ್ಯಜಿಸಿದರು. ಸಭೆಗೆ ೧೮ ಜನ ಸದಸ್ಯರು ಮಾತ್ರ ಹಾಜರಿದ್ದ ಕೋರಂ ಇರಲಿಲ್ಲವೆಂದೂ ಯೂರೋಪಿಯನ್ ಮತ್ತು ಯುನೈಟೆಡ್ ನ್ಯಾಷನಲಿಸ್ಟ್ ಪಾರ್ಟಿ ಸದಸ್ಯರುಗಳು ಸಭೆಗೆ ಬಂದಿರಲಿಲ್ಲವೆಂದೂ ಆದುದರಿಂದ ಸಭೆ ಮುಂದುವರಿಸಲಾಯಿತೆಂದೂ ವರದಿಯಾಗಿದೆ.

ಪೂರ್ವ ಯೂರೋಪಿನಲ್ಲಿ ಮಿತ್ರರ ದಂಡಯಾತ್ರೆ

ಪೂರ್ವ ಮೆಡಿಟರೇನಿಯನ್ ಪ್ರದೇಶದಿಂದ ಮಿತ್ರದಂಡಯಾತ್ರೆ ಪ್ರಾರಂಭವಾಗುವುದೆಂದು ವರದಿಯಾಗಿದೆ. ಕ್ರೀಟ್ ಮೇಲೆ ಮೊದಲು ಮಿತ್ರರು ಧಾಳಿ ಪ್ರಾರಂಭಿಸಿದನಂತರ ಆಗ್ನೇಯ ಪೂರ್ವ ಯೂರೋಪಿನ ಮೇಲೆ ದಂಡಯಾತ್ರೆ ನಡೆಸಲಿರುವರೆಂದು ಹೇಳಲಾಗಿದೆ.

ಕ್ರೀಟಿನಲ್ಲಿ ಮಿತ್ರರಿಗೆ ಸನ್ನಿವೇಶವೊಂದಾಗಿ ಜಲ್ಲಿಸರು ಸಾರಿ, ಸೈನ್ಯಗಳು ಸಿದ್ಧವಾಗಿರಬೇಕೆಂದು ತಿಳಿಸಿದ್ದಾರೆ.

ಮೈಸೂರು ಸ್ಟೇಟ್ ಕ್ರಿಕೆಟ್ ಸಂಘ

ಮೈಸೂರು ಸ್ಟೇಟ್ ಕ್ರಿಕೆಟ್ ಸಂಘದ ವಾರ್ಷಿಕ ಜನರಲ್ ಬಾಡಿ ಮೀಟಿಂಗು ಮೊನ್ನೆ ದಿವಸ ನಡೆದು ೧೯೪೩-೪೪ ನೇ ಸಾಲಿಗೆ ರಾಜಧರ್ಮ ಪ್ರಸಕ್ತ, ಜಸ್ಟಿಸ್ ಸಿಂಗಾರವೇಲು ಮೊದಲಿಯಾರರು ಅಧ್ಯಕ್ಷರಾಗಿಯೂ, ಶ್ರೀ ಎಂ. ವಿಜಯಸಾರಥಿ ರವರನ್ನು ಕಾರ್ಯದರ್ಶಿಗಳಾಗಿಯೂ ಆರಿಸಲಾಯಿತು.

ಮುಂದಿನ ಡಿಸೆಂಬರ್ ತಿಂಗಳಲ್ಲಿ ಒಂದು ಟ್ರಯಾಂಗ್ಯುಲರ್ ಕ್ರಿಕೆಟ್ ಟೋರ್ನಮೆಂಟೊಂದನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ಸಿಸಲಿ ತ್ಯಜಿಸಲಾಯಿತು

ಸಿಸಲಿಯಲ್ಲಿದ್ದ ಎಲ್ಲಾ ಜರ್ಮನ್ ಮತ್ತು ಇಟಾಲಿಯನ್ ಸೈನ್ಯವನ್ನೂ ಅಲ್ಲಿಂದ ಸಂಪೂರ್ಣವಾಗಿ ಕಳುಹಿಸಲಾಗಿದೆಯೆಂದು ಜರ್ಮನ್ ವಾರ್ತೆ ತಿಳಿಸುತ್ತದೆ. ಸಿಸಲಿಯಲ್ಲಿ ಶತ್ರು ಪ್ರತಿಭಟನೆ ನಿಂತಿದೆಯೆಂದೂ, ಮೆಸ್ಸೀನಾ ಭಾಗದಲ್ಲಿ ಮಾತ್ರ ಸ್ವಲ್ಪ ಶತ್ರು ಪ್ರತಿಭಟನೆ ಇದೆಯೆಂದೂ, ಮತ್ತು ಮೆಸ್ಸೀನಾ ನಗರದ ಹತ್ತಿರ ಮಿತ್ರ ಸೈನ್ಯವು ಬಂದಿವೆಯೆಂದೂ, ಮೆಸ್ಸೀನಾ ಪತನವು ಶೀಘ್ರವಲ್ಲೇ ಆಗುವುದೆಂದೂ ವರದಿಯಾಗಿದೆ.

ಕ್ರಿಕೆಟ್ ಆಟಗಾರರು ಶತ್ರು ಬೈದಿ

ಸುಪ್ರಸಿದ್ಧ ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ಆಟಗಾರರಾದ ವೆರಿಟಿ ಎಂಬುವರು ಸಿಸಲಿಯ ರಣರಂಗದಲ್ಲಿ ಗಾಯಗೊಂಡು ಶತ್ರು ಬಂದಿಗಳಾಗಿರುವರೆಂದು ವರದಿಯಾಗಿದೆ.

ಶ್ರೀಮತಿ ಕಮಲಾದೇವಿ ಯವರ ಬಿಡುಗಡೆ

ವೆಲ್ಲೂರು ಜೈಲಿನಲ್ಲಿ ಬಂಧನದಲ್ಲಿದ್ದ ಶ್ರೀಮತಿ ಕಮಲಾದೇವಿಯವರನ್ನು ನೆನ್ನೆ ದಿವಸ ಒಂದು ತಿಂಗಳ ಪೆರೋಲ್ ಮೇಲೆ ಬಿಡುಗಡೆ ಮಾಡಲಾಯಿತು. ಅವರ ಮೇಲೆ ಮೈಸೂರು ಸಂಸ್ಥಾನಕ್ಕೆ ಕಾಲಿಡಕೂಡದೆಂಬ ಪ್ರತಿಬಂಧಕಾಜ್ಞೆಯು ಇದ್ದೂ ಇದು ನ್ಯಾಯವೆಂದು ಅವರಿಗೆ ಪೋಲೀಸರು ತಿಳಿಸಿದರು ಅವರು ಬೊಂಬಾಯಿಗೆ ಪ್ರಯಾಣ ಬೆಳೆಸಿದರು.

ಇಟಲಿಗೆ ಜರ್ಮನರ ಬೆದರಿಕೆ

ಇಟಲಿಯು ಯುದ್ಧವನ್ನು ಬಿಡಲು ಬಯಸಿದರೆ, ಮುಸೋಲಿನಿಯನ್ನು ಪುನಃ ಇಟಲಿಗೆ ತರಬೇಕಾಗುವುದೆಂದು ಜರ್ಮನಿಯು ರಿಬ್ಬನ್‌ಟ್ರಾಪ್‌ರವರು ಇಟಲಿ ವಿದೇಶಾಂಗ ಮಂತ್ರಿಯನ್ನು ಭೇಟಿ ಮಾಡಿದಾಗ ತಿಳಿಸಿರುವರೆಂದು ವರದಿಯಾಗಿದೆ.

ಇಟಲಿ ಯುದ್ಧ ನಿಲ್ಲಿಸಬೇಕು

ಇಟಲಿಯ ಸೋಷಿಯಲಿಸ್ಟ್ ಪಕ್ಷದವರು ಒಂದು ಪಂಚಕೆಯನ್ನು ಹೊರಡಿಸಿ, ವಿಕ್ಟರ್ ದೊರೆಗಳು ರಾಜ್ಯತ್ಯಾಗ ಮಾಡಬೇಕೆಂದೂ ಇಟಲಿಯು ತಕ್ಷಣ ಯುದ್ಧ ನಿಲ್ಲಿಸಬೇಕೆಂದೂ ರಾಜಕೀಯ ಬಂದಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂದೂ ಪ್ರಜಾಪ್ರಭುತ್ವಾಧಿಪತ್ಯ ಕೊನೆಗಾಣಬೇಕೆಂದೂ ಮತ್ತು, ರಾಜಕೀಯ ಮತ್ತು ಪತ್ರಿಕಾ ಸ್ವಾತಂತ್ರ್ಯವಿರಬೇಕೆಂದೂ ತಿಳಿಸಿದ್ದಾರೆ.

ಜಪಾನ್-ರಷ್ಯಾ ಯುದ್ಧವೆ ?

ಇಟಲಿ ಪತನವಾದನಂತರ ಮತ್ತು ಯೂರೋಪಿನ ದಂಡಯಾತ್ರೆ ಪ್ರಾರಂಭವಾದ ಮೇಲೆ, ಜಪಾನ್ ರಷ್ಯಾದ ಮೇಲೆ ಯುದ್ಧ ಆರಂಭ ಮಾಡಬಹುದೆಂದು ಅಮೆರಿಕದ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ವರದಿ ಮಾಡಿದೆ.

ನಾರ್ವೆಯಲ್ಲಿ ಮುತ್ತಿಗೆ ಸನ್ನಿವೇಶ

ನಾರ್ವೇ ದೇಶದಲ್ಲಿ ಮುತ್ತಿಗೆ ಸನ್ನಿವೇಶ ವಿಧಿಸಿರುವುದಾಗಿ ಜರ್ಮನರು ಸಾರಿದ್ದಾರೆ. ನಾರ್ವೆಯ ಅಧಿಕಾರಿಗಳನ್ನೆಲ್ಲಾ ಹಿಟ್ಲರನ ಆಜ್ಞೆಯಂತೆ ಜರ್ಮನಿಯ ಬಂದಿಸಿ ಶಿಬಿರಕ್ಕೆ ಕಳುಹಿಸಲಾಗಿದೆ. ನಾರ್ವೆಯ ಪೋಲೀಸ್ ಎಸ್. ಎಸ್. ಘಾರ್ಡ್ಸ್, ಕ್ವಿಸ್ಲಿಂಗ್ ಪಕ್ಷದ ದಳಗಳು ಜರ್ಮನಿಯ ಸೇನೆಗಳ ಅಧೀನವೆಂಬುದಾಗಿ ತಿಳಿಸಿ ಇವರೆಲ್ಲರೂ ಮಿಲಿಟರಿ ಕಾನೂನಿನ ಶಿಕ್ಷೆಗೆ ಒಳಪಟ್ಟಿವೆಂದೂ ತಿಳಿಸಲಾಗಿದೆ.

ಭವನ ಕುಸಿದು ಬಿದ್ದುದಕ್ಕೆ ಅಧಿಕಾರಿಗಳ ದಸ್ತಗಿರಿ

ಬೊಂಬಾಯಿನ ಭಾರಿ ಜವನವನ್ನು ಕಟ್ಟುತ್ತಿರುವಾಗ ಕುಸಿದು ಬಿದ್ದು ೨೫ ಮಂದಿ ಮರಣಹೊಂದಿದ್ದರಷ್ಟೆ. ಆ ಘಟನೆಯನ್ನು ವಿಚಾರಿಸಲು ಸರ್ಕಾರದವರು ಒಂದು ಸಮಿತಿಯನ್ನು ರಚಿಸಿದ್ದರು. ಅವರ ಮೇಲೆ ಬೊಂಬಾಯಿ ಪೋಲೀಸರು ಸಿವಿಲ್ ಸಪ್ಲೈ ರೋಡ್ ಎಲ್ಲಾ ಉಪ್ಪಿನ ದುರಾಸೆ ಇಂಜನೀಯರಾದ ಶೇಷ್ಮಾ ಮತ್ತು ಇಬ್ಬರ್ [illegible] ಅವರನ್ನು ದಸ್ತಗಿರಿ ಮಾಡಿದ್ದಾರೆ. ಆ ಭವನವನ್ನು ಕಟ್ಟುವಾಗ ಸರಿಯಾದ ಸಾಮಾನುಗಳನ್ನು ಉಪಯೋಗಿಸಲಿಲ್ಲವೆಂದು ಅವರ ಮೇಲೆ ಆಪಾದನೆ ಹೊರಿಸಲಾಗಿದೆ.

ಮಿತ್ರ ವಿಮಾನ ಕಾರ್ಯಾಚರಣೆ

ಮಿತ್ರ ವಿಮಾನಗಳು ಪ್ಯಾರಿಸ್ ನಗರದ ಮೇಲೆ ಧಾಳಿ ಮಾಡಿರುವವೆಂದು ವರದಿಯಾಗಿದೆ. ಆಗ ೮೫ ವಿಮಾನಗಳು ಫ್ರಾನ್ಸಿನ ಕ್ಷೇತ್ರದ ಜರ್ಮನ್ ವಿಮಾನ ನಿಲ್ದಾಣಗಳ ಮೇಲೆ ಧಾಳಿ ಮಾಡಿ [illegible] ವಿಮಾನಗಳನ್ನು ನಾಶ ಮಾಡಿ[illegible].

ಇಟಲಿಯ ಮೇಲೂ ಧಾಳಿ [illegible] [illegible] [illegible] ಬರ್ಲಿನ್ [illegible] ವಿಮಾನ ನಿಲ್ದಾಣಗಳ ಮೇಲೆ [illegible] ದೇಲಾಯಿತು.

ಟೈಪರೈಟರ್ ಹತೋಟಿ ಆಜ್ಞೆ

ಬೆಂಗಳೂರು ೧೭

ಟೈಪರೈಟರ್ ಹತೋಟಿ ಆಜ್ಞೆಯೊಂದನ್ನು ಸರ್ಕಾರದವರು ಹೊರಡಿಸಿ, ಕೈಗಾರಿಕೆ ಮತ್ತು ವಾಣಿಜ್ಯ ಭಿಕಾರಿಗಳ ಅಪ್ಪಣೆಯಿಲ್ಲದೆ ಟೈಪುಗಳನ್ನು ಮಾರಕೂಡದೆಂದು ಆಜ್ಞೆ ಮಾಡಿದ್ದಾರೆ. ಈ ಅಧಿಕಾರಿಗಳಿಗಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಗಾಗಲೀ ಮಾರಾಟ ಮಾಡುವವರ ಸ್ಟಾಕ್ ಪರೀಕ್ಷಿಸಿ ನೋಡಲು ಅಧಿಕಾರ ಕೊಟ್ಟಿದೆ.

ಸ್ಟಾರ್ಚ್ ಹತೋಟಿ

ಸ್ಟಾರ್ಚ್ ಕಂಟ್ರೋಲರಾದ ಕೈಗಾರಿಕೆ ಮುಖ್ಯಾಧಿಕಾರಿಗಳಿಂದ ರಹದಾರಿ ಪಡೆಯದೆ ಗೋಧಿ, ಮೈದಾ ಮುಂತಾದುವುಗಳಿಂದ ಸ್ಟಾರ್ಚ್ ಮಾಡಕೂಡದೆಂದೂ ಮತ್ತು ರಹದಾರಿಯಿಲ್ಲದೆ ಅದನ್ನು ಮಾರಾಟ ಮಾಡಕೂಡದೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ವರ್ಗಾವರ್ಗಿ

ಸೆಂಟ್ರಲ್ ಕಾಲೇಜಿನ ಗಣಿತಶಾಸ್ತ್ರದ ಪ್ರೊಫೆಸರಾಗಿರುವ ಶ್ರೀ ಪಿ. ಎಸ್. ನಾಗಪ್ಪನವರನ್ನು ಮೈಸೂರು ಸರ್ಕಾರದ ಡೆಪ್ಯುಟಿ. ಡಾಯಿರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಆಗಿ ನೇಮಿಸಲಾಗಿದೆ.

ಭದ್ರಾವತಿಯ ಕಬ್ಬಿಣ ಕಾರ್ಖಾನೆ ಆಸ್ಪತ್ರೆಯ ಡಾ|| ಸಿ. ಚಂದ್ರಶೇಖರಯ್ಯನವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ, ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಯ ಡಾ|| ಕೆ. ಸುಂದರೇಶನವರನ್ನು ಭದ್ರಾವತಿ ಕಬ್ಬಿಣ ಕಾರ್ಖಾನೆ ಆಸ್ಪತ್ರೆಗೂ ಬೆಂಗಳೂರಿನ ಡಾ|| ಕೆ. ಎಸ್. ನಾರಾಯಣಸ್ವಾಮಿಯವರನ್ನು ಡಾ|| ಸುಂದರೇಶನವರ ಸ್ಥಳಕ್ಕೂ ವರ್ಗಾಯಿಸಲಾಗಿದೆ.

ರೊಟ್ಟಿ ಅಂಗಡಿ ತೆರೆದುವು

ನಗರದ ರೊಟ್ಟಿ ಅಂಗಡಿಗಳೆಲ್ಲಾ ಗೋಧಿಹಿಟ್ಟು ಸರಬರಾಜು ಇಲ್ಲದೆ ಮುಚ್ಚಲ್ಪಟ್ಟಿದ್ದುವು. ಅವುಗಳನ್ನು ಈ ದಿನದಿಂದ ತೆರೆಯಲಾಗಿದೆ. ಸರ್ಕಾರದವರು ೨೦೦ ಮೂಟೆ ಹಿಟ್ಟನ್ನು ಕೊಟ್ಟಿರುವರು.

ಬ್ರಿ|| ಯುದ್ಧ ಬಂದಿಗಳ ರವಾನೆ

ಮುಸಲೋನಿಯು ಪತನವಾದ ಬಳಿಕ ಇಟಲಿಯಿಂದ ಜರ್ಮನಿಗೆ ಬ್ರಿ|| ಯುದ್ಧ ಬಂದಿಗಳನ್ನು ರವಾನೆ ಮಾಡಲಾಗುತ್ತಿದೆಯೆಂದು ವರದಿಯಾಗಿದೆ.

Edited, printed and published by A. R. Nagarajan, at the Sadhvi Press, D.Subbiah Road, Mysore

"ಭಾರತವು ಬ್ರಿಟನ್ನಿನ ಸ್ವಂತ ಸಮಸ್ಯೆ"

ಚರ್ಚಿಲ್-ರೂಸ್ವೆಲ್ಟ್ ಸಮ್ಮೇಳನದಲ್ಲಿ ಭಾರತದ ರಾಜಕೀಯ ಬಿಕ್ಕಟ್ಟನ್ನು ಪರಿಹಾರ ಮಾಡಲು ಚರ್ಚಿಸಲಾಗುವುದೆಂದು ಭಾವಿಸಿರುವುದಕ್ಕೆ ಆಧಾರವಿಲ್ಲವೆಂದು ಅಮೇರಿಕ ಸರಕಾರದವರು ಅಭಿಪ್ರಾಯಪಡುತ್ತಾರೆ.

ಜಪಾನ್ ಮೇಲೆ ನಡೆಯಬೇಕಾಗಿರುವ ಯುದ್ಧ ಕಾರ್ಯಾಚರಣೆಯಲ್ಲಿ ಭಾರತವು ಎಷ್ಟರಮಟ್ಟಿಗೆ ಉಪಯೋಗವಾಗುವುದೆಂಬ ವಿಚಾರ ಮಾತ್ರ ಚರ್ಚಿಸಲಾಗುವುದೆಂದೂ ಭಾರತವು ಬ್ರಿಟನ್ನಿನ ಸ್ವಂತ ಸಮಸ್ಯೆಯೆಂದು ಅಮೇರಿಕ ಭಾವಿಸಿದ್ದಾರೆಂದೂ, ಇದನ್ನು ಭಾರತೀಯರು ತಿಳಿದುಕೊಂಡಿದ್ದರೆ ಒಳ್ಳೆಯದೆಂಬುದಾಗಿ ಅಮೇರಿಕ ಪತ್ರಿಕಾ ಕರ್ತರೊಬ್ಬರು ತಿಳಿಸುತ್ತಾರೆ.

ವಿವಿಧ ಜನಾಂಗವಿದ್ದರೂ ಸರ್ಕಾರವೊಂದೆ

ಮುಸಲ್ಮಾನರು ತಾವು ಪ್ರತ್ಯೇಕ ಜನಾಂಗವೆಂಬ ಮಾತ್ರಕ್ಕೆ ಭಾರತವು ಒಗ್ಗಟ್ಟಾಗಿರಬಾರದೆಂದೇನೂ ಅರ್ಥವಲ್ಲ. ಇಂಗ್ಲೆಂಡ್ ಸ್ಕಾಟ್ಲೆಂಡ್ ಮತ್ತು ವೇಲ್ಸ್ ಪ್ರತ್ಯೇಕವಾಗಿದ್ದರೂ ಗ್ರೇಟ್‌ಬ್ರಿಟನ್ ಎಂಬ ಒಂದೇ ಸರ್ಕಾರ ಇದೆ. ಅದೇ ರೀತಿಗೆ ಭಾರತದಲ್ಲಿ ಎರಡು ಜನಾಂಗಗಳಿದ್ದರೂ, ಒಂದೇ ಸರ್ಕಾರವೆಂದು ಭಾವಿಸಬೇಕು ಎಂಬುದಾಗಿ ಶ್ರೀ ಸಾವರ್ಕರ್‌ರವರು ನಾಗಪುರದ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ ಬೇಡಿಕೆ ಈಗಿನ ಪರಿಸ್ಥಿತಿಗೆ ಅನಾನುಗುಣವಾಗಿಲ್ಲ. ಭಾರತದಲ್ಲಿ ಅಖಂಡತೆಯನ್ನುಂಟುಮಾಡಲೆತ್ನಿಸಿದ ಬ್ರಿಟಿಷ್ ಸಾಮ್ರಾಜ್ಯದಕ್ಕೆಗೊಂಡಿಯಾಗಿ ಜಿನ್ನಾರವರು ಈ ತತ್ವವನ್ನು ಅನುಮೋದಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಜರ್ಮನ್ ವಿಮಾನಗಳ ನಾಶ

ಅಮೇರಿಕ ೮ನೇ ವಿಮಾನದಳವು ಇದೆ ಆಗಸ್ಟ್ ೧೪ ರವರೆಗೆ ಜರ್ಮನಿ ಮತ್ತು ಆಕ್ರಮಿತ ಪ್ರದೇಶಗಳ ಮೇಲೆ ೮೩ ಸಲ ಧಾಳಿಮಾಡಿ ೧೯ ಸಾವಿರ ಟನ್ ಬಾಂಬುಗಳನ್ನು ಹಾಕಿ ೧,೭೭೮ ಶತ್ರು ವಿಮಾನಗಳನ್ನು ನಾಶಪಡಿಸಿವೆಂದು ವರದಿಯಾಗಿದೆ.

WANTED AGENTS
JAYA CROSS WORDS IN ENGLISH
Ask for free Coupons
from 20th Sep '43
Apply:- Manager
Jaya Cross Words,
Sivarampet, Mysore

ಜಪಾನಿ ಕೈಯಲ್ಲಿ ಮಿತ್ರ ಬಂದಿಗಳು

ಜಪಾನರ ಆಕ್ರಮಣಕ್ಕೊಳಗಾಗಿರುವ ದೇಶಗಳಲ್ಲಿ ಮಿತ್ರ ಪಕ್ಷದವರ ಸಂಖ್ಯೆ ಸುಮಾರು ೩,೯೭,೦೦೦ ಇರಬಹುದೆಂದು ಹೇಳಲಾಗಿದೆ. ಬಂದಿಗಳ ಹೆಸರುಗಳನ್ನು ಕೊಡಲು ಜಪಾನಿಯರು ನಿರಾಕರಿಸುವರೆಂದು ತಿಳಿಸಲಾಗಿದೆ. ೧ ಲಕ್ಷ ಬ್ರಿ|| ಯುದ್ಧ ಕೈದಿಗಳೂ, ೬೦ ಸಾವಿರ ಭಾರತೀಯರೂ, ೩೦ ಸಾವಿರ ಆಸ್ಟ್ರೇಲಿಯನ್ನರೂ, ೩೦ ಸಾವಿರ ಅಮೇರಿಕನ್ನರೂ, ೧ ಲಕ್ಷ ಡಚ್ಚರೂ ಮತ್ತು ೭ ಸಾವಿರ ಕೆನಡಿಯನ್ನರೂ ಇದ್ದಾರೆಂದು ಹೇಳಲಾಗಿದೆ.

ಭಾರತೀಯ ಯುದ್ಧ ಕೈದಿಗಳು

ಜಪಾನಿ ವಶದಲ್ಲಿರುವ ಭಾರತೀಯ ಯುದ್ಧ ಕೈದಿಗಳ ವಿಚಾರವಾಗಿ ಭಾರತ ಸರ್ಕಾರವು ಒಂದು ಪ್ರಕಟಣೆ ಹೊರಡಿಸಿದೆ.

ಹಾಂಗ್ಕಾಂಗ್, ಮಲಯಾ, ಬರ್ಮಾ ಮತ್ತು ಮಲಯಾಗಳ ಪತನಾನಂತರ ೬೦,೦೦೦ ಭಾರತೀಯ ಸೈನಿಕರು ಸೆರೆಯಾಳುಗಳೆಂದೂ, ಅವರಲ್ಲಿ ಬಹುಮಂದಿ ಜಪಾನಿಗಳ ಬಂದಿಗಳಾಗಿರಬೇಕೆಂದೂ ಹೇಳಲಾಗಿದೆ. ಸರ್ಕಾರದವರು ತಮ್ಮ ಯುದ್ಧ ಕೈದಿಗಳ ಪಟ್ಟಿಯನ್ನು ಎಷ್ಟು ಯತ್ನಿಸಿದರೂ ಜಪಾನ್ ಕೊಡಲಿಲ್ಲವೆಂದೂ, ಭಾರತೀಯ ಯುದ್ಧ ಕೈದಿಗಳ ಶಿಬಿರವನ್ನು ಭೇಟಿಮಾಡಬೇಕೆಂದು ಅಂತರ್ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯವರಿಗೆ ಅವಕಾಶ ಕೊಡಲಿಲ್ಲವೆಂದೂ ತಿಳಿಸಲಾಗಿದೆ.

ಬಾತ್ಮಿದಾರರಿಗೆ ಉಚ್ಚಾಟನೆ

ನಾರ್ವೇ ಸ್ಥಿತಿಗಳ ಬಗ್ಗೆ ಜರ್ಮನರಿಗೆ ಅವಮಾನಕರವಾದ ವರ್ತಮಾನಗಳನ್ನು ಕಳುಹಿದರೆಂದು ಸ್ವೀಡಿಷ್ ಟೆಲಿಗ್ರಾಫ್ ಸಂಸ್ಥೆಯ ಬಾತ್ಮೀದಾರರನ್ನು ನಾರ್ವೇಯಿಂದ ಓಡಿಸಲಾಯಿತೆಂದು ವರದಿಯಾಗಿದೆ.

ಸೈನ್ಯಾಧಿಕಾರಿಗೆ ಶಿಕ್ಷೆ

ಲೆಫ್ಟಿನೆಂಟ್ ಜಾಂಡ್ರ್ಯೂರೆಂಬ ಸೈನ್ಯಾಧಿಕಾರಿಯು ತಪ್ಪಿತಸ್ಥನಾದನೆಂದು ಆತನ ಮೇಲೆ ಮಿಲಿಟರಿ ಕೋರ್ಟಿನವರು ೩ ವರ್ಷ ಕಠಿನ ಶಿಕ್ಷೆ ವಿಧಿಸಿದ್ದಾರೆ.

ಪ್ರೊ|| ಮುಖ್ಯಾಧಿಕಾರಿಗೆ ಮರಣದಂಡನೆ

ಓಸ್ಲೋನ್ ಪ್ರೋಲೀಸ್ ಮುಖ್ಯಾಧಿಕಾರಿಯೊಬ್ಬನು ಓರ್ವ ಮಹಿಳೆಯನ್ನು ಜರ್ಮನ್ ಕೆಲಸಕ್ಕೆ ಕಳುಹಿಸಲು ಬಂಧನ ಮಾಡಲು ನಿರಾಕರಿಸಿದ್ದರಿಂದ, ಆತನನ್ನು ಜರ್ಮನರು ಮರಣದಂಡನೆಗೆ ಗುರಿಪಡಿಸಿದರೆಂದು ಸ್ವೀಡಿಷ್ ವಾರ್ತೆ ತಿಳಿಸುತ್ತದೆ.

ಜಪಾನೀ ದ್ವೀಪ ಪತನ

ಮಧ್ಯ ಸಾಲೊಮನ್ಸ್ ದ್ವೀಪದಲ್ಲಿ ಜಪಾನೀ ವಶದಲ್ಲಿದ್ದ ವೆಲಾಲವೇಲ ದ್ವೀಪವನ್ನು ಮಿತ್ರಸೈನ್ಯಗಳು ಆಕ್ರಮಿಸಿ, ಅಲ್ಲಿದ್ದ ೩೦೦ ಜಪಾನಿ ಸೈನಿಕರನ್ನು ಸೆರೆ ಹಿಡಿಯಲಾಯಿತು. ಈ ದ್ವೀಪದ ಆಕ್ರಮಣದಿಂದ ಜಪಾನಿ ಮುಖ್ಯ ಸರಬರಾಜು ಮಾರ್ಗಗಳು ನಾಶವಾದಂತಾಗಿವೆಯೆಂದು ವರದಿಯಾಗಿದೆ.

ಬೊರ್ನಿಯೋದಲ್ಲಿರುವ ಎಣ್ಣೆ ಬಾವಿಗಳ ಮೇಲೂ ಅಮೇರಿಕ ವಿಮಾನಗಳು ಧಾಳಿ ಮಾಡಿ, ಅಪಾರ ನಷ್ಟ ಉಂಟುಮಾಡಿವೆ. ನ್ಯೂಗಿನಿ ಕ್ಷೇತ್ರದಲ್ಲಿ ೧೨ ಶತ್ರು ವಿಮಾನಗಳನ್ನು ನಾಶಮಾಡಲಾಗಿದೆ.

ಆಕ್ಸಿಸ್ ಸಮ್ಮೇಳನ

ಜರ್ಮನಿ, ಜಪಾನ್ ಮತ್ತು ಇಟಲಿ ಯಜಮಾನರುಗಳ ಸಮ್ಮೇಳನವೊಂದು ಜರ್ಮನಿಯಲ್ಲಿ ಶೀಘ್ರದಲ್ಲೇ ನಡೆಯುವುದೆಂದು ಸ್ವಿಸ್ ಪತ್ರಿಕೆಯು ತಿಳಿಸುತ್ತದೆ.

ಜಪಾನಿನ ಕುಹಕ ಆಂತರ್ಯ

ಜಪಾನಿಗಳು ಬರ್ಮಾದ ಸ್ವಾತಂತ್ರ್ಯವನ್ನು ಘೋಷಿಸಿರುವುದಾಗಿ ಹೇಳುವುದು ಒಂದು ಬೂಟಾಟಿಕೆ. ಇದು ಬರ್ಮಾ ಜನರನ್ನು ಒಲಿಸಿಕೊಳ್ಳಲು ಮಾಡಿದ ತಂತ್ರ. ಬರ್ಮಾವು ಬ್ರಿಟನ್ ಅಮೇರಿಕಗಳ ಮೇಲೆ ಯುದ್ಧ ಘೋಷಿಸಬೇಕೆಂಬುದಾಗಿ ಬರ್ಮಾದ ಜನ, ಧನ ಸಾಧನಗಳನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದೇ ಜಪಾನಿನ ಕುಹಕ ಆಂತರ್ಯವೆಂದು ಚೀನಾ ವಾರ್ತಾ ಪ್ರಕಟಣಾ ಸಚಿವರು ಕಿಂಗ್ ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಸ್ತ್ರೀಯರ ಸೌಕರ್ಯಕ್ಕಾಗಿ
ಆ|| ೧೬-೮-೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರ್ಯಾಂಡ್ ಕಾಫಿಪುಡಿ
ಯನ್ನೇ ಉಪಯೋಗಿಸಿ.
ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು
ವಿ. ಸೂ.— ಇಲ್ಲಿಯಾಗಿ ಪ್ರಂತ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಹ ಸಿಕ್ಕುತ್ತದೆ.

ಪ್ರತಿ ಶನಿವಾರ ಮತ್ತು ಭಾನುವಾರ 4 ಘಂಟೆಗೆ ಮ್ಯಾಟಿನಿ ನಡೆಯುತ್ತೆ
ನ್ಯೂ ಅಪೇರಾ ಟಾಕೀಸ್
೧೮—೮—೪೩ ರಿಂದ
ಉಷ್ಪದೇಖಾಲ್, ಶೌ..., ಮೀನಾಕುಮಾರಿ, ಮಹೀದ್ ಮತ್ತು ಗೋ... ದೇವರು ಪಾತ್ರ ವಹಿಸಿರುವ
ಹಿಂದಿ ಪಿಕ್ಚರ್ ಹಿಂದಿ

The Benares Textile Emporium
(opposit to Chamundeswari Talkies)
Purchase Direct from Benareswalas
ಬನಾರಸ್‌ನವರ ರೇಷ್ಮೆಬಟ್ಟೆ ಜವಳಿ ಅಂಗಡಿ
... ರೆಡಿಮೇಡ್ ಡ್ರೆಸ್ ... ಆರ್ಡರ್ ಸಸ್ಯ ... ಅಂಗಡಿ ...
ಈ ದಿನವೇ ಬಂದು ನೋಡಿರಿ.

ಸಂಪುಟ ೨] ಗುರುವಾರ ೧೯—೮—೪೩ [ಸಂಚಿಕೆ ೨೯

ಇಟಲಿ ದಂಡಯಾತ್ರೆಯ ಹಂಚಿಕೆ

ಕಲ್ಕತ್ತಾದಲ್ಲಿ ಕ್ಷುದ್ಬಾಧೆಯಿಂದ ಜನರು ನರಳುತ್ತಿದ್ದಾರೆ

ಸಿ ಸ ಲಿ ಕ ದ ನ ಮು ಕ್ತಾ ಯ ವಾ ಯಿ ತು

ಜಿನ್ನಾರವರು ಗಾಂಧೀಜಿಯವರನ್ನು ನೋಡಬೇಕು

ಶ್ರೀ ಸಿ. ರಾಜಗೋಪಾಲಾಚಾರಿಯವರು ಒಂದು ಹೇಳಿಕೆಯನ್ನು ಕೊಟ್ಟು ಈ ರೀತಿ ತಿಳಿಸಿದ್ದಾರೆ " ನಾನಿಷ್ಟು ದಿನ ಮೌನವಾಗಿದ್ದೆ. ಅದಕ್ಕೆ ಕಾರಣವೇನೆಂದರೆ, ಗಾಂಧೀಜಿ ಜಿನ್ನಾರವರಿಗೆ ಬರೆದ ಪತ್ರವನ್ನು ವೈಸ್ರಾಯರು ತಡೆದುದಕ್ಕೆ ನಾನು ಜಿನ್ನಾರವರಿಗೆ ಕೊಟ್ಟ ಸಲಹೆಯನ್ನು ಮೂಲೆಗೊತ್ತಿದರು. ಆ ಬಗ್ಗೆ ಜಿನ್ನಾರವರು ಮಾಡಿದ ತಪ್ಪು ಪರಮ ವಿನಾಶಕರವಾದುದು. ಗಾಂಧೀಜಿ ಪತ್ರ ಸಣ್ಣದಿದ್ದಿರಬಹುದು, ತಮ್ಮನ್ನು ಕಾಣಬೇಕೆಂದಷ್ಟೇ ಅದರಲ್ಲಿ ಸೂಚಿಸಿರಬಹುದು. ಇವೆಲ್ಲಾ ಊಹೆ. ಏಕೆಂದರೆ ವೈಸ್ರಾಯರು ಆ ಪತ್ರವನ್ನು ಹೊರಗೆಡಹಲು ಒಪ್ಪಲಿಲ್ಲ. ಜಿನ್ನಾರವರು ಗಾಂಧೀಜಿಯವರನ್ನು ನೋಡಿದ್ದರೆ ಮಹತ್ವದ ಕಾರ್ಯಗಳು ಆಗುತ್ತಿದ್ದುವು. ಆ ಸಮಯವೆಂದರೆ, ಹಿಂದೂಸ್ಥಾನದ ಇತಿಹಾಸವನ್ನೇ ತಿರುಗಿಸುವಂತಹುದು. ವೈಸ್ರಾಯರು ಇದನ್ನು ಅರಿತವರು. ಜಿನ್ನಾರವರು ಬ್ರಿ॥ ಸರ್ಕಾರದ ಕೈಗೊಂಬೆಗಳಾಗಿ ಆ ಪ್ರಸಂಗವನ್ನು ಹಾಳುಮಾಡಿಕೊಂಡರು. ಈಗಲೂ ಕೂಡ ಒಪ್ಪಂದವಾಗಬಹುದು. ಈಗ ಜಿನ್ನಾರವರು ಮಾಡಬೇಕಾದುದೇನೆಂದರೆ ಆ ಪ್ರವಂಚನೆ ಮಾಡಿಕೊಳ್ಳದೆ ಗಾಂಧೀಜಿಯವರನ್ನು ಭೇಟಿಯಾಗಲು ವೈಸ್ರಾಯರನ್ನು ಕೇಳಬೇಕು."

ಕಾಂಗ್ರೆಸ್‌ನವರನ್ನು ಬಿಡುಗಡೆ ಮಾಡಬೇಕು

ಲಾರ್ಡ್ ಲಿನಲಿತ್ಗೋರವರು ವೈಸರಾಯರ ಪದವಿಯಿಂದ ನಿವೃತ್ತರಾಗುವ ಮುನ್ನ ಕಾಂಗ್ರೆಸ್ಸಿನವರನ್ನೆಲ್ಲಾ ಬಿಡುಗಡೆ ಮಾಡಿ, ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬೇಕೆಂಬುದಾಗಿ ಕಲ್ಕತ್ತಾ ಮುಸ್ಲಿಮರು ನಿವೇದನೆ ಮಾಡಿದ್ದಾರೆ.

ಸದಸ್ಯತನಕ್ಕೆ ಅಡ್ಡಿಯಿಲ್ಲ

ಬರೋಡಾ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ, ಇತ್ತೀಚಿನ ರಾಜಕೀಯ ಚಳವಳಿಯಲ್ಲಿ ಭಾಗವಹಿಸಿ, ಶಿಕ್ಷಿತರಾಗಿ ಬಂಧನದಲ್ಲಿದ್ದು ಬಿಡುಗಡೆಯಾದವರೇ ಆಗಲಿ ಹಿಂಸಾಕೃತ್ಯದಲ್ಲಿ ಭಾಗವಹಿಸಿದ್ದ ಪಕ್ಷದಲ್ಲಿ ಅಂಥವರು ಶಾಸನ ಸಭೆಗೂ ಸ್ಥಳೀಯ ಸಂಸ್ಥೆಗಳಿಗೆ ಸದಸ್ಯರಾಗಲು ಯಾವ ಅಡ್ಡಿಯೂ ಇಲ್ಲವೆಂದು ತಿಳಿಸಿದ್ದಾರೆ

ಇದ್ದಿಲು ಹತೋಟಿ ಆಜ್ಞೆ

ಕಲ್ಕತ್ತ ಮತ್ತು ಆ ಪ್ರಾಂತ್ಯದ ಸುತ್ತಲಿನ ಪ್ರದೇಶಗಳಲ್ಲಿ ಇದ್ದಲಿನ ಹಂಚಿಕೆಯಲ್ಲಿ ಹತೋಟಿ ಆಜ್ಞೆಯನ್ನು ಬಂಗಾಳ ಸರ್ಕಾರವು ಜಾರಿಗೆ ತಂದಿರುವುದು. ಆಜ್ಞೆ ಜಾರಿಗೆ ಬಂದ ೧೫ ದಿನಗಳ ನಂತರ ಸರ್ಕಾರದ ಅಪ್ಪಣೆಯಿಲ್ಲದೆ ಇದ್ದಲು ವ್ಯಾಪಾರ ಮಾಡಕೂಡದೆಂದು ತಿಳಿಸಲಾಗಿದೆ

—

ದಕ್ಷಿಣ ಆಫ್ರಿಕಾಕ್ಕೆ ಭಾರತ ಪ್ರತೀಕಾರ ಶಾಸನ

ದಕ್ಷಿಣ ಆಫ್ರಿಕದ ಪೆಗಿಂಗ್ ಶಾಸನ ಸಂಬಂಧದಲ್ಲಿ ತಂದಿರುವ ಭಾರತದ ಪ್ರತೀಕಾರ ಶಾಸನವು ೧೯೪೩ ನೇ ಸೆಪ್ಟೆಂಬರ್ ನಿಂದ ಜಾರಿಗೆ ತರಲಾಗುವುದೆಂದು ಡಾ॥ ಖಾರೆಯವರು ತಿಳಿಸಿದ್ದಾರೆ.

ಕಲ್ಕತ್ತಾದಲ್ಲಿ ಹಸಿವಿನ ಸಂಕಟ

ಕಲ್ಕತ್ತಾ ನಗರ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ಈಚೆ ದಿನಗಳಿಂದ ನಿಶ್ಶಕ್ತರಾಗಿ ಬಿದ್ದಿದ್ದ ೧೫೩ ಜನರನ್ನು ವಿಶೇಷ ವ್ಯವಸ್ಥೆ ಪ್ರಕಾರ ಮಾಡಿರುವ ಕ್ಯಾಂಬೆಲ್ ಮತ್ತು ಬೆಹಲಿ ಆಸ್ಪತ್ರೆಗೆ ಸಾಗಿಸಲಾಯಿತು. ೧೩ ಜನ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಈ ಆಸ್ಪತ್ರೆಗಳಲ್ಲಿ ನೂರಾರು ಹಾಸಿಗೆಗಳನ್ನು ಮೀಸಲಾಗಿರಿಸಿ, ಇಂತಹ ಪ್ರಸಂಗಗಳಿಗೆ ಉಪಯೋಗಿಸಲಾಗುತ್ತಿದೆ

ವಿಷ ಯುಕ್ತವಾದ ತೊಗರಿಬೇಳೆಯ ಮಾರಾಟ

ಬೆಂಗಳೂರುನಗರದಲ್ಲಿ ಈಗ ಮಾರಲಾಗುತ್ತಿರುವ ತೊಗರಿಬೇಳೆಗಳಲ್ಲಿ ಅದರಂತಹ ಒಂದು ರಿತಿ ಬೇಳೆಯನ್ನು ಮಾರುತ್ತಿರುವರೆಂದೂ ಅದು ವಿಷಯುಕ್ತವಾದ್ದರಿಂದ ಜನಗಳಿಗೆ ತುಂಬಾ ಅಪಾಯವಾಗುತ್ತದೆಂದು ನಿವೃತ್ತ ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ರಾದ ಶ್ರೀ ಎ. ನರಸಿಂಗರಾಯರು ದಿವಾನರಿಗೆ ಒಂದು ಪತ್ರ ಬರೆದು ಇದನ್ನು ಕೂಡಲೆ ನಿಲ್ಲಿಸಬೇಕೆಂದು ಪ್ರಾರ್ಥಿಸಿದ್ದಾರೆ

ಈ ಮಾದರಿಯ ಬೇಳೆಯು ಉತ್ತರ ಹಿಂದುಸ್ಥಾನದ ಮಧ್ಯ ಮತ್ತು ಸಂಯುಕ್ತ ಪ್ರಾಂತ್ಯಗಳ ಕಾಡುಗಳಲ್ಲಿ ಸಿಗುವುದೆಂದೂ, ಇದನ್ನು ಅಲ್ಲಿನ ಕಾಡು ಜನರು ತಿಂದು ಬಹಳ ಅಪಾಯಕ್ಕೆ ಗುರಿಯಾಗಿದ್ದಾರೆಂದೂ, ಈ ಬೇಳೆಯನ್ನು ಅಕೋಲಿ ಅಥವಾ ಖೇಸರಿ ಎಂಬುದಾಗಿ ಕರೆಯುವರೆಂದೂ, ಇದು ಸ್ವಲ್ಪ ಗುಂಡಾಗಿದ್ದು ಕಂದು ಬಣ್ಣವಾಗಿರುವುದೆಂದೂ ತಿಳಿಸಿದ್ದಾರೆ.

— —

ಮೈಸೂರು ಚಿಕ್ಕಮಾರ್ಕೆಟ್ಟಿನ ಹೊಸ ಬೀದಿ ಶ್ರೀರಾಮಮಂದಿರದಲ್ಲಿ ಪ॥ ೦॥ ಮುರಲೀ ಸುಬ್ರಹ್ಮಣ್ಯರವರಿಂದ ಕಳೆದ ಶನಿವಾರ ಸಿಂಧೂರಾಳ ಚಂತ್ರೆ ಎಂಬ ಹರಿಕಥೆ ನಡೆಯಿತು.

ಮಿತ್ರ ದಂಡಯಾತ್ರೆ ನೌಕಾ

ಮಿತ್ರಪಕ್ಷದ ದಂಡಯಾತ್ರೆ ನೌಕೆಯು ಕ್ಯಾಟಿನಾ ಹತ್ತಿರ ಇಳಿಯಿತೆಂದ, ಅದರಲ್ಲಿ ಸೈನ್ಯ ಮತ್ತು ಟ್ಯಾಂಕುಗಳನ್ನು ಕೆಳಗಿಳಿಸಲಾಗಿದೆಯೆಂದೂ ರೋಂ ವಾರ್ತೆ ತಿಳಿಸುತ್ತದೆ

ಅಮೆರಿಕನ್ ಮಕ್ಕಳಿಗೆ ಭಾರತ ನೃತ್ಯ ಶಿಕ್ಷಣ

ಅಮೆರಿಕದಲ್ಲಿ ಮ್ಯಾಂಹಟನ್ ಮೇರಿಯವರು ನಡೆಸುತ್ತಲಿರುವ, ವಸಂತ ಸಾಹಿತ್ಯ ತರಗತಿಗಳಲ್ಲಿ ಅಮೆರಿಕ ಬಾಲಕ ಬಾಲಕಿಯರಿಗೆ ಭಾರತದ ಪುರಾತನ ಗೀತೆಗಳನ್ನೂ ನೃತ್ಯಗಳನ್ನೂ ಹೇಳಿಕೊಡುತ್ತಿದ್ದಾರೆ.

—

ಜಪಾನಿ ವಿಮಾನ ನೆಲೆಯಮೇಲೆ ಧಾಳಿ

ನ್ಯೂಗಿನಿಯಾದಲ್ಲಿ ಜಪಾನೀ ವಿಮಾನ ನೆಲೆಯಾದ ವಿವಾಕ್ ಮೇಲೆ ಅಮೆರಿಕ ಬಾಂಬರುಗಳು ಧಾಳಿ ನಡೆಸಿ ೧೨೦ ಶತ್ರು ವಿಮಾನಗಳನ್ನು ನಾಶಮಾಡಿದುದಲ್ಲದೆ ೧೫೦೦ ವೈಮಾನಿಕರನ್ನು ಕೊಲೆಮಾಡಲಾಯಿತು.

—

ಲಿಸ್ಬನ್ನಿನಲ್ಲಿ ಇಟಲಿ ನಿಯೋಗಿಗಳು

ಇಟಲಿಯ ರಾಯಭಾರಿಯ ನಿಯೋಗವೊಂದು ಲಿಸ್ಬನ್ನಗರಕ್ಕೆ ಬಂದಿರುವುದೆಂದೂ ಅವರ ಜೊತೆಗೆ ಇಂಗ್ಲೀಷ್ ಮತ್ತು ಪೋರ್ಚುಗೀಸ್ ಭಾಷೆ ಬಲ್ಲವರಿದ್ದಾರೆಂದೂ ಹೇಳಲಾಗಿದೆ.

ಖಾರ್ಕೋವ್‌ನಲ್ಲಿ ಭೀಕರ ಕದನ

ಖಾರ್ಕೋವ್ ಹತ್ತಿರ ಜರ್ಮನರು ಭೀಕರ ಕದನ ನಡೆಸುತ್ತಿರುವರೆಂದೂ ಮತ್ತು ಜರ್ಮನರು ಹೆಚ್ಚು ಹೆಚ್ಚಾಗಿ ಟ್ಯಾಂಕು ಮತ್ತು ಇತರ ಪಡೆಗಳನ್ನು ತರುತ್ತಿರುವರೆಂದು ಹೇಳಲಾಗಿದೆ. ಕಳೆದ ೪೮ ಗಂಟೆಗಳಲ್ಲಿ ಎರಡು ಪಕ್ಷದವರೂ ಪ್ರಚಂಡ ಕದನ ನಡೆಸುತ್ತಿರುವರೆಂದೂ ಹೇಳಲಾಗಿದೆ ಕ್ಯೂಬನ್ ಪ್ರದೇಶದಲ್ಲಿರುವ ೫೦ ಜರ್ಮನ್ ಡಿವಿಜನ್‌ಗೆ ಗಂಡಾಂತರ ಒದಗಿದೆಯೆಂದೂ ಹೇಳಲಾಗಿದೆ

ಶತ್ರುಸ್ಥಾನಗಳ ಮೇಲೆ ಧಾಳಿ

ಫ್ರಾನ್ಸಿನಲ್ಲಿರುವ ಜರ್ಮನ್ ವಿಮಾನ ನೆಲೆಗಳ ಮೇಲೂ ಮತ್ತು ಕೈಗಾರಿಕೆ ಕೇಂದ್ರಗಳ ಮೇಲೂ ಮಿತ್ರ ವಿಮಾನಗಳು ಧಾಳಿನಡೆಸಿ ಅಪಾರ ನಷ್ಟವುಂಟು ಮಾಡಿದುವು. ಮಿಲಾನ್, ಟ್ಯೂರಿನ್ ಮತ್ತು ಉತ್ತರ ಇಟಲಿಯ ಮೇಲೂ ಧಾಳಿಮಾಡಲಾಯಿತು. ಟ್ಯೂರಿನ್ನಲ್ಲಿ ಅನೇಕ ಜಾಗಗಳಲ್ಲಿ ಬೆಂಕಿ ಬಿದ್ದಿತು

ಕಪಿನಿ ನದಿಗೆ ಅಣೆಕಟ್ಟು

ಮೈಸೂರು ೧೯

ನೀರಾವರಿ ಕೆಲಸಗಳನ್ನು ಅಭಿವೃದ್ಧಿಗೊಳಿಸಲು ಹುಲ್ಲಹಳ್ಳಿ ಬಳಿ ಕಪಿನಿ ನದಿಗೆ ಅಣೆಕಟ್ಟು ಕಟ್ಟಿ ಒಂದು ಜಲಾಶಯವನ್ನು ನಿರ್ಮಾಣಮಾಡುವ ಯೋಜನೆಯನ್ನು ಮೈಸೂರು ಸರ್ಕಾರದವರು ಆಲೋಚಿಸುತ್ತಿರುವರೆಂದೂ, ಇದಕ್ಕಾಗಿ ೭೦ ಲಕ್ಷ ರೂ. ಗಳು ಖರ್ಚಾಗುವುದೆಂದೂ ಹೇಳಲಾಗಿದೆ ಈ ಯೋಜನೆ ಕಳೆದ ೨೦ ವರ್ಷಗಳಿಂದ ಸರ್ಕಾರದ ಆಲೋಚನೆಯಲ್ಲಿದೆ. ಇದರಿಂದ ಸುಮಾರು ೨೦ ಸಾವಿರ ಎಕರೆ ಜಮೀನು ಸಾಗುವಳಿಗೆ ಬರುವುದೆಂದು ನಿರೀಕ್ಷಿಸಿದೆ.

—

ಮೀನು ಸಾಕಿದರೆ ಭತ್ತದ ಪೈರು ಹೆಚ್ಚಾಗುವುದು

ಭತ್ತದ ಗದ್ದೆಗಳಲ್ಲಿ ಮೀನುಗಳನ್ನು ಸಾಕುವುದರಿಂದ ಭತ್ತದ ಪೈರನ್ನು ಹೆಚ್ಚಿಸಬಹುದೆಂದೂ, 'ಇಂಡಿಯನ್ ಫಾರ್ಮಿಂಗ್' ಪತ್ರಿಕೆಯು ತಿಳಿಸುತ್ತದೆ ಇದರಿಂದ ೬-೭ ತಿಂಗಳೊಳಗಾಗಿ ಭತ್ತದ ಪೈರನ್ನು ತೆಗೆಯಬಹುದೆಂದು ಹೇಳಲಾಗಿದೆ.

—

ತುಪ್ಪ, ಉಪ್ಪು ರಫ್ತಿಗೆ ಪ್ರತಿಬಂಧಕ

ಮದರಾಸ್ ಪ್ರಾಂತ್ಯದಿಂದ ಹೊರಕ್ಕೆ ತುಪ್ಪ ಮತ್ತು ಉಪ್ಪನ್ನು ಸಿವಿಲ್ ಸಪ್ಲೈ ಕಮೀಷನರ ಅನುಮತಿ ಇಲ್ಲದೆ ಸಾಗಿಸಕೂಡದೆಂದು ಮದರಾಸ್ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

—

ಮದರಾಸಿನಿಂದ ಸಿಂಧಿಗೆ ಆಲೂಗಡ್ಡೆ

ಸಿಂಧ್ ಸರ್ಕಾರದವರು, ಮದ್ರಾಸ್ ಸರ್ಕಾರದವರಿಂದ ೧೦ ಸಾವಿರ ಮಣ ಆಲೂಗಡ್ಡೆ ಬೀಜವನ್ನು ಕೊಂಡುಕೊಳ್ಳಲು ಭಾರತ ಸರ್ಕಾರದವರನ್ನು ಪ್ರಾರ್ಥಿಸಿದ್ದಾರೆಂದು ಹೇಳಲಾಗಿದೆ

—

ಮಕ್ಕಳನ್ನು ಸಾಕಲಾರದೆ ತಂದೆ ಆತ್ಮಹತ್ಯೆ

ಕರ್ನೂಲ್ ಜಿಲ್ಲೆಯ ಅಮುದಗುಂತಲ ಗ್ರಾಮದಲ್ಲಿ ಕ್ಷಾಮವುಂಟಾಗಿ, ತನ್ನ ಸಂಸಾರದ ೭ ಮಂದಿಯನ್ನು ಸಾಕಲಾರದೆ, ನಾಗಪ್ಪ ಎಂಬುವನು ಆತ್ಮಹತ್ಯೆ ಮಾಡಿಕೊಂಡನೆಂದ ವರದಿಯಾಗಿದೆ.

—

ವಾಣಿಜ್ಯ ಒಪ್ಪಂದ ರದ್ದಾಗುವುದೆ ?

ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರಿಗೆ ತಂದೊಡ್ಡಿರುವ ಅಡಚಣೆಗಳಿಗೆ ಪ್ರತೀಕಾರವಾಗಿ ಭಾರತ ಸರ್ಕಾರವು ದಕ್ಷಿಣ ಆಫ್ರಿಕಾಕ್ಕೆ ಇರುವ ವಾಣಿಜ್ಯ ಒಪ್ಪಂದವನ್ನು ರದ್ದು ಮಾಡಲು ನಿರ್ಧರಿಸುವುದಾಗಿ ಗೊತ್ತಾಗಿದೆ

—

ಆಹಾರ ರಫ್ತಿಗೆ ಪ್ರತಿಬಂಧಕ

ಒರಿಸ್ಸಾ ಪ್ರಾಂತದಿಂದ ಹೊರಕ್ಕೆ ಆಹಾರ ಪದಾರ್ಥಗಳನ್ನು ರಹದಾರಿ ಇಲ್ಲದೆ ರಫ್ತು ಮಾಡಕೂಡದೆಂದು ಅಲ್ಲಿನ ಸರ್ಕಾರದ ಆಜ್ಞೆಯಾಗಿದೆ

ಶ್ರೀ ಬಸಪ್ಪನವರ ಕೋರಿಕೆ

ಶ್ರೀ ಎಂ ಆರ್ ಸಿ ಬಸಪ್ಪನವರು ಈ ರೀತಿ ಬರೆಯುತ್ತಾರೆ—

ಮೈಸೂರು ವರ್ತಕ ಸಂಘದವರು, ಪ್ರತಿ ಭಾನುವಾರ ಮಧ್ಯಾಹ್ನ ಅರ್ಧ ದಿವಸ ಕೆಲಸಗಾರರಿಗೆ ರಜವನ್ನು ಕೊಡಬೇಕೆಂದು ರಿಗ್ವತ್ತು ಪಾಸು ಮಾಡಿರುವುದಕ್ಕೆ, ಕೆಲಸಗಾರರ ಪರವಾಗಿ ವಂದನೆಗಳನ್ನು ಅರ್ಪಿಸುತ್ತೇನೆ

ಯಾರೂ! ನಗರ ವರ್ತಕರು ಎಂದು .ನಾಮಧೇಯವಾದ ಪ್ರಸಿದ್ಧ ಪತ್ರಿಕೆಯನ್ನು ೧೩-೮-೪೩ ರಲ್ಲಿ ಹೊರಡಿಸಿ ಮೇಲ್ಕಂಡ ಸಂಘದವರು ಮಾಡಿರತಕ್ಕ ನಿರ್ಣಯವನ್ನು ವಿರೋಧಿಸಿ 'ನಗರದ ಎಲ್ಲಾ ವರ್ತಕರ ಒಪ್ಪಿಗೆಯಿಲ್ಲವಾದುದರಿಂದ ಯಾರೂ ಅಂಗಡಿಗಳನ್ನು ಮುಚ್ಚಬೇಕಾಗಿಲ್ಲ" ಎಂದು ಪ್ರಕಟಿಸಿರುವುದು ನ್ಯಾಯಕ್ಕೆ ವಿರೋಧವಾಗಿರುತ್ತದೆ ಮೇಲ್ಕಂಡ ಸಂಘವು ವರ್ತಕರಲ್ಲಿ ಬಹುಮತವನ್ನು ಪಡೆದು ಸಂಘದ ಹೆಸರನ್ನು ಮೈಸೂರು ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ ಅಲ್ಲಿಗೆ ಸಂಘದ ನಿರ್ಮಾಣವೇ ವರ್ತಕರ ನಿರ್ಮಾಣವಲ್ಲವೇ? ಇನ್ನು ಮುಂದಾದರೂ ಪ್ರಸಿದ್ಧ ಪತ್ರಿಕೆಗಳನ್ನು ನಗರದ ವರ್ತಕರು ಎಂದು ಪ್ರಕಟಿಸುವುದಕ್ಕಿಂತಲೂ, ತಮ್ಮ ಕುಂದುಕೊರತೆಗಳನ್ನು ಕೊಟ್ಟು, ತಮ್ಮ ಹೆಸರು, ಪೂರ್ಣ ವಿಳಾಸವನ್ನು ಕೊಟ್ಟು ಕಲಸಗಾರರ ವಿಚಾರದಲ್ಲಿ ಯಾವ ತೊಂದರೆಯೂ ಬಾಗದಂತೆ ದಿನಪತ್ರಿಕೆಗಳನ್ನು ಪ್ರಕಟಿಸಬೇಕಾಗಿ ಕೋರುತ್ತೇನೆ

ಮೈಸೂರು ರಾಜಧಾನಿಯ ಕಲಸಗಾರರ ಹಿತವನ್ನು ಬಯಸಿ ಎಲ್ಲಾ ವರ್ತಕರೂ, ಹುಪ್ಪರಿಗೆಗಳೂ, ಮತ್ತು ಹೋಟೆಲ್ ಮಾಲೀಕರುಗಳೂ ಸಹ ವರ್ತಕ ಸಂಘದ ನಿರ್ಮಾಣಕ್ಕೆ ವಿರೋಧವಿಲ್ಲದಂತೆ ಪ್ರತಿ ಭಾನುವಾರ ಮಧ್ಯಾಹ್ನ ತಮ್ಮ ಅಂಗಡಿಗಳನ್ನು ಮುಚ್ಚಿ, ಅರ್ಧ ದಿವಸ ರಜವನ್ನು ಕೊಡಬೇಕೆಂದು ಕೆಲಸಗಾರರ ಪರವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ

ಮೈಸೂರು ವರ್ತಕರ ಕೆಲಸಗಾರರ ಸಂಪತ್ತಿ ಎಲ್ಲಾ ಕೆಲಸಗಾರರೂ ಸದಸ್ಯರಾಗಬೇಕಾಗಿ ಕೋರುತ್ತೇನೆ

ರಾಜಕೀಯ ಖೈದಿಗಳ ಬಿಡುಗಡೆಯೇ ?

ಬೆಂಗಳೂರು ೧೮

ಸಂಸ್ಥಾನದಲ್ಲಿ ಬಂಧನದಲ್ಲಿರುವ ರಾಜಕೀಯ ಖೈದಿಗಳ ಪೈಕಿ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರುಗಳನ್ನು ಬಿಟ್ಟು, ಮಿಕ್ಕ ೧೭೦ ಬಂದಿಗಳನ್ನು ಸರ್ಕಾರದವರು ಶೀಘ್ರದಲ್ಲಿಯೇ ಬಿಡುಗಡೆ ಮಾಡುವರೆಂದು ಗೊತ್ತಾಗಿದೆ

ಭತ್ಯದ ಧಾರಣೆ

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಕೆಳಗಿನ ದರವನ್ನು ಸರ್ಕಾರದವರು ನಿರ್ಧರಿಸಿದ್ದಾರೆ ಭತ್ತ, ಕೊಯಮತ್ತೂರು ಸಣ್ಣ ಅಥವಾ ರಾಜಭೋಗ ಪಲ್ಲ 12 8 0 ರೂ, ಕಡ್ಡಿ 12-12-0 ನಾಗಪುರ ಸಣ್ಣ 12 8 0, ಕಾರು ಭತ್ತ, 9-8 0, ಇತರ ಭತ್ತ ಒಳ್ಳೆಯದು 12 ರೂ ಕಡಿಮೆ. ದರ್ಜೆಯದು 10 ರೂ

—

ಶಾಸನ ಸಭೆಗೆ ಬಹಿಷ್ಕಾರ

ಗಡಿನಾಡಿನ ಶಾಸನ ಸಭೆಗೆ ಕಾಂಗ್ರೆಸ್ ಮತ್ತು ಹಿಂದೂ ಸ್ವತಂತ್ರ ಪಕ್ಷದವರು ಹೋಗದ ಬಹಿಷ್ಕಾರ ಹಾಕಿದ್ದಾರೆ ಬಂಧನದಲ್ಲಿರುವ ೧೦ ಮಂದಿ ಸದಸ್ಯರನ್ನು ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಬೇಕೆಂದೂ ಅಥವಾ ಶಾಸನ ಸಭೆಗೆ ಹಾಜರಾಗಲು ಪೆರೋಲ್ ಮೇಲಾದರೂ ಬಿಡುಗಡೆ ಮಾಡಬೇಕೆಂದು ಡಾ|| ಖಾನ್ ಸಾಹೇಬರು ಗೌರ್ನರಿಗೆ ಮನವಿ ಮಾಡಿಕೊಂಡಿದ್ದನ್ನು ತಿರಸ್ಕರಿಸಿದ್ದು ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಸೈಕಲ್‌ರಿಕ್ಷಾಕ್ಕೆ ಅನುಮತಿಕೊಡಲಿಲ್ಲ

ಬೊಂಬಾಯಿನಗರದಲ್ಲಿ ಸೈಕಲ್ ರಿಕ್ಷಾ ವಾಹನಗಳನ್ನು ಉಪಯೋಗಿಸಲು ಪೌರ ಸಭೆಯವರು ಅನುಮತಿ ಕೊಡಲಿಲ್ಲ.

ಆ ಕಾ ಶ ವಾ ಣಿ

ಆಗಸ್ಟ್ ೨೦ ನೇ ಶುಕ್ರವಾರ

೮-೩೦ ಹಿಂದೂಸ್ಥಾನಿ ಹಾಡುಗಾರಿಕೆ ವಿದ್ವಾನ್ ನರೇಂದ್ರನಾಥ್

ಸಿಸಲಿ ಯುದ್ಧ ಮುಕ್ತಾಯ

ಸಿಸಲಿ ಯುದ್ಧ ಮುಕ್ತಾಯವಾಯಿತು ಶತ್ರುವಿನ ಕಟ್ಟಕಡೆಯ ಮೆಸ್ಸೀನಾವನ್ನು ಅಮೆರಿಕಾ ಸೈನ್ಯವು ವಶಪಡಿಸಿಕೊಂಡುದು ಶತ್ರುವಿನ ಪ್ರತಿಭಟನೆಯು ಸಂಪೂರ್ಣವಾಗಿ ನಿಂತುಹೋಗಿದೆ ಈಗ ಮಿತ್ರರ ವಶಕ್ಕೆ ೧೦ ಸಾವಿರ ಚದರ ಮೈಲಿ ಪ್ರದೇಶ ಸಿಕ್ಕಿದೆ ಇಟಲಿಯ ಮುಖ್ಯಸ್ಥಳಕ್ಕೆ ಮಿತ್ರಸೇನೆಯು ಕೇವಲ ೩ ಮೈಲಿ ದೂರದಲ್ಲಿದೆ ಸುಮಾರು ೧,೩೫,೦೦೦ ಶತ್ರು ಸೈನಿಕರನ್ನು ಸೆರೆ ಹಿಡಿಯಲಾಯಿತು.

ಈಗಾಗಲೇ ಮಿತ್ರರು ಇಟಲಿ ಪ್ರಮುಖ ಪ್ರದೇಶಗಳ ಮೇಲೆ ಹಿಂಗಿ ಹೊಡೆತವನ್ನು ಪ್ರಾರಂಭಿಸಿದ್ದಾರೆ

ಸಿಸಲಿಯಲ್ಲಿ ಮಿತ್ರರು ೩೮ ದಿನ ಘೋರ ಕದನ ನಡೆಸಿ ೧೬ ಸಾವಿರ ಸಲ ವಿಮಾನ ಧಾಳಿಮಾಡಿದರೆಂದೂ, ಕದನದಲ್ಲಿ ಶತ್ರುವು ೩ ಸಾವಿರ ವಿಮಾನಗಳನ್ನು ಕಳೆದುಕೊಂಡರೆಂದು ವರದಿಯಾಗಿದೆ.

— —

ನೌಕಾ ಕ್ಲಬ್ಬಿಗೆ ಸಹಾಯ

ಕರಾಚಿಯಲ್ಲಿ ವ್ಯಾಪಾರ ನೌಕಾದಳದ ಕ್ಲಬ್ಬನ್ನು ಸ್ಥಾಪಿಸಲು ವೈಸರಾಯ್ ರವರ ನಿಧಿಯಿಂದ ೫೦ ಸಾವಿರ ರೂ. ಗಳನ್ನು ಕೊಡಲಾಗಿದೆ

ಜರ್ಮನರಿಗೆ ಇಟಲಿಯ ಕ್ಷಮಾಪಣೆ

ಇಟಲಿಯಲ್ಲಿ ಜರ್ಮನರಿಗೆ ವಿರುದ್ಧವಾಗಿ ನಡೆದ ಪ್ರದರ್ಶನಕ್ಕಾಗಿ ಬಡೋಗ್ಲಿಯೋ ಸರ್ಕಾರದವರು ಜರ್ಮನರಲ್ಲಿ ಕ್ಷಮಾಪಣೆ ಕೇಳಿ, ಅವರಿಗೆ ನಷ್ಟವಾದುದಕ್ಕೆ ತಾವು ಪರಿಹಾರ ನೀಡುವುದಾಗಿ ತಿಳಿಸಿದ್ದಾರೆಂದು ಹೇಳಲಾಗಿದೆ

ಇಟಲಿ ಮೇಲೆ ದಂಡಯಾತ್ರೆ

ಸಿಸಲಿ ಪತನವಾದುದರಿಂದ ಶೀಘ್ರದಲ್ಲಿಯೇ ಇಟಲಿ ಮೇಲೆ ದಂಡಯಾತ್ರೆ ನಡೆಸಲು ತಕ್ಕ ಕಾರ್ಯವು ತೆಗೆದುಕೊಳ್ಳಲು ಕ್ವಿಬೆಕ್ ಸಮ್ಮೇಳನದಲ್ಲಿ ತೀರ್ಮಾನಿಸಲಾಗುವುದೆಂದು ವರದಿಯಾಗಿದೆ.

ರೋಂ ಖಾಲಿ ಮಾಡಲಾಗುತ್ತಿದೆ.

ರೋಂ ನಗರದಲ್ಲಿ ಇದ್ದ ಇಟಲಿ ಸೈನ್ಯವನ್ನೆಲ್ಲಾ ಅಲ್ಲಿಂದ ಕಳುಹಿಸಲಾಗಿದೆಯೆಂದೂ ಮತ್ತು ಇಟಾಲಿಯನ್ ಯುದ್ಧ ವಾರ್ ಆಫೀಸನ್ನು ಬೇರೆ ಪ್ರದೇಶಕ್ಕೆ ವರ್ಗಾಯಿಸಲಾಗಿದೆಯೆಂದೂ ಸ್ವಿಸ್ ರೇಡಿಯೋ ವರದಿಯಾಗಿದೆ

Edited, printed and published by A R Nagarajan, at the Sadhvi Press, D Subbiah Road, Mysore

ಪ್ರತಿ ಶನಿವಾರ ಮತ್ತು ಭಾನುವಾರ 4 ಘಂಟೆಗೆ ಮ್ಯಾಟಿನಿ ಇರುತ್ತೆ

ನ್ಯೂ ಅಪೇರಾ ಟಾಕೀಸ್

೧೯—೮—೪೩ ರಿಂದ

ಈಶ್ವರಲಾಲ್, ಕೌಸಲ್ಯ, ವೀಣಾಕುಮಾರಿ, ಮಜೀದ್ ಮತ್ತು ಗೋಷ್ ಮುಂತಾದವರು ಪಾತ್ರವಹಿಸಿರುವ

ಹಿಂದಿ **ಚಿರಾಗ್** ಹಿಂದಿ

Morning shows at 10-45 a m

FROM 20-8-43

KIDNAPPED

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ

The Benares Textile Emporium
(opposit to Chamundeswari Talkies)

Purchase Direct from Benareswalas

ಬನಾರಸ್‌ರವರ ಕಲಾಬತ್ತು ಜವಳಿ ಅಂಗಡಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ ಬನಿಯಲ್ಲಿ ಮತ್ತು ರೆಡಿಮೇಡ್ ಡ್ರೆಸ್ ಶಾಪ್ಪಿನ ಬಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ರವರ ಅಂಗಡಿ ಪಕ್ಕದಲ್ಲಿ ಇರುತ್ತದೆ ಒಂದರ ಬೆಲೆ ಎಲ್ಲಾ ಹೊಸ ನಮೂನೆಗಳಲ್ಲಿ ಸಿಕ್ಕುತ್ತವೆ.

ಈ ದಿನವೇ ಬಂದು ಪರೀಕ್ಷಿಸಿರಿ.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಚೆಲುವಿಕೆಯು ಹಾಗೂ ರೋಮ ರಂಧ್ರಗಳನ್ನೆಲ್ಲಾ ಶುದ್ಧಿಮಾಡಿ ಮೈನ್ನೆಲ್ಲಾ ಸುಗಂಧಯುಕ್ತವಾಗಿ ಮಾಡುವುದು ಇದರ ನಿತ್ಯ ಉಪಯೋಗ [illegible] ಸಂತೋಷವನ್ನು ಕರ್ಷವಾಗಿಸುವುದು.

ಮೈಸೂರು ಸ್ಯಾಂಡಲ್ ಸೋಪ್

ಮಹಾರಾಜರ ಮತ್ತು ಸಚಿವರ ಆಗಮನ

ಮೈಸೂರು ೨೦

ರಾಜಧಾನಿಗೆ ವೈಸ್ರಾಯರ ಆಗಮನದ ಸಂಬಂಧದಲ್ಲಿ ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ಮತ್ತು ಎಲ್ಲ ಸಚಿವರೂ ಆಗಮಿಸಿದ್ದಾರೆ.

ಟ್ರಸ್ಟ್ ಬೋರ್ಡ್ ಸಭೆ

ಮೈಸೂರು ಟ್ರಸ್ಟ್ ಬೋರ್ಡ್ ಸಭೆಯು ಇದೇ ಮಾಹೆ ೨೫ ರಲ್ಲಿ ಸೇರಲಿದೆ. ಬಳೇಪೇಟೆ ಆಯುದ ಹಿಂಭಾಗದಲ್ಲಿ ೭ ನೂರದ ೦ ಮನೆಗಳನ್ನು ಕಟ್ಟಲು ೧೮,೦೦೦ ರೂ. ಅಂದಾಜನ್ನು ಪರಿಶೀಲಿಸಲಾಗುವುದು

ಪಡಾರಿಯನ್ನು ಇನ್ನೂ ಅಭಿವೃದ್ಧಿಪಡಿಸಲು ಟ್ರಸ್ಟ್ ಬೋರ್ಡ್ ಬಜೆಟ್ಟಿನಲ್ಲಿ ೧೦ ಸಾವಿರ ರೂ. ಪ್ರತ್ಯೇಕವಾಗಿ ತೆಗೆದು ಇದಕ್ಕೆ ಖರ್ಚು ಮಾಡಬೇಕೆಂದು ಛೇರ್ಮನರು ತಿಳಿಸಿದ್ದಾರೆ

ಆಕಸ್ಮಿಕ ಮರಣ

ಚಾಮರಾಜನಗರದ ತಾಲ್ಲೂಕು ಹೊಂಡರಬಾಳು ಗ್ರಾಮದ ಚಿಕ್ಕರಂಗಶೆಟ್ಟಿ ಎಂಬುವನು ಮೊನ್ನೆ ದಿವಸ ಜೋಳ ಬೆಳೆಯ [illegible] ಕಾಯಲು ಒಂದು ಬೇವಿನ ಮರದ ಮೇಲೆ ಅಟ್ಟನೆ ಹಾಕಿ ಅಲ್ಲಿ ಅಗ್ನಿ ಸ್ಥಾಪಿಸಿಕೊಂಡು ಮಲಗಿದ್ದಾಗ ಅಟ್ಟನೆಗೆ ಬೆಂಕಿ ಬಿದ್ದು, ಗಾಬರಿಯಲ್ಲಿ ಆತನು ಮರದಿಂದ ಬಿದ್ದು ಮರಣ ಹೊಂದಿದನೆಂದು ಪೋಲೀಸರಿಗೆ ವರದಿಯಾಗಿದೆ

* * * *

ನಂಜನಗೂಡು ತಾ|| ದೇವಲಾಪುರ ಹೋಬಳಿ [illegible] ಗ್ರಾಮದಲ್ಲಿ ಮೊನ್ನೆ ದಿವಸ ಮೂಗಯ್ಯನ ೩ ವರ್ಷದ ಮಗುವೊಂದು ಆಟವಾಡುತ್ತಿದ್ದಾಗ್ಗೆ ನೀರಿನ ಹೊಂಡದಲ್ಲಿ ಬಿದ್ದು ಮೃತಿಹೊಂದಿತೆಂದು ಹೇಳಲಾಗಿದೆ.

ಭಾರತ ಇತಿಹಾಸ ಗ್ರಂಥ ರಚನೆ

ಭಾರತದ ಇತಿಹಾಸವನ್ನು ೧೨ ಗ್ರಂಥಗಳಲ್ಲಿ ಸಿದ್ಧಗೊಳಿಸುವುದಕ್ಕಾಗಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಅಭಿಮತದಂತೆ ಸರ್. [illegible] ಬಹದ್ದೂರ್ ಸಪ್ರೂರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ ಪ್ರಧಾನ ಶಿರೋಮಣಿ ಎನ್. ಮಾಧವರಾವ್, [illegible] ಮಿರ್ಜಾ ಎಂ. ಇಸ್ಮಾಯಿಲ್, ಡಾ|| [illegible] ಜಯಕರ್, ಸರ್ ಜೋಗೇಂದ್ರ [illegible], ಡಾ|| ಶ್ಯಾಮಪ್ರಸಾದ್ ಮುಖರ್ಜಿ, [illegible] ಎಸ್. ರಾಧಾಕೃಷ್ಣನ್, ಡಾ|| ಸರ್. [illegible] ಸುಲೇಮಾನ್ ಅಹಮದ್, ಪ್ರೊ|| [illegible] ಡಾ|| ಸಚ್ಚಿದಾನಂದ ಸಿನ್ಹಾ, [illegible] ಅಲಿಯಾರ್ ಜಂಗ್, ಸರ್. [illegible] ಇವರುಗಳು ಸದಸ್ಯರಾಗಿರುವರು.

ವಿಶ್ವಸ್ತಾನದ ಬಗ್ಗೆ ಅವಧಿ ಹೆಚ್ಚಿಸಲಾಗುವುದಿಲ್ಲ

[illegible] ಕಟ್ಟಿಗಳ ಪರವಾನಾವಧಿ ಭಾರತೀ[illegible] ಸಿದ್ಧಪಡಿಸಿದೆ ಇನ್ನುಮೇಲೆ ಹೊಸ [illegible] ಸಿಕೊಳ್ಳುವುದೇ ಇಲ್ಲ, ಸರ್ಕಾರದ ನಿರ್ಧಾರಕ್ಕೆ [illegible] ಕಟ್ಟಿ ಕಟ್ಟೆಯವರ ಸಮ್ಮತಿ ಪಡೆ[illegible] ಗಾಗಿಯೂ ತೀರ್ಮಾನಿಸಿದೆ. ಕಟ್ಟೆ [illegible] ಸ್ಥಾನದ ಬಗ್ಗೆ ಆಗಸ್ಟ್ ತಿಂಗಳ [illegible] ಅವಧಿ ಕೊಡಲು ಸರ್ಕಾರವು [illegible] ನಿರಾಕರಿಸಿದೆ

ಸಂಪುಟ ೨] ಶುಕ್ರವಾರ ೨೦—೮—೪೩ [ಸಂಚಿಕೆ ೩೦

ಇಟಲಿಯನ್ನು ಜರ್ಮನಿ ಕೈಬಿಡುವುದಿಲ್ಲ

ಶಾಂತಿ ಸಂಧಾನಕ್ಕೆ ಜರ್ಮನಿ ಸಲಹೆ
೯ ಕಾಸು ಕಮಿಷನಿಗಾಗಿ ೧೫೦೦ ರೂ. ಜುಲ್ಮಾನೆ ಬಿತ್ತು

ಶಾಂತಿ ಸಂಧಾನ ನಡೆಸಲು ಜರ್ಮನ್ ರೇಡಿಯೊ ಸಲಹೆ

ಜರ್ಮನಿ ಮತ್ತು ಮಿತ್ರ ಪಕ್ಷದವರು ಒಟ್ಟಿಗೆ ಕುಳಿತು ಸಾಧ್ಯವಾದ, ಅವರೆಡೆಗೆ ತರಬಹುದಾದ ಮತ್ತು ನ್ಯಾಯವಾದ ಶಾಂತಿ ಸಂಧಾನ ಮಾಡಲು ಈಗ ಒಳ್ಳೇ ಸಮಯವೆಂದು ಬರ್ಲಿನ್ ರೇಡಿಯೋ ಸಲಹೆಯಿತ್ತಿದೆ ಇದನ್ನು ನೋಡಿದರೆ ರಷ್ಯ ಮತ್ತು ಮಿತ್ರಪಕ್ಷದವರ ಮಧ್ಯೆ ಒಡಕನ್ನುಂಟುಮಾಡಲು ಗೋಬೆಲ್ಸ್‌ರ ಕೈವಾಡವಿರಬಹುದೆಂದು ಊಹಿಸಲಾಗಿದೆ ಮಿತ್ರಪಕ್ಷದವರು ಇದನ್ನು ನಡೆಸದಿದ್ದರೆ ಜರ್ಮನಿಯು ರಷ್ಯಾದೊಡನೆ ಶಾಂತಿ ಮಾಡಿಕೊಳ್ಳುವುದೆಂಬ ಬೆದರಿಕೆ ಕೊಟ್ಟಿದೆಯೆಂದು ಹೇಳಲಾಗಿದೆ.

ಇಟಲಿ ರಕ್ಷಣೆಗೆ ಜರ್ಮನ್ ಸಿದ್ಧತೆ

ಬಡೋಗ್ಲಿಯೋ ಸರ್ಕಾರದವರು ರಾಜಿ ಮಾಡಿಕೊಳ್ಳದಂತೆ ತಡೆಯಲು ಜರ್ಮನಿಯು ಇಟಲಿಯನ್ನು ಕೈ ಬಿಡುವುದಿಲ್ಲವೆಂದೂ, ಅದಕ್ಕೋಸ್ಕರ ಇಟಲಿಯಲ್ಲಿ ೧೫ ಡಿವಿಜನ್ ಜರ್ಮನ್ ಸೈನ್ಯ ಶೇಖರಿಸಿರುವುದಾಗಿಯೂ ವರದಿಯಾಗಿದೆ

— —

ಇಟಲಿ ದಂಡಯಾತ್ರೆ

ಇಟಲಿಯನ್ನು ಮುತ್ತಲು ಕಾಲ ಸಿದ್ಧವಾಗಿರುವುದಾಗಿ ಜನರಲ್ ಐಸನ್ ಹೋವರ್ ರವರು ಕ್ವಿಬೆಕ್ಕಿನಲ್ಲಿರುವ ರೂಸ್ವೆಲ್ಟ್ ಮತ್ತು ಚರ್ಚಿಲ್ಲರಿಗೆ ಭರವಸೆ ಕೊಟ್ಟಿರುವರೆಂದು ಹೇಳಲಾಗಿದೆ ಕ್ವಿಬೆಕ್ ಸಮ್ಮೇಳನದಲ್ಲಿ ಇಟಲಿ ಮೇಲೆ ದಂಡ ಯಾತ್ರೆ [illegible] ಸಲು ಆಗಾಗಲೇ ಕಾರ್ಯಕ್ರಮದ ಬಗ್ಗೆ ಯೋಚಿಸಲಾಗಿದೆಯೆಂದು ವರದಿಯಾಗಿದೆ

ಪ್ರವಾಹದ ಹಾವಳಿ

ಪ್ರವಾಹದ ಹಾವಳಿಗೆ ಸಿಕ್ಕಿ ಹೈದರಾಬಾದ್ ಸಂಸ್ಥಾನದ ರೋಟ್‍ಮಿರಾರ್ ಮಹಲ್ ಎಂಬ ಗ್ರಾಮವು ಸಂಪೂರ್ಣ ಜಲಮಯವಾಗಿರುವದೆಂದೂ, ಇದರ ಫಲವಾಗಿ ಹತ್ತು ಲಕ್ಷರೂ ಗಳ ನಷ್ಟ ಸಂಭವಿಸಿದೆ ಯೆಂದೂ ಮಧ್ಯಪ್ರಾಂತ ಜಿಲ್ಲೆಯಲ್ಲಿ ಸಿಂಧೂ ನದಿಯ ದಡದಲ್ಲಿರುವ ಗ್ರಾಮ ಪ್ರವಾಹದಿಂದ ಸುತ್ತುಗಟ್ಟಿಲ್ಪಟ್ಟಿದೆಯೆಂದೂ ವರದಿಯಾಗಿದೆ.

೯ ಕಾಸು ಕಮಿಷನ್ನಿಗೆ ೧,೫೦೦ ರೂ. ಜುಲ್ಮಾನೆ

ಅಕ್ಕೋಲ ವ್ಯಾಪಾರಿ ಒಬ್ಬರು ೧೫ ರೂ. ಕರೆನ್ಸಿ ನೋಟಿಗೆ ಚಿಲ್ಲರೆ ಕೊಡಲು ೯ ಕಾಸು ಕಮಿಷನ್ ತೆಗೆದುಕೊಂಡಿದ್ದಕ್ಕೆ ಅವರಿಗೆ ೧೫೦೦ ರೂ ಜುಲ್ಮಾನೆವಿಧಿಸಲಾಗಿದೆ.

ಫಿನ್ಲೆಂಡಿಗೆ ರಷ್ಯದ ಶಾಂತಿ ಸಲಹೆ

ಕೆಲವು ಷರತ್ತುಗಳಿಗೆ ಒಪ್ಪುವುದಾದರೆ ರಷ್ಯವು ಫಿನ್ಲೆಂಡ್ ದೇಶದೊಡನೆ ಶಾಂತಿ ಒಪ್ಪಂದಕ್ಕೆ ಒಡಂಬಟ್ಟಿದೆಯೆಂದು ಡೈಲಿ ಸ್ಕೆಚ್ ಪತ್ರಿಕೆ ತಿಳಿಸುತ್ತದೆ ಜರ್ಮನಿಯೊಂದಿಗೆ ಇರುವ ಮೈತ್ರಿಯ ಒಪ್ಪಂದವನ್ನು ರದ್ದು ಮಾಡಿ, ಜರ್ಮನಿ ಸರಾಜಯ ಮಾಗುವವರೆಗೆ ಪ. ಅಂತೆ ಫಿನ್ಲೆಂಡ್ ಶಾಂತಿ ಪೇಡಿಯುವುದಾದರೆ ಕರೇಲಿಯನ್ ಪ್ರದೇಶವಿಲ್ಲದ ಫಿನ್ಲೆಂಡಿನ ದೇಶವನ್ನು ವಾಪಸು ಕೊಡಲಾಗುವದೆಂದು ರಷ್ಯ ತಿಳಿಸಿದೆ ಇದನ್ನು ಬಿಟ್ಟು ಫಿನ್ಲೆಂಡು ಯುದ್ಧ ನಡೆಸುವುದಾದರೆ ಹಿಂದೆ ರಷ್ಯ ಫಿನ್ಲೆಂಡ್ ಯುದ್ಧ ನಡೆದಾಗ ಅದಕ್ಕೆ ಕೊಟ್ಟ ಪ್ರದೇಶವನ್ನೆಲ್ಲ ರಷ್ಯವು ಪುನಃ ತೆಗೆದುಕೊಳ್ಳಲಾಗುವುದು

ಬೊಂಬಾಯಿ ವಿಶ್ವವಿದ್ಯಾಲಯಕ್ಕೆ ೭ ಲಕ್ಷ ರೂ. ದಾನ

ಬೊಂಬಾಯಿ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರದ ಶಾಖೆಯಲ್ಲಿ ಸಂಶೋಧನೆ ನಡೆಸಲು ಸರ್ ಜೋಮಿ ಮೊಕಾಜರವರು ೭ ಲಕ್ಷ ರೂಪಾಯಿಗಳ ಉದಾರ ದಾನ ಮಾಡಿರುವರು.

ಭಾರತದ ವೃದ್ಧ ಪಿತಾಮಹ

ಸಿಂಧ್ ಪ್ರಾಂತದಲ್ಲಿ ಅತ್ಯಂತ ವಯಸ್ಸಾದ ಪಿತಾ ಮಹ್ ಎಂಬ ೧೫೦ ವರ್ಷದ ವೃದ್ಧ ಪಿತಾಮಹರು ನವಾಬ್‌ಷಾನಲ್ಲಿ ಮೃತಿಹೊಂದಿದನೆಂದು ವರದಿಯಾಗಿದೆ

ಹಸಿವಿನ ಪ್ರಕೋಪ

ಸಿಲ್ಹೆಟ್ಟಿನಲ್ಲಿ ಹಸಿವಿನ ಬೇಗೆಗೊಳಗಾದ ಒಬ್ಬ ೨೦ ಜನರನ್ನು ಇದುವರೆಗೆ ಆಸ್ಪತ್ರೆಗೆ ಸೇರಿಸಲಾಗಿದೆ ಅವರ ಸ್ಥಿತಿ ೩೦ ಜನ ಮೃತರಾಗಿರುವರು

ಭಾರತದ ಬಗ್ಗೆ ಅಮೆರಿಕನ ಮನವಿ

ಕ್ವಿಬೆಕ್ ಸಮ್ಮೇಳನದಲ್ಲಿ ಭಾರತೀಯ ವಿಚಾರವನ್ನು ಚರ್ಚಿಸಬೇಕೆಂದು ಅಮೆರಿಕದಲ್ಲಿರುವ ಶ್ರೀ ಜೆ. ಜೆ. ಸಿಂಗ್ ಮಿ|| ಲೂಯಿಸಿಹರ್, ಮಿಸ್ ಪರ್ಲ್ ಬಕ್ ಮೊದಲ ದವರು ಪ್ರೆಸಿಡೆಂಟ್ ರೂಸ್ವೆಲ್ಟ್‌ರಿಗೆ ಮನವಿ ಮಾಡಿಕೊಂಡಿದ್ದಾರೆ ಬ್ರಿಟಿಷ್ ಕೊಲಂಬಿಯಾದಲ್ಲಿರುವ ಸಿಖ್ ಜನರು ಇದೇ ವಿಚಾರದಲ್ಲಿ ಕ್ವಿಬೆಕ್ಕಿಗೆ ಒಂದು ಯೋಗಕ್ಷೇಮವನ್ನು ಕಳಿಸಿಕೊಟ್ಟಿದ್ದಾರೆ ನೇತಾಜಿ [illegible] ನಾಯಕರನ್ನೂ ಸೆರೆಮನೆಯಿಂದ ಬಿಡುಗಡೆಮಾಡಿ ಭಾರತದ ರಾಜಕೀಯ ಬಿಕ್ಕಟ್ಟು ಪರಿಹರಿಸಿ ರಾಷ್ಟ್ರೀಯ ಸರ್ಕಾರ ಸ್ಥಾಪಿಸಬೇಕೆಂದು ವಿ|| ಅಮೆರಿಕದವರು ಪ್ರಾರ್ಥಿಸಿದ್ದಾರೆ.

ಖಾರ್ಕೋವ್‌ನಲ್ಲಿ ಜರ್ಮನ್ ಸೈನ್ಯ ಓಡುತ್ತಿದೆ

ಖಾರ್ಕೋವ್ ಕ್ಷೇತ್ರದಲ್ಲಿ ಲಕ್ಷ ಮೋಟಾರ್ ಡಿವಿಜನ್ ಮತ್ತು ಟ್ಯಾಂಕ್ ಟ್ರೂಪುಗಳನ್ನು ನುಗ್ಗಿಸಿ ಪ್ರಚಂಡ ಕದನ ನಡೆಸಿದರೂ ಕೂಡ ರಷ್ಯನರು ಈ ಪ್ರತಿಭಟನೆಯನ್ನೆಲ್ಲಾ ತಡೆಗಟ್ಟಿ ಕತ್ತರಿಸಿ ಅಪಾರ ನಷ್ಟವುಂಟುಮಾಡಿದರು ಖಾರ್ಕೋವ್ ಪ್ರದೇಶದಿಂದ ಜರ್ಮನ್ ಸೈನ್ಯವು ಈಗ ಹಿಂದಕ್ಕೆ ಓಡುತ್ತಿವೆಯೆಂದು ಹೇಳಲಾಗಿದೆ ಈ ಕದನದಲ್ಲಿ ೧೧೦ ಜರ್ಮನ್ ಟ್ಯಾಂಕುಗಳೂ ಮತ್ತು ೧೮ ವಿಮಾನಗಳೂ ನಾಶವಾಗಿವೆಯೆಂದು ವರದಿಯಾಗಿದೆ

ನಾಜಿ ನಾಯಕರುಗಳ ಭಯ

ಮಿತ್ರ ದಂಡ ಯಾತ್ರೆಗೆ ಹೆದರಿ ನಾಜಿ ನಾಯಕರಾದ ಗೋರಿಂಗ್ ಮತ್ತು ಇತರರು ಸೈನಿಕರ ಮನ್ನು ಇತರ ಸಂಸ್ಥೆಗಳಲ್ಲಿದ್ದ ತಮ್ಮ ಹೇರ ಶೇರುಗಳನ್ನು ಮಾರುತ್ತಿರುವರೆಂದು ಗೊತ್ತಾಗಿದೆ.

ಜರ್ಮನಿ ಪತನ ಬದಲಿ ದಿನ ಹಿಡಿಯುವುದು

೧೯೪೪ ನೇ ವರ್ಷದಲ್ಲಿ ಕೂಡ ಜರ್ಮನಿ ಪತನವಾಗಲಾರದು ಅದು ಶಸ್ತ್ರ ನೆಲ ಲಿಸಬೇಕಾದರೆ ಮತ್ತೊಂದು ವರ್ಷ ಬೇಕಾಗುವುದು ಎಂಬುದಾಗಿ ಅಮೆರಿಕದ ಸುಪ್ರಸಿದ್ಧ ವೈಮಾನಿಕರಾದ ಕ್ಯಾಪ್ಟನ್ ಎಡಿರಿಕನ್ ಬೇಕರ್‌ರವರು ತಿಳಿಸಿದ್ದಾರೆ

ಅರ್ಜೆಂಟೈನಾದಿಂದ ಮಾಸ್ಕೋಕ್ಕೆ ಕುದುರೆಯ ಮೇಲೆ ಪ್ರವಾಸ

ದಕ್ಷಿಣ ಅಮೆರಿಕದ ಅರ್ಜೆಂಟೈನಾದ ಸುಪ್ರಸಿದ್ಧ ಸವಾರರಾದ ಪ್ಯಾಬ್ಲೋ ಅರ್ನ್ಯೂಸ್ ಎಂಬುವರು ಮಾಸ್ಕೋಕ್ಕೆ ಕುದುರೆ ಮೇಲೆ ಹೊರಟಿದ್ದಾನೆ. ೧೯೪೫ ನೇ ವರ್ಷದಲ್ಲಿ ಮಾಸ್ಕೋ ನಗರವನ್ನು ತಲುಪುವನೆಂದೂ, ಆಸ್ಪತ್ರೆಗಳಿಗಾಗಿ ಹಣ ಸಂಗ್ರಹಿಸುವುದು ಇವರ ಉದ್ದೇಶವೆಂದು ಹೇಳಲಾಗಿದೆ.

— —

ಮಿತ್ರ ದಂಡಯಾತ್ರೆಗೆ ಬ್ರಿಟನ್ ಸಿದ್ಧತೆ

ಯೂರೋಪಿನ ಮೇಲೆ ಮಿತ್ರ ದಂಡ [illegible] ಸೂಚಿಸಿ [illegible] ತ ಒಟ್ಟುಗೂಡಿಸಲಾಗುವುದು [illegible] ಪತ್ರಿಕೆಯು ತಿಳಿಸಿದೆ

ಆಸ್ಪತ್ರೆಗೆ ಉದಾರ ದಾನ

ಬೆಂಗಳೂರು ೧೯

ಮಹಾರಾಜಾ ಮತ್ತು ಮಿನರ್ವ ಗಿರಣಿಗಳ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಸಿರೂರ್‌ರವರ ಪತ್ನಿ ಸ್ತ್ರೀ ಸಿರೂರ್‌ರವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹೃದಯಕ್ಕೆ ಸಂಬಂಧಪಟ್ಟ ವ್ಯಾಧಿಗಳ ಚಿಕಿತ್ಸೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲು ೧ ಲಕ್ಷ ರೂ. ದಾನ ಮಾಡಿದ್ದಾರೆ.

* * * *

ನೂತನವಾಗಿ ಕಟ್ಟಲಾಗುವ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗೆ ಲೋಕಸೇವಾಸಕ್ತ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್‌ರವರು ೧ ಸಾವಿರ ರೂ ಗಳನ್ನೂ, ಸೇಟ್ ಸುಬ್ರಾಂಡ್ರಾಸ್‌ರವರು ೧ ಸಾವಿರ ರೂ ಗಳನ್ನೂ ಶ್ರೀ ಕೆ. ಎ. ಗುರುಸ್ವಾಮಿಯವರು ೨ ಸಾವಿರ ರೂ. ಗಳನ್ನೂ ಮತ್ತು ದೇವರಾಂ ಶಿವರಾಂರವರು ೫ ಸಾವಿರ ರೂ ಗಳನ್ನೂ ದಾನ ಮಾಡಿರುವರು.

ಸರ್ ವೈಲಿಯವರ ಆಗಮನ

ವೈಸ್‌ರಾಯರ ರಾಜಕೀಯ ಸಲಹೆಗಾರರಾದ ಸರ್ ಫ್ರಾನ್ಸಿಸ್ ವೈಲಿಯವರು ನಿನ್ನೆ ಆಗಮಿಸಿದರು. ನಾಳೆ ದಿನ ರಾಜಧಾನಿಗೆ ಪ್ರಯಾಣಮಾಡುವರು.

ವಿಷಬೇಳೆ ತಪ್ಪಿಸಲಾಯಿತು

ಮಧ್ಯ ಮತ್ತು ಸಂಯುಕ್ತ ಪ್ರಾಂತ್ಯಗಳಿಂದ ಬರುತ್ತಿದ್ದ ವಿಷಯುಕ್ತವಾದ ಬೇಳೆಯನ್ನು ಮಾರುತ್ತಿದ್ದರೆಂದು ಪ್ರಕಟವಾಗಿತ್ತಷ್ಟೆ. ಈಗ ಸರ್ಕಾರದವರು ಅಂತಹ ಬೇಳೆಯನ್ನು ವ್ಯಾಪಾರಿಗಳಿಂದ ವಶಪಡಿಸಿಕೊಂಡಿದ್ದಾರೆ.

ಸೈನಿಕರ ಕ್ಯಾಂಟೀನಿಗೆ ಸಹಾಯ

ಬೆಂಗಳೂರು ನಗರ ಮತ್ತು ದಂಡು ಕೈಲ್ಸ್ ಸ್ಟೇಷನ್ನಿನಲ್ಲಿ ಭಾರತೀಯ ಸೈನಿಕರಿಗಾಗಿ ಕ್ಯಾಂಟೀನ್ ಏರ್ಪಡಿಸಲು ಧರ್ಮಪ್ರಕಾಶ ದೇವರಾಂ ಶಿವರಾಂರವರು ಮಾಹೆವಾರಾ ೫೦೦ ರೂ. ಕೊಡಲೊಪ್ಪಿದ್ದಾರೆ.

ಮಿತ್ರ ವಿಮಾನಗಳ ಉಗ್ರ ಧಾಳಿ

ಮಿತ್ರ ವಿಮಾನಗಳು ಬರ್ಮಾದ ಮೇಲೆ ಉಗ್ರ ಧಾಳಿಕ್ರಮ ಕೈಗೊಂಡು, ಮಾಗ್ವೆ, ಪ್ರೋಂಗಳ ಮಧ್ಯೆ ಸುಮಾರು ೩೫ ಸರಬರಾಜು ದೋಣಿಗಳಿಗೆ ನಷ್ಟವುಂಟುಮಾಡಿದೆ ಮತ್ತು ಕೌಕ್ಲ್ ಬಳಿ ಎಣ್ಣೆ ತುಂಬಿದ್ದ ೧ ಟ್ಯಾಂಕಿಗೆ ಬೆಂಕಿ ಹೊತ್ತಿಸಲಾಯಿತು. ಆಗಸ್ಟ್ ೧೪ ರಲ್ಲಿ ಬೆಂಕಿಹಚ್ಚಿ ನಷ್ಟಪಡಿಸಿದ ಎಣ್ಣೆಯ ದೋಣಿಗಳು ಇನ್ನೂ ಉರಿಯುತ್ತಿರುವುದಾಗಿ ವರದಿಯಾಗಿದೆ.

ಶತ್ರು ವಿಮಾನ ಪಡೆ ನಾಶ

ನ್ಯೂಗಿನಿಯಾದಲ್ಲಿರುವ ವಿವಾಕ್ ನೆಲೆಯ ಮೇಲೆ ಇತ್ತೀಚೆಗೆ ಧಾಳಿಮಾಡಿದ ಪರಿಣಾಮವಾಗಿ ಅಲ್ಲಿದ್ದ ಇಡೀ ಜಪಾನ್ ವಿಮಾನಪಡೆಯು ನಾಶಹೊಂದಿತೆಂದೂ, ೨೨೫ ರ ಪೈಕಿ ಕೇವಲ ೧೦ ಮಾತ್ರ ಉಳಿಯಿತೆಂದೂ ಹೇಳಲಾಗಿದೆ. ವಿವಾಕ್ ರೇವು ಮತ್ತು ಪಟ್ಟಣ ಪ್ರದೇಶಗಳೆಲ್ಲ ಧ್ವಂಸವಾಗಿವೆ.

ಜರ್ಮನ್ ಕೈಗಾರಿಕೆ ಕೇಂದ್ರಗಳ ಮೇಲೆ ಧಾಳಿ

ಬಾಲ್ಟಿಕ್ ತೀರದಲ್ಲಿರುವ ಸ್ಟೆಟಿನ್ ನಗರಕ್ಕೆ ನೈರುತ್ಯದಲ್ಲಿ ೬೦ ಮೈಲಿ ದೂರದಲ್ಲಿರುವ ಜರ್ಮನ್ ಸಂಶೋಧನ ಮತ್ತು ಶಸ್ತ್ರಾಸ್ತ್ರಗಳ ಕೈಗಾರಿಕೆ ಕೇಂದ್ರಗಳ ಮೇಲೆ ಬ್ರಿ|| ವಿಮಾನಗಳು ಉಗ್ರಧಾಳಿ ನಡೆಸಿದುವು. ಬರ್ಲಿನ್, ಫ್ರಾನ್ಸ್ ಮತ್ತು ಬೆಲ್ಜಿಯಂ ಶತ್ರು ವಿಮಾನ ನೆಲೆಗಳ ಮೇಲೂ ಧಾಳಿ ನಡೆಸಲಾಯಿತು.

ಅಮೆರಿಕನ್ ವಿಮಾನ ಧಾಳಿ

ಮಧ್ಯ ಬರ್ಮಾದ ರೈಲ್ವೆ ಗುರಿಗಳ ಮೇಲೆ ಅಮೆರಿಕನ್ ವಿಮಾನಗಳು ಅಗಾಧಧಾಳಿ ಮಾಡಿ ಮೆ.ಕ್‌ಟಿಲಾದಲ್ಲಿ ರೈಲ್ವೆ ಸಿಲ್ಡ್ ಜಕ್ಷ್ಯ, ಸರಬರಾಜು ನೆಲೆಗಳಿಗೆ ಮತ್ತು ವಾಹನಗಳಿಗೆ ತುಂಬಾ ನಷ್ಟವುಂಟುಮಾಡಿರುತ್ತವೆ.

ಆಕ್ರಮಿತ ಯೂರೋಪಿಗೆ ಎಚ್ಚರಿಕೆ

ಆಕ್ರಮಿತ ಯೂರೋಪಿನಲ್ಲಿರುವ ಮಿತ್ರ ರಾಷ್ಟ್ರಗಳಿಗೆ ಮಿತ್ರಪಕ್ಷದವರು ಒಂದು ಸಂದೇಶವನ್ನು ಲಂಡನ್ ಮತ್ತು ಅಲ್ಜೀರಿಯಸ್ ರೇಡಿಯೋಗಳಿಂದ ತಿಳಿಸಿದ್ದಾರೆ. ಅದು ಈ ರೀತಿ ಇದೆ—

"ಆಕ್ರಮಿತ ದೇಶಗಳನ್ನು ಸ್ವತಂತ್ರಗೊಳಿಸಲು ನೂತನ ಘಟ್ಟ ಆರಂಭವಾಗಿದೆ. ಮುಂದೆ ನಾವೆಲ್ಲಿ ದಂಡಯಾತ್ರೆ ಆರಂಭಿಸುತ್ತೇವೆಂಬುದನ್ನು ಬಹಿರಂಗಪಡಿಸುವುದಿಲ್ಲ. ನಮ್ಮ ಕೊನೆಯ ಸೂಚನೆಯನ್ನು ನಿರೀಕ್ಷಿಸುತ್ತಿರಿ. ಅಷ್ಟರಲ್ಲಿ ನೀವೆಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಿ."

ಫ್ರಾನ್ಸಿನ ಪ್ರಜೆಗಳಿಗೂ ಒಂದು ಸಂದೇಶವನ್ನು ಕಳುಹಿಸಿ ಶತ್ರು ನಾಶಮಾಡಲು ಪ್ರತಿಯೊಬ್ಬರೂ ಸಹಾಯ ಮಾಡಬೇಕೆಂದು ತಿಳಿಸಿದ್ದಾರೆ.

ಸಿಸಲಿಯಲ್ಲಿ ಆಕ್ಸಿಸ್ ನಷ್ಟ

ಸಿಸಲಿ ಕದನದಲ್ಲಿ ೧,೨೫,೦೦೦ ಶತ್ರು ಸೈನಿಕರನ್ನು ಸೆರೆಹಿಡಿಯಲಾಯಿತು. ೩೦ ಸಾವಿರ ಶತ್ರು ಸೈನಿಕರು ಮಡಿದರು. ೧ ಸಾವಿರ ಶತ್ರು ವಿಮಾನಗಳು ನಾಶವಾದವು. ಸಾವಿರಾರು ಶತ್ರು ವಾಹನಗಳು ನಾಶವಾದವಲ್ಲದೆ, ಅಸಂಖ್ಯಾತ ಶಸ್ತ್ರ ಮತ್ತು ಮದ್ದುಗುಂಡುಗಳು ಮಿತ್ರರ ವಶವಾದುವು. ಮೆಸ್ಸೀನ ಕೊಲ್ಲಿಯಿಂದ ಇಟಲಿಗೆ ಹೊರಟ ೩೦೭ ಶತ್ರು ಹಡಗುಗಳನ್ನು ಮುಳುಗಿಸಲಾಯಿತು.

ಇಟಲಿ ಮೇಲೆ ಮುತ್ತಿಗೆ

ಸಿಸಲಿ ಪತನವಾದ ತರುವಾಯ ದಕ್ಷಿಣ ಇಟಲಿ ಮೇಲೆ ಮಿತ್ರರು ಮುತ್ತಿಗೆ ಆರಂಭಿಸಿದ್ದಾರೆ. ಮೆಸ್ಸೀನ ಕೊಲ್ಲಿಯನ್ನು ದಾಟಿ ಇಟಲಿಗೆ ಹೋಗುತ್ತಿದ್ದ ಆಕ್ಸಿಸ್ ಸೈನಿಕರ ಮೇಲೆ ಉಗ್ರ ವಿಮಾನ ಧಾಳಿ ಮಾಡಲಾಯಿತು. ಇಟಲಿ ಪಶ್ಚಿಮ ತೀರ ಪ್ರದೇಶದ ಮೇಲೂ ಧಾಳಿನಡೆಸಿ, ಕೆಲವು ರಸ್ತೆಗಳೂ ಮತ್ತು ವಾರ್ತಾ ಸೌಕರ್ಯಗಳನ್ನು ನಾಶಮಾಡಲಾಯಿತು.

ಬರ್ಮಾ ಮೇಲೆ ಧಾಳಿ

ಮಿತ್ರ ವಿಮಾನಗಳು ಮಬರ್ಡಿ ಮತ್ತು ಕೈಮೇಗು ನದಿಗಳ ಕ್ಷೇತ್ರಗಳಲ್ಲಿ ಧಾಳಿನಡೆಸಿ ೧೨ ಸರಬರಾಜು ನೌಕೆಗಳಿಗೆ ನಷ್ಟವುಂಟುಮಾಡಿದೆ ಮತ್ತು ಅಕ್ಯಾಬ್ ಮೇಲೂ ಧಾಳಿ ನಡೆಸಿರುವುದಾಗಿ ತಿಳಿಯಬರುತ್ತೆ.

ಕ್ಷುದ್ಬಾಧೆ ನಿವಾರಿಸಬೇಕು

ಬಂಗಾಳದಲ್ಲಿ ಅನ್ನವಿಲ್ಲದೆ ಜನರು ಸಾಯುತ್ತಿದ್ದಾರೆ. ಮಾನವ ದೃಷ್ಟಿಯಿಂ ಆಸ್ಟ್ರೇಲಿಯಾ ಮತ್ತು ಅಮೇರಿಕಾಗಳಿ ಧಾನ್ಯಗಳನ್ನು ಒದಗಿಸಲು ಬ್ರಿ|| ಸರ್ಕಾರ ಏರ್ಪಾಡುಮಾಡಬೇಕು. ಅಗತ್ಯವಿದ್ದ ಬರ್ಮಾದಿಂದ ಅಕ್ಕಿಯನ್ನು ತರಲು ಅಂ ರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆ ಸಹಾಯ ವನ್ನು ತೆಗೆದುಕೊಳ್ಳಬೇಕೆಂದು ಹಿಂದೂ ಮಹಾಸಭೆ ಕಾರ್ಯಸಮಿತಿಯು ನಿರ್ಧರಿಸಿ ಪರಿಸ್ಥಿತಿ ಉತ್ತಮವಾಗುವ ತನಕ ೨೦ ಮಂದಿ ಅನಾಥರ ಪೋಷಣೆಗೆ ಸಿಂಧ್ ದಯಾಬಾಯಿಸವರು ಉದಾರ ದಾನಮಾಡಲೊಪ್ಪಿರುವುದಾಗಿ ಡಾ|| ಮುಖರ್ಜಿಯವ ತಿಳಿಸಿದರು. ೧೦ ವರ್ಷ ವಯಸ್ಸಿಗಿಂ ಕಡಿಮೆ ವಯಸ್ಸಿನ ೧೦೦ ಮಂದಿ ಅನಾ ಬಾಲಕರಿಗೆ ಆಶ್ರಯಕೊಟ್ಟು ವಿದ್ಯಾಭ್ಯಾ ಕೊಡಿಸಲು ಕಲ್ಕತ್ತೆಯ ಹಲವು ಕೈಗಾರಿ ಪ್ರಮುಖರು ವಾಗ್ದಾನಮಾಡಿದ್ದಾರೆ.

ಅಂಟುರೋಗದ ಹಾವಳಿ

ಕಲ್ಕತ್ತಾ ನಗರದಲ್ಲಿ ಅಂಟುರೋಗಗ ಹಾವಳಿ ಹೆಚ್ಚುವ ಸಂಭವವಿದೆಯೆಂದು ರೋಗ್ಯಶಾಖಾಧಿಕಾರಿಗಳು ಎಚ್ಚರಿಕೆ ಕೊ ಟ್ಟಿದ್ದಾರೆ.

ಕರಾಚಿ ವಾಣಿಜ್ಯ ಸಂಘದ ಪ್ರತಿಭಟನೆ

ಸಿಂಧಿನ ಮಾಜಿ ಪ್ರಧಾನಿ ಅಲ್ಲಾಬಕ್ಷ ಕೊಲೆಪಾತಕರನ್ನು ಪತ್ತೆಮಾಡುವ ವಿ ಯದಲ್ಲಿ ಸರ್ಕಾರದವರು ಅನುಸರಿಸುತ್ತಿ ವ ನಡವಳಿಕೆಗಳನ್ನು ಕರಾಚಿ ಭಾರತ ವಾ ಣಿಜ್ಯ ಸಂಘವು ಖಂಡಿಸಿ, ಸಿಂಧ್ ಸರ್ಕಾ ರಕ್ಕೆ ಪತ್ರ ಬರೆದಿದ್ದರು. ಸರ್ಕಾರದವರ ಆಗಸ್ಟ್ ತಿಂಗಳಿಂದ ಸಂಘದವರು ಸಹಕ ರಿಸುತ್ತಿಲ್ಲವಾಗಿ ಆ ಪತ್ರವನ್ನು ಗಮನಿಸ ವುದಿಲ್ಲವಾಗಿ ಸರ್ಕಾರವು ತಿಳಿಸಿರುತ್ತದೆ.

ಭಾರತಕ್ಕೆ ನೂತನ ವಾಯು ಮಾರ್ಗ

ಭಾರತಕ್ಕೆ ನ್ಯೂಯಾರ್ಕಿನಿಂದ ಆಫ್ರಿಕಾ ಮತ್ತು ಚೀನಾಗಳ ಮೂಲಕ ನೇರವಾದ ವಾಯುಮಾರ್ಗ ಕಲ್ಪಿಸುವ ಯೋಚನೆ ನಡೆದಿದೆ. ಇದು ಯುದ್ಧಾನಂತರ ಕೂಡಲೇ ಆರಂಭವಾಗುವುದೆಂದು ತಿಳಿಯಬರುತ್ತೆ.

Edited, printed and published by A. R. Nagarajan, at the Sadhvi Press, D Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.— ಚಿಲ್ಲರೆಯಾಗಿ ಮಂಡ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸಹಾ ದೊರೆಯುತ್ತವೆ.

ಈಗ ಆಗುತ್ತಿರುವ ಬಟ್ಟೆಗಳ ಪರಿಮಿತಗಳಲ್ಲಿ ಗೌರಿ ಹಬ್ಬಕ್ಕೆ

ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಹುಡುಗರಿಗೆ ಬೇಕಾದ ಎಲ್ಲಾ ಸೈಜಿನಲ್ಲೂ ಹೊಸ ಮಾದರಿಯಲ್ಲಿ ಹೊಲೆದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ಪಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್ ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ

ಪ್ರತಿ ಶನಿವಾರ ಮತ್ತು ಭಾನುವಾರ 4 ಘಂಟೆಗೆ ಮ್ಯಾಟಿನಿ ಇರುತ್ತೆ.

ನ್ಯೂ ಅಪೇರಾ ಟಾಕೀಸ್

೧೯—೮—೪೩ ರಿಂದ

ಈಶ್ವರಲಾಲ್, ಕೌಸಲ್ಯ, ವೀಣಾಕುಮಾರಿ, ಮಜೀದ್ ಮತ್ತು ಗೋಪ್ ಮುಂತಾದವರು ಪಾತ್ರ ವಹಿಸಿರುವ

ಹಿಂದಿ ಚಿರಾಗ್ ಹಿಂದಿ

Morning shows at 10-45 a.m.

FROM 20-8-43

KIDNAPPED

ಸಂಪುಟ ೨] ಶನಿವಾರ ೨೧-೮-೪೩ [ಸಂಚಿಕೆ ೩೧

ಪಶ್ಚಿಮ ಜರ್ಮನಿ ಮುತ್ತಿಗೆ ಆಜ್ಞೆ

ಭಾರತವನ್ನು ಮುತ್ತಲು ಜಪಾನರಿಗೆ ಅವಕಾಶವಿಲ್ಲ
ದಕ್ಷಿಣ ಇಟಲಿ ಮೇಲೆ ಪ್ರಚಂಡ ಧಾಳಿ

ವೈಸರಾಯರ ಆಗಮನ

ಮೈಸೂರು ೨೦

ವೈಸರಾಯರವರ ಲಾರ್ಡ್ ಲಿನ್‌ಲಿತ್‌ಗೋ ಅವರು ಪತ್ನಿ ಸಮೇತರಾಗಿ ಬೆಂಗಳೂರಿನಿಂದ ಇಲ್ಲಿಗೆ ಮಧ್ಯಾಹ್ನ [illegible] ಗಂಟೆಗೆ [illegible] ಆಗಮಿಸಿ ಉಚಿತ ಸ್ವಾಗತ ಪಡೆದರು. ಅಲ್ಲಿ ಶ್ರೀಮನ್ಮಹಾರಾಜರವರೂ, ದಿವಾನರೂ ಮತ್ತು ಇತರ [illegible] ಸ್ವಾಗತವನ್ನು [illegible]. [illegible] ಶ್ರೀಮನ್ಮಹಾರಾಜರವರೊಂದಿಗೆ ವೈಸರಾಯರು ಅನೇಕ ಸಂಸ್ಥೆಗಳಿಗೆ ಭೇಟಿ ಕೊಟ್ಟರು. ಈ ದಿನ [illegible] ವೃಂದಾವನಕ್ಕೆ ಭೇಟಿ ಕೊಡುವರು. [illegible] ಬೆಂಗಳೂರಿಗೆ ಪ್ರಯಾಣ [illegible].

ಶ್ರೀ ಕೃಷ್ಣ ಜಯಂತಿ

ಮೈಸೂರು ಚಲುವಾಂಬಾ ಅಗ್ರಹಾರದ [illegible] ಬಂಡೀಕೇರಿಯಲ್ಲಿರುವ ಶ್ರೀ ಕೃಷ್ಣ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ [illegible] ಈ ವರ್ಷವೂ [illegible] ಬುಧವಾರದಿಂದ ಶ್ರೀ ಕೃಷ್ಣ ಜಯಂತಿ ಮಹೋತ್ಸವವು ನಡೆಯುತ್ತಿದೆ. ಪ್ರತಿದಿನವೂ ಅನೇಕ [illegible] ಸಂಗೀತ [illegible] ಹರಿಕಥೆಗಳು [illegible] ನಡೆಯುತ್ತಿವೆ.

ಉಪಚುನಾವಣೆ ಬಗ್ಗೆ ಸರ್ಕಾರದಿಂದ ಪಂಕ್ತಿ

[illegible]

ಯುದ್ಧ ದೀರ್ಘಕಾಲ ನಡೆಯಬಹುದು

[illegible]

ಫ್ರೆಂಚ್ ಗೆರಿಲ್ಲರವರಿಂದ ಜರ್ಮನ್ ಸೈನಿಕರ ನಾಶ

[illegible]

ಜಪಾನಿ ಯುದ್ಧ ವಿಫಲವಾಯಿತು

[illegible]

ಗಾಂಧೀಜಿ ಮತ್ತು ಕಾಂಗ್ರೆಸ್ ಸದಸ್ಯರ ಭೇಟಿ ಅಸಾಧ್ಯ

[illegible]

ವಿದ್ಯಾರ್ಥಿಗಳ ದೊಂಬಿ

[illegible]

ಯುವಕರ ಖುಲಾಸೆ

[illegible]

ಹೊಟ್ಟೆಗಿಲ್ಲದೆ ನರಳುತ್ತಿರುವರಿಗೆ ಸಹಾಯ

[illegible]

[illegible] ಬೆಲೆ ಕಡಿಮೆ ಮಾಡಲು [illegible]

[illegible]

[illegible] ಬಂದರನ್ನು ನಾಜಿಗಳು ತ್ಯಜಿಸಿದರು

ದಕ್ಷಿಣ ಇಟಲಿಯ [illegible] ಬಂದರಿನಿಂದ [illegible] ಎಂಬುದನ್ನು ಅಕ್ಷಿಸ್ ಸೈನ್ಯಗಳು [illegible] ಮಾಡಿ [illegible] ಎಂದು [illegible].

ಮಿತ್ರ ವಿಮಾನಗಳು ದಕ್ಷಿಣ ಇಟಲಿಯ ಪ್ರದೇಶಗಳ ಮೇಲೆ ಪ್ರಚಂಡ ಧಾಳಿಯನ್ನು ಪ್ರಾರಂಭಿಸಿದ್ದಾರೆ. [illegible] ಇಟಲಿ [illegible] ಅಕ್ಷಿಸ್ ಸೈನ್ಯಗಳ ಮೇಲೆ [illegible] ದಿವಸಗಳು [illegible] ಧಾಳಿ ನಡೆಸಿ [illegible] ಸಂಚಾರಕ್ಕೆ [illegible] ಅಡಚಣೆಯನ್ನುಂಟುಮಾಡಿವೆ.

ವೈಮಾನಿಕ ಪಡೆಗಳಿಗೆ ಸ್ಮಟ್ಸ್‌ರ ಉಪದೇಶ

[illegible]

ಭಾರತದ ಮುತ್ತಿಗೆಗೆ ಜಪಾನರಿಗೆ ಅವಕಾಶವಿಲ್ಲ

[illegible]

ಜರ್ಮನ್ ಸರ್ಕಾರ ಬರ್ಲಿನ್ ತ್ಯಜಿಸಿದೆ

[illegible]

[illegible] ನಗರಕ್ಕೆ ಗಂಡಾಂತರ

[illegible]

ಯೋಚನಾಶಕ್ತಿ

ವಿದ್ಯಾಭ್ಯಾಸದ ಸಮಿತಿ

ಶೋಧನೆ

ಪ್ರವಾಹ ಅನಾಹುತ

ಆ ಕಾ ಶ ವಾ ಣಿ

ಆಗಸ್ಟ್ — ನೇ ಬುಧವಾರ

Edited, printed and published ... at the ... Press, ... Road ...

ಪ್ರಜಾಪ್ರಭುತ್ವವೆಂದು ಏಕೆ ಕರೆಯಬೇಕು ?

ಬಟ್ಟೆ ಗಳ ಕೇಳಿ ಬರಬೇಕಾಗಿದೆ

ಮನೆ, ಜಮೀನು ಮತ್ತು ತೋಟ

ಬಿ. ಆರ್. ಲಕ್ಷ್ಮಣಶೆಟ್ಟಿ

ಭಾವನಾಶರಾದ ಅಂಗಡಿಗಳನ್ನು ಮುಚ್ಚುವ ನಿರ್ಧಾರ

ಮೈಸೂರು, ೩೧

ಈ ಕೆಳಕಂಡ ಪ್ರಶ್ನೆಗಳನ್ನು ಕೇಳಿದ್ದಾರೆ—

ಇಟಲಿಗೆ ಮಿತ್ರರ ಎಚ್ಚರಿಕೆ

ಅಧಿಕಾರಿಗಳ ಮೇಲೆ ನ್ಯಾಯಾಧೀಶರ ಟೀಕೆ

ಜಪಾನ್ ಮೇಲೆ ಯುದ್ಧ ನಡೆಸಲು ಯೋಚನೆ

ಸೂಚನೆ

ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಮ್ಮ ಪತ್ರಿಕೆಯು ನಾಳೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ, ಸಾಧ್ವಿ

ಈಗ ಅಗುತ್ತಿರುವ ಬಟ್ಟೆಗಳ ಬೆಲೆಗಳಲ್ಲಿ ಗೌರಿ ಹಬ್ಬಕ್ಕೆ ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

(ರಿಜಿಸ್ಟರ್ಡ್) ... ಬಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ...

ಸ್ತ್ರೀ ... ಗಳಿಗೆ ...

ಲಿಲ್ಲಿ ಬ್ರಾಂಡ್ ...

ಡಿ ಸೆಂಟಿ ಸ್ಟೈಡರ್

ಉಪಯೋಗಿಸಿರಿ. ಅನುಭವಕ್ಕೆ, ಅತಿಸಾರಗಳಿಗೆ ಖಾತರಿಯಾದ ಔಷಧ. ಎಲ್ಲಾ ವ್ಯಾಪಾರಿಗಳಲ್ಲೂ ಮತ್ತು ಸ್ಟೋರುಗಳಲ್ಲೂ ಸಿಗುತ್ತದೆ. 1 ಪ್ಯಾಕೆಟ್ 2 ಆಣೆ.

WEEKLY EDITION

ಸಂಪುಟ ೨]   ಸೋಮವಾರ ೨೩—೮—೪೩   [ಸಂಚಿಕೆ ೩೨

ಸ್ಪೇನ್ ಆಕ್ಸಿಸನ್ನು ತ್ಯಜಿಸುವುದೇ ?

ಕೆನಡಾದಿಂದ ಜಪಾನ್ ಮೇಲೆ ಧಾಳಿ ನಡೆಸಲಾಗುವುದು

ರಷ್ಯಾಕ್ಕೆ ವಿಶ್ರಾಂತಿಯನ್ನೀಯಲು ಮಿತ್ರರ ಕಾರ್ಯಾಚರಣೆ

ಶ್ರೀ ಎ. ಎಸ್. ಸುಬ್ಬರಾಯರವರ ಜ್ಞಾಪಕಾರ್ಥವಾಗಿ ಚರ್ಚಾ ಸ್ಪರ್ಧೆ

ಮೈಸೂರು ೨೩

ಸಂಸ್ಥಾನದ ಹೈಸ್ಕೂಲ್ ಕಂಗಳಲ್ಲಿ ಮತ್ತು ಇತರ ಸಸ್ಥೆಗಳಲ್ಲೂ ಕನ್ನಡ ಭಾಷೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು, ಅದರ ಅಭಿವೃದ್ಧಿಗೆ ಕಾರಣಭೂತರಾದ ದಿವಂಗತ ರಾಜಕಾರ್ಯಪ್ರಸಕ್ತ ಎ. ಎಸ್. ಸುಬ್ಬರಾಯರ ಜ್ಞಾಪಕಾರ್ಥವಾಗಿ ರಾಜಧಾನಿಯ ಶಾರದಾವಿಲಾಸ ಹೈಸ್ಕೂಲಿನವರು ಇಂಟರ್ ಹೈಸ್ಕೂಲುಗಳ ಚರ್ಚಾ ಸ್ಪರ್ಧೆಯನ್ನು ಕನ್ನಡದಲ್ಲಿ ನಡೆಸಲು ಏರ್ಪಾಡು ಮಾಡಿರುವರು. ಮೈಸೂರು ನಗರದ ಶ್ರೀ. ವಿ. ಕೆ ಶ್ರೀನಿವಾಸರವರು ಒಂದು ಬೆಳ್ಳಿ ರೋಲಿಂಗ್ ಷೀಲ್ಡನ್ನು ಕೊಡಲು ಒಪ್ಪಿರುವರು.

* * * *

ಪ್ರಭುಗಳ ಪ್ರವಾಸ

ಶ್ರೀಮನ್ಮಹಾರಾಜರವರು ಬೆಂಗಳೂರಿನಿಂದ ನಿನ್ನೆ ದಿನ ಚಾಮರಾಜ ನಗರಕ್ಕೆ ಪ್ರಯಾಣ ಬೆಳೆಸಿದರು

* * * *

ಪೌರ ಸಭೆ

ಮೈಸೂರು ನಗರದ ಪೌರಸಭೆಯ ಸಾಧಾರಣ ಮೀಟಿಂಗು ಇದೇ ವಾರ ೨೮ ರಲ್ಲಿ ನಡೆಯುವುದು.

ರಾಜಧಾನಿಯಲ್ಲಿ ಹಾಲಿನ ಅಭಾವವಿರುವುದರಿಂದ ಒಂದು ಮುನಿಸಿಪಲ್ ಡೈರಿ ಫಾರಂ ತೆರೆಯಬೇಕೆಂದೂ ಮತ್ತು ಈಗಿನ ಸರಬರಾಜಿನ ಧಾರಣೆಯನ್ನು ಮುನಿಸಿಪಾಲಿಟಿ ಅವರ ಸರ್ಕಾರದ ಸಾಲದಿಂದ ಕೊಡುತ್ತಿರಬೇಕೆಂದು ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರು ಒಂದು ನಿರ್ಣಯ ಕಳುಹಿಸಿದ್ದಾರೆ.

* * * *

ಸಂಗೀತ ಕಛೇರಿ

ರಾಜಧಾನಿಯ ಚಾಮರಾಜಮೊಹಲ್ಲಾ [illegible] ಯಲ್ಲಿರುವ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಏರ್ಪಡಿಸಲಾಗಿರುವ ಕೃಷ್ಣ ಜಯಂತಿ ಮಹೋತ್ಸವ ಸಂದರ್ಭದಲ್ಲಿ ನಾಳೆ ಸಂಜೆ ೬ ಗಂಟೆಗೆ ಆಸ್ಥಾನ ವಿದ್ವಾನ್ ಶ್ರೀ ಎಸ್. ವಿಮಾರಾಯರ ಸಂಗೀತವು ನಡೆಯಲೇರ್ಪಾಗಿದೆ

ತೃತೀಯ ವಾರ್ಷಿಕೋತ್ಸವ

ಮೈಸೂರು ವೈಶ್ಯ ಪತ್ರಿಕೆಯ ತೃತೀಯ ವಾರ್ಷಿಕೋತ್ಸವವನ್ನು ನಿನ್ನೆ ಸಂಜೆ ಶ್ರೀ ಎಂ. ಸುಬ್ಬರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು.

* * * *

ಕ್ರಿಕೆಟ್ ಪಂದ್ಯ

ಮೈಸೂರು ಸ್ಟೇಟ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಮೊನ್ನೆ ದಿವಸ ಬೆಂಗಳೂರು ಇಂಜನಿಯರಿಂಗ್ ಕಾಲೇಜಿಗೂ, ಮಹಾರಾಜಾ ಕಾಲೇಜಿಗೂ ಪಂದ್ಯ ನಡೆದು ಇಂಜಿನಿಯರಿಂಗ್ ಕಾಲೇಜಿನವರು ೬೩ ರನ್ನಿಂದ ಜಯ ಹೊಂದಿದರು.

ನಿನ್ನೆಯ ದಿನ ಮೈಸೂರು ಜಿಮ್‌ಖಾನ ಕ್ಲಬಿಗೂ ಬೆಂಗಳೂರು ಇಂಜನಿಯರಿಂಗ್ ಕಾಲೇಜಿಗೂ ಪಂದ್ಯ ನಡೆದು ಜಿಮ್‌ಖಾನ ಕ್ಲಬ್ಬಿನವರು ೭ ವಿಕೆಟ್ಟುಗಳ ಜಯ ಹೊಂದಿದರು.

ರಷ್ಯಾಕ್ಕೆ ವಿಶ್ರಾಂತಿ ಕೊಡಲು ಮಿತ್ರರ ಹಂಚಿಕೆ

ಕ್ವಿಬೆಕ್ ಸಮ್ಮೇಳನದಲ್ಲಿ ಈ ಕೆಳಗೆ ಕಂಡ ಮಿಲಿಟರಿ ಹಂಚಿಕೆ ವಿಚಾರವಾಗಿ ತೀರ್ಮಾನಗಳೇ ನಿಸ್ಸಂದೇಹವಾಗಿರಬಹುದೆಂದು ವರದಿಯಾಗಿದೆ—

ಎಲ್ಲ ಕ್ಷೇತ್ರಗಳಲ್ಲೂ ಆಕ್ಸಿಸ್‌ರವರನ್ನು ಕೆಣಕುವಂತೆ ಪಡಿಸಲು ಭೂ, ನೌಕಾ ಮತ್ತು ವಿಮಾನ ಧಾಳಿಯನ್ನು ಹೆಚ್ಚು ಮಾಡುವುದು, ರಷ್ಯಾದವರಿಗೆ ಸ್ವಲ್ಪ ವಿಶ್ರಾಂತಿ ಕೊಡಲು, ನೂತನ ದಂಡಯಾತ್ರೆ ಆರಂಭಿಸಿ ಪೂರ್ವ ರಣಕ್ಷೇತ್ರದಲ್ಲಿ ಜರ್ಮನರ ಬಲವನ್ನು ಕಡಿಮೆ ಮಾಡುವುದು ಮತ್ತು ಚೈನಾಕ್ಕೆ ಹೆಚ್ಚಿನ ಸಹಾಯವನ್ನು ಕೊಡುವುದು.

—

ಕೆನಡಾದಿಂದ ಜಪಾನ್ ಮೇಲೆ ಧಾಳಿ

ಕೆನಡಾ ತೀರ ಪ್ರದೇಶ ಮತ್ತು ಉತ್ತರ ಪೆಸಿಫಿಕ್ ಸ್ಥಾನಗಳಿಂದ ಜಪಾನ್ ಮೇಲೆ ಉಗ್ರ ಧಾಳಿ ಆರಂಭಿಸಲು ಕ್ವಿಬೆಕ್ ಸಮ್ಮೇಳನದಲ್ಲಿ ಹಂಚಿಕೆ ನಡೆಸಲಾಗುತ್ತಿದೆಯೆಂದು ವರದಿಯಾಗಿದೆ

ಚೈನಾ ಪರಿಸ್ಥಿತಿಯನ್ನು ನಿವಾರಿಸಲು ಪೆಸಿಫಿಕ್‌ನಿಂದ ಜಪಾನ್ ಮೇಲೆ ತಕ್ಷಣ ಧಾಳಿ ನಡೆಸಬೇಕೆಂದೂ, ಇದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲು ಜನರಲ್ ಸ್ಟಿಲ್‌ವೆಲ್, ಅಮೆರಿಕಾ ಯುದ್ಧ ಸೆಕ್ರೆಟರಿಯಾದ ಮಿ॥ ಹೆನ್ರಿ ಸ್ಟಿಮ್ಸನ್ ಮತ್ತು ಚೈನಾ ವಿದೇಶಾಂಗ ಮಂತ್ರಿ ಡಾ॥ ಟಿ ವಿ. ಸೂಂಗ್‌ರವರು ಕ್ವಿಬೆಕ್ ಸಮ್ಮೇಳನದಲ್ಲಿ ಭಾಗವಹಿಸುವವರಾಗಿದ್ದಾರೆ.

ಕಿಸ್ಕಾದ್ವೀಪ ಕೈವಶವಾಯಿತು

ಅಲ್ಯೂಷಿಯನ್ ದ್ವೀಪಸ್ತೋಮದ ಕಿಸ್ಕಾ ದ್ವೀಪವನ್ನು ಅಮೇರಿಕಾ ಮತ್ತು ಕೆನಡಿಯನ್ ಸೈನ್ಯಗಳು ಜಪಾನರ ಯಾವ ಪ್ರತಿಭಟನೆಯಿಲ್ಲದೆ ಕೈವಶಮಾಡಿಕೊಂಡಿವೆ. ಈ ದ್ವೀಪವು ಟೋಕಿಯೋ ನಗರಕ್ಕೆ ೧೫೦೦ ಮೈಲಿ ದೂರದಲ್ಲಿದೆ. ಈ ದ್ವೀಪದ ಆಕ್ರಮಣದಿಂದ ಜಪಾನಿನ ಮೇಲೆ ಧಾಳಿ ನಡೆಸಲು ಸುಲಭವಾಗಿದೆ

ಮುಸೋಲಿನಿ ಬಂಧನದಲ್ಲಿದ್ದಾನೆ

ಸ್ಪೀಜಿಯಾ ಸಮುದ್ರದ ತೀರದಲ್ಲಿರುವ ಒಂದು ಕ್ಯಾಸಲ್ಲಿನಲ್ಲಿ ಮುಸೋಲಿನಿಯನ್ನು ಬಂಧನದಲ್ಲಿಡಲಾಗಿದೆಯೆಂದೂ, ಅವನು ಖಾಯಿಲೆಯಿಂದ ನರಳುತ್ತಿರುವನೆಂದೂ ವರದಿಯಾಗಿದೆ.

—

ಹಾಲೆಂಡ್ ಪ್ರಜೆಗಳ ಕಷ್ಟ

ಡಚ್ ಪ್ರಜೆಗಳ ಮೇಲೆ ಜರ್ಮನಿಯು ಬಲಾತ್ಕಾರದ ೧೫೦ ಮಿಲಿಯನ್ ಪೌಂಡ್ ಸಾಲವನ್ನು ಹೊರಿಸಿರುವರೆಂದೂ, ಹಾಲೆಂಡ್ ಜರ್ಮನಿ ಆಕ್ರಮವಾದ ಮೇಲೆ ಇಂತಹ ಸಾಲ ನಾಲ್ಕನೆ ಸಾಲವೆಂದೂ ಹೇಳಲಾಗಿದೆ

—

ಜಪಾನ್-ಸಯಾಂ ಒಪ್ಪಂದ

ಜಪಾನ್ ಮತ್ತು ಸಯಾಮಿಗೆ ಒಪ್ಪಂದ ಏರ್ಪಾಡಾಗಿದೆಯೆಂದು ಜಪಾನ್ ವಾರ್ತೆ ತಿಳಿಸುತ್ತದೆ. ಇದರ ಪ್ರಕಾರ ಮಲಯ ಮತ್ತು ಷಾನ್ ಸಂಸ್ಥಾನಗಳ ಕೆಲವು ಭಾಗಗಳು ಸಯಾಮಿಗೆ ಸೇರಿಸಲು ಜಪಾನ್ ಒಪ್ಪಂದಗೊಂಡಿದೆಯೆಂದೂ, ೬೦ ದಿನಗಳೊಳಗಾಗಿ ಆ ಪ್ರದೇಶಗಳ ಆಡಳಿತಾಧಿಕಾರವನ್ನು ಸಯಾಮಿಗೆ ಬಿಟ್ಟುಕೊಡುವುದಾಗಿಯೂ ಹೇಳಲಾಗಿದೆ.

ಲಿಟ್ವಿನಾಫ್ ರಾಯಭಾರಿತ್ವ ತಪ್ಪಿತು

ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ರಷ್ಯನ್ ರಾಯಭಾರಿಯಾಗಿರುವ ಎಂ. ಲಿಟ್ವಿನಾಫರ ಸ್ಥಾನದಲ್ಲಿ ಎಂ. ಆಂಡ್ರೀ ಗ್ರೊಮಿಕೋ ರವರನ್ನು ರಾಯಭಾರಿಯಾಗಿ ನೇಮಿಸಲಾಗಿದೆಯೆಂದು ನಿನ್ನೆ ದಿವಸ ಮಾಸ್ಕೋ ರೇಡಿಯೋ ತಿಳಿಸಿತು

— — —

ನಿರಾಶ್ರಿತ ಜನ ನಿಧಿಗೆ ಸಹಾಯ

ಬಂಗಾಳ ನಿರಾಶ್ರಿತ ಜನಗಳ ನಿಧಿಗೆ ಸಿಂಧ್ಯಾ ಸ್ಟೀಮ್ ನ್ಯಾವಿಗೇಷನ್ ಕಂಪೆನಿಯವರು [illegible] ಗಳನ್ನು [illegible] ತ್ತಿರುವರು

ಜರ್ಮನಿಗೆ ಮಿತ್ರರ ಎಚ್ಚರಿಕೆ

ಯೂರೋಪಿನ ಆಕ್ರಮಣವನ್ನು ಶೀಘ್ರದಲ್ಲಿಯೇ ನಡೆಸಲು ಮಿ॥ ಚರ್ಚಿಲ್ ಮತ್ತು ಮಿ॥ ರೂಸ್‌ವೆಲ್ಟರು ಹಂಚಿಕೆ ಹಾಕುತ್ತಿರುವರೆಂದು ಹೇಳಲಾಗಿದೆ. ಯೂರೋಪಿನಲ್ಲಿ ಮಿತ್ರ ಧಾಳಿಯು ಸ್ವಲ್ಪ ಕಾಲ ಇದಗಳೂ ಕೂಡ ಆಗಲೇ ನಿರ್ಧರಿಸಲಾಗಿದೆಯೆಂದೂ, ಈ ಆಂಶವು ಕ್ವಿಬೆಕ್ ಸಮ್ಮೇಳನವನ್ನು ವೀಕ್ಷಿಸುತ್ತಿರುವ ಕೆಲವು ಜನರಿಗೆ ಮಾತ್ರ ತಿಳಿದಿದೆಯೆಂದೂ ವರದಿಯಾಗಿದೆ.

ಕ್ವಿಬೆಕ್ಕಿನ ಒಂದು ವರದಿಯು ಪ್ರಕಾರ ಚರ್ಚಿಲ್ ಮತ್ತು ರೂಸ್‌ವೆಲ್ಟರು ಒಂದು ಘೋಷಣೆಯನ್ನು ತಯಾರಿಸಿ ಆ ಮೂಲಕ ಜರ್ಮನಿಯು ಬ್ರಿಟನ್, ಸಂಯುಕ್ತ ಸಂಸ್ಥಾನ ಮತ್ತು ರಷ್ಯಾಗಳಿಗೆ ಯಾವ ಷರತ್ತು ಇಲ್ಲದೆ ಶರಣಾಗತವಾಗಬೇಕೆಂದೂ ಇಲ್ಲವಾದಲ್ಲಿ ಜರ್ಮನಿಯ ಮುಖ್ಯ ನಗರಗಳನ್ನೆಲ್ಲಾ ಸಂಪೂರ್ಣವಾಗಿ ನಾಶ ಮಾಡಿ ಜರ್ಮನಿಯನ್ನು ಮಿತ್ರರು ಆಕ್ರಮಿಸಿಕೊಳ್ಳುವುದಾಗಿಯೂ, ಜರ್ಮನಿಗೆ ಎಚ್ಚರಿಕೆ ಕೊಡಲಾಗಿದೆಯೆಂದು ಹೇಳಲಾಗಿದೆ.

ಚೀನಾ ವಿದೇಶಾಂಗ ಮಂತ್ರಿಗಳು

ಚೀನಾ ವಿದೇಶಾಂಗ ಮಂತ್ರಿಗಳಾದ ಡಾ॥ ಟಿ ವಿ ಸೂಂಗ್‌ರವರು ಕ್ವಿಬೆಕ್ ಸಮ್ಮೇಳನದಲ್ಲಿ ಭಾಗವಹಿಸಲು ಶೀಘ್ರದಲ್ಲೇ ಕೆನಡಾಕ್ಕೆ ಪ್ರಯಾಣ ಬೆಳೆಸುವರೆಂದು ವರದಿಯಾಗಿದೆ

ಇಟಲಿ ಮೇಲೆ ಧಾಳಿ

ನೇಪಲ್ಸ್ ಮತ್ತು ಇಟಲಿಗೂ ಫ್ರಾನ್ಸಿಗೂ ಗಳ ಮೇಲೆ ಮಿತ್ರ ವಿಮಾನಗಳು ಘೋರ ಧಾಳಿನಡೆಸಿ ಅಪಾರ ನಷ್ಟವುಂಟುಮಾಡಿದವೆಂದು ಇಟಲಿಯನ್ ವಾರ್ತೆ ತಿಳಿಸುತ್ತದೆ. ಸಾರ್ಡಿನಿಯಾ ಮತ್ತು ನೇಪಲ್ಸ್ ವಿಮಾನ ನೆಲೆಗಳ ಮೇಲೆ ಧಾಳಿನಡೆಸಿ ೧೮ ಶತ್ರು ವಿಮಾನಗಳನ್ನು ನಾಶಮಾಡಲಾಯಿತು.

ಕೆಲಬ್ರಿಯಾ ಪಶ್ಚಿಮ ತೀರದಲ್ಲಿ ಬ್ರಿ॥ ನೌಕೆಯು ಧಾಳಿ ನಡೆಸಿ ೭ ಆಕ್ಸಿಸ್ ದೋಣಿಗಳನ್ನು ಮುಳುಗಿಸಿದವು ಫೋಗಿಯೋ ಮತ್ತು ಸಾಲರ್ನೋ ಪ್ರದೇಶಗಳಲ್ಲಿ ಅಮೇರಿಕನ್ ನೌಕೆಯು ಭಾರಿ ಧಾಳಿಗಳನ್ನು ನಡೆಸುತ್ತಿವೆ

— —

ಅಧಿಕಾರಿಗಳ ದಸ್ತಗಿರಿ

ಡೆಲ್ಲಿ ಮತ್ತು ಬೊಂಬಾಯಿ ಪ್ರಾಂತ್ಯದ ಮಾಜಿ ಸೈನಿಕ ಆಫೀಸರುಗಳು ಸಿವಿಲ್ ಅಧಿಕಾರಿಗಳಾಗಿದ್ದ [illegible] ಎಂಬುವರನ್ನು ಹಣ ದುರುಪಯೋಗ ನಡಸಿದರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲಾಗಿದೆ

ಸಿವಿಲ್ ಗಾರ್ಡರ ದಸ್ತಗಿರಿ

ಭಾಗಲಪುರದ ಸಿವಿಲ್ ಗಾರ್ಡ್ ಶ್ರೀ ನರಸಿಂಗ್ ಜಾದವ್‌ರು ತಾನು ಸಿ. ಐ. ಡಿ. ಅಧಿಕಾರಿಗಳೆಂದು ತಿಳಿಸಿ ಜನರನ್ನು ಹಿಂಸಿಸುತ್ತಿದ್ದರೆಂದು ಪೋಲೀಸರು ಅವರನ್ನು ದಸ್ತಗಿರಿ ಮಾಡಿದ್ದಾರೆ.

ಕಲ್ಕತ್ತಾದಲ್ಲಿ ರೇಷನಿಂಗ್

ಕಲ್ಕತ್ತಾದಲ್ಲಿ ಆಹಾರ ಪದಾರ್ಥಗಳ ರೇಷನಿಂಗನ್ನು ಅಕ್ಟೋಬರ್ [illegible] ರಿಂದ ಜಾರಿಗೆ ತರಲಾಗುವುದು [illegible] ಸಾಮಾನುಗಳನ್ನು ಮಾರಲು ೬೦೦ ಸರ್ಕಾರದ ಅಂಗಡಿಗಳನ್ನು ತೆರೆಯಲಾಗುವುದು.

ಪ್ರಭುಗಳ ಉದಾರ ಸಹಾಯ

ಬೆಂಗಳೂರು ೨೨

ಶ್ರೀ ಮನ್ಮಹಾರಾಜರವರು, ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಹಾಯನಿಧಿಗೆ ೧ ಸಾವಿರ ರೂ. ಉದಾರದಾನ ದಯಪಾಲಿಸಿರುವರು.

ಬಿಡುಗಡೆ

ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಶ್ರೀ ... ಅವರನ್ನು ... ತಿಂಗಳ ಶಿಕ್ಷೆಯ ಅವಧಿ ಮುಗಿಯುವುದಕ್ಕೆ ಮುನ್ನವೇ ... ಬಿಡುಗಡೆ ಮಾಡಲಾಗಿದೆ.

"ವೈಶ್ಯ ಪತ್ರಿಕೆ"ಯ ವಾರ್ಷಿಕ ಸಂಚಿಕೆ

ರಾಜಧಾನಿಯಲ್ಲಿ ಪ್ರಕಟವಾಗುವ 'ವೈಶ್ಯ ಪತ್ರಿಕೆ'ಯ ವಾರ್ಷಿಕ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಪತ್ರಿಕೆಯ ... ವಾರ್ಷಿಕೋತ್ಸವದಲ್ಲಿ ಸರ್ ... ಸ್ವಾಮಿ ಅಯ್ಯರ್, ಸರ್ ಎಂ. ... ಮೊದಲಾದವರು ... ಸಂದೇಶಗಳನ್ನು ಕಳುಹಿಸಿದ್ದಾರೆ.

ಈ ಸಂಚಿಕೆಯಲ್ಲಿ ಸ್ವಾರಸ್ಯವಾದ ಲೇಖನಗಳು, ಕತೆಗಳು, ಅಂದವಾಗಿ ಮುದ್ರಿಸಲ್ಪಟ್ಟಿವೆ ...

"ವೈಶ್ಯ ಪತ್ರಿಕೆ"ಯು ಯಶಸ್ವಿಯಾಗಿ ಬೆಳೆಯಲೆಂದು ಹಾರೈಸುತ್ತೇವೆ.

ಅಧಿಕಾರಿಗಳ ಮೇಲೆ ಟೀಕೆ

ಬೊಂಬಾಯಿ ಹೈಕೋರ್ಟಿನವರು ಸದಾಶಿವಶಂಕರ ಮತ್ತು ಗೋವಿಂದಲಾಲ್ ಶಿವಲಾಲ್ ಎಂಬುವರನ್ನು ಕಳೆದ ಡಿಸೆಂಬರ್ ತಿಂಗಳಿಂದ ವಿಚಾರಣೆಯಿಲ್ಲದೆ ಬಂಧನದಲ್ಲಿ ಇಡಲಾಗಿದ್ದು, ಅವರ ಹೇಬಿಯಸ್ ಕಾರ್ಪಸ್ ಅರ್ಜಿಗಳ ಮೇಲೆ, ಅವರುಗಳನ್ನು ಬಿಡುಗಡೆ ಮಾಡಬೇಕೆಂದು ತೀರ್ಪಿತ್ತು, ಅಧಿಕಾರಿಗಳ ನಡವಳಿಕೆಮೇಲೆ ತೀವ್ರಟೀಕೆ ಮಾಡಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರು ... ಮಾಡುತ್ತಿದ್ದುದನ್ನು ಖಂಡಿಸಿ, ಅಧಿಕಾರ ದುರುಪಯೋಗ ಮಾಡಲ್ಪಟ್ಟಿದೆಯೆಂದೂ ಎಕ್ಸಿಕ್ಯೂಟಿವ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಧಿಕಾರವರ್ಗಕ್ಕೆ ಈ ದೇಶದಲ್ಲಿ ಬಹಳ ಗಲಿಬಿಲಿ ಇರುವಂತೆ ಅಭಿಪ್ರಾಯಪಟ್ಟಿದ್ದಾರೆ. ಇದು ಅಕ್ರಮ ಬಂಧನವೆಂದೂ ತಿಳಿಸಿದ್ದಾರೆ.

ಬಿಡುಗಡೆ

ನಾಗಪುರ ಜೈಲಿನಲ್ಲಿ ಈಗ ೧೫ ದಿವಸಗಳಿಂದ ಉಪವಾಸ ಮಾಡುತ್ತಿದ್ದ ಲೇಬರ್ ಪಾರ್ಟಿಯ ಅಧ್ಯಕ್ಷರಾದ ಶ್ರೀ ಆರ್. ... ಅವರನ್ನು ಬಿಡುಗಡೆ ಮಾಡಲಾಗಿದೆ.

ಅಮೆರಿಕನ್ ಸೈನಿಕರ ಸಾವು ನೋವು

ಯುದ್ಧ ಆರಂಭವಾದಂದಿನಿಂದ ಈವರೆವಿಗೆ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಒಟ್ಟು ... ಸೈನಿಕರ ಸಾವುನೋವುಗಳುಂಟಾಗಿವೆಯೆಂದು ಪ್ರಕಟವಾಗಿದೆ. ಅವರಲ್ಲಿ ... ಮಂದಿ ಸತ್ತಿರುವರೆಂದೂ, ... ಜನರಿಗೆ ಗಾಯಗಳಾಗಿವೆಯೆಂದೂ, ... ಜನ ಕೈಸೆರೆ ಸಿಕ್ಕಿರುವರೆಂದೂ ಹೇಳಲಾಗಿದೆ.

ಕಲ್ಕತ್ತಾ ಪೌರಸಭೆ ಮನವಿ

ಕಲ್ಕತ್ತಾ ನಗರದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ನೂರಾರು ಜನರು ಸಾಯುತ್ತಿರುವ ವಿಷಮ ಪರಿಸ್ಥಿತಿಯನ್ನು ತಕ್ಷಣ ಹೋಗಲಾಡಿಸಲು ಅಮೆರಿಕಾ, ಆಸ್ಟ್ರೇಲಿಯಾ ಅಥವಾ ಆಫ್ರಿಕಾದಿಂದ ಆಹಾರ ಧಾನ್ಯಗಳನ್ನು ಕಳುಹಿಸಬೇಕೆಂದು ಬ್ರಿಟನ್ನಿನಲ್ಲಿರುವ ಚರ್ಚಿಲ್ ರೂಸ್ವೆಲ್ಟರಿಗೆ ಕಲ್ಕತ್ತಾ ಪೌರಸಭೆಯವರು ಮನವಿ ಮಾಡಿಕೊಂಡಿದ್ದಾರೆ.

ಕ್ಷಾಮಬಾಧೆ ಹೆಚ್ಚಾಗುತ್ತಿದೆ

ಕಲ್ಕತ್ತಾ ನಗರದಲ್ಲಿ ಮೊನ್ನೆಯ ದಿವಸ ಹೊಟ್ಟೆಗಿಲ್ಲದೆ ನರಳುತ್ತಿದ್ದ ... ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ, ಒಟ್ಟು ೬೦೦ ಮಂದಿ ನರಳುತ್ತಿರುವರೆಂದೂ ವರದಿಯಾಗಿದೆ. ಬೆಹಲಾ ಆಸ್ಪತ್ರೆಯೊಂದರಲ್ಲೇ ಕಳೆದ ಕೆಲವು ದಿನಗಳಲ್ಲಿ ... ಜನರನ್ನು ಸೇರಿಸಲಾಗಿದೆಯೆಂದೂ, ಅವರ ಪೈಕಿ ... ಜನ ಮರಣ ಹೊಂದಿದರೆಂದೂ ಹೇಳಲಾಗಿದೆ.

ಮುಜಫರ್‌ಪೂರ್ ನಗರದಲ್ಲಿ ಕಳೆದ ಮೂರು ವಾರಗಳಲ್ಲಿ ರಸ್ತೆಗಳಲ್ಲಿ ೪೦ ಜನರು ಸತ್ತು ಬಿದ್ದಿದ್ದರೆಂದು ಹೇಳಲಾಗಿದೆ.

ಆಗಾಖಾನ್ ಭವನದ ಮುಂದೆ ಮಹಿಳೆಯರ ದಸ್ತಗಿರಿ

ಗಾಂಧೀಜಿ ಮೊದಲಾದ ಕಾಂಗ್ರೆಸ್ ನಾಯಕರನ್ನು ಬಂಧನದಲ್ಲಿಟ್ಟಿರುವ ಆಗಾಖಾನ್ ಭವನದ ಹತ್ತಿರ ಬಂದಿದ್ದ ಬರೋಡಾದ ಶ್ರೀಮತಿ ಕುಸುಮ ಪಟೇಲ್, ಸುಶೀಲಾ ಪಟೇಲ್ ಮತ್ತು ಬೊಂಬಾಯಿನ ಜಾನಕಿ ದೇಸಾಯಿ ಮತ್ತು ಮೀನಾಕ್ಷಿ ದೇಸಾಯಿ ಇವರುಗಳನ್ನು ಪೂನಾ ಪೋಲೀಸರು ದಸ್ತಗಿರಿ ಮಾಡಿದರು.

ಸಿಕ್ ಸೈನಿಕರಿಗೆ ಶಿಕ್ಷೆ

ಜಲಂಧರ್ ಜಿಲ್ಲೆಯ ಹಳ್ಳಿಯೊಂದರಲ್ಲಿ ದರೋಡೆ ನಡೆಸಿದರೆಂಬ ಆಪಾದನೆ ಮೇಲೆ ೪ ಸಿಕ್ ಸೈನಿಕರಿಗೆ ತಲಾ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಹಿಂದುಳಿದವರಿಗೆ ನೌಕರಿ

ಅಖಿಲ ಭಾರತದ ಮುಸ್ಲಿಮೇತರ ಮೇಲೆ ಸರ್ಕಾರಿ ನೌಕರಿಯಲ್ಲಿ ಶೇ|| ಎಂಟೂವರೆಯಷ್ಟನ್ನು ಹಿಂದುಳಿದವರಿಗೇ ಮೀಸಲಾಗಿಡಬೇಕೆಂದು ತೀರ್ಮಾನಿಸಿರುವ ಅಂಶವನ್ನು ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ ಗೃಹಶಾಖಾ ಕಾರ್ಯದರ್ಶಿಗಳಾದ ಮಿ|| ಕಾನ್ರಾನ್ ಸ್ಮಿತ್‌ರವರು ವಿವರಿಸಿದರು.

ನೂತನ ಎಕ್ಸರೆ ಯಂತ್ರ

ಅಮೆರಿಕದ ವೆಸ್ಟಿಂಗ್ ಹೌಸ್ ಇಂಜನಿಯರುಗಳು ಒಂದು ನೂತನ ಎಕ್ಸರೆ ಯಂತ್ರವನ್ನು ಕಂಡುಹಿಡಿದಿದ್ದಾರೆ. ಇದರಿಂದ ೧ ಘಂಟೆಗೆ ೧೭ ಸಾವಿರ ವಿಮಾನ ಕ್ಯಾಸ್ಟಿಂಗ್‌ಗಳನ್ನು ಪರೀಕ್ಷಿಸಬಹುದು.

ಕೈಲಾಸಂ ಸಾಹಿತ್ಯ ಪ್ರಕಟಣೆ

ಮದರಾಸಿನ ಮಾಧವ ಅಂಡ್ ಸನ್ಸ್‌ರವರು ಶ್ರೀ ಟಿ. ಪಿ. ಕೈಲಾಸಂರವರ ೧ ಅಮ್ಮಾವ್ರ ಗಂಡ, ೨ ಪೋಲಿಕಿಟ್ಟಿ, ೩ ಹೋಂರೂಲು, ೪ ಸತ್ತವರ ನೆರಳು ... ಎಂಟು ಪುಸ್ತಕಗಳ ಪ್ರಕಟಣ ಕಾರ್ಯವನ್ನು ಕೈಗೊಂಡಿದ್ದಾರೆ. ಪುಸ್ತಕಗಳು ದಸರಾ ಹೊತ್ತಿಗೆ ಪ್ರಕಟಿಸಲ್ಪಡುವುವೆಂದು ತಿಳಿದು ಬಂದಿದೆ.

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಧ್ವಂದೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ ಜೀವನಿ ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ಕೆಲವು ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಋತು ದೋಷಕ್ಕೆ ರಾಮಬಾಣ.

ಋತು ಕಾಲದಲ್ಲಿ ಅಥವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಋತು, ಮುಂತಾದವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ.

ಅತ್ಯುತ್ತಮ ಉಷ್ಣಶಾಮಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು.

ರಕ್ತ ಹೀನತೆ, ನರಗಳ ದೌರ್ಬಲ್ಯ, ಜೀರ್ಣಶಕ್ತಿ ಕುಂದುವಿಕೆ, ಗರ್ಭಸ್ರಾವ, ... ಇತ್ಯಾದಿಗಳಿಗೆ "ಜೀವನಿ"

ಗಲಭೆಗಳಿಂದ ಜರ್ಮನರಕೋಪ

ಡೆನ್ಮಾರ್ಕಿನಲ್ಲಿ ಡೇನ್ ಪ್ರಜೆಗಳಿಗೂ ಜರ್ಮನರಿಗೂ ತೀವ್ರ ಘರ್ಷಣವುಂಟಾಯಿತೆಂದು ವರದಿಯಾಗಿದೆ. ಇದರಿಂದ ನಗರಗಳಲ್ಲಿ ವಿಶೇಷ ಸನ್ನಿವೇಶವುಂಟಾಗಿದೆ. ನಗರವೆಲ್ಲಾ ಪ್ರಚುರವಾಗುತ್ತಿರುವ ಈ ನಾಶಕೃತ್ಯದ ಮೇಲೆ ಚರ್ಚೆ ನಡೆಸಲು ಡೇನಿಷ್ ಪಾರ್ಲಿಮೆಂಟು ಸಭೆ ಸೇರಲು ಆಜ್ಞಾಪಿಸಲಾಗಿದೆ.

ಜರ್ಮನ್ ಸೈನಿಕರನ್ನು ಸಾಗಿಸುವ ರೈಲುಗಳ ಮೇಲೆ ಬಾಂಬುಗಳನ್ನು ಎಸೆದರೆಂದೂ, ಒಂದು ಕಡೆ ದಂಗೆಯಲ್ಲಿ ಜರ್ಮನ್ ಸೈನಿಕರನ್ನು ಕೊಲೆ ಮಾಡಿದರೆಂದೂ, ಅನೇಕ ಡೇನರು ಈ ಪರಿಸ್ಥಿತಿಗೀಡಾಗುವುದಾಗಿ ವರದಿಯಾಗಿರುವುದು.

ಚೈನಾ-ಬ್ರೆಜಿಲಿಯನ್ ಒಪ್ಪಂದ

ಚೈನಾ ಮತ್ತು ಬ್ರೆಜಿಲಿಯನ್ ಸರಕಾರಗಳಿಗೆ ನೂತನ ಒಪ್ಪಂದವಾಗಿ, ಚೈನಾದಲ್ಲಿದ್ದ ತಮ್ಮ ಹಕ್ಕು ಬಾಧ್ಯತೆಗಳನ್ನು ಬ್ರೆಜಿಲಿಯನ್ ಸರ್ಕಾರ ತ್ಯಜಿಸಿರುವುದಾಗಿ ದಿಯಾಗಿದೆ.

ನ್ಯಾಷನಲ್ ಎಂಪೋರಿಂ

(ಮದರಾಸ್ ಅಂಗಡಿ)

ಮೈಸೂರು.

ಕ್ರಿ.ರಾ. ಮಿ. ಕೋರಾ ಡ್ರಿಲ್	0	1
ಬ್ಯಾಲಿ ಬ್ರದರ್ಸ್ ,, ,,	0	1
ಫರ್ ವೈಟ್ ಡ್ರಿಲ್	1	
ಡಬಲ್ ಸ್ಟ್ರಕಲ್ ಲಾಂಗ್ ಕ್ಲಾತ್	0	
ಮಿನರ್ವಾ ಮಿಲ್ ,,	0	
ಬೇಬಿ ನಂ. 36 ,,	0	1
ಕೋರಾ 44 ವೈಡ್ ,,	0	1
ನಂ 3610 ,,	0	
ಲಾಂಗ್ ಕ್ಲಾತ್ ಹಾಫ್ ಆರಂ	1	
ಸ್ಪೋರ್ಟ್ಸ್ ,,	2	
ಸ್ಪೋರ್ಟ್ಸ್ ಷರ್ಟಿಂಗ್		
೧ ನೇ ದರ್ಜೆ	0	1
,, ೨ ನೇ ದರ್ಜೆ	0	1
ಮಿಲ್ ಷರ್ಟಿಂಗ್	0	1
ವೈಟ್ ಸೂಟ್ ಕ್ಲಾತ್	0	1
ಟಾರ್ಕಿ ರಗ್	8	
ಇಟಾಲಿಯನ್ ಲೈನಿಂಗ್ 48 ವೈಡ್	1	
ಇಂಡಿಯನ್ ಟಸ್ಸೆಲ್		
ಟೈಪ್ ಪ್ರಿಂಟ್	1	
ಜಿಂಟ್ ಫಾಸ್ಟ್ ಕಲರ್	0	1
,, ಅಫಾಸ್ಟ್ ,,	0	
ವಾಯಿಲ್ 45" ವೈಡ್	1	
ಚೆಕ್ಸ್ ಪಿಪ್ಸರ್ ಷರ್ಟಿಂಗ್	0	
ಬಿ. ಯಸ್. ಪ್ಯಾಂಟ್ ಲಾಲ ಕ್ರೆಟಿಂಗ್ಸ್	2	
ಕೋರಾ ಮಲ್ 50" ವೈಡ್	0	
ಇಂಡಿಯನ್ ಗ್ಲಾಸ್ಗೊ ಮಲ್	1	
ನೂರಟ ಕೋಟಿಂಗ್	1	
ಗ್ರೆ ಕೋಟಿಂಗ್ ಸ್ಟ್ರೈಪ್ಸ್	0	
ಕ್ರಿ.ರಾ. ಮಿ. ಧೋತಿ 2.8,	5	
ದಾವಾ ,, ನಂ 28 ,, ,,	6	
ಫಿನ್ಲೆ ಟೈಪ್ ,, ,,	8	
ಕ್ಯಾಲಿಕೊ ಮಿಲ್ಸ್ ,, ,,	8	
ಮಧುರ್ಕೈಪ್ಸ್ ,, ,,	9	
ಕ್ರಿ.ರಾ. ಮಿ. ಷಾಲೆ ಡ'36 ವೈಡ್	0	

ಸ್ತ್ರೀಯರ ಸೌಕರ್ಯಕ್ಕಾಗಿ

... ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಪಿ. ಸ್ಟ್ರೀಟ್ ಬ್ರಾಂಡ್ ಕಾಫಿ ಪುಡಿ

... ಉಪಯೋಗಿಸಿ.

... ಕೃಷ್ಣಯ್ಯ ... ದೇವರಾಜ ಮಾರ್ಕೆಟ್, ಮೈಸೂರು

... ಸ್ವದೇಶೀ ... ಸಕ್ಕರೆ, ಕಲ್ಲುಸಕ್ಕರೆ, ಬೂರ ಸಕ್ಕರೆ ಮತ್ತು ... ದೊರೆಯುತ್ತೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ತಾ|| ೨೩-೮-೪೩ ರಿಂದ ೨೯-೮-೪೩ ರವರೆಗೆ

ಮೇಷ ... ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದೆ, ಉದ್ಯೋಗದಲ್ಲಿ ಪ್ರಗತಿ, ಯಶಸ್ಸು, ವ್ಯವಹಾರದಲ್ಲಿ ಜಯ, ಭೇಟಿ ಉತ್ತಮ, ಗೌರವ ಲಾಭ. ತಾ|| ೨೩, ೨೮ ಒಳ್ಳೆಯದು.

ವೃಷಭ .. ಪ್ರಾಕೃತಿಕ ಸ್ಥಿತಿ ಉತ್ತಮ, ಪ್ರವಾಸದಲ್ಲಿ ತೊಂದರೆ, ಉದ್ಯೋಗದಲ್ಲಿ ಏಳಿಗೆ ಮತ್ತು ಲಾಭ, ಅಪಕೀರ್ತಿ ಸಂಭವವಿದೆ, ಮಿತ್ರ ಸುಖ, ಪ್ರವಾಸದಲ್ಲಿ ಹಾನಿ, ಪತ್ರವ್ಯವಹಾರ ಮತ್ತು ಭೇಟಿ ಉತ್ತಮ. ತಾ|| ೨೪, ೨೮ ಉತ್ತಮ.

ಮಿಥುನ ... ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದೆ, ಬಂಧುಗಳೊಡನೆ ವಿರೋಧ, ಮಾನಸಿಕ ಅಶಾಂತಿ, ಉದ್ಯೋಗದಲ್ಲಿ ಉತ್ತಮ ಪ್ರಗತಿ, ಅಧಿಕಾರಿಗಳಿಂದ ಮೆಚ್ಚುಗೆ, ಮಿತ್ರರಿಂದ ಮೋಸ, ವ್ಯವಹಾರದಲ್ಲಿ ವಿಜಯ, ಪ್ರವಾಸದಲ್ಲಿ ಯಶಸ್ಸು. ತಾ|| ೨೫, ೨೯ ಶುಭ ದಿನಗಳು.

ಕರ್ಕ .. ಆರೋಗ್ಯ ಚೆನ್ನಾಗಿದೆ. ಬಂಧುಗಳ ಏಳಿಗೆ, ಉದ್ಯೋಗದಲ್ಲಿ ಯಶಸ್ಸು, ಅನವಶ್ಯಕ ಧನವ್ಯಯ, ಮಾನಸಿಕ ಸ್ಥಿತಿ ಉತ್ತಮವಾಗಿಲ್ಲ, ಸರಕಾರಿ ಕೆಲಸದಲ್ಲಿ ಜಯ, ಪ್ರವಾಸ ಸುಖಕರ. ತಾ|| ೨೪, ೨೮ ಉತ್ತಮ.

ಸಿಂಹ.... ಪ್ರಾಕೃತಿಕ ಸ್ಥಿತಿ ಉತ್ತಮ, ಮನಸ್ಸಿನಲ್ಲಿ ಚಿಂತೆ, ಉದ್ಯೋಗದಲ್ಲಿ ಏಳಿಗೆ ಮತ್ತು ಲಾಭ, ಹೆಚ್ಚು ಖರ್ಚು, ವ್ಯವಹಾರದಲ್ಲಿ ಯಶಸ್ಸು, ಪ್ರವಾಸದಲ್ಲಿ ಸಿದ್ಧಿ. ತಾ|| ೨೩, ೨೫, ೨೬, ಒಳ್ಳೆಯದು.

ಕನ್ಯಾ .. ಆರೋಗ್ಯ ಚೆನ್ನಾಗಿದೆ. ಮಾನಸಿಕ ತೊಂದರೆ, ಧನಪ್ರಾಪ್ತಿ, ವ್ಯವಹಾರದಲ್ಲಿ ಯಶಸ್ಸು, ಪ್ರವಾಸದಲ್ಲಿ ವಿಘ್ನ, ಭೇಟಿ ಮತ್ತು ಪತ್ರವ್ಯವಹಾರ ಒಳ್ಳೆಯದು. ತಾ|| ೨೩, ೨೮, ೨೯ ಶುಭ

ತುಲಾ ... ಆರೋಗ್ಯ ಚೆನ್ನಾಗಿದೆ. ಬಂಧುಗಳಿಂದ ಅಪಮಾನ, ಮಾನಸಿಕ ಕ್ಲೇಶ, ವ್ಯವಹಾರದಲ್ಲಿ ಸಾಧಾರಣ ಸ್ಥಿತಿ, ವ್ಯಾಪಾರದಲ್ಲಿ ಲಾಭ, ಪ್ರವಾಸದಲ್ಲಿ ಹಾನಿ. ತಾ|| ೨೬, ೨೭ ಉತ್ತಮ.

ವೃಶ್ಚಿಕ .. ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಅಸಮಾಧಾನ, ಉದ್ಯೋಗದಲ್ಲಿ ಪ್ರಗತಿ, ಹೆಚ್ಚು ಖರ್ಚು, ವ್ಯಾಜ್ಯಾದಿಗಳಲ್ಲಿ ತೊಂದರೆ, ಪ್ರವಾಸ ಸುಖಕರ ತಾ|| ೨೪, ೨೮ ಒಳ್ಳೆಯದು

ಧನುಸ್ಸು ... ಈ ವಾರ ನಿಮ್ಮ ಆರೋಗ್ಯ ಕೆಡುವ ಸಂಭವವಿದೆ, ಉದ್ಯೋಗದಲ್ಲಿ ಗೌರವ ಲಾಭ, ಸಾರ್ವಜನಿಕ ಯಶಸ್ಸು, ಆದಾಯ, ವ್ಯವಹಾರದಲ್ಲಿ ಜಯ, ಪ್ರವಾಸದಲ್ಲಿ ಜಯಪ್ರಾಪ್ತಿ. ತಾ|| ೨೫, ೨೬, ೨೭ ಒಳ್ಳೆಯ ದಿನಗಳು.

ಮಕರ ... ಆರೋಗ್ಯ ಸಾಧಾರಣವಾಗಿರುವುದು. ಮಾನಸಿಕ ಕ್ಲೇಶ, ಉದ್ಯೋಗದಲ್ಲಿ ಏಳಿಗೆ ಮತ್ತು ಲಾಭ, ಸಾರ್ವಜನಿಕ ಅಪಮಾನ, ಧನಪ್ರಾಪ್ತಿ, ವ್ಯವಹಾರದಲ್ಲಿ ಯಶಸ್ಸು, ಪ್ರವಾಸದಲ್ಲಿ ಜಯ ತಾ|| ೨೩, ೨೮ ಉತ್ತಮ

ಕುಂಭ . ಪ್ರಾಕೃತಿಕ ಸ್ಥಿತಿ ಉತ್ತಮ, ಪ್ರಾಪಂಚಿಕ ತೊಂದರೆ ಜಾಸ್ತಿ. ಕಲಹ ಪ್ರಸಂಗ, ಉದ್ಯೋಗದಲ್ಲಿ ಏಳಿಗೆ, ಲಾಭ ಸಾಧನೆ, ಪತ್ರ ವ್ಯವಹಾರಕ್ಕಿಂತ ಭೇಟಿ ಉತ್ತಮ, ತಾ|| ೨೫, ೨೭ ಒಳ್ಳೆಯ.

ಮೀನ.... ಆರೋಗ್ಯ ಸ್ಥಿತಿ ಉತ್ತಮವಾಗಿದೆ, ಉದ್ಯೋಗದಲ್ಲಿ ಪ್ರಗತಿ, ಮಿತ್ರರಿಂದ ಅಸಮಾಧಾನ, ಅನುಚಿತ ಕಾರ್ಯ ಮಾಡುವ ಸಂಭವ, ಪ್ರವಾಸ ಹಿತಕರ, ಪತ್ರವ್ಯವಹಾರ ಉತ್ತಮ. ತಾ|| ೨೪, ೨೮ ಒಳ್ಳೆಯ ದಿನಗಳು.

ಫ್ರಾನ್ಸಿನಲ್ಲಿ ಜರ್ಮನ್ ಸಿದ್ಧತೆ

ಫ್ರಾನ್ಸಿನ ಮೇಲೆ ಮಿತ್ರರು ದಂಡಯಾತ್ರೆ ಮಾಡುವುದಾದರೆ ಪ್ಯಾರಿಸ್ ನಗರವನ್ನು ಅರಕ್ಷಿತ ನಗರವಾಗಿ ಮಾಡಲಾಗುವುದಿಲ್ಲವೆಂದೂ, ಜರ್ಮನರು ಹೇಗೆ ವಿಮಾನಧಾಳಿಯಿಂದ ಕಷ್ಟಪಡುತ್ತಿರುವರೋ ಅದರಂತೆಯೇ ಫ್ರೆಂಚ್ ಜನಗಳೂ ಅದಕ್ಕೆ ಭಾಗಿಗಳಾಗುವುದೆಂದೂ, ಪ್ಯಾರಿಸ್ ನಗರದ ಬೀದಿಗಳಲ್ಲಿ ಕದನನಡೆಸಲು ಸರ್ವಸಿದ್ಧತೆಗಳು ನಡೆಸಲಾಗುತ್ತಿದೆಯೆಂದೂ ಜರ್ಮನ್ ಅಧಿಕಾರಿಗಳೊಬ್ಬರು ತಿಳಿಸುತ್ತಾರೆ.

ಇಟಲಿಯಲ್ಲಿ ನಾಜೀ ಅಧಿಕಾರತ್ವ

ನಾರ್ವೆ ಮತ್ತು ಇತರ ಆಕ್ರಮಿತ ಯೂರೋಪಿನಲ್ಲಿ ಸ್ಥಾಪಿಸಲಾಗಿರುವ ಕ್ವಿಸ್ಲಿಂಗ್ ಸರ್ಕಾರವನ್ನು ಇಟಲಿಯಲ್ಲೂ ಸ್ಥಾಪಿಸಲು ಜರ್ಮನಿಯು ಸಿದ್ಧತೆ ನಡೆಸುತ್ತಿದೆಯೆಂದೂ ಇಟಲಿ ಫ್ಯಾಸಿಸ್ಟ್ ಪಾರ್ಟಿಯ ಮಾಜಿ ಕಾರ್ಯದರ್ಶಿಯಾದ ಫೇರಿನಚಿಯವರನ್ನು ಅಧಿಕಾರಿಗಳನ್ನಾಗಿ ನೇಮಿಸಬಹುದೆಂದೂ ಸ್ವಿಸ್ ಪತ್ರಿಕೆಯೊಂದು ತಿಳಿಸುತ್ತದೆ

ಇಟಲಿ ಒಪ್ಪಂದಕ್ಕೆ ಒಪ್ಪಂಬಟ್ಟಿದೆಯೋ ?

ಇಟಲಿಯ ಬದೋಗ್ಲಿಯೋ ಸರ್ಕಾರವು ಮಿತ್ರರಾಷ್ಟ್ರಗಳೊಡನೆ ಒಪ್ಪಂದಕ್ಕೆ ಬರಲು ನಿರ್ಧರಿಸಿದೆಯೆಂದೂ, ಆದರೆ ಜರ್ಮನಿಯು ಇನ್ನೂ ಹೆಚ್ಚಾಗಿ ಸೈನ್ಯವನ್ನು ಎಲ್ಲಿ ಕಳುಹಿಸುವುದೋ ಎಂಬ ಹೆದರಿಕೆಯಿಂದ ಇದನ್ನು ಬಹಿರಂಗಪಡಿಸಲ್ಲವೆಂದೂ ಹೇಳಲಾಗಿದೆ.

ಆಜ್ಞೋಲ್ಲಂಘನೆಗೆ ಮರಣದಂಡನೆ

ಫ್ರಾನ್ಸಿನಲ್ಲಿರುವ ಎಲ್ಲಾ ಫ್ರೆಂಚ್ ಪ್ರಜೆಗಳೂ ತಮ್ಮಲ್ಲಿರುವ ಎಲ್ಲಬಗೆಯ ಶಸ್ತ್ರಾಸ್ತ್ರಗಳನ್ನು ಆಗಸ್ಟ್ ೨೮ ನೇ ತಾ|| ರೊಳಗೆ ಸರ್ಕಾರಕ್ಕೆ ಒಪ್ಪಿಸಬೇಕೆಂದೂ, ಆಜ್ಞೆಯುಲ್ಲಂಘಿಸಿದವರಿಗೆ ಮರಣದಂಡನೆ ವಿಧಿಸಲಾಗುವುದೆಂದೂ ನಾಜಿ ಆಜ್ಞೆಯಾಗಿದೆ

ಚೀಣೀ ವಿಮಾನ ಕಾರ್ಖಾನೆ

ಅಮೇರಿಕಾದಲ್ಲಿ ನೂತನ ಚೀಣಾ ವಿಮಾನ ಕಾರ್ಖಾನೆಯೊಂದನ್ನು ಆರಂಭಿಸಲಾಗಿದೆಯೆಂದೂ, ಇಲ್ಲಿ ೩ ಸಾವಿರ ಚೀಣೀ ಕೆಲಸಗಾರರಿರುವರೆಂದೂ ವರದಿಯಾಗಿದೆ

ಗ್ರೀಕ್ ಪ್ರಜೆಗಳಿಗೆ ಸಹಾಯ

ಸ್ವಿಟ್ಜರ್ಲೆಂಡ್ ರೇಡಿಯೋ ಯಂತ್ರದ ಪ್ರಕಾರ ೧೬,೦೦೦ ಟನ್ನುಗಳಷ್ಟು ತೂಕವುಳ್ಳ ಆಹಾರ ಪದಾರ್ಥಗಳನ್ನೂ ಬಟ್ಟೆಬರೆಗಳನ್ನೂ ತುಂಬಿಕೊಂಡು ಸ್ವೀಡನ್ನಿನ ೩ ಹಡಗುಗಳು ಗ್ರೀಕ್ ಬಂದರೊಂದಕ್ಕೆ ಬಂದುವೆಂದೂ, ಅಂತರ್‍ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯವರು ಗ್ರೀಕ್ ಪ್ರಜೆಗಳ ಸಹಾಯಕ್ಕಾಗಿ ಅವುಗಳನ್ನು ಕಳುಹಿಸಿದ್ದಾರೆಂದೂ ಗೊತ್ತಾಗಿದೆ.

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಸ್ಫೂರ್ತಿ ಉತ್ಸಾಹಗಳನ್ನು ಕೊಡುತ್ತದೆ ಕ್ರಯ. ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಜೈನಾ ಬಜಾರು ರಸ್ತೆ, ಮದರಾಸು. ಏಜೆಂಟರು : ಅಶೋಕಾ ಫಾರ್ಮಸಿ ಹಳೇಮೈಸೂರುಬ್ಯಾಂಕು ರಸ್ತೆ, ಮೈಸೂರು

ಪ್ರಕಟಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ . "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಅನುವಂಶಿಕ ಕಮಿಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಅತ್ಯಾನಂದವಾಗುತ್ತದೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ ಸಂಪಾದಿಸಬಹುದು.

ಶ್ರೀ ಪಿಂಗಳಿ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ಏಷ್ಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಇನ್ಷೂರೆನ್ಸ್ ಕಂ ಲಿ, ಬೆಂಗಳೂರು ಸಿಟಿ. ೨) ಬಾಂಬೆ ಲೈಫ್ ಇನ್ಷೂರೆನ್ಸ್ ಕಂ ಲಿ., ಬೊಂಬಾಯಿ ೩) ದಿ ಯೂನೈಟೆಡ್ ಲೈಫ್ ಲಿ., ಬೊಂಬಾಯಿ ೪) ಮಿನರ್ವಾ ಮಿಲ್ಸ್ ಲಿ., ಬೆಂಗಳೂರು. ೫) ಸದರ್ನ್ ಮಿಲ್ಸ್ ಲಿ, ಬೊಂಬಾಯಿ. ೬) ಹಿಂದ್ ಶುಗರ್ ಕಂ ಲಿ, ಬೊಂಬಾಯಿ. ೭) ಇಂಡಿಯಾ ಸ್ಟೀಮ್ ನ್ಯಾವಿಗೇಷನ್ ಕಂ ಲಿ., ಬೊಂಬಾಯಿ ೮) ಈಸ್ಟರ್ನ್ ಬಂಕರರ್ಸ್ [ಇಂಡಿಯಾ] ಲಿ, ಬೊಂಬಾಯಿ. ೯) ಈಸ್ಟರ್ನ್ ಬಂಕರರ್ಸ್ [ಬರ್ಮಾ] ಲಿ., ಬೊಂಬಾಯಿ, ೧೦) [illegible] ಲಿ., ಬೊಂಬಾಯಿ. ೧೧) ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ, ಹೈದರಾಬಾದ್, [ಡೆಕ್ಕನ್] ೧೨) ಸದಸ್ಯರು, ಅಡ್ವೈಸರಿ ಬೋರ್ಡ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ ಮತ್ತು ದೇಶಮುಖ, ಪಿನಿಯನ್ಸ್, ಬ್ಯಾಂಕರ್, ಆಸರೆಂ ಸನ್ಸ್ ಜಡ್ಜ್, ಹೈದರಾಬಾದ್ [ಡೆಕ್ಕನ್], ಚೇರ್ಮನ್.

ಶ್ರೀ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಇನ್ಷೂರೆನ್ಸ್ ಕಂ. ಲಿ., ಬೆಂಗಳೂರು ಸಿಟಿ. ಮ್ಯಾನೇಜಿಂಗ್ ಡೈರೆಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರಕಾರಗಳಲ್ಲಿ ಠೇವುಗಳನ್ನು ಇಡಲಾಗಿದೆ

೨) ೧೨ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಪ್ರಭಾವಶಾಲಿಗಳಾದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕ ಮಂಡಲ,

೩) ಈಗ ದೊರೆತ ಉದ್ಯಮ ೭ ಲಕ್ಷಕ್ಕಿಂತ ಹೆಚ್ಚಾಗಿ ಮತ್ತು ಶಾಶ್ವತ [illegible]

೪) ಜೀವನಿಧಿ ಗಣ್ಯ ಮೊತ್ತಗೆ

೫) ವಾರ್ಷಿಕ ಪಾಲಿಸ್ಲೊಗೋಪಟ್ಟು ರೂ ೨೦೦, ರೂ ೩೦೦, ರೂ ೫೦೦, [illegible] ಪಾಲಿಸಿಗಳನ್ನು [illegible] ರೂ ೨೫ ಕ್ಕೆ [illegible] ಲಾಗುವುದು ದಯವಿಟ್ಟು ವಿವರಗಳಿಗೆ ಬರೆಯಿರಿ.

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ

ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಎನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಟೈಲರಿ ಮತ್ತು ಎಲ್ಲಾ ಸ್ಟೈಲಿನಲ್ಲೂ ಹೊಸ ಮಾದರಿಯಲ್ಲಿ ಹೊಲೆದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಒಟ್ಟರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು. ...ವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

ಕಾಂಗ್ರೆಸ್ ಕರ್ತವ್ಯ ಪರಾಙ್ಮುಖವಾಯಿತು

ಪ್ರೊ. ಆರ್. ಕುಪ್ಲೆಂಡ್ ರ ವಿದ್ಯಾರ್ಥಿಗಳ ಸಭೆಯಲ್ಲಿ ಬ್ರಿಟಿಷ್ ಆಡಳಿತದ [illegible] ಭಾರತಕ್ಕೆ ಬರಬೇಕಾದ ಸ್ವಾತಂತ್ರ್ಯ, ವೇವಲ್ ಅಧಿಕಾರದಿಂದ ಪಕ್ಷಗಳ ಸ್ವಮತ ಸ್ಥಾಪನೆಗೆ [illegible] ಯಾವ ಸಮಸ್ಯೆಯನ್ನೂ ಬಗೆಹರಿಸಲಾಗಲಿಲ್ಲ. [illegible] ಹಿಂದೆ ಅಧಿಕಾರ ಸ್ವೀಕರಿಸಿದ್ದ ಕಾಂಗ್ರೆಸ್ಸು ಈಗ ಅಧಿಕಾರ ತ್ಯಾಗ ಮಾಡಿರುವುದರಿಂದ ಕಾಂಗ್ರೆಸ್ಸು ಕರ್ತವ್ಯ ಪರಾಙ್ಮುಖವಾಗಿರುವುದು ಎಂದರು.

ಹಿಂದೂ ವಿಶ್ವ ವಿದ್ಯಾಲಯದ ಚಾನ್ಸಲರ್ ಪದವಿ

ಕಾಶಿಯಲ್ಲಿ ನೆನ್ನೆಯ ದಿವಸ ನಡೆದ ವಿಶ್ವ ವಿದ್ಯಾನಿಲಯದ ಕೋರ್ಟ್ ಸಭೆಯಲ್ಲಿ ಕಾಶ್ಮೀರದ ಮಹಾರಾಜರನ್ನು ವಿಶ್ವ ವಿದ್ಯಾನಿಲಯದ ಚಾನ್ಸಲರಾಗಿ ಒಮ್ಮತದಿಂದ ಆರಿಸಲಾಯಿತು.

ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್ ಸರ್ ಎಸ್ ರಾಧಾಕೃಷ್ಣನ್ ರವರು ವಿದಾಯ ಹೇಳಿದ ಮಹಾರಾಜರು ವಿಶ್ವ ವಿದ್ಯಾನಿಲಯದ ಚಾನ್ಸಲರಾಗಿ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ನೂತನ ಚಾನ್ಸಲರನ್ನು ಆದರದಿಂದ ಸ್ವಾಗತಿಸಿದರು.

೪೦ ಸಾವಿರ ರೂ. ಕಳುವು

[illegible] ಕಟಕ್ ಪೋಸ್ಟಾಫೀಸಿನಿಂದ [illegible] ಕಳುಹಿಸಿದ್ದ ೪೦ ಸಾವಿರ ರೂ. ಕರೆನ್ಸಿ ನೋಟುಗಳು ರೈಲಿನಲ್ಲಿ ಕಳುವಾಗಿ ಹೋಗಿವೆಯೆಂದು ವರದಿಯಾಗಿದೆ.

ಸ್ವೀಡ್ ತಟಸ್ಥವಾಗಲು ಮಿತ್ರರ ಹಂಚಿಕೆ

ಸ್ವೀಡನ್ನಿನ ಅಕ್ಷರಾಜ್ಯದವರನ್ನು ಕೃಷಿಕ ದೇಶಗಳೊಂದಿಗೆ ವ್ಯಾಪಾರವನ್ನು ನಿಲ್ಲಿಸುವಂತೆ ಮಾಡಿ ಮಿತ್ರರು ಅವರಿಗೆ ಎಷ್ಟರಮಟ್ಟಿಗೆ ಸಹಾಯ ಮಾಡಬಹುದೆಂಬ ವಿಚಾರವನ್ನು ಅಮೇರಿಕದ ರಾಯಭಾರಿಯಾದ ಸರ್ ಸ್ಯಾಮುಯಲ್ ಹೋರ್ ರವರು ಸ್ಪೇನಿನ ಜ|| ಫ್ರಾಂಕೋರವರೊಡನೆ ಮಾತುಕತೆ ನಡೆಸುತ್ತಿರುವರೆಂದೂ ಸಂಬಂಧಿಸಿದ ಸ್ಪೇನ್ ತಟಸ್ಥವೆಂದು ಬಹಿರಂಗವಾಗಿ ಪ್ರಕಟಿಸುವುದಾದರೆ ಮಿತ್ರರ ಸರಕುಗಳನ್ನು ನೀಡಲು ಸಿದ್ಧರಿರುವುದಾಗಿ ಸರ್ ಸ್ಯಾಮುಯಲ್ ಹೋರ್ ರವರಿಗೆ [illegible] ತಿಳಿಸಲಾಗಿದೆ.

ರಷ್ಯಾ ಸಂಧಿಗೆ ಫಿನ್ಲೆಂಡ್ ಜನಗಳ ಒತ್ತಾಯ

ಫಿನ್ಲೆಂಡಿನ [illegible] ಜನ ಪ್ರಮುಖರು [illegible] ಗಳು [illegible] ರಷ್ಯಾ ದೊಡನೆ [illegible] ಫಿನ್ಲೆಂಡ್ ಸರ್ಕಾರಕ್ಕೆ ಕೇಳಿ [illegible] ದೊಂದಿಗೆ ಪ್ರತ್ಯೇಕವಾದ ಸಂಧಿ ಮಾಡಬೇಕೆಂದು ಕೋರಿದ್ದಾರೆ.

ಜಪಾನೀ ವಿಮಾನಗಳ ನಾಶ

ನ್ಯೂ ಗಿನಿಯಾದಲ್ಲಿರುವ ವಿವಾಕ್ ಮೇಲೆ ಮಿತ್ರ ವಿಮಾನಗಳು ಪುನಃ ಧಾಳಿ ನಡೆಸಿ ೭೦ ಜಪಾನಿ ವಿಮಾನಗಳನ್ನು ನಾಶ ಮಾಡಿದವು. ಭೂಮಿಯ ಮೇಲಿದ್ದ ಇತರ ೩೦ ಶತ್ರು ವಿಮಾನಗಳನ್ನು ನಾಶ ಮಾಡಲಾಯಿತು.

ಜಪಾನಿನ ಮುಖ್ಯ ನೌಕಲ್ ಕೇಂದ್ರವಾದ ಪ್ಯೋಮೋ ಮೇಲೂ ಭಯಂಕರ ಧಾಳಿ ನಡೆಸಿ ೨೭ ಟನ್ ಬಾಂಬುಗಳನ್ನು ಸುರಿಸಲಾಯಿತು.

ಮುಸೋಲಿನಿ ಪುಸ್ತಕಗಳಿಗೆ ಮುಟ್ಟುಗೋಲು

ಇಟಾಲಿಯನ್ ಸ್ಕೂಲುಗಳಲ್ಲಿ ಮುಸೋಲಿನಿಯ ಪುಸ್ತಕಗಳನ್ನು ಉಪಯೋಗಿಸಕೂಡದೆಂದು ಇಟಲಿ ವಿದ್ಯಾ ಮಂತ್ರಿಗಳು ಆಜ್ಞೆ ಮಾಡಿರುವರೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸುತ್ತದೆ.

ಹೆಚ್ಚು ಬೆಲೆಗೆ ಹೆದರುವುದಿಲ್ಲ

ವಾಷಿಂಗ್ಟನ್ನಿನ ಪದಾರ್ಥಗಳ ಬೆಲೆ ಹೆಚ್ಚಾಗುವುದರಿಂದ ಯಾವ ತೊಂದರೆಯೂ ಇರುವುದಿಲ್ಲ. ವಾಷಿಂಗ್ಟನ್ ಅಂಗಡಿಗಳಿಗೆ ಹೋದಾಗ ಯುದ್ಧ ನಡೆಯುತ್ತಿರುವುದನ್ನು ಮರೆತು ಅಂಗಡಿ ಹುಡುಗಿಯರು ಧಾರಾಳವಾಗಿಗಳು ಎಂದಿನಂತೆಯೇ ಇವೆ ಎನ್ನುವರು. ಅತ್ಯಾವಶ್ಯಕ ಪದಾರ್ಥಗಳ ಬೆಲೆಯೆಂದರೆ, ಹೇರ್ ಬ್ರಷ್, ೧ ಜೊತೆಗೆ ೧೭೫ ರೂ. ರೇಷ್ಮೆ ಕಾಲು ಚೀಲ ೧ ಜೊತೆಗೆ ೪೨ ರೂ. ಸ್ನಾನದ ಟಬ್ಬಿ ೭೦ ರೂ. ಸ್ಪೈಟ್ ಗೌನ್ ೪೦ ರೂ. ಪ್ಲೇನ್ ಸಿಲ್ಕ್ ಡ್ರೆಸ್ ೫೦೦ ರೂ. ಇವು ನಿಜದ ಬೆಲೆ. ಆದರೂ ಬೆಟ್ಟದ ಬೆಲೆಯಲ್ಲ. ಬೆಲೆ ಹೆಚ್ಚಿದಂತೆಯೂ ಇಲ್ಲ!

ಡಕಾಯಿತನೇ ನಾಲ್ಕು ಸಾವಿರ ರೂ. ಕೊಡುತ್ತಾನೆ

ಅನೇಕ ಡಕಾಯಿತಿಗಳನ್ನು ಮಾಡಿ ಪ್ರಸಿದ್ಧ ದಗಾಕೋರನಾಗಿರುವ ಚಾಂದ್ ಖಾನ್ ಎಂಬುವನು ತನ್ನನ್ನು ಹಿಡಿದು ಕೊಟ್ಟವರಿಗೆ ೪,೦೦೦ ರೂ. ಕೊಡುವುದಾಗಿ ಪ್ರಕಟಿಸಿದ್ದಾನೆ. ಈತನನ್ನು ಹಿಡಿದುಕೊಟ್ಟವರಿಗೆ ಸರ್ಕಾರದವರು ಐದು ಸಾವಿರ ರೂ. ಬಹುಮಾನ ಕೊಡುವುದಾಗಿ ತಿಳಿಸಿದ್ದಾರೆ.

ಆ ಕಾ ಶ ವಾ ಣಿ

ಆಗಸ್ಟ್ ೨೩ ನೇ ಸೋಮವಾರ

[illegible]

ಬಟ್ಟೆಗಳ ಹತೋಟಿ ದರ

ಟೆಕ್ಸ್‌ಟೈಲ್ ಕಮೀಷನರವರು ನೂಲು ಬಟ್ಟೆಗಳ ದರಗಳನ್ನು ಗೊತ್ತು ಮಾಡಿ ಪ್ರಕಟಿಸಿದ್ದಾರೆ. ಈ ವೇಳೆಗೆ ೧೩ ತರದ ನೆರೆ ಮತ್ತು ಬಿಳಿ(ಬ್ಲೀಚ್ಡ್) ಬಣ್ಣಗಳ ಬಟ್ಟೆಗಳನ್ನು ಗೊತ್ತುಪಡಿಸಿದ್ದಾರೆ.

1 ಬ್ಲೀಚ್ಡ ಮಲ್—೪೩ ಇಂಚು ಅಗಲ ೩೦ ಗಜ ಉದ್ದ. ನಂ. ೪೦, ನಂ. ೫೦ ಪ್ರತಿಥಾನಿಗೆ ರೂ ೧೩-೭-೦.

2 ಗ್ರೇ ಲಾಂಗ್ ಕ್ಲಾತ್—೪೩ ಇಂಚ್ ಅಗಲ, ೩೮ ಗಜ ಉದ್ದ, ನಂ ೩೦, ನಂ. ೪೦, ಪ್ರತಿ ಥಾನಿಗೆ ರೂ ೩೭-೪-೯.

3 ಬಣ್ಣದ ಫ್ಲಾನಲ್—೨೯ ಇಂಚು ಅಗಲ, ೩೦ ಗಜ ಉದ್ದ, ನಂ. ೪೦, ಪ್ರತಿ ಥಾನಿಗೆ ರೂ. ೧೨-೧೦-೯.

4 ಬ್ಲೀಚ್ಡ ನೆಕ್ಲಥ್—೪೩ ಇಂಚು ಅಗಲ, ೮ ಗಜ ಉದ್ದ, ನಂ. ೭೦, ನಂ. ೯೦, ರೂ. ೬-೭-೩.

5 ಬಣ್ಣದ ಸೀರೆ—೪೨ ಇಂಚು ಅಗಲ ೨ ಗಜ ಉದ್ದ, ನಂ. ೩೦, ನಂ ೩೦ ರೂ. ೩-೭-೯

6 ಗ್ರೇ ಬಣ್ಣದ ಪ್ರಿಂಟ್ ಬಟ್ಟೆ—೨೭ ಇಂಚು ಅಗಲ, ೪೦ ಗಜ ಉದ್ದ, ತೂಕ ೧೪|| ಪೌಂಡು, ನಂ ೧೩, ನಂ. ೧೦, ಬೆಲೆ ರೂ. ೨೪-೬-೦.

7 ಗ್ರೇ ಡಿಯೋನಾಲ್ ಬಟ್ಟೆ—೪೩ ಇಂಚು ಅಗಲ, ೩೮, ೪೮ ಗಜ ಉದ್ದ, ಥಾನು ರೂ. ೨೮-೫-೬.

8 ಗ್ರೇ ಧೋತಿ—೪೪ ಇಂಚು ಅಗಲ ೧೦ ಗಜ ಉದ್ದ, ರೂ. ೬-೧೭-೯.

9 ಬ್ಲೀಚ್ಡ ಲಾಂಗ್ ಕ್ಲಾತ್—೨೩ ಇಂಚು ಅಗಲ, ೪೦ ಗಜ ಉದ್ದ, ಥಾನು ರೂ. ೨೧-೬-೩.

10 ಬ್ಲೀಚ್ಡ ಮಲ್—೪೮ ಇಂಚು ಅಗಲ, ೩೦ ಗಜ ಉದ್ದ. ಥಾನಿಗೆ ರೂ ೧೩-೧೨-೬.

11 ಗ್ರೇ ಲಾಂಗ್ ಕ್ಲಾತ್—೪೩ ಇಂಚು ಅಗಲ, ೩೮ ಗಜ ಉದ್ದ, ಥಾನ್ ರೂ. ೨೪-೬-೦

12 ಷರ್ಟಿಂಗ್—೪೪, ೪೫ ಇಂಚು ಅಗಲ, ಇಪ್ಪತ್ತೆರಡೂವರೆ ಗಜ ಉದ್ದ, ಥಾನ್ ರೂ ೧೪-೧೦-೦

ಜರ್ಮನ್ ನೌಕಾ ನಷ್ಟ

ಬರ್ಲಿನ್ ಮೇಲೆ ಮ್ಯಾಂಚೆಸ್ಟರ್ ಬಾಂಬರುಗಳು ಧಾಳಿ ಮಾಡಿದುವು. ಮಿತ್ರ ವಿಮಾನ ಪಡೆಗಳು ಹಾಲೆಂಡ್ ಕಡೆಗೆ ಹೋಗಿದ್ದ ಒಂದು ಜರ್ಮನ್ ಡೆಸ್ಟ್ರಾಯರನ್ನು ಮುಳುಗಿಸಿದ ನಂತರ ಶತ್ರುವಿನ ಅರ್ಮರ್ ಬೋಟುಗಳನ್ನು ಮತ್ತು ಒಂದನ್ನು ನಾಶ ಮಾಡಲಾಯಿತು. ಮತ್ತು ಫ್ರಾನ್ಸಿನಲ್ಲಿಯು ೧೨ ಟ್ರೈನ್ ಇಂಜಿನುಗಳನ್ನು ಉರುಳಿಸಿವೆ.

Edited, printed and published by A. K. Nagarajan, at the Sadhvi Press, D.Subbiah Road, Mysore.

ರಷ್ಯನ್ ಮುಂದೋಟ

ಸ್ಮೊಲೆನ್‌ಸ್ಕ್ ಮತ್ತು ಬ್ರಿಯಾನ್‌ಸ್ಕ್ ಮಧ್ಯದಲ್ಲಿರುವ ಸ್ಪಾಸ್-ಡೆಮೆನ್‌ಸ್ಕ್ ಕ್ಷೇತ್ರದಲ್ಲಿ ರಷ್ಯನ್ ಮುಂದೋಟವನ್ನು ತಡೆಯಲು ಹಿಟ್ಲರನು ಹೆಚ್ಚು ಹೆಚ್ಚಾಗಿ ಸೈನ್ಯಗಳನ್ನು ಕಳುಹಿಸುತ್ತಿರುವನೆಂದು ಹೇಳಲಾಗಿದೆ. ರಷ್ಯನರು ಭೀಕರ ಕದನ ನಡೆಸಿ ಶತ್ರು ಸ್ಥಾನಗಳನ್ನು ಭೇದಿಸಿ ಒಂದು ಸ್ಥಳವನ್ನು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ.

ಖಾರ್ಕೊವ್ ಕ್ಷೇತ್ರದಲ್ಲಿ ರಷ್ಯನರು ಮುನ್ನುಗ್ಗಿ, ಖಾರ್ಕೊವ್-ಪೊಲ್ಟಾವ [illegible] ಹತ್ತಿರ ಬಂದಿರುವರೆಂದು ಹೇಳಲಾಗಿದೆ. ಮಾಯಸ್ಕ್ ಖಾರ್ಕೊವಿಗೆ ೮೦ ಮೈಲಿ ದೂರದಲ್ಲಿರುವ ಲೆಬೆಡಿನ್ ವಶಪಡಿಸಿಕೊಂಡು ಇತರ ಶತ್ರು ಸ್ಥಾನಗಳಿಗೆ ಗಂಡಾಂತರ ತಂದಿದ್ದಾರೆ.

ರಷ್ಯನ್ ಕ್ಷೇತ್ರದಲ್ಲಿ ಜುಲೈ ೫ರಿಂದ ಆಗಸ್ಟ್ ೨೦ರ ವರೆಗೆ ಒಂದು ಮಿಲಿಯ ಜರ್ಮನ್ ಸೈನಿಕರು ಸತ್ತಿರುವರೆಂದು ೪೬೦೦ ಜರ್ಮನ್ ವಿಮಾನಗಳೂ, ೬೪೦೦ ಟ್ಯಾಂಕುಗಳೂ ಮತ್ತು ೩೦೦೦ ಗನ್ನುಗಳೂ ನಾಶವಾಗಿವೆಯೆಂದು ಹೇಳಲಾಗಿದೆ. ೨೫,೭೦೦ ಶತ್ರು ಸೈನಿಕರನ್ನು ಕೈಸೆರೆ ಹಿಡಿಯಲಾಗಿದೆ.

ಸ್ಪೆಷಲ್ ಪೋ|| ಜಮೇದಾರರ ಮೇಲೆ ಮೊಕದ್ದಮೆ

ಕನ್ನಾನೂರ್ ರೈಲ್ವೆ ಸ್ಟೇಷನ್ನಿನಲ್ಲಿ ಸ್ಪೆಷಲ್ ಡ್ಯೂಟಿಯಲ್ಲಿದ್ದ ಮಲಬಾರ್ ಸ್ಪೆಷಲ್ ಪೋಲೀಸು ಜಮೇದಾರರಾದ ಪಿ|| ಟಿ. ಪಿ. ಕಣ್ಣಂದನ್ ರವರು ರೈಲ್ವೆ ಅಧಿಕಾರಿಗಳ ವರ ಟಿಕೇಟನ್ನು ಕೇಳಲು, ನಿರಾಕರಿಸಿ ಲಾಟಿ ನಡೆಸಿ ರೈಲ್ವೆ ಕಾನ್ಸ್ಟೇಬಲ್ಲುಗಳು ಹೊಡೆದರೆಂಬ ಅಪಾದನೆ ಮೇಲೆ ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಡೇನ್‌ಮಾರ್ಕಿನಲ್ಲಿ ಅಶಾಂತಿ

ಡೆನ್ಮಾರ್ಕಿನಲ್ಲಿ ಜರ್ಮನಿಗೋಸ್ಕರವಿರುವ ಕಾರ್ಖಾನೆಗಳಲ್ಲಿ ಕೆಲಸಗಾರರು ಯಾರಿಗೆ ಕೆಲಸ ಮಾಡದೆ ನಾಶ ಮಾಡುತ್ತಿರುವರೆಂದೂ, ಅಲ್ಲಿ ಅಶಾಂತಿ ಹೆಚ್ಚಾಗಿದೆಯೆಂದೂ [illegible] ವರದಿ ಇದನ್ನು ನಿಲ್ಲಿಸಬೇಕೆಂದು ಜರ್ಮನಿಯು ಡೆನ್ಮಾರ್ಕಿಗೆ ಆಜ್ಞೆ ಮಾಡಿದೆ ಹಾಗೂ, ಹಾವಳಿಗಾರರನ್ನು ಜರ್ಮನ್ ಕೋರ್ಟುಗಳಲ್ಲಿ ವಿಚಾರಣೆ ಮಾಡಬೇಕೆಂದು ನಾಜಿಗಳು ಒತ್ತಾಯಪಡಿಸುತ್ತಿದ್ದಾರೆ. ಇದರ ವಿಚಾರದಲ್ಲಿ ಮಾತುಕತೆ ನಡೆಸಲು ಡೆನ್ಮಾರ್ಕಿನ ದೊರೆಗಳು ನಾಜಿ ಅಧಿಕಾರಿಗಳನ್ನು ನೋಡಲಿರುವರು.

ಇಟಲಿಯ ಆಕ್ರಮಣವು ಪ್ರಾರಂಭವಾದ ಪಶ್ಚಿಮದಿಂದ ಜರ್ಮನಿಗೆ ಒಟ್ಟು ಪೆಟ್ಟು ಕೊಡಲಾಗುವುದೆಂದೂ, ಇಟಲಿ ಕ್ರಮವಾತ್ತಿಂತ ಮುಂಚೆಯಾಗಿಯೇ ಕಾರ್ಯಕ್ರಮ [illegible] ರಾಜಕೀಯ ಕ್ಷೇತ್ರಗಳಲ್ಲಿ ಅಭಿಪ್ರಾಯವಾಗಿದೆ.

ಚಿನ್ನ, ಬೆಳ್ಳಿ ಒಡವೆಗಳಿಗೆ ಬೆಳ್ಳಿ ಪಾತ್ರೆಗಳಿಗೆ

ಎ. ಜೆ. ಲಾಲ್

ಅಶೋಕ ರೋಡ (ದೊಡ್ಡಪೇಟೆ) ಮೈಸೂರು

ಸಂಪುಟ ೨] ಮಂಗಳವಾರ ೨೪—೮—೪೩ [ಸಂಚಿಕೆ ೩೩

ಜರ್ಮನರು ಖಾರ್ಕೋವ್ ತ್ಯಜಿಸಿದರು

ಮಿತ್ರ ಕಾರ್ಯಾಚರಣೆಯಿಂದ ನಾಜಿ ಅಧಿಕಾರಿಗಳ ಕಳವಳ ಕಲ್ಕತ್ತಾದಲ್ಲಿ ಹಸಿವಿನ ಬೇನೆ ಹೆಚ್ಚುತ್ತಿದೆ

—

ರಷ್ಯಾ ನಗರಗಳ ಪುನರ್ನಿರ್ಮಾಣ

ರಷ್ಯಾದಲ್ಲಿ ಯುದ್ಧದ ಧೆಸೆಯಿಂದ ಹಾಳಾದ ಸ್ಟಾಲಿನ್‌ಗ್ರಾಡ್, ರಾಸ್ಟೋವ್, ಓರೆಲ್ ಮೊದಲಾದ ನಗರಗಳ ಪುನರ್ನಿರ್ಮಾಣಕ್ಕೆ ಆಜ್ಞೆಯಾಗಿದೆ. ಮೊದಲು ಪ್ರಕಟಿಸಿದ್ದ ದಗ್ಧಭೂಮಿ ನೀತಿಯನ್ನು ಇನ್ನು ಮುಂದೆ ಅನುಸರಿಸಬೇಕಾದ ಆವಶ್ಯಕತೆಯಿಲ್ಲವೆಂದು ತಿಳಿಸಲಾಗಿದೆ. ಯುದ್ಧಾಪಾಯಕ್ಕೀಡಾಗದಿರುವವರೆಲ್ಲ ತೊಂದರೆಗೀಡಾದವರಿಗೆ ಸಹಾಯ ನೀಡಬೇಕೆಂದೂ ವ್ಯವಸಾಯ ಮುಂತಾದುವಕ್ಕೆ ಹೆಚ್ಚು ಸೌಲಭ್ಯಗಳನ್ನೊದಗಿಸಬೇಕೆಂದೂ ಆಜ್ಞೆಯಾಗಿದೆ.

ಹಸಿ ಹುಲ್ಲನ್ನು ಆಹಾರವಾಗಿ ಉಪಯೋಗಿಸಬಹುದು

ಲಂಡನ್ ನಗರದ ನಿವಾಸಿ ಜೇಮ್ಸ್ ಬ್ರಾನ್ಸ್ ಎಂಬ ೭೧ ವರ್ಷದ ಮುದುಕನು ಹಸಿ ಹುಲ್ಲನ್ನು ಆಹಾರವಾಗಿ ಉಪಯೋಗಿಸಬಹುದೆಂದು ಜನಗಳಿಗೆ ಹೇಳುತ್ತಿರುವನು. ಕಳೆದ ೫೦ ವರ್ಷಗಳಿಂದ ತನ್ನ ಆಹಾರವಾಗಿ ಹುಲ್ಲನ್ನು ತಿನ್ನುತ್ತಿರುವನೆಂದೂ ಈಗಿರುವ ಆಹಾರ ಪದಾರ್ಥಗಳ ಅಭಾವವನ್ನು ಇದರಿಂದ ಸ್ವಲ್ಪ ಕಡಿಮೆ ಮಾಡಬಹುದೆಂದೂ ತಿಳಿಸಿದ್ದಾನೆ.

ಬಂಗಾಳಕ್ಕೆ ಆಹಾರದ ಸರಬರಾಜು

ಬಂಗಾಳದಿಂದ ಹೊರಕ್ಕೆ ಯಾರೂ ೨॥ ಮಣಕ್ಕಿಂತ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಕೂಡದೆಂದು ಆಜ್ಞೆಯಾಗಿದೆ. ಆಗಸ್ಟ್ ತಿಂಗಳು ಮೊದಲನೆ ೧೫ ದಿನದಲ್ಲಿ ಹೊರಗಿನಿಂದ ಕಲ್ಕತ್ತೆಗೆ ಸುಮಾರು ೨ ಸಾವಿರ ಟನ್ ಆಹಾರ ಪದಾರ್ಥಗಳು ಬಂದಿವೆ. ಈ ತಿಂಗಳು ಅಂತ್ಯಕ್ಕೆ ೫ ನೌಕೆಗಳಿಂದ ಪೂರ್ತಿ ಆಹಾರ ಪದಾರ್ಥಗಳನ್ನು ಬಂಗಾಳಕ್ಕೆ ಕಳಿಸಲಾಗುವದು.

ಕ್ಷುದ್ಬಾಧೆ ಪೀಡಿತರಿಗೆ ಉದಾರ ಸಹಾಯ

ಬಂಗಾಳದಲ್ಲಿ ಕ್ಷುದ್ಬಾಧೆಯಿಂದ ನರಳುತ್ತಿರುವ ೧೦೦ ಮಂದಿಯನ್ನು ಕ್ಷಾಮ ಮುಕ್ತಾಯವಾಗುವವರೆಗೆ ರಕ್ಷಿಸುವುದಾಗಿ ಭಾರಿ ವರ್ತಕರಾದ ಶ್ರೀ ಶ್ರೀರಾಮರವರು ತಿಳಿಸಿದ್ದಾರೆ.

ಅಕ್ರಮ ವಸೂಲಿ

ಕಳೆದ ಆಗಸ್ಟ್ ತಿಂಗಳ ಚಳುವಳಿಯಲ್ಲಿ ಕಾಶಿ ನಗರದಲ್ಲಿ ಹಿಂದೂ ಮುಸ್ಲಿಂ ದೊಂಬಿ ನಡೆದು, ಸಂಯುಕ್ತ ಪ್ರಾಂತ್ಯ ಸರ್ಕಾರದವರು ಆ ನಗರದ ಮೇಲೆ ೪॥ ಲಕ್ಷ ರೂ. ಪ್ಯೂನಿಟಿವ್ ತೆರಿಗೆಯನ್ನು ಹಾಕಿದ್ದು ಅಕ್ರಮವೆಂದು ಆ ನಗರದ ವಕೀಲರಾದ ಶ್ರೀ ಮನೋಹರ್ ಪ್ಯಾರಿಯವರು ಸಿವಿಲ್ ಕೋರ್ಟಿನಲ್ಲಿ ಮೊಖದ್ದಮೆ ಹೂಡಿದ್ದರು.

೧೯೪೦ ರಲ್ಲಿ ಸರ್ಕಾರದವರು ೪ ಲಕ್ಷ ರೂ. ತೆರಿಗೆಯನ್ನು ಜನಗಳ ಮೇಲೆ ಹಾಕಿದುದಲ್ಲದೆ, ಆ ತೆರಿಗೆಯನ್ನು ವಸೂಲು ಮಾಡಲು ಖರ್ಚಿಗಾಗಿ ೫೭ ಸಾವಿರ ರೂ. ದಂಡವನ್ನು ಜನಗಳಿಂದ ತೆಗೆದುಕೊಂಡರು.

ನ್ಯಾಯಾಧೀಶರು ಸರ್ಕಾರದವರು ತೆರಿಗೆ ಖರ್ಚಿಗಾಗಿ ವಸೂಲು ಮಾಡಿ ಹೊರಿಸಿದ್ದು ಅಕ್ರಮವೆಂದು ತಿಳಿಸಿ, ೨ ರೂ. ಡಿಕ್ರಿಯನ್ನು ಕೊಟ್ಟರು.

ಜರ್ಮನರು ಖಾರ್ಕೋವ್ ತ್ಯಜಿಸಿದರು

ಖಾರ್ಕೋವ್ ನಗರವನ್ನು ಜರ್ಮನ್ ಸೈನ್ಯ ತ್ಯಜಿಸಿವೆಯೆಂದು ಜರ್ಮನ್ ರೇಡಿಯೋ ತಿಳಿಸಿದೆ. ರಷಿಯನ್ ಯುದ್ಧ ಆರಂಭವಾದಾಗಿನಿಂದ ಈ ನಗರವು ನಾಲ್ಕು ಬಾರಿ ಕೈ ವ್ಯತ್ಯಾಸವಾಗಿದೆ. ೧೯೪೧ನೇ ಅಕ್ಟೋಬರಿನಲ್ಲಿ ಜರ್ಮನರು ಇದನ್ನು ವಶಪಡಿಸಿಕೊಂಡರು. ಪುನಃ ಚಳಿಗಾಲದಲ್ಲಿ ರಷ್ಯನರ ಕೈವಶವಾಯಿತು. ಆದರೆ ಜರ್ಮನರು ಪ್ರತಿಭಟಿಸಿ ಪುನಃ ಆಕ್ರಮಿಸಿಕೊಂಡಿದ್ದರು.

ಫ್ರೆಂಚ್ ಯುವಕರು ತಪ್ಪಿಸಿಕೊಂಡರು

ವಿಚಿಫ್ರಾನ್ಸಿನಿಂದ ಜರ್ಮನಿಯಲ್ಲಿ ಬಲವಂತದ ಕೆಲಸಕ್ಕಾಗಿ ಕಳುಹಿಸಬೇಕಾಗಿದ್ದ ೨,೫೦,೦೦೦ ಫ್ರೆಂಚ್ ಯುವಕರು ಜರ್ಮನರಿಂದ ತಪ್ಪಿಸಿಕೊಂಡು ಬೆಟ್ಟಗುಡ್ಡಗಳಿಗೆ ಓಡಿಹೋಗಿರುವರೆಂದು ಹೇಳಲಾಗಿದೆ.

ನಾಜೀ ಅಧಿಕಾರಿಗಳ ಕಳವಳ

ಪೂರ್ವ ರಣರಂಗದಲ್ಲಿ ಜರ್ಮನರಿಗೆ ಆಗುತ್ತಿರುವ ಸೋಲೂ ಸಿಸಿಲಿಯಲ್ಲಿ ಮಿತ್ರ ದಂಡಯಾತ್ರೆಯ ಭಯ ಮತ್ತು ಮಿತ್ರರ ಅವಿಚ್ಛಿನ್ನ ಭಾರಿ ವಿಮಾನ ಧಾಳಿ ಮತ್ತು ಆಕ್ರಮಿತ ಯೂರೋಪಿನಲ್ಲಿ ಕ್ರಾಂತಿ ಇವುಗಳಿಂದ ನಾಜಿ ಅಧಿಕಾರಿಗಳಿಗೆ ಬುದ್ಧಿಭ್ರಮಣೆಯುಂಟಾಗಿ ಚಿಂತೆಯಿಂದ ಕಳವಳಪಡುತ್ತಿರುವರೆಂದು ಹೇಳಲಾಗಿದೆ.

ಚೀಣಾಕ್ಕೆ ಸಹಾಯ

ಚೀಣಾಕ್ಕೆ ಹೆಚ್ಚಿನ ಸಹಾಯ ನೀಡಲಾಗುವುದೆಂದು ಪ್ರೆ॥ ರೂಸ್ವೆಲ್ಟರು ತಿಳಿಸಿದ್ದರಷ್ಟೆ. ಅದನ್ನು ಕಾರ್ಯರೂಪವಾಗಿ ತರಲು ಚೀಣಾ, ಅಮೆರಿಕ ದಂಡನಾಯಕರಾದ ಜನರಲ್ ಸ್ಟಿಲ್‌ವೆಲ್‌ರ ಚೀಫ್ ಆಫೀಸರಾಗಿ ಮೇಜರ್ ಜನರಲ್ ಜಾರ್ಜ್ ಸ್ಟ್ರಾಟ್‌ಮೇಯರವರನ್ನು ನೇಮಿಸಲಾಗಿದೆ.

ಇಟಲಿಯಲ್ಲಿ ಜರ್ಮನ್ ಸೈನ್ಯ

ಇಟಲಿಯಲ್ಲಿ ಈಗ ೮ ಲಕ್ಷ ಜರ್ಮನ್ ಸೈನ್ಯವಿರುವುದೆಂದೂ ಮತ್ತು ಜರ್ಮನಿಯಲ್ಲಿ ೪ ಲಕ್ಷ ಇಟಾಲಿಯನ್ನರು ಕೆಲಸಮಾಡುತ್ತಿರುವರೆಂದೂ ಸ್ವಿಸ್ ಪತ್ರಿಕೆ ತಿಳಿಸುತ್ತದೆ.

ಮಿಲಿಟರಿ ಶಿಕ್ಷಣ

ಮೈಸೂರು ೨೪

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಈ ವರ್ಷ ಮಿಲಿಟರಿ ಶಿಕ್ಷಣ ಕೊಡಲಾಗುವುದಿಲ್ಲವೆಂದು ಪ್ರಕಟಿಸಲಾಗಿತ್ತಷ್ಟೆ. ಆದರೆ ಈಗ ಪುನಃ ಅದನ್ನು ಏರ್ಪಡಿಸಲಾಗಿದೆಯೆಂದು ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ.

ಫುಟ್ ಬಾಲ್

ಅಖಿಲ ಭಾರತ ಫುಟ್‌ಬಾಲ್ ಪಂದ್ಯದಲ್ಲಿ ನೆನ್ನೆ ಸಂಜೆ ಮೈಸೂರು ಬ್ಲೂಸ್ ನವರಿಗೂ, ಬೆಂಗಳೂರು ಮುಸ್ಲಿಂರವರಿಗೂ ಪಂದ್ಯ ನಡೆದು ೧-೧ ಗೋಲಿನಿಂದ ಡ್ರಾ ಆಯಿತು.

ಮರಣ

ಮೈಸೂರು ಮೂರನೇ ಪದಾತಿ ದಳಕ್ಕೆ ಸೇರಿದ ೨೨ ವರ್ಷದ ಕೃಷ್ಣ ಎಂಬುವನು ಮೊನ್ನೆ ದಿವಸ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಿ ಹೊಂದಿದನು. ತಪ್ಪಾಗಿ ವಿಷವನ್ನು ತೆಗೆದುಕೊಂಡುದರಿಂದ ಈತನು ಮರಣ ಹೊಂದಿದನೆಂದು ವರದಿಯಾಗಿದೆ.

—

ಕರಾಚಿಯಲ್ಲಿ ಕುಷ್ಠರೋಗಿಗಳ ಹಾವಳಿ

ಕರಾಚಿ ನಗರದಲ್ಲಿ ಕುಷ್ಠರೋಗಿಗಳ ಹಾವಳಿ ಹೆಚ್ಚಾಗಿರುವುದರಿಂದ ಅದನ್ನು ನಿವಾರಿಸಲು ಸಿಂಧ್ ಸರ್ಕಾರದವರು ಏರ್ಪಾಡು ನಡೆಸುತ್ತಿರುವರು. ದಕ್ಷಿಣ ಇಂಡಿಯ ಮತ್ತು ಇತರ ಭಾಗಗಳಿಂದ ಕರಾಚಿ ನಗರದಲ್ಲಿ ಈಗ ೨ ಸಾವಿರ ಲೆಪರ್‌ಗಳು ಇರುವರೆಂದೂ ಇವರನ್ನು ಬೇರೆ ಕಡೆಗೆ ಕಳುಹಿಸಲು ಪ್ರತ್ಯೇಕ ಪೋಲೀಸ್ ಪಡೆ ಒಂದನ್ನು ನೇಮಿಸಲಾಗುವುದೆಂದು ಸಿಂಧ್ ಸರ್ಕಾರದ ಆರೋಗ್ಯ ಮಂತ್ರಿಗಳು ತಿಳಿಸಿರುವರು. ಈಗ ಹಾಲಿ ಇರುವ ಲೆಪ್ರಸಿ ಆಸ್ಪತ್ರೆಯನ್ನು ಬದಲಾಯಿಸಿ ಯಾವ ಪ್ರಾಂತ್ಯದಿಂದ ಈ ರೋಗಿಗಳು ಬಂದರೂ ಅಂತಹವರಿಂದ ಇದಕ್ಕೆ ಖರ್ಚಾದ ಹಣವನ್ನು ವಸೂಲು ಮಾಡುವ ವಿಚಾರದಲ್ಲಿ ಭಾರತ ಸರ್ಕಾರದೊಡನೆ ವ್ಯವಹಾರ ನಡೆಸಲಾಗುತ್ತಿದೆಯೆಂದೂ ತಿಳಿಸಿರುವರು.

ಜರ್ಮನಿ ಪರಾಜಯವು ನಿಶ್ಚಯ

ಮುಸೋಲಿನಿಯ ಪತನದ ಭವಿಷ್ಯವನ್ನು ಸೂಚಿಸಿದ ಜರ್ಮನಿಯ ಸುಪ್ರಸಿದ್ಧ ಗ್ರಂಥಕಾರರಾದ ಎಮಿಲ್ ಲಡ್ವಿಗ್ ಎಂಬುವರು ನ್ಯೂಯಾರ್ಕಿನಲ್ಲಿ ಈರೀತಿ ತಿಳಿಸುತ್ತಾರೆ. "ಜರ್ಮನಿಯು ಶೀಘ್ರದಲ್ಲಿ ಪರಾಜಯಹೊಂದುವುದು ಖಂಡಿತ. ಇದಕ್ಕೆ ೩ ಕಾರಣಗಳಿವೆ. ಮೊದಲನೆಯದಾಗಿ ಜರ್ಮನಿಗೆ ತೃಪ್ತಿಕರವಾದ ಆತ್ಮರಕ್ಷಣೆ ಬಲವಿಲ್ಲ. ಈಚಿನ ಪರಾಜಯಗಳಿಂದ ಆತ್ಮವಿಶ್ವಾಸ ನಾಶವಾಗಿರುವುದು ಎರಡನೆಯದು. ಮೂರನೆಯದೆಂದರೆ ಹಿಟ್ಲರನ ಪದಚ್ಯುತಿಯೇ ಮುಖ್ಯ ಅಂಶವಾಗಿದೆ.

ಹಿಟ್ಲರನು ಈಗ ದಂಡನಾಯಕರ ಕೈಗೊಂಬೆಯಾಗಿದ್ದಾನೆ. ಅವನ ಸಹಾಯಕ ಮಂತ್ರಿಗಳು ಪದಚ್ಯುತರಾಗಿ, ಆ ಸ್ಥಾನಗಳು ದಂಡನಾಯಕರ ಕಡೆಯವರಿಗೆ ಮೀಸಲಾಗುತ್ತಿವೆ. ಹಿಟ್ಲರನ ಮುಖ್ಯ ಸಚಿವನಾಗಿದ್ದ ಕೈಟ್ಲರ್‌ನನ್ನು ಕೆಲಸದಿಂದ ತೆಗೆದುಹಾಕಿರುವುದಾಗಿ ತಿಳಿಯಬರುತ್ತದೆ. ಹಿಟ್ಲರನ ಪದಚ್ಯುತಿ ವಾರ್ತೆ ಅಧಿಕೃತವಿಲ್ಲದಿದ್ದರೂ, ಜ॥ ಹಿಟ್ಲರ್ ಎಂಬ ದಂಡನಾಯಕರು ಮಾಡುವ ಯುದ್ಧ ವಿವರಣಾ ಭಾಷಣಗಳಲ್ಲಿ ಈ ಸಂದೇಹಕ್ಕೆ ಅವಕಾಶವೊದಗಿಸುವ ವಿಚಿತ್ರ ಮಾತುಗಳಿವೆ."

—

೧೪ ವರ್ಷಕ್ಕೆ ಬಿ.ಎ. ಪ್ರಶಸ್ತಿ ಪಡೆದ ಬಾಲಕಿ

ತ್ರಿಪುರ ಸಂಸ್ಥಾನದ ಚೀಫ್ ಮೆಡಿಕಲ್ ಆಫೀಸರ ಮಗಳಾದ ಕುಮಾರಿ ಬನಸ್ಪೋಸ್ ಎಂಬ ೧೪ ವರ್ಷದ ಯುವತಿಯು ಕಲ್ಕತ್ತಾ ವಿಶ್ವವಿದ್ಯಾನಿಲಯದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವಳೆಂದು ಹೇಳಲಾಗಿದೆ. ಈಕೆಯು ಕೇವಲ ೧೨ ವರ್ಷ ವಯಸ್ಸಿನಲ್ಲೇ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣಳಾದಳೆಂದೂ, ಇಷ್ಟು ಸಣ್ಣ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆ ಮಾಡಿರುವವರಲ್ಲಿ ಈಕೆಯೇ ಮೊದಲನೆಯವಳೆಂದು ಹೇಳಲಾಗಿದೆ.

—

ಐ.ಸಿ.ಎಸ್. ಅಧಿಕಾರಿಗಳ ರಾಜೀನಾಮೆ

ಬಂಗಾಳ ಸರ್ಕಾರದ ಚೀಫ್ ಸೆಕ್ರೆಟರಿಯವರಾಗಿದ್ದ ಮಿ॥ ಬಿ. ಆರ್. ಸ್ಪ್ರೇಂಗರವರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತಿರುವರೆಂದು ವರದಿಯಾಗಿದೆ. ಐ.ಸಿ.ಎಸ್. ಅಧಿಕಾರಿಗಳಾಗಿದ್ದು ಮುಂದಿನ ವರ್ಷದಲ್ಲಿ ನಿವೃತ್ತಿಯಾಗಬೇಕಾಗಿತ್ತು. ಇವರು ಬಂಗಾಳದ ಆಹಾರ ವಿಚಾರವಾಗಿ ಇಂಗ್ಲೆಂಡಿನಲ್ಲಿದ್ದ ತಮ್ಮ ಮನೆಯವರಿಗೆ ಕಾಗದ ಬರೆದುದನ್ನು ಕಂಡು ಹಿಡಿದು, ಅದನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿದ್ದರಿಂದ ಇದಕ್ಕೆ ಕಾರಣವೆಂದು ಹೇಳಲಾಗಿದೆ.

—

LATEST NEWS

ಮೈಸೂರು ೨೪

ಮೊನ್ನೆಯ ದಿವಸ [illegible] ಯಲ್ಲಿ ನಡೆದ [illegible] ಶ್ರೀ ಕೆ. ಸಿ. ಸುಬ್ಬಣ್ಣನವರು ಶ್ರೀ [illegible] ಫೋಟೋಗಳನ್ನು [illegible] [illegible].

ಹೊಟ್ಟೆಗಿಲ್ಲದೆ ಮಹಿಳೆಯ ಆತ್ಮಹತ್ಯೆ

ಬೆಂಗಳೂರು ೨೩

ತನ್ನ ಮಕ್ಕಳನ್ನು ಸಾಕಲು ತನ್ನ ಬಳಿ [illegible] ಹಣವಿಲ್ಲದ ಕಾರಣ ಬೇಸರಗೊಂಡು ನಗರದ [illegible] ಹಳ್ಳಿ ನಾಗಮ್ಮ [illegible] ಎಂಬ ವಿಧವೆಯು ಈ ದಿನ ಆತ್ಮಹತ್ಯೆ ಮಾಡಿಕೊಂಡಳು. ಆತ್ಮಹತ್ಯೆಮಾಡಿಕೊಂಡ ಕೇಸು ದಾಖಲಾಗಿದೆ

ಚುನಾವಣೆ ನಡೆಯುಬೇಕು

ಬೆಂಗಳೂರು ಸಿಟಿ ಮುನಿಸಿಪಲ್ ಚುನಾವಣೆಯನ್ನು ಡಿಸೆಂಬರ್ ೪ ನೇ ತಾ|| ಗೆ [illegible] ಎಂದು ಸರ್ಕಾರವು ನಿರ್ಧರಿಸಿದ್ದಾರೆ.

ಭಾರಿ ಕೇಡಿಗಳ ವಸ್ತಗಿರಿ

[illegible] ಒಬ್ಬ ಆಲ್ಪ [illegible] ಮೋಸ [illegible] ಮಾಡುತ್ತಿದ್ದ [illegible] ಎಂಬ ಎರಡು ಕೇಡಿಗಳನ್ನು ವಸ್ತಗಿರಿ ಮಾಡಿದ್ದಾರೆ. ಅವರನ್ನು ರಕ್ಷ [illegible] ಹಳ್ಳಿ ಒಬ್ಬರ ಹೇಳಿಕೆಯಂತೆ ಪೋಲೀಸರ್ [illegible] ಎಂಬ ಕೇಡಿ [illegible] ವಸ್ತಗಿರಿ ಮಾಡಲಾಗಿದೆ

ಭರತಪುರದ ದಿವಾನರ ಆಗಮನ

ಅನಾರೋಗ್ಯನಿಮಿತ್ತ ೧ ತಿಂಗಳ ರಜಾ [illegible] ಭರತಪುರದ ದಿವಾನರಾದ ರಾಜ ಮಂತ್ರಪ್ರವೀಣ ಶ್ರೀ ಎ. ವಿ. ರಾಮನಾಥ ರವರು ಬೆಂಗಳೂರಿಗೆ ಬಂದಿದ್ದಾರೆ.

ಗಿರಣಿಗಳಿಗೆ ಆಜ್ಞೆ

ಸಂಸ್ಥಾನದ ಗಿರಣಿಗಳು ಜಿಲ್ಲಾಧಿಕಾರಿಗಳ ಅಪ್ಪಣೆಯಾದರೆ, ಅಧಿಕ [illegible] ಕೆಲಸ ಮಾಡಬೇಕೆಂದೂ, ಎಂಜಿನಿಯರುಗಳು ಅಪೇಕ್ಷಿಸಿದರೆ ಮೊದಲು [illegible] ಭತ್ತವನ್ನು ಅರೆದು ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ.

ಇಟಲಿ ಮೇಲೆ ಭೀಕರ ಧಾಳಿ

ಮಿತ್ರ ವಿಮಾನಗಳು ಸಿಸಿಲಿಯನ್ನು ಬಿಟ್ಟ ಮೇಲೆ ವಿಮಾನ ನೆಲೆಗಳ ಮೇಲೆ ಧಾಳಿ ಮಾಡಿವೆ. ಉತ್ತರ ಇಟಲಿಗೂ ದಕ್ಷಿಣ ಇಟಲಿಗೂ ಇದ್ದ ರೈಲ್ವೆ ಸಂಬಂಧವನ್ನು ನಾಶಗೊಳಿಸಲಾಯಿತು. ಇಟಲಿಯ ದ್ವೀಪದ ಶತ್ರು ಸಂಚಾರದ ವ್ಯವಸ್ಥೆಗಳ ಮೇಲೆ ಧಾಳಿ ಮಾಡಿ ಅವು ನುಚ್ಚು ನೂರಾಗುವಂತೆ ಮಾಡಲಾಗುತ್ತಿದೆ. ಶತ್ರುವಿಮಾನಗಳ ಪ್ರತಿಭಟನೆ ವಿಶೇಷವಾಗಿದ್ದಿತು. ನಮ್ಮ [illegible] ಶತ್ರುವಿಮಾನಗಳನ್ನು ಉರುಳಿಸಿವೆ. ಬ್ರಿಟಿಷ್ ಯುದ್ಧ ನೌಕೆಗಳು ಇಟಲಿ ಮೇಲೆ ಧಾಳಿ ಮಾಡಿ ೧೧ ಶತ್ರು ನೌಕೆಗಳನ್ನು ಮುಳುಗಿಸಿವೆ.

ಬರ್ಮಾದಲ್ಲಿ ಹೆಚ್ಚು ಶತ್ರು ವಿಮಾನಗಳಿಲ್ಲ

ಬರ್ಮಾದಲ್ಲಿ ಜಪಾನಿ ವಿಮಾನಗಳು ಅಷ್ಟಾಗಿ ಇಲ್ಲ. ಇಂಡೋ ಚೈನಾದಲ್ಲಿ ಕೇಂದ್ರೀಕೃತವಾಗಿದೆ. ವಿಮಾನ ಧಾಳಿಗೆ ಸಿಕ್ಕಿ ತಮ್ಮ ವಿಮಾನಗಳು ನಾಶವಾಗಬಹುದೆಂಬ ಭಯ ಜಪಾನಿಗೆ ಒದಗಿದೆ. ಬರ್ಮಾದಲ್ಲಿ ಮಿತ್ರವಿಮಾನಗಳು ಧಾಳಿ ಮಾಡಲು ಬಹಳ ಸುಲಭ. ಶತ್ರು ಪ್ರತಿಭಟನೆಯೇ ಇಲ್ಲವೆಂಬುದಾಗಿ ಅಮೆರಿಕ ಸೈನ್ಯಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಲಮೋವಾಕ್ಕೆ ಗಂಡಾಂತರ

ಮಿತ್ರ ಪಡೆಗಳು ಜಪಾನರ ಮುಂಚೂಣಿ ನೆಲೆಯಾದ ಸಾಲಮೋವಾಕ್ಕೆ ಗಂಡಾಂತರ ತಂದಿದ್ದಾರೆ. ಸಾಲಮೋವಾ ವಿಮಾನ ನೆಲೆ ಕಿರಿಯ ಪ್ರದೇಶವನ್ನು ಆಸ್ಟ್ರೇಲಿಯನ್ ಸೈನಿಕರು ಹಿಡಿದಿದ್ದಾರೆ. ನಾಸ್ಸೂ ಕೊಲ್ಲಿಯಲ್ಲಿದ್ದ ಅಮೆರಿಕ ಪಡೆಗಳು ಮುನ್ನುಗ್ಗುತ್ತಾ ಸಾಲಮೋವಾದ ವಿಮಾನ ನೆಲೆಗಳ ಮೇಲೆ ಧಾಳಿ ನಡೆಸುತ್ತಿವೆ. ಮಿತ್ರರು ಮಧ್ಯ ಸಾಲಮನ್ಸಿನಲ್ಲಿ ಅನೇಕ ಜಪಾನಿ ಫೀಲ್ಡ್ ಗನ್ನುಗಳನ್ನು ವಶಪಡಿಸಿಕೊಂಡಿರುವರು.

ಕೆಲಸಗಾರರಿಗೆ ಮಿತ್ರರ ಎಚ್ಚರಿಕೆ

ಶತ್ರು ಸಹಾಯಕ್ಕಾಗಿ ಕಾರ್ಖಾನೆಗಳಲ್ಲಿ ಕೆಲಸಮಾಡುವ ಜೆಕ್ ಮತ್ತು ಸ್ಲೊವಾಕ್ ಕೆಲಸಗಾರರು ಇನ್ನು ಮುಂದೆ ಅಲ್ಲಿ ಕೆಲಸ ಮಾಡಕೂಡದೆಂದೂ, ಈ ಎಚ್ಚರಿಕೆಯನ್ನು ನಿರಾಕರಿಸಿದರೆ ಬಾಂಬಿನ ಬಾಯಿಗೆ ತುತ್ತಾಗಬೇಕಾದೀತೆಂದು ಲಂಡನ್ನಿಂದ ರೇಡಿಯೋ ಮೂಲಕ ಎಚ್ಚರಿಸಲಾಗಿದೆ

ನಿರಾಶ್ರಿತರಿಯವರಿಗೆ ೬|| ಲಕ್ಷ ಟನ್ ಧಾನ್ಯ ಮಾತ್ರ ಖರ್ಚಾಗುವುದು

ಇಂಡಿಯಾ ಸರ್ಕಾರದವರು ಮಿಲಿಟರಿಯವರಿಗೆ ಒದಗಿಸುತ್ತಿರುವ ಧಾನ್ಯಗಳ ವಿಚಾರದಲ್ಲಿ ಅಗಾಧವಾಗಿ ಧಾನ್ಯಗಳನ್ನು ಸಪ್ಲೈಮಾಡುತ್ತಿರುವರೆಂಬ ಭಾವನೆ ತಪ್ಪೆಂದು ತಿಳಿಸಿದ್ದಾರೆ. ವರ್ಷಕ್ಕೆ ಸುಮಾರು ೫ ಲಕ್ಷ ಟನ್ ಗೋಧಿ, ೧|| ಲಕ್ಷ ಟನ್ ಅಕ್ಕಿಯು ಮಾತ್ರ ಬೇಕಾಗುವುದೆಂದೂ, ಈ ಗೋಧಿಯು ಸಂಚಾಬಿನ, ಬೆಳೆಯುವ ೮ ನೆಯ ೧ ಭಾಗ ಮತ್ತು ಅಕ್ಕಿ ಬಂಗಾಳದ ಬೆಳೆಸಿನ ೬ ನೆಯ ೧ ಭಾಗ ಆಗಿರುವುದೆಂದೂ ತಿಳಿಸಿರುತ್ತಾರೆ

ಇರಾನಿನಲ್ಲಿ ಜರ್ಮನಿ ಪಿತೂರಿ

ಇರಾನಿನ ಸರ್ಕಾರದ ಮೇಲೆ ತಿರುಗಿಬೀಳುವಂತೆ ಶರ್ಮೀಯವಾದ ಒಂದು ಸಂಗದ ಜನರನ್ನು ಜರ್ಮನರು ಎತ್ತಿ ಕಟ್ಟಿದ್ದಾರೆಂದೂ, ಜರ್ಮನರು ಅಂತಹ ಪರ್ಷಿಯನರೆಂದು ಹೇಳಿಕೊಂಡು ವೇಷಧಾರಿಗಳಾಗಿ ತಿರುಗುತ್ತಿರುವರೆಂದೂ ವರದಿಯಾಗಿದೆ.

ಇಂತಹ ಜರ್ಮನರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಪರ್ಷಿಯಾ ಸರ್ಕಾರ ತಿಳಿಸಿದೆ.

ಸಿಂಧ್‌ನಲ್ಲಿ ಅಕ್ಷರ ಪ್ರಚಾರ ಯೋಜನೆ

ಸಿಂಧ್ ಪ್ರಾಂತ್ಯದಲ್ಲಿ ಅಕ್ಷರ ಪ್ರಚಾರ ಕಾರ್ಯವನ್ನು ನಡೆಸಲು ೧೦ ವರ್ಷದ ಹಂಚಿಕೆಯೊಂದನ್ನು ಸರ್ಕಾರದಿಂದ ನೇಮಿಸಲ್ಪಟ್ಟಿದ್ದ ಸಮಿತಿಯವರು ರಚಿಸಿದ್ದಾರೆ. ಇದಕ್ಕಾಗಿ ೬೦ ಲಕ್ಷ ರೂಗಳು ಖರ್ಚಾಗುವುದೆಂದು ಹೇಳಲಾಗಿದೆ.

ಕಲ್ಕತ್ತಾದಲ್ಲಿ ಹಸಿವಿನ ಬೇ[illegible]

ಕಲ್ಕತ್ತಾ ನಗರದ ಆರೋಗ್ಯವು [illegible] ಬಹಳ ಕೆಟ್ಟಿರುವುದು [illegible] ಸರ್ಕಾರಕ್ಕೆ ಬಹಳ ಕಾತುರತೆಯನ್ನುಂಟುಮಾಡಿದೆಯೆಂದು ಪ್ರಕಟಿಸಲಾಗಿದೆ. [illegible] ಆಹಾರಕ್ಕಾಗಿ ಅತ್ಯಧಿಕಜನರು ಹೊರಗಿನಿಂದ ಬರುತ್ತಿರುವುದು, ರೋಗಪೀಡಿತರಾದ [illegible] ಕರು ಒಂದೇ ಕಡೆ ಸೇರುವುದು ಮತ್ತು ಹಸಿವಿನ ಬೇನೆಗೆ ಪೀಡಿತರಾದವರು [illegible] ಸೇರುವುದು ಮತ್ತು ಕಾಸರ್ಪೊರೇಷನ್ ಗಲ್ಲಿಗ[illegible] ತೃಪ್ತಿಕರವಾಗಿಲ್ಲದಿರುವುದು ಇವೇ ಇ[illegible] ಕಾರಣವೆಂದು ಹೇಳಲಾಗಿದೆ.

ಇಲ್ಲಿಯವರೆಗೆ ಹೊಟ್ಟೆಗಿಲ್ಲದೆ ರಸ್ತೆಯ[illegible] ನರಳುತ್ತಿದ್ದ ೬೦೦ ಜನರನ್ನು ಆಸ್ಪತ್ರೆ[illegible] ಸೇರಿಸಲಾಗಿದೆ. ಅವರಲ್ಲಿ ೪೦ ಜನ [illegible] ರುವರು. ವೆಸ್ಟ್ರನ್ಸ್ ಆರ್ಡಿನನ್ಸ್ ಪ್ರಕಾರ ೬೦೦ ಜನ ತಿರುಕರನ್ನು ಹಿಡಿಯಲಾಗಿ[illegible] ಹೊರಗಿನಿಂದ ಜನರು ಬರುವುದನ್ನು [illegible] ಸುವುದಕ್ಕಾಗಿ ನಗರದೊಳಗೆ ಉಚಿತ [illegible] ಗೆ ಮನೆಗಳನ್ನು ತೆರೆಯುವುದಕ್ಕೆ [illegible] ಹಕೊಡದೆ ನಗರದ ಹೊರಗೆ ತೆರೆಯಲಾ[illegible] ತ್ತಿದೆ. ದುಸ್ಥಿತಿಯ ಪರಿಹಾರನಿಧಿಗೆ ಇ[illegible] ವರೆಗೆ ೬,೭೭,೦೦೦ ರೂ ಶೇಖರವಾ[illegible] ಸೆಪ್ಟೆಂಬರ್ ೧ ರಿಂದ ೨೦ ಸಾವಿರ ಜನ[illegible] ಅಗ್ಗದ ಬೆಲೆಗೆ ಆಹಾರ ಪದಾರ್ಥಗಳ[illegible] ಒದಗಿಸಲಾಗುವುದು. ಕಳೆದ ೫ ದಿನ[illegible] ರಸ್ತೆಗಳಲ್ಲಿದ್ದ ೧೨೦ ಶವಗಳ ಸಂಸ್ಕಾರ[illegible] ಡಲಾಯಿತು.

ಯುದ್ಧದ ಅಂತ್ಯಸಮೀಪಿಸಿ[illegible]

ಯುದ್ಧದ ಅಂತ್ಯ ಸಮೀಪಿಸುತ್ತಾ[illegible] ಆದಕ್ಕಾಗಿ ನಡೆಯುವ ಉಗ್ರ ಕದನ [illegible] ಡಲು ನಾವು ಸಿದ್ಧರಾಗಿರಬೇಕು. ಫ್ರೆಂಚ್ ಸೇನೆ ಪುನರ್ಜನ್ಮ ತಾಳಿದೆ. ಅದು ಇ[illegible] ಜೇಗೆ ಗಳಿಸಿದ್ದ ಕೀರ್ತಿಯನ್ನು ಇನ್ನೂ [illegible] ಟ್ಟ ಸುವುದು ಎಂಬುದಾಗಿ ಜ|| ಗಿರಾಡ್ ಅಲ್ಜೀರಿಯರ್ಸ್‌ನಿಂದ ತಿಳಿಸಿದ್ದಾರೆ.

Edited, printed and publ[ished] by A. R. Nagaraja[h] at the Sadhvi Press, D Sub[ba]iah Road, Mysore.

Office of the President and Returning Officer,
Mysore City Municipal Council, Mysore
Dated 23rd August, 1943

NOTICE

Re: General Municipal Elections to be held in November, 1943.

Notice under Rule 7 (b) of the City Municipal Election Rules is reproduced

The attention of the public is invited to the lists of voters of the several Divisions of Mysore City published on the [illegible] August 1943 as already notified

As no person is entitled to vote in more than one Division any person possessing the qualification of a voter (according to the said lists) in more than one Division will as per the above rule choose for which one of such Divisions he should be deemed to be entitled to vote and intimate the fact to the undersigned, in writing, within a week from this date, failing which, he shall be entitled to vote only in such Division as the Municipal Council [illegible] determine in this behalf

(Sd) B. S. RAGHAVENDRA RAO
President and Returning Officer

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ

ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಬುಂಯಲರಿ ಮತ್ತು ಎಲ್ಲಾ ಸೈಜನಲ್ಲೂ ಹೊಸ ಮಾದರಿಯಲ್ಲಿ ಹೊಲೆದು ಸಿದ್ಧಪಡಿಸಿ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಬಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ಮುಂತಾದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಸಹ ಸದಾ ದೊರೆಯುತ್ತವೆ.

ಸಂಪುಟ ೨] ಬುಧವಾರ ೨೫—೮—೪೩ [ಸಂಚಿಕೆ ೩೪

ಬಾಲ್ಕನ್ ಮೂಲಕ ದಂಡಯಾತ್ರೆ

ಗಡಿನಾಡು ಗಾಂಧಿಗೆ ನ್ಯಾಯಾಧೀಶರ ಹುದ್ದೆ !
ಟರ್ಕಿಯು ಮಿತ್ರರ ಕಡೆ ಸೇರುವುದೇ ?

ಬಾಲ್ಕನ್‌ನಿಂದ ದಂಡಯಾತ್ರೆ ನಡೆಸಲು ನೂತನ ದಂಡನಾಯಕ

ಯೂರೋಪ್ ರಂಗದಲ್ಲಿ ದಂಡಯಾತ್ರೆ ನಡೆಸಲು ಮಿತ್ರದಂತ ನಾಯಕರನ್ನು ರೂಸ್ವೆಲ್ಟ್–ಚರ್ಚಿಲ್‌ರು ನೇಮಕ ಮಾಡಿದ್ದಾರೆಂದು ಹೇಳಲಾಗಿದೆ. ಬಾಲ್ಕನ್ ಪ್ರದೇಶದಿಂದ ದಂಡಯಾತ್ರೆ ನಡೆಸಲು ಜನರಲ್ ಐಸನ್‌ಹವರ್‌ರವರನ್ನು ನೇಮಿಸಲಾಗಿದೆಯೆಂದು ಹೇಳಲಾಗಿದೆ. ಫ್ರಾನ್ಸ್ ಮತ್ತು ಇತರ ಪ್ರದೇಶಗಳಿಂದ ಮುತ್ತಿಗೆ ನಡೆಸಲು, ಇಂಗ್ಲೆಂಡಿನ ಮಿಲಿಟರಿ ಜನರಲ್‌ಗಳನ್ನು ನೇಮಿಸಲಾಗಿದೆಯೆಂದೂ ನಂಬಲಾಗಿದೆ.

ಕ್ವಿಬೆಕ್ ಸಮ್ಮೇಳನವನ್ನು ಮುಗಿಸಿಕೊಂಡ, ಮಿ॥ ಚರ್ಚಿಲ್ ಮತ್ತು ಮಿ॥ ಈಡನ್‌ರವರು ಬ್ರಿಟನ್ನಿಗೆ ಹಿಂತಿರುಗುವುದಕ್ಕಿಂತ ಮುಂಚೆ ವಾಷಿಂಗ್‌ಟನ್‌ಗೆ ಹೋಗುವರೆಂದು ಹೇಳಲಾಗಿದೆ.

ಇಟಲಿ ಮುತ್ತುವ ಕಾಲ ಸಮೀಪಿಸಿದೆ

ಇಟಲಿಯನ್ನು ಮಿತ್ರರು ಮುತ್ತುವ ಕಾಲ ಸಮೀಪಿಸಿದೆಯೆಂದು ಇಟಾಲಿಯನರು ಹೆದರಿದ್ದಾರೆಂದು ಸ್ಪೇನ್ ಪತ್ರಿಕೆಯೊಂದು ತಿಳಿಸುತ್ತದೆ. ಇಟಲಿ ಪ್ರಜೆಗಳು ಯುದ್ಧ ಬೇಡ ಎಂದು ಹೇಳುತ್ತಿದ್ದಾರೆ. ಬಡೋಗ್ಲಿಯೋರವರ ಮೊದಲನೆಯ ಕರ್ತವ್ಯವೇನೆಂದರೆ ಇಟಲಿಯ ಯುದ್ಧದಿಂದ ಹೊರಗಾಗಿ ತಮ್ಮ ದೇಶವು, ಜರ್ಮನಿ ಮತ್ತು ಮಿತ್ರ ರಾಷ್ಟ್ರಗಳ ನಡುವೆ ...

ಉತ್ತರ ಆಫ್ರಿಕಾ ತೀರದಲ್ಲಿ ಮಿತ್ರ ಸೈನ್ಯಗಳು

ಉತ್ತರ ಆಫ್ರಿಕಾ ತೀರ ಪ್ರದೇಶದಲ್ಲಿ ಮಿತ್ರರ ಅಸಂಖ್ಯಾತ ಸೈನ್ಯಗಳು ಶೇಖರಿಸಲಾಗಿವೆಯೆಂದೂ, ಇವುಗಳ ಜೊತೆಗೆ ಬಹಳ ನೌಕೆಗಳೂ ಸಿದ್ಧವಾಗಿವೆಯೆಂದು ವರದಿಯಾಗಿದೆ. ದಕ್ಷಿಣ ಇಟಲಿಯ ತುದಿ ಪ್ರದೇಶದಿಂದ ಫ್ರಾಂಕೋ–ಸ್ಪ್ಯಾನಿಷ್ ಗಡಿಗೆ ಇರುವ ನೂರಾರು ಮೈಲಿ ರಣರಂಗದಲ್ಲಿ ಮಿತ್ರ ಸೈನ್ಯಗಳು ಯೂರೋಪು ಮುತ್ತಲು ಸಿದ್ಧವಾಗಿವೆಯೆಂದು ಹೇಳಲಾಗಿದೆ.

ಜರ್ಮನರ ಭೀತಿ

ಮಿತ್ರ ವಿಮಾನ ಧಾಳಿಗೆ ಹೆದರಿ ಜರ್ಮನರು ತಮ್ಮ ಹಣವನ್ನೆಲ್ಲಾ ಸೇವಿಂಗ್ಸ್ ಬ್ಯಾಂಕುಗಳಿಂದ ವಾಪಸು ತೆಗೆದುಕೊಳ್ಳುತ್ತಿರುವರೆಂದೂ, ಈಗಾಗಲೇ ೧,೫೦೦ ಮಿಲಿಯನ್ ಮಾರ್ಕ್ಸ್ ಹಿಂದಕ್ಕೆ ತೆಗೆಯಲಾಗಿದೆಯೆಂದು ಹೇಳಲಾಗಿದೆ.

ನರ್ಮ ಮುತ್ತಲು ಹಂಚಿಕೆ

ಚೀನಾ ಮತ್ತು ಇಂಡಿಯಾದಲ್ಲಿರುವ ಅಮೇರಿಕ ವಿಮಾನ ದಳವು ಬರ್ಮಾ ಮೇಲೆ ಧಾಳಿ ನಡೆಸುತ್ತಿರುವುದೆಂದೂ, ಮಳೆಗಾಲ ಕಳೆದ ಕೂಡಲೇ ಮಿತ್ರರು ಬರ್ಮಾವನ್ನು ಕೈವಶಮಾಡಿಕೊಳ್ಳಲು ದಂಡಯಾತ್ರೆ ನಡೆಸುವರೆಂದು ಹೇಳಲಾಗಿದೆ.

ಇಂಡಿಯಾ, ಚೈನಾ ಮತ್ತು ಬರ್ಮಾದ ಅಮೇರಿಕ ವಿಮಾನ ಕಾರ್ಯಾಚರಣೆಯನ್ನು ಒಗ್ಗೂಡಿಸಿ, ಅದಕ್ಕೆ ಮೇಜರ್ ಜನರಲ್ ಸ್ಟ್ರಾಟ್‌ಮೆಯರ್‌ರವರನ್ನು ದಂಡನಾಯಕರಾಗಿ ನೇಮಿಸಿರುವುದನ್ನು ನೋಡಿದರೆ, ಜಪಾನ್ ಮೇಲೆ ವಿಮಾನ ಧಾಳಿ ನಡೆಸಲು ಹಂಚಿಕೆ ಹಾಕಲಾಗುತ್ತಿದೆಯೆಂದು ಹೇಳಲಾಗಿದೆ.

ಭೂಪಾಲ್ ಸಂಸ್ಥಾನದ ನ್ಯಾಯಾಧೀಶರು !

"ಗಡಿನಾಡು ಗಾಂಧಿ" ಎನಿಸಿದ ಖಾನ್ ಅಬ್ದುಲ್ ಗಫಾರ್‌ಖಾನ್ ರವರು, ಭೂಪಾಲ್ ಸಂಸ್ಥಾನದ ನ್ಯಾಯಾಧೀಶ ಪದವಿಯನ್ನು ಸ್ವೀಕರಿಸಿರುವರೆಂದು ನಾಗಪುರದ "ಹಿತವಾದ" ಎಂಬ ಪತ್ರಿಕೆಯು ತಿಳಿಸುತ್ತದೆ.

ನುಗ್ಗದ ಕಾಳುಗಳ ಹತೋಟಿ

ಭಾರತ ಸರ್ಕಾರದವರು ಬಟ್ಟೆಗಳ ಮಾರಾಟದ ಧಾರಣೆಯನ್ನು ನಿಷ್ಕರ್ಷೆ ಮಾಡಲಾಗಿ ಬಟ್ಟೆಗಳನ್ನು ತಯಾರಿಸುವವರು ಲಾಭಗಳ (ಬಾರ್ಡರ್ ಮತ್ತು ಸಟಲ್‌ಗಳು) ಬೆಲೆಯನ್ನು ನಿಷ್ಕರ್ಷಿಸಿದ್ದಾರೆ.

ತಿರುವಾಂಕೂರು ಸಂಸ್ಥಾನದಲ್ಲಿ ರೇಷನಿಂಗ್

ತಿರುವಾಂಕೂರು ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲೂ ರೇಷನಿಂಗ್ ಜಾರಿಗೆ ತರಲು ಸರ್ಕಾರವು ನಿರ್ಧರಿಸಿದೆ. ಆಕ್ಟೋಬರ್ ಮಾಡಿ ಪ್ರತಿಯೊಬ್ಬನಿಗೂ ಕಾಳುಗಳನ್ನು ಸಿಕ್ಕುವಂತೆ ಮಾಡಲು ಸಂಸ್ಥಾನದಲ್ಲಿ ಬೆಳೆಯುವ ಧಾನ್ಯವನ್ನೆಲ್ಲಾ ಕೊಂಡು ದಾಸ್ತಾನು ಮಾಡುವರು.

ಅಧಿಕಾರಿಗಳ ದಸ್ತಗಿರಿ

ಮದರಾಸ್ ಸರ್ಕಾರದ ಡೆಪ್ಯುಟಿ ಕಮಿಷನರ್ ಟ್ಯಾಕ್ಸ್ ಅಧಿಕಾರಿಗಳಾದ ಶ್ರೀ ಸಿ. ಸಿ. ಸುಬ್ಬಯ್ಯ ಮೊದಲಿಯಾರ್‌ರವರು ನೆಟ್ಟಿಪಾಳ್ಯಂ ಸರ್ಕಾರದ ಭವನದಲ್ಲಿ ಸರ್ಕಾರಿ ನೌಕರಿಗಳ ಕಛೇರಿಯಲ್ಲಿ ಲಂಚ ತೆಗೆದುಕೊಳ್ಳುತ್ತಿದ್ದರೆಂದು, ಅವರನ್ನು ಕೊಯಮುತ್ತೂರು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

೧೦ ವರ್ಷ ಕಠಿಣ ಶಿಕ್ಷೆ

ಕಲ್ಲಿಕೋಟೆಯ ಸೋರ್ ನೇತ್ರ ಬಲವನ್ನು ಕಳೆದ ಜುಲೈ ಲಾಲದಲ್ಲಿ ನಾಶಮಾಡಿದರೆಂಬ ಆಪಾದನೆ ಮೇಲೆ ಅಪ್ಪುಕುಟ್ಟಿ ಎಂಬುವನಿಗೆ ೧೦ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಈ ಕೇಸು ಆಪಾದಿತನನ್ನು ಹಿಡಿಯಲು ಸಹಾಯ ಮಾಡಿದ ಅವರಿ ಪೋಲೀಸಿನವರು ... ದಸ್ತಗಿರಿ ಮಾಡಿದರು.

ಟರ್ಕಿ ಯುದ್ಧಕ್ಕೆ ಇಳಿಯುವುದೇ ?

ಗ್ರೀಕನ್ನು ಮಿತ್ರಸೈನ್ಯಗಳು ಹಿಡಿಯಲು ನಿರ್ಧರಿಸಿದಾಗ ಅದರ, ಆಗ್ಗೆ ಟರ್ಕಿಯು ಮಿತ್ರರ ಪರವಾಗಿ ಯುದ್ಧಕ್ಕೆ ಸೇರುವ ಸಂಭವವಿದೆಯೆಂದೂ, ಈ ಅಭಿಪ್ರಾಯ ಸಮರ್ಥಿಸಲು ನಾಲ್ಕು ಕಾರಣಗಳನ್ನು ಕೊಟ್ಟು ಟರ್ಕಿಯಲ್ಲಿ ರಾಜಕೀಯ ಸ್ಥಾನವನ್ನು ಹೊಂದಿರುವ ವರ್ಗವು, ಗ್ರೀಸ್ ಮಿತ್ರವಶವಾಗುವುದೆಂದು ತಿಳಿದ ತಕ್ಷಣವೇ ತನ್ನ ಅಭಿಪ್ರಾಯವನ್ನು ಬದಲಾಯಿಸುವ ಸಂಭವವಿದೆಯೆಂದೂ ಯುನೈಟೆಡ್ ಪ್ರೆಸ್ ವರದಿಗಾರರು ತಿಳಿಸುತ್ತಾರೆ.

ಆಕ್ರಮಿತ ಫ್ರಾನ್ಸಿನಲ್ಲಿ ನಾಜಿ ಸೈನಿಕರ ಕೊಲೆ

ಫ್ರಾನ್ಸಿನಲ್ಲಿ ಜರ್ಮನರಿಗೆ ವಿರೋಧವಾಗಿ ಪ್ರದರ್ಶನಗಳು ಆರಂಭವಾಗಿದೆಯೆಂದೂ, ಈ ನಾಲ್ಕು ವಾರಗಳಲ್ಲಿ ಒಂದು ನೂರಕ್ಕೂ ಜರ್ಮನ್ ಸೈನಿಕರನ್ನು ಫ್ರೆಂಚ್ ಗೊರಿಲ್ಲರವರು ಕೊಲೆ ಮಾಡಿರುವರೆಂದೂ ವರದಿಯಾಗಿದೆ. ಆಕ್ರಮಿತ ಫ್ರಾನ್ಸಿನ ಎಲ್ಲಾ ನಗರಗಳಲ್ಲೂ ಇಂತಹ ಘಟನೆಗಳು ನಡೆಯುತ್ತಿವೆಯೆಂದು ಒಂದೇ ದಿವಸದಲ್ಲಿ ನಾಜಿ ಸೈನ್ಯಗಳ ಮೇಲೆ ನೂರಾರು ಸಲ ಬೀಳಲಾಯಿತೆಂದು ಹೇಳಲಾಗಿದೆ.

ಡೆನ್ಮಾರ್ಕಿನಲ್ಲಿ ಅಶಾಂತಿ

ಡೆನ್ಮಾರ್ಕಿನ ಪ್ರಥಮ ದ್ವೀಪವಾದ ಫೂನೆನ್‌ನ ಒಡೆನ್ಸೆಯಲ್ಲಿ ಜರ್ಮನರಿಗೆ ವಿರೋಧವಾಗಿ ಪ್ರದರ್ಶನ ನಡೆದು ಜನರು ಪೋಲೀಸರೊಂದಿಗೆ ಒಬ್ಬ ಜರ್ಮನ್ ಅಧಿಕಾರಿಯನ್ನು ಕೊಲೆ ಮಾಡಿರುವರೆಂದು ಹೇಳಲಾಗಿದೆ. ಕೂಡ ಈ ಸ್ಥಾನದಲ್ಲಿ ಜರ್ಮನ್ ಮತ್ತು ಡೇನಿಷ್ ಜನಗಳಿಗೆ ಘರ್ಷಣೆಯುಂಟಾಯಿತೆಂದು ವರದಿಯಾಗಿದೆ.

ಅಮೇರಿಕ ಮಜೂರ ಕಾರ್ಯದರ್ಶಿಗಳ ಪ್ರವಾಸ

ಇತ್ತೀಚೆಗೆ ಭಾರತಕ್ಕೆ ಬಂದಿರುವ ಅಮೇರಿಕ ಮಜೂರ ಕಾರ್ಯದರ್ಶಿಗಳಾದ ಮಿ॥ ... ಅವರು ... ವಾರಗಳ ಕಾಲ ... ಪ್ರವಾಸ ಮಾಡುವರು ... ವಿವರ ... ತಿಳಿದು ಬಂದಿದೆ.

ನ್ಯಾ॥ ಮಿ॥ ಸಭೆಗೆ ಶ್ರೀ ಸುಬ್ಬಣ್ಣನವರು ಚುನಾಯಿತರಾದರು

ಚಿತ್ರದುರ್ಗ ಜಿಲ್ಲೆಯಿಂದ ನ್ಯಾಯವಿಧಾಯಕ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಶ್ರೀ ಕೆ. ಸಿ. ಸುಬ್ಬಣ್ಣನವರು ಚುನಾಯಿತರಾದರು. ಶ್ರೀ ಸುಬ್ಬಣ್ಣನವರಿಗೆ (ಸ್ವತಂತ್ರ) ... ವೋಟುಗಳೂ, ಶ್ರೀ ಚನ್ನಬಸಪ್ಪನವರಿಗೆ (ಕಾಂಗ್ರೆಸ್) ... ವೋಟುಗಳೂ ಬಂದುವು.

ಶ್ರೀ ಎಂ. ಸಿ. ರಾಜಾರವರ ನಿಧನ

ಅಖಿಲ ಭಾರತ ದಲಿತ ವರ್ಗದ ಅಧ್ಯಕ್ಷರಾದ ದಿವಾನ್ ಬಹದ್ದೂರ್ ಎಂ. ಸಿ. ರಾಜಾರವರು ಮೊನ್ನೆ ರಾತ್ರಿ ಮದರಾಸಿನಲ್ಲಿ ನಿಧನರಾದರು. ಇವರಿಗೆ ೬೦ ವರ್ಷ ವಯಸ್ಸಾಗಿತ್ತು. ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಪೂರ್ವ ಭಾವಿಯಾಗಿ ಇವರು ಸಚಿವರಾಗಿದ್ದರು.

ಹೊಟ್ಟೆಗಿಲ್ಲದೆ ಹುಡುಗ ನಾಯಿಯ ಜಗಳ

ಬಂಗಾಳ ಜಿಲ್ಲೆಯ ಕೃಷ್ಣಾನಗರದಲ್ಲಿ ಹೊಟ್ಟೆಗಿಲ್ಲದೆ ಒಬ್ಬ ಹುಡುಗನಿಗೂ, ಒಂದು ನಾಯಿಗೂ ರಸ್ತೆಯಲ್ಲಿ ಬಿದ್ದ ಅನ್ನಕ್ಕೋಸ್ಕರ ಜಗಳವಾಗಿ ಆ ಹುಡುಗನನ್ನು ನಾಯಿ ಬಹಳವಾಗಿ ಕಡಿದು, ಅದರ ಗಾಯವು ನಾಗಿ ಆಸ್ಪತ್ರೆಗೆ ಸಾಗಿಸಲಾಯಿತೆಂದು ಹೇಳಲಾಗಿದೆ.

ಸಾಲನೋನಾಕ್ಕೆ ಗಂಡಾಂತರ

ನ್ಯೂಗಿನಿಯಲ್ಲಿರುವ ಸಾಲಮೋವಾಕ್ಕೆ ಗಂಡಾಂತರ ಒದಗಿದೆಯೆಂದು ಆಸ್ಟ್ರೇಲಿಯಾ ಜಂಗಲ್ ಸೈನ್ಯವು ಜಪಾನರನ್ನು ಹಿಂದಕ್ಕೆ ಓಡಿಸಿ ಸಾಲಮೋವಾ ವಿಮಾನ ನಿಲ್ದಾಣದ ಹತ್ತಿರವಿರುವ ಮುಖ್ಯ ಸ್ಥಾನವೊಂದನ್ನು ಆಕ್ರಮಿಸಿದೆಯೆಂದು ವರದಿಯಾಗಿದೆ.

ಒರಿಸ್ಸಾದಲ್ಲೂ ಆಹಾರ ಕ್ಷಾಮ

ಒರಿಸ್ಸಾ ಪ್ರಾಂತ್ಯದಲ್ಲಿ ಆಹಾರ ಪದಾರ್ಥಗಳ ಅಭಾವ ಹೆಚ್ಚಾಗಿ, ಕ್ಷಾಮ ಬರಬಹುದೆಂಬ ಶಂಕೆಯಾಗಿದೆ ಎಂದು ಸರ್ಕಾರದ ಪ್ರಕಟನೆ ತಿಳಿಸುತ್ತದೆ. ಸರ್ಕಾರದವರು ಉಚಿತ ಭೋಜನ ಶಾಲೆಯನ್ನು ತೆರೆಯಲು ನಿರ್ಧರಿಸಿದ್ದಾರೆ.

ಕಮ್ಯುನಿಸ್ಟ್ ಪತ್ರಿಕೆ ಮೇಲೆ ಶೋಧನೆ

ಬೊಂಬಾಯಿನಲ್ಲಿ ಕಮ್ಯುನಿಸ್ಟ್ ಪಾರ್ಟಿಯವರಿಂದ ಪ್ರಕಟವಾಗುತ್ತಿದ್ದ "ಪೀಪಲ್ಸ್ ವಾರ್" ಎಂಬ ಪತ್ರಿಕೆ ಮೇಲೂ ಮತ್ತು ಅದರ ಮುದ್ರಣಾಲಯದ ಮೇಲೂ ಸರ್ಕಾರದವರು ನೋಟೀಸ್ ಜಾರಿಮಾಡಿ ಸಲ ೧೦,೦೦೦ ರೂ. ಠೇವಣಿಯನ್ನು ಕೊಡಬೇಕೆಂದು ಕೇಳಿದ್ದಾರೆ.

ಬಂಗಾಳದಲ್ಲಿ ಬಂದಿಗಳ ಬಿಡುಗಡೆ

ಬಂಗಾಳದ ನೂತನ ಮಂತ್ರಿ ಮಂಡಲ ಅಧಿಕಾರ ವಹಿಸಿಕೊಂಡ ಬಳಿಕ ಇದುವರೆಗೆ ೧೫೦ ಮಂದಿ ರಾಜಕೀಯ ಬಂದಿಗಳು ಬಿಡುಗಡೆ ಹೊಂದಿದ್ದಾರೆ.

ಪತ್ರಿಕೋದ್ಯೋಗಿಗಳ ಸಮ್ಮೇಳನ

ಬೆಂಗಳೂರು ೨೪

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಸ್ವಾಗತ ಸಮಿತಿ [illegible] ಶ್ರೀ ಎಂ. ಜಿ. ಡಿ. [illegible] ಈ ರೀತಿ ಒರೆದಿದ್ದಾರೆ:-

[illegible] ಸೆಪ್ಟೆಂಬರ್ [illegible] ನೇ ತಾರೀಖು [illegible] ವರೆಗೆ [illegible] ಸೆಪ್ಟೆಂಬರ್ ೫ ನೇ ತಾರೀಖು [illegible] ಸೆಪ್ಟೆಂಬರ್ ೧೦ ನೇ [illegible]

ಸಮ್ಮೇಳನದಲ್ಲಿ ಚರ್ಚಿಸಲ್ಪಡುವ ವಿಷಯಗಳನ್ನು ಸೆಪ್ಟೆಂಬರ್ ೧೫ ನೇ ತಾರೀಖಿನೊಳಗೆ ಕಳುಹಿಸಬೇಕು.

ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರು

ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಶ್ರೀ ಕೆ. ರಂಗಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ ೧೮ ಮತ್ತು ೧೯ ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ದ್ವಿತೀಯ ಸಮ್ಮೇಳನಾಧ್ಯಕ್ಷತೆಗೆ "ವಿಶ್ವಕರ್ಣಾಟಕ" ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ಟಿ. ಶರ್ಮರವರ ಹೆಸರನ್ನು ಸೂಚಿಸಿದೆ.

ಪತ್ರಿಕೋದ್ಯೋಗಿಗಳ ಸಂಘಕ್ಕೆ ದಾನ

ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ ಕೆ. ರಂಗಯ್ಯಂಗಾರ್ಯರು ಸಂಘಕ್ಕೆ ೫೦ ರೂ. ಗಳನ್ನು ಉದಾರ ದಾನ ಮಾಡಿದ್ದಾರೆ.

ತಾಯಿ ಮಕ್ಕಳ ಆತ್ಮಹತ್ಯೆ

ಬೆಂಗಳೂರು ೨೪

[illegible] ಲಕ್ಷಮ್ಮ ಎಂಬ ೧೯ ವರ್ಷದ ಯುವತಿಯು ತನ್ನ ಇಬ್ಬರು ಗಂಡು ಮಕ್ಕಳೊಡನೆ ಈ ದಿನ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು.

ಜೈಲಿನಲ್ಲಿ ಮರಣ

ಸೆಂಟ್ರಲ್ ಜೈಲಿನಲ್ಲಿ ಅಂಡರ್ ಟ್ರಯಲ್ ಖೈದಿಯಾಗಿದ್ದ [illegible] ಎಂಬವರು ಹೃದಯ [illegible] ನಿಂದ ಮೃತಪಟ್ಟರೆಂದು ವರದಿಯಾಗಿದೆ.

ಧಾನ್ಯಗಳ ದಾಸ್ತಾನು

ಸರ್ಕಾರದವರು ದಾಸ್ತಾನು ಬಗ್ಗೆ [illegible] ಹೊರಡಿಸಿದ ಆಜ್ಞೆ ಪ್ರಕಾರ ೧೪ ಪಲ್ಲ ಭತ್ತ ಅಥವಾ ೭ ಪಲ್ಲ ಅಕ್ಕಿ, ೧೦ ಪಲ್ಲ ರಾಗಿ ಮತ್ತು ೧೦ ಪಲ್ಲ ಜೋಳ ಇವಕ್ಕಿಂತ ಜಾಸ್ತಿ ಇಟ್ಟುಕೊಂಡಿರಕೂಡದೆಂದು [illegible] ಇವು [illegible] ಇಟ್ಟುಕೊಳ್ಳಬಹುದೆಂದು ತಿಳಿಸಲಾಗಿದೆ.

ದಾನ

[illegible] ಶ್ರೀ ಎಂ. [illegible] ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗೆ ೧ ಸಾವಿರ ರೂ. ಉದಾರದಾನ ಮಾಡಿದ್ದಾರೆ.

ಆ ಕಾ ಶ ವಾ ಣಿ

ಆಗಸ್ಟ್ ೨೫ ನೇ ಬುಧವಾರ

..೮-೩೦ ವೀಣಾವಾದನ : ಆಸ್ಥಾನ ವೀಣಾ ವಿದ್ವಾನ್ ಆರ್. ಎಸ್. ಕೇಶವ ಮೂರ್ತಿ.

೨೬ ನೇ ಗುರುವಾರ

...೮-೩೦ ಹಾಡುಗಾರಿಕೆ : ವಿದ್ವಾನ್ ಎ. ಸುಬ್ಬರಾವ್.

Edited, printed and published by A. R. Nagarajan, at the Sadhvi Press, D. Subbiah Road, Mysore.

ಜರ್ಮನಿಯಲ್ಲಿ ಫ್ಯಾಸಿಸ್ಟ್ ಪುನರ್ವ್ಯವಸ್ಥೆ

ಇಟಲಿಯ ಫ್ಯಾಸಿಸ್ಟರನ್ನೂ ಮತ್ತು [illegible] ಜರ್ಮನಿಯಲ್ಲಿ ಪುನರ್ವ್ಯವಸ್ಥೆಗೊಳಿಸಲಾಗುತ್ತಿದೆಯೆಂದು, ಇವರನ್ನು ಸಂಘಟಿಸಿ, ತಕ್ಕ ಪ್ರಕಾರ ನಡೆಸಬೇಕೆಂದು ಬಡೊಗ್ಲಿಯೊ ಸರ್ಕಾರಕ್ಕೆ [illegible] ಎಂದು [illegible] ತಿಳಿಸುತ್ತದೆ.

ಸಗುನಾ ದ್ವೀಪದಲ್ಲಿ ಮಿತ್ರ ಸೈನ್ಯ

ಕಿಸ್ಕಾಕ್ಕೆ ಪೂರ್ವದ ೬೦ ಮೈಲಿ ದೂರದಲ್ಲಿರುವ ಸಗುನಾ ದ್ವೀಪದಲ್ಲಿ ಅಮೇರಿಕ ಮತ್ತು ಕೆನಡಿಯನ್ ಸೈನಿಕರು ಬಂದಿಳಿದಿದ್ದಾರೆಂದು ವರದಿಯಾಗಿದೆ.

ಖಾರ್ಕೋವ್ ಪತನ

ಖಾರ್ಕೋವ್ ನಗರ ತಮ್ಮ ಕೈವಶವಾಯಿತೆಂದು ಮಾರ್ಷಲ್ ಸ್ಟಾಲಿನ್‌ರವರು ತಿಳಿಸಿದ್ದಾರೆ. ಆ ನಗರದಲ್ಲಿ ಸೈನ್ಯೋಪಯೋಗಿ [illegible] ಗಳನ್ನೆಲ್ಲಾ ಜರ್ಮನರು [illegible] ರೆಂದು ಹೇಳಲಾಗಿದೆ.

[illegible] ಗ್ರಾಡ್‌ಗೆ ನೈರುತ್ಯ ಭಾಗದ [illegible] ಪ್ರದೇಶದಲ್ಲಿ ರಷ್ಯನರು [illegible] ಹಳ್ಳಿಗಳನ್ನು ಹಿಡಿದುಕೊಂಡು, ೨೫ ಮೈಲಿ ಮುಂದೆನುಗ್ಗಿದ್ದಾರೆ.

ಖಾರ್ಕೋವ್ ನಗರದಿಂದ ಜರ್ಮನ್ ಸೈನ್ಯ [illegible] ಕಡೆ ಓಡುತ್ತಿದೆಯೆಂದೂ, ಅವನ್ನು ರಷ್ಯನರು ಹಿಂಬಾಲಿಸುತ್ತಿರುವರೆಂದೂ ಹೇಳಲಾಗಿದೆ.

ಹ್ಯಾಂಕೋವ್ ಮೇಲೆ ಉಗ್ರಧಾಳಿ

ಜಪಾನ್ ವಶವಾಗಿರುವ [illegible] ಹ್ಯಾಂಕೋವ್ ಮೇಲೆ ಅಮೆರಿಕ ವಿಮಾನಗಳು ಧಾಳಿಮಾಡಿದುದರ ಪರಿಣಾಮವಾಗಿ ಅಪಾರ ನಷ್ಟವುಂಟಾಗಿದೆ. [illegible] ಜಪಾನ್ ವಿಮಾನಗಳನ್ನು ಹೊಡೆದುರುಳಿಸಲಾಯಿತು. ಅನೇಕ ಜ್ವಾಲೆಗಳುಂಟಾಗಿರುವುದಾಗಿ ವರದಿಯಾಗಿದೆ.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಮೈಸೂರು.

ಕೃ.ರಾ. ಮಿ. ಕೋರಾ ಡ್ರಿಲ್	0	10	0
ಲ್ಯಾಲಿ ಬ್ರದರ್ಸ್ ,, ,,	0	13	0
ಥಿಕ್ ವೈಟ್ ಡ್ರಿಲ್	1	0	0
ಡಬ್ಬಲ್ ಸ್ಪೆಶಲ್ ಲಾಂಗ್‌ಕ್ಲಾತ್	0	8	0
ಮಿನರ್ವಾ ಮಿಲ್ ,,	0	9	0
ಜೇಬಿ ನಂ. 36 ,,	0	11	6
ಕೋರಾ 44 ವೈಡ್ ,,	0	11	0
ನಂ 3640 ,,	0	7	6
ಲಾಂಗ್‌ಕ್ಲಾತ್ ಮಾಫ್‌ಆರಂ	1	9	0
ಸ್ಪೋರ್ಟ್ಸ್ ,,	2	0	0
ಸ್ಪೋರ್ಟ್ಸ್ ಷರ್ಟಿಂಗ್ ೧ ನೇ ದರ್ಜೆ	0	14	0
,, ೨ ನೇ ದರ್ಜೆ	0	12	0
ಮಿಲ್ ಷರ್ಟಿಂಗ್	0	12	0
ಸ್ಟೈಟ್ ಸೂಟ್ ಕ್ಲಾತ್	0	14	0
ಕಾಟನ್ ರಗ್	3	8	0
ಇಟಾಲಿಯನ್ ಲೈನಿಂಗ್ 48 ವೈಡ್	1	8	0
ಇಂಡಿಯನ್ ಟೆಕ್ಸ್‌ಟೈಲ್ಸ್ ಟ್ವಿಲ್ ಪ್ರಿಂಟ್	1	6	0
ಚೆಂಟ್ ಫಾಸ್ಟ್ ಕಲರ್	0	11	0
,, ಅಫಾಸ್ಟ್ ,,	0	8	0
ವಾಯಿಲ್ 45" ವೈಡ್	1	0	0
ಚೆಕ್ಸ್ ಶರ್ಟಿಂಗ್	0	6	0
ಬಾಯ್ಸ್ ಪ್ಯೂರ್ ಉಲ್ ಸ್ವೆಟರ್ಸ್	2	0	0
ಕೋರಾ ಮಲ್ 50" ವೈಡ್	0	9	0
ಇಂಡಿಯನ್ ಗ್ಲಾಸ್ಗೋ ಮಲ್	1	0	0
ಸೂರತ್ ಕೋಟಿಂಗ್	1	4	0
ಗ್ರೇ ಕೋಟಿಂಗ್ ಸ್ಟ್ರೈಪ್ಸ್	0	11	0
ಕೃ.ರಾ.ಮಿ. ಧೋತಿ 2×8,	5	12	0
ರಾಜಾ ,, ನಂ 28 ,, ,,	6	13	0
ಫೆನ್ಸಿ ಟ್ರೈಪ್ ,, ,,	8	0	0
ಕ್ಯಾಲಿಕೊ ಮಿಲ್ಸ್ ,, ,,	8	12	0
ಮಾರ್ಸರೈಸ್ಡ್ ,, ,,	9	0	0
ಕೃ.ರಾ.ಮಿ. ಹಾಲೆಂಡ್ 36 ವೈಡ್	0	10	0
ಸುಪೀರಿಯರ್ ಬಾಂಬೆ ಮ್ಯಾಟ	0	14	0

ಈಗ ಆಗುತ್ತಿರುವ ಬಟ್ಟೆಗಳ ಪರಿಕರಗಳಲ್ಲಿ ಗೌರಿ ಹಬ್ಬಕ್ಕೆ

ಬಟ್ಟೆಗಳನ್ನು [illegible]

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

[illegible] (ರೆಡಿಮೇಡ್ ಡ್ರೆಸ್) [illegible] ಟಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, [illegible] ರೋಡ್, ಮೈಸೂರು [illegible] ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ

ಶ್ರೀ ಚಾಮುಂಡೇಶ್ವರಿ [illegible] ಗಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಪಿಸ್ಲೀ ಬ್ರಾಂಡ್ ಕಾಫಿಪುಡಿ

[illegible]

[illegible] ಎಂ. ಜಿ. ರೋಡ್, ದೇವರಾಜ ಮಾರ್ಕೆಟ್, ಮೈಸೂರು

[illegible]

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯೂ ಹೊಳಪಾಗುವುದಲ್ಲದೆ ಅದರ ಬೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಯೊಳಗಿನ ಕೊಳೆಯನ್ನೆಲ್ಲಾ ತೆಗೆದುಹಾಕುವುದು. ಅದರ ಮೃದುತನವೂ ಗುಣವೂ, ಸುಗಂಧವೂ ಚಿತ್ತಾಕರ್ಷಣೀಯವಾದುದು.

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨]   ಗುರುವಾರ ೨೬—೮—೪೩   [ಸಂಚಿಕೆ [illegible]

ಜಪಾನ್ ಮೇಲೆ ಮುತ್ತಿಗೆ?

ಫ್ರಾಂಟಿಯರ್ ಮಂತ್ರಿ ಮಂಡಳ ಶಾಸನ ವಿರುದ್ಧವಾದುದು
ಕ್ರಿಪ್ಸರು ಕಾಂ|| ನಾಯಕರಿಗೆ ಪುನಃ ಭೇಟಿ ಕೊಡಲು ಸಲಹೆ

ರಷ್ಯಾದೊಡನೆ ಸಂಧಿಗೆ ಫಿನ್ಲೆಂಡಿನ ಷರತ್ತುಗಳು

ಫಿನ್ಲೆಂಡ್ ರಷ್ಯಾದೊಡನೆ ಕರಾರು ಮಾಡಿಕೊಳ್ಳಲು ಸಿದ್ಧವಾಗಿದೆಯೆಂದೂ, ಈಗ ಫಿನ್ಲೆಂಡಿನ ಕಾರ್ಮಿಕ ಸಂಘದ ಅಧ್ಯಕ್ಷರು ಸ್ಟಾಕ್‌ಹೋಂಗೆ ಬಂದು ಅಲ್ಲಿ ಬ್ರಿಟಿಷ್ ಕಾರ್ಮಿಕ ಸಂಘದ ಜನರಲ್ ಸೆಕ್ರೆಟರಿ ಮಿ|| ಡೀಕೇರವರಲ್ಲಿ ವ್ಯವಹಾರ ನಡೆಸುತ್ತಿರುವರೆಂದು ಹೇಳಲಾಗಿದೆ. ಈ ಕೆಳಗೆ ಕಂಡ ಷರತ್ತುಗಳನ್ನು ಫಿನ್ಲೆಂಡ್ ಸೂಚಿಸಿದೆ—

ಕರೇಲಿಯಾ ಪ್ರದೇಶದಲ್ಲಿ ವೀಬರ್ಗ್ ಹೊರತು ಉಳಿದ ಪ್ರದೇಶವನ್ನು ರಷ್ಯಾಕ್ಕೆ ಕೊಡಲಾಗುವುದು. ಫಿನ್ನಿಷ್ ಸ್ವಾತಂತ್ರ್ಯದ ಬಗ್ಗೆ ರಷ್ಯಾ ಭರವಸೆ ಕೊಡಬೇಕು. ಕಲ್ಲಿದ್ದಲು, ಆಹಾರ ವಸ್ತು ಎಣ್ಣೆ ಒದಗಿಸಲು ಮಿತ್ರರಾಷ್ಟ್ರಗಳು ವಾಗ್ದಾನ ಮಾಡಬೇಕು. ಫಿನ್ಲೆಂಡಿನಲ್ಲಿರುವ ಜರ್ಮನ್ ಸೇನೆಯನ್ನು ಓಡಿಸುವ ಕಾರ್ಯದಲ್ಲಿ ಫಿನ್ಲೆಂಡು ಸಹಕರಿಸುವುದಿಲ್ಲ. ಫಿನ್ಲೆಂಡಿನ ಭವಿಷ್ಯ ಅಟ್ಲಾಂಟಿಕ್ ಘೋಷಣೆಗೆ ಅನುಸಾರವಾಗಿ ನಿರ್ಧರಿಸುವಂತೆ ಮಿತ್ರಪಕ್ಷಗಳು ಭರವಸೆ ಕೊಡಬೇಕು.

ಇಟಲಿಗೆ ಮಿತ್ರರ ಎಚ್ಚರಿಕೆ

ಇಟಲಿಯ ನೌಕಾ ಪಡೆ ಜರ್ಮನರ ಸ್ವಾಧೀನವಾದಲ್ಲಿ ಅವರು ಯುದ್ಧವನ್ನು ಮುಂದುವರಿಸಿ ನಿಮಗೆ ಹಾನಿಯನ್ನುಂಟು ಮಾಡುವರು. ಎಲ್ಲಾ ರೀತಿಯಲ್ಲೂ ಜರ್ಮನರಿಗೆ ತೊಂದರೆಗಳನ್ನು ಕೊಟ್ಟು ಅವರ ಯತ್ನಗಳನ್ನು ಭಂಗಪಡಿಸಬೇಕು. ಯುದ್ಧಾನಂತರದ ಆವಶ್ಯಕತೆಗೆ ನೌಕೆಗಳು ಇರಬೇಕು. ಆದ್ದರಿಂದ ನೀವು ಅವುಗಳನ್ನು ರಕ್ಷಿಸಿಕೊಳ್ಳಿ ಎಂಬುದಾಗಿ ಅಲ್ಜಿಯರ್ಸ್ ರೇಡಿಯೋ ಮೂಲಕ ಎಚ್ಚರಿಕೆ ಕೊಟ್ಟಿದೆ.

ಕ್ವಿಬೆಕ್ ಸಮ್ಮೇಳನ ಮುಕ್ತಾಯ

ಕೆಬೆಕ್ಕಿನಲ್ಲಿ ನಡೆದ ಇಂಗ್ಲೆಂಡ್-ಅಮೆರಿಕ ಸಮ್ಮೇಳನವು ಮುಕ್ತಾಯವಾಯಿತು. ಸಮ್ಮೇಳನಾಂತ್ಯದಲ್ಲಿ ಚರ್ಚಿಲ್-ರೂಸ್ವೆಲ್ಟ್ ಒಂದು ಜಂಟಿಹೇಳಿಕೆಯನ್ನಿತ್ತಿದ್ದಾರೆ. ಸೈನ್ಯ ಬಲ, ನೌಕಾ ಬಲ ಮತ್ತು ಭೂ[illegible] ಕೈಗೊಳ್ಳಬೇಕಾಗಿರುವ ಮುಂದಿನ ಕಾರ್ಯಕ್ರಮಗಳನ್ನು ಗೊತ್ತುಮಾಡಲಾಗಿದೆಯೆಂದು ಈ ಹೇಳಿಕೆಯಲ್ಲಿ ಸೂಚಿಸಿದೆ. ಈ ಸಮ್ಮೇಳನದಲ್ಲಿ ಪ್ರಧಾನವಾಗಿ ಜಪಾನಿನ ಯುದ್ಧವೂ ಚರ್ಚೆಗೆ ಬಂದಿತೆಂದು ಲಂಡನ್ ಟೈಮ್ಸ್ ಪತ್ರಿಕೆಯು ಅಗ್ರಲೇಖನ ಬರೆದಿದೆ ಮತ್ತು ಚೀಣಕ್ಕೆ ಸಹಾಯ ಒದಗಿಸಬೇಕೆಂಬ ಬಯಕೆ ಎಲ್ಲೆಲ್ಲೂ ಇದೆಯೆಂದು ಸೂಚಿಸಿದೆ. ಆಕ್ರಮಿತ ಪ್ರದೇಶಗಳಲ್ಲಿ ಎಂತಹ ಪ್ರಭುತ್ವ ಸ್ಥಾಪನೆಯಾಗಬೇಕು ಮತ್ತು ರಷ್ಯಾದೊಡನೆ ಎಂತಹ ಬಾಂಧವ್ಯವನ್ನು ಇಟ್ಟುಕೊಂಡಿರಬೇಕು ಎಂಬ ವಿಷಯಗಳು ಸಮ್ಮೇಳನದಲ್ಲಿ ಚರ್ಚೆಗೆ ಬಂದಿರಬಹುದು.

ಸ್ಪೈನಿನ ಆಡಳಿತ ಕೆಡುವ ಸೂಚನೆ

[illegible] ಸ್ಥಿತಿ ಕೆಡ[illegible] ನೋಡಿಕೊಳ್ಳಲು, ಜನರಲ್ [illegible] ಜನರಲ್ [illegible] ಪ್ರಾಂತ್ಯ [illegible] ಸೇನಾ [illegible] ಕೆಲವು [illegible] ಮಾಡಲಾಯಿತು.

ಹಸಿವಿನ ಸಮಸ್ಯೆಯು ಉಗ್ರವಾಗುತ್ತಿದೆ

ಕಲ್ಕತ್ತ ನಗರದಲ್ಲಿ ಹಸಿವಿನ ಸಮಸ್ಯೆ ಉಗ್ರ ಪರಿಸ್ಥಿತಿಗೇರುತ್ತಿದೆ. ಹೊಟ್ಟೆಗಿಲ್ಲದೆ ಬೀದಿಗಳಲ್ಲಿ ಜನಗಳು ಬೀಳುತ್ತಿದ್ದಾರೆ. ಒಂದೇ ದಿವಸದಲ್ಲಿ [illegible] ಹಸಿವಿನಿಂದ ನಿಶ್ಶಕ್ತರಾದ ೬೦ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತು. ೧೨ ಮಂದಿ ಆಸ್ಪತ್ರೆಯಲ್ಲಿ ಪ್ರಾಣಬಿಟ್ಟರು. ೧೧ ಮಂದಿಯನ್ನು ಆಸ್ಪತ್ರೆಯಿಂದ ಬಿಡುಗಡೆಮಾಡಲಾಯಿತು. ಬೀದಿಯಲ್ಲಿ ಸತ್ತುಬಿದ್ದ ೧೨ ಶವಗಳನ್ನು ಸಂಸ್ಕಾರಮಾಡಲಾಯಿತೆಂದು ನೆನ್ನೆಯ ದಿನದ ವರದಿ ತಿಳಿಸುತ್ತದೆ.

ಶ್ರೇಷ್ಠ ನ್ಯಾಯಸ್ಥಾನದ ತೀರ್ಮಾನಕ್ಕೆ ಮನ್ನಣೆಯಿಲ್ಲ

ಹೆಬಿಯಸ್ ಕಾರ್ಪಸ್ ಅರ್ಜಿ [illegible] ಶ್ರೀ ಸದಾಶಿವ್ ಭಾಸ್ಕರ [illegible] ಮತ್ತು ಗೋವಿಂದಲಾಲ್ [illegible] ಬೊಂಬಾಯಿ ನ್ಯಾಯಾಧೀಶರು ತೀರ್ಮಾನಿಸಿ ಬಿಡುಗಡೆಮಾಡಿದ್ದರು. ನ್ಯಾಯಸ್ಥಾನವನ್ನು ಬಿಟ್ಟು, ಹೊರಗೆ ಪ್ರವೇಶಿಸುತ್ತಿದ್ದ ತಕ್ಷಣವೇ ಸಿ. ಐ. ಡಿ. ಇನ್ಸ್‌ಪೆಕ್ಟರ್ ಎಸ್. [illegible]ರವರು ಪುನಃ ಅವರನ್ನು ದಸ್ತಗಿರಿ ಮಾಡಿದರು. ಈ ರೀತಿ ಪೋಲೀಸರು ನ್ಯಾಯಸ್ಥಾನಕ್ಕೆ ಅವಮಾನ ಮಾಡಿರುವುದರಿಂದ ಅವರ ಮೇಲೆ ಕ್ರಮ ಜರುಗಿಸಬೇಕೆಂದು ಈ ಇಬ್ಬರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಬೊಂಬಾಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಮತ್ತು ಸಹಾಯಕ ನ್ಯಾಯಾಧೀಶರುಗಳ [illegible] ಮುಂದೆ ಅರ್ಜಿಯನ್ನು ಸಲ್ಲಿಸಿರುವುದಾಗಿ ವರದಿಯಾಗಿದೆ.

ಆಹಾರ ದಿನಸಿ ಬೆಲೆ ಹತೋಟಿ

ಆಹಾರ ದಿನಸಿಗಳ ಬೆಲೆ ಹತೋಟಿ ಆಜ್ಞೆಯೊಂದನ್ನು ಬಂಗಾಳ ಸರ್ಕಾರದವರು ಜಾರಿಗೆ ತಂದಿದ್ದಾರೆ. ಆ ಮೂಲಕ [illegible]ಯಲ್ಲೆಲ್ಲಾ ಅಕ್ಕಿ ಮತ್ತು ಭತ್ತದ ಬೆಲೆಯನ್ನು ನಿಗದಿ ಮಾಡಿ, ಅದರ ಬೆಲೆಗೆ [illegible] ಹೆಚ್ಚು ಅಕ್ಕಿ ಭತ್ತ ಇದ್ದವನ್ನು ಕೊಂಡು ಮಾರಬಹುದೆಂದೂ, ಆದರೆ [illegible] ತಿಳಿಸಿದ್ದಾರೆ. ಈ ಆಜ್ಞೆ [illegible] ಒಂದು ವರ್ಷ ಶಿಕ್ಷೆ [illegible] ಜುಲ್ಮಾನೆ [illegible] ಆಗಬಹುದು.

ಫಜಲುಲ್ ಹಕ್‌ರ ಮೇಲೆ ನ್ಯಾಯಾಧೀಶರ ಟೀಕೆ

ಬಂಗಾಳ ಜಿಲ್ಲೆ [illegible]ಪುರದ ಪೋಲೀಸ್ [illegible] ಅವರಿಗೆ ಜಿಲ್ಲಾ ಸಬ್‌ಡಿವಿಷನಲ್ ಮ್ಯಾಜಿಸ್ಟ್ರೇಟ್ [illegible] ವಿಧಿಸಿದ್ದ ಶಿಕ್ಷೆ ಮತ್ತು ೨೦೦ ರೂ. ದಂಡವನ್ನು ವಿಧಿಸಿದ್ದನ್ನು ಕಲ್ಕತ್ತ ಹೈ ಕೋರ್ಟ್ ನ್ಯಾಯಾಧೀಶರು ರದ್ದುಗೊಳಿಸಿ ಅವರನ್ನು ಬಿಡುಗಡೆಮಾಡಿದರು. ಅವರೇ ಇದೇ ಸಂದರ್ಭದಲ್ಲಿ [illegible] ಯಾರನ್ನೇ ಆಗಲಿ ಅಪರಾಧಿಗಳೆಲ್ಲಾ ಬಂಧಿಸಿ ಪುನಃ ವಿಚಾರಣೆಗೆ [illegible] ನ್ಯಾಯಾಧೀಶರು ಆಜ್ಞೆಮಾಡಿದರು. ನ್ಯಾಯಾಧೀಶರು ಈ ನೋಟದಲ್ಲಿ [illegible] ಬಂಗಾಳದ ಮಾಜಿ ಪ್ರಧಾನಿಯಾಗಿದ್ದ ಮಿ|| ಫಜಲುಲ್ ಹಕ್‌ರವರು [illegible] ಮತ್ತು [illegible] ಮಂತ್ರಿ [illegible] ತಮಗೆ [illegible] ಇಲ್ಲವೆಂದು ಟೀಕಿಸಿ, ಶ್ರೀ ಫಜಲುಲ್ ಹಕ್‌ರ ಈ ನಡತೆಯನ್ನು ಖಂಡಿಸಿದರು. "ಕೋರ್ಟಿನಲ್ಲಿ ಸತ್ಯಹೇಳುವುದಾಗಿ ಪ್ರಮಾಣಮಾಡಿ ಅದಕ್ಕೆ ವ್ಯತಿರಿಕ್ತವಾಗಿ ವಿಷಯವನ್ನು ಹಿಡಿಸಲು ಕೋರ್ಟಿಗೆ ಬಂದಿದ್ದಾರೆ. ಆದರೆ ಮಹಾಪ್ರಧಾನರು ಅಧಿಕಾರ ಸ್ವೀಕಾರ ಮಾಡುವಾಗ ತೆಗೆದುಕೊಳ್ಳುವ ಪ್ರಮಾಣ ವಚನವನ್ನು ಮರೆತುದಕ್ಕೆ ಶಿಕ್ಷೆ ವಿಧಿಸಲು ಅವಕಾಶವೇ ಇಲ್ಲ. ಆದರೆ [illegible] ಸಾರ್ವಜನಿಕ ಜವಾಬ್ದಾರಿ ಹೊತ್ತ ಕೆಲಸವನ್ನು ನಿರ್ವಹಿಸಿ ಈ ರೀತಿ ವರ್ತಿಸುವುದು ಆ ಕೆಲಸಕ್ಕೆ ಅನರ್ಹರಾಗುವರು" ಎಂದು ನ್ಯಾಯಾಧೀಶರು ಟೀಕಿಸಿದ್ದಾರೆ.

ಪಿಸ್ತೂಲುಗಳನ್ನು ಎಸೆದು ಹಿಡಿದರು

ಬೊಂಬಾಯಿನ ಚಿತ್ರಮಂದಿರ ಸ್ಟುಡಿಯೋ ಒಂದರಲ್ಲಿ ೬ ಪಿಸ್ತೂಲುಗಳನ್ನು [illegible] ಸಿಕ್ಕಿದರು. [illegible] ಅವನ್ನು ಬಿಟ್ಟು ಸ್ಟುಡಿಯೋ [illegible] ಪೋಲೀಸಿನವರು ಎದುರು ಬರಲು, ಸ್ಟುಡಿಯೋದೊಳಗೆ [illegible] ಹಿಡಿದರೆಂದು ವರದಿಯಾಗಿದೆ.

ಕೋರ್ಸಿಕಾ ದ್ವೀಪವನ್ನು ಜರ್ಮನರು ಆಕ್ರಮಿಸಿದರು

ದೇಶಪ್ರ [illegible] ರಾಜಧಾನಿಯಾದ ಕೋರ್ಸಿಕಾ [illegible] ಆಕ್ರಮಿಸಿಕೊಂಡಿರುವರೆಂದು [illegible] ಜರ್ಮನ್ [illegible] ಆಗಿದೆ.

ಆಕಾಶವಾಣಿಯಲ್ಲಿ ಭಾಷಣ

ಮೈಸೂರು ೨೬

ರಾವ್ ಬಹದ್ದೂರ್ ಎಂ. [illegible] ಆಕಾಶವಾಣಿಯಿಂದ [illegible] ಒಂದು [illegible] ಭಾಷಣಮಾಡುವರು.

ಕಳ್ಳನ ದಸ್ತಗಿರಿ

ಟೌನ್‌ಹಾಲಿನ ಗಡಿಯಾರ ಅಂಗಡಿಯಿಂದ ಕೆಲವು ಸಾಮಾನುಗಳನ್ನು ಕದ್ದಿದ್ದ ವೆಂಕಟೇಶ ಎಂಬುವವನನ್ನು ಪೋಲೀಸ್ [illegible] ದಸ್ತಗಿರಿ ಮಾಡಿದ್ದಾರೆ.

ಅಮೇರಿಕಾ ಅಂಡರ್ ಸೆಕ್ರೆಟರಿ ರಾಜೀನಾಮೆಯೆ?

ಅಮೇರಿಕ ಸಂಯುಕ್ತ ಸಂಸ್ಥಾನದ ಅಂಡರ್ ಸೆಕ್ರೆಟರಿ ಮಿ|| ಸಮ್ನರ್ ವೆಲ್ಸ್‌ರವರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತಿರುವರೆಂದು "ಈವನಿಂಗ್ ಸ್ಟಾರ್" ಪತ್ರಿಕೆಯು ವರದಿಮಾಡಿದೆ.

ರಾಜಾಜಿ ಸಲಹೆ

ಭಾರತದ ಬಿಕ್ಕಟ್ಟನ್ನು ಬಗೆಹರಿಸಲು ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಪುನಃ ಕಾಂಗ್ರೆಸ್ ಅಧ್ಯಕ್ಷರನ್ನೂ ಮತ್ತು ನಾಯಕರನ್ನೂ ಭೇಟಿಮಾಡಿ ಒಂದು ಸಂಧಾನ [illegible] ಮಾಡಬೇಕೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರು [illegible] ಸ್ಯಾನ್ ಫ್ರಾನ್ಸಿಸ್ಕೋ ಪತ್ರಿಕೆಗೆ ತಿಳಿಸಿದ್ದಾರೆ.

ಗಾಂಧೀಜಿ ಹಸ್ತಪತ್ರಿಕೆಗೆ ಮುಟ್ಟುಗೋಲು

ಗಾಂಧೀಜಿಯವರು ಬರೆದ 'ಬ್ರಿಟನಿಗೆ ನನ್ನ ಮನವಿ' ಎಂಬ ಹಸ್ತಪತ್ರಿಕೆಯೊಂದನ್ನು ಮದ್ರಾಸ್ ಸರ್ಕಾರದವರು ಮುಟ್ಟುಗೋಲು ಹಾಕಿರುತ್ತಾರೆ.

ಫ್ರಾಂಟಿಯರ್ ಮಂತ್ರಿ ಮಂಡಲ ನ್ಯಾಯಬದ್ಧವಿಲ್ಲ

ಫ್ರಾಂಟಿಯರ್ ಸರ್ಕಾರದ ಮಂತ್ರಿಮಂಡಲವು ಶಾಸನಕ್ಕೆ ವಿರುದ್ಧವಾದುದೆಂದೂ, ಅದನ್ನು [illegible] ಅಲ್ಲಿನ ಕಾಂಗ್ರೆಸ್ ಪಾರ್ಟಿಯವರು ಫೆಡರಲ್ ಕೋರ್ಟಿನ ಮುಂದೆ ವಾದ ಹೂಡುವರೆಂದು ಹೇಳಲಾಗಿದೆ. ಇಂಡಿಯಾ ಆಕ್ಟ್ ಪ್ರಕಾರ [illegible] ಮಂತ್ರಿಮಂಡಲಕ್ಕೆ ನ್ಯಾಯವಿಧಾಯಕ ಸಭೆಯಲ್ಲಿ ಬಹುಮತ ಬೆಂಬಲವಿರಬೇಕೆಂದೂ, ಆದರೆ ಈಗಿನ ಮಂತ್ರಿ ಮಂಡಲಕ್ಕೆ ಬಹುಮತವಿಲ್ಲವೆಂದೂ ತಿಳಿಸಲಾಗಿದೆ.

ದೋನೆಟ್ಸ್ ಬೇಸಿನ್‌ನಲ್ಲಿ ಉಗ್ರ ಕದನ

ರಷ್ಯನರು ಟಾಗನ್‌ರೋಗ್‌ನಿಂದ [illegible] ಮತ್ತು ಖಾರ್ಕೋವ್ [illegible] ಬಂದ [illegible] ಕದನ [illegible] ರಷ್ಯನರು [illegible]

ದೋನೆಟ್ಸ್ ಬೇಸಿನ್‌ನಲ್ಲಿ [illegible]

ದೆಹ್ಲಿಗೆ ದಿವಾನರ ಪ್ರಯಾಣ

ಬೆಂಗಳೂರು ೨೫

ದಿವಾನರಾದ ಪ್ರಧಾನ ಶಿರೋಮಣಿ ಎಂ ಮಾಧವರಾಯರು ಈ ತಿಂಗಳ ೨೭ ನೇ ತಾ॥ ದೆಹ್ಲಿಗೆ ಪ್ರಯಾಣ ಮಾಡಿ, ಸೆಪ್ಟೆಂಬರ ತಿಂಗಳು ೮ ನೇ ತಾ॥ ವಾಪಸು ಬರುವರು

ಸಚಿವರ ಪ್ರವಾಸ

[illegible] ಸಚಿವರು [illegible] ಶ್ರೀ [illegible] ಪ್ರಯಾಣ ಬೆಳೆಸುವರು.

ಅರಣ್ಯಾಧಿಕಾರಿಗಳ ನಿವೃತ್ತಿ

ಮೈಸೂರು ಜಿಲ್ಲಾ ಅರಣ್ಯ [illegible] ಶ್ರೀ ಎಂ. ಪಿ. [illegible] ನಿವೃತ್ತರಾಗುವ [illegible] ರಜಾ ಕೊಡಲಾಗಿದೆ. [illegible] ಶ್ರೀ [illegible] ನೇಮಿಸಲಾಗಿದೆ

ಉಚಿತ ಸೂಲಗಿತ್ತಿ ಶಿಕ್ಷಣ

ಜಿಲ್ಲಾ ಆಸ್ಪತ್ರೆಗಳಲ್ಲಿ [illegible] ಸೂಲಗಿತ್ತಿಯರಿಗೆ [illegible] ಶಿಕ್ಷಣ ಕೊಡಬೇಕೆಂದು ಸರ್ಕಾರದ ಆಜ್ಞೆ ಆಗಿದೆ.

ಉದಾರ ದಾನ

[illegible] ಶ್ರೀ ನಾರಾಯಣರಾವ್ ಜಿ. [illegible] ಪಾಠಶಾಲೆ [illegible] ಸಾವಿರ ರೂ. ದಾನ ಮಾಡಿದ್ದಾರೆ.

ವಾಯ್‌ಸ್ರಾಯ್ ಸೆಕ್ರೆಟರಿಗಳ ಆಗಮನ

[illegible] ಬೆಂಗಳೂ ರಿಗೆ ಆಗಮಿಸಿದ್ದಾರೆ

ಸೈನಿಕರ ಕ್ಯಾಂಟೀನಿಗೆ ಸಹಾಯ

ಬೆಂಗಳೂರು ದಂಡು ಮತ್ತು ನಗರದಲ್ಲಿ ಮಿಲಿಟರಿ ಸೈನಿಕರಿಗೆ ಕ್ಯಾಂಟೀನ್ ವ್ಯವಸ್ಥೆಗಾಗಿ ಬಿನ್ನಿ ಗಿರಣಿ ಅಧಿಕಾರಿಗಳು ೫೦ ಸಾವಿರ ರೂ. ಗಳನ್ನು ಮೈಸೂರು ಸಂಗ್ರಾಮ ನಿಧಿಗೆ ಕೊಟ್ಟಿದ್ದಾರೆ.

ಸ್ಟ್ಯಾಂಡರ್ಡ್ ಬಟ್ಟೆ ಸರಬರಾಜು

ಇಂಡಿಯಾ ಸರ್ಕಾರದಿಂದ ೧೦೦ ಬೇಲ್ ಸ್ಟ್ಯಾಂಡರ್ಡ್ ಬಟ್ಟೆಯು ಸಂಸ್ಥಾನದ ಸರಬರಾಜು ಇಲಾಖೆಗೆ ಬಂದಿದೆಯೆಂದೂ, ಅದನ್ನು ಸರ್ಕಾರದ ಡಿಪೋಗಳಲ್ಲಿ ಜನಗಳಿಗೆ ಮಾರಾಟಮಾಡಲು ಸದ್ಯದಲ್ಲೇ ವ್ಯವಸ್ಥೆ ಮಾಡಲಾಗುವುದೆಂದೂ ಸಿವಿಲ್ ಸಪ್ಲೈ ಕಮೀಷನರು ತಿಳಿಸಿದ್ದಾರೆ.

ಬರ್ಲಿನ್ ಮೇಲೆ ಪ್ರಬಲ ಧಾಳಿ

ಬರ್ಲಿನ್ ನಗರದ ಮೇಲೆ ಬ್ರಿಟಿಷ್ ೭೦೦ ಬಾಂಬರುಗಳು ಒಂದೇ ಸಮನಾಗಿ ೫೦ ನಿಮಿಷ ಕಾಲ ಪ್ರಚಂಡ ಧಾಳಿ ನಡೆಸಿ, ೧೭೦೦ ಟನ್ ಬಾಂಬುಗಳನ್ನು ಸುರಿಸಿದವು. ಧಾಳಿ ಜ್ವಾಲೆ ಉರಿಯುತ್ತಾ, ೨೦೦ ಮೈಲಿ ದೂರ ಬೆಂಕಿ ಕಾಣುತ್ತಿದ್ದಿತು. ನಗರಕ್ಕೆ ಅಪಾರ ನಷ್ಟವುಂಟುಮಾಡಲಾಯಿತೆಂದೂ ೫೮ ಮಿತ್ರ ವಿಮಾನಗಳು ಪತ್ತೆಯಿಲ್ಲವೆಂದೂ ವರದಿಯಾಗಿದೆ.

ಶತ್ರುಗಳಿಗೆ ಅಪಾರ ನೌಕಾ ನಷ್ಟ

ಉತ್ತರ ಆಫ್ರಿಕಾ ಯುದ್ಧ ಪ್ರಾರಂಭಿಸಿದಂದಿನಿಂದ ಇದುವರೆಗೆ ಶತ್ರುಗಳ [illegible] ಸಾವಿರ ವಿಮಾನಗಳು ನಾಶವಾಗಿವೆ. ೧೮೫ ಸಾವಿರ ಟನ್ನುಗಳನ್ನು ತೂಕದ ಶತ್ರುವಿನ ೧೮೫ ಹಡಗುಗಳನ್ನು ಮಿತ್ರರು ಮುಳುಗಿಸಿದ್ದಾರೆ.

ವಿವಾಕ್ ಮೇಲೆ ಉಗ್ರಮುತ್ತಿಗೆ

ಮಿತ್ರ ವಿಮಾನಗಳು ನ್ಯೂಗಿನಿಯದಲ್ಲಿರುವ ವಿವಾಕ್ ಬಂದರಿನ ಮೇಲೆ ಅತ್ಯುಗ್ರವಾಗಿ ಮುತ್ತಿಗೆ ಹಾಕಿ ೧೧೨ ಟನ್ ಬಾಂಬುಗಳನ್ನು ಸುರಿಸಿದುವು. ಕಳೆದ ವಾರದಲ್ಲಿ ೨೮೫ ಶತ್ರು ವಿಮಾನಗಳನ್ನು ಈ ಪ್ರದೇಶದಲ್ಲಿ ನಾಶಮಾಡಲಾಯಿತು

ಪತ್ರ ವ್ಯವಹಾರ

ಕಳ್ಳಕಾಕರ ಹಾವಳಿ

ನಿನ್ನೇ ರಾತ್ರಿ ಸುಮಾರು ೩ ಗಂಟೆಯ ಹೊತ್ತಿನಲ್ಲಿ ಮೈಸೂರು ಶ್ರೀರಂಗಪಟ್ಟಣ ರಸ್ತೆ ಮಧ್ಯದಲ್ಲಿ ಕಳಸವಾಡಿ ಮತ್ತು ಚಿಕ್ಕಮುನಾಹಿನಿಗೆ ಮಧ್ಯೆ ಟೊಮ್ಯಾಟೊ ಅಗ್ರಹಾರವಟೀ ಕೆಲವು ಗಾಡಿಗಳು ಮೈಸೂರು ಕಡೆ ಬರುತ್ತಿದ್ದುವು. ಅದರ ಪೈಕಿ ಒಂದು ಗಾಡಿಯಲ್ಲಿ ಸ್ಕಾಟ್ ತೋಟದಿಂದ ಮೈಸೂರು ಅರಮನೆಗೆ ಕಲ್ಲುತೆಂಗಿನಕಾಯಿ ಬರುತ್ತಿತ್ತು. ಅದರಲ್ಲಿ ಮಲಗಿದ್ದ ಶ್ರೀ ಗಂಜಾಂ ಬೊಮ್ಮಯ್ಯ ಎಂಬುವರು ಒಂದು ರೇಷ್ಮೆ ವಸ್ತ್ರವನ್ನು ಹೊದ್ದು ಮಲಗಿದ್ದರು. ಆ ಸಮಯದಲ್ಲಿ ಕೆಲವು ಕಳ್ಳಕಾಕರು ಬಂದು ಮೇಲ್ಗಡೆಯಿಂದ ಬೊಮ್ಮಯ್ಯನವರು ಹೊದ್ದಿದ್ದ ವಸ್ತ್ರವನ್ನು ಬಲವಾಗಿ ಎಳೆದರು. ಈ ರಭಸಕ್ಕೆ ಬೊಮ್ಮಯ್ಯನವರು ಗಾಡಿಯಿಂದ ಕೆಳಕ್ಕೆ ಬಿದ್ದರೆಂದು ಹೇಳಲಾಗಿದೆ ಕಳ್ಳಕಾಕರನ್ನು ಕಲವು ದೂರ ಅಟ್ಟಿಸಿಕೊಂಡು ಹೋಗಲಾಗಿ ಏನೂ ಪ್ರಯೋಜನವಾಗಲಿಲ್ಲ. ಇಂತಹ ಹಾವಳಿಗಳು ಈ ಪ್ರಾಂತ್ಯದಲ್ಲಿ ಹಿಂದೆ ಅನೇಕವೇಳೆ ನಡೆದಿರುವುದಾಗಿ ವರದಿಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡುವರೆಂದು ನಂಬಲಾಗಿದೆ.

ಜಿ. ಜನಾರ್ಧನ ನಾಯ್ಡು.

ಮೈಸೂರು ಪೌರಸಭಾ ಚುನಾವಣೆ

ಮೈಸೂರು ನಗರದ ಮುನಿಸಿಪಲ್ ಚುನಾವಣೆಗೆ ಸಂಬಂಧಪಟ್ಟ ಮತದಾರರ ಪಟ್ಟಿಗಳನ್ನು ಪ್ರಕಟಿಸಿ ನಗರದ ಕೆಲವು ಭಾಗಗಳಲ್ಲಿ ತಮ್ಮ ಅವಗಾಹನೆ ಬಗ್ಗೆ ಇಟ್ಟಿರುತ್ತಾರೆ. ಈ ಪಟ್ಟಿಯಲ್ಲಿ ಮತ ಕೊಡುವ ಅರ್ಹತೆಯಿರುವ ಅನೇಕರ ಹೆಸರುಗಳು ಬಿಟ್ಟುಹೋಗಿರುತ್ತೆ. ಮತ್ತೆ ಕೆಲವರ ಹೆಸರುಗಳು ತಪ್ಪು ಬಿದ್ದಿರುತ್ತವೆ. ಈ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳಲು ೩೦-೮-೪೩ನೇ ತಾರೀಖೇ ಕೊನೆಯ ದಿವಸವಾಗಿರುತ್ತೆ. ಆದ್ದರಿಂದ ಪೌರಜನರು ಮತದಾರರ ಪಟ್ಟಿಗಳನ್ನು ಪರೀಕ್ಷಿಸಿ ಕೂಡಲೆ ಮುನಿಸಿಪಲ್ ಆಫೀಸಿಗೆ ಅರ್ಜಿ ಬರೆದುಕೊಳ್ಳಬೇಕೆಂದು ಮೈಸೂರು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಸೆಕ್ರೆಟರಿಗಳಾದ ಜಿ. ಜನಾರ್ಧನನಾಯ್ಡುರವರು ಕೋರುತ್ತಾರೆ.

Edited, printed and published by A. R. Nagarajan, at the Sadhvi Press, D Subbiah Road, Mysore.

೬೦ ಜಪಾನಿ ದೋಣಿಗಳು.

ಬುಧೇರಾಂಗಿನ್ಸ್ ಹಿಂದಾಪ್ ಗ್ರಾಮದಲ್ಲಿದ್ದ ಜಪಾನಿ ಸೈನಿಕರ ಮೇಲೂ ಮತ್ತು [illegible] ರ್ಮಾದ ಇತರ ಭಾಗಗಳ ಮೇಲೂ ಮಿತ್ರ ವಿಮಾನಗಳು ಧಾಳಿ ನಡೆಸಿ, ೬೦ ಶತ್ರು ಸರಬರಾಜು ದೋಣಿಗಳನ್ನೂ ಅನೇಕ ವಾಹನಗಳನ್ನೂ ನಾಶಪಡಿಸಿದುವು.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಮೈಸೂರು.

ಕ್ಯಾ. ಮಿ. ಕೋರಾ ಡ್ರಿಲ್	0	10	0
ಡ್ಯಾಲಿ ಬ್ರದರ್ಸ್ ,, ,,	0	13	0
ಧಿಕ್ ವೈಟ್ ಡ್ರಿಲ್	1	0	0
ಡಬ್ಲ್ ಸ್ಪೆಷಲ್ ಲಾಂಗ್‌ಕ್ಲಾತ್	0	8	0
ಮಿನರ್ವಾ ಮಿಲ್ ,,	0	9	0
ಟೇಬಿ ನಂ. 36 ,,	0	11	0
ಕೋರಾ 44 ವೈಡ್ ,,	0	11	0
ನಂ 3640 ,,	0	7	0
ಲಾಂಗ್‌ಕ್ಲಾತ್ ಹಾಫ್‌ಆರಂ	1	9	0
ಸ್ಪೋರ್ಟ್ಸ್ ,,	2	0	[illegible]
ಸ್ಪೋರ್ಟ್ಸ್ ಷರ್ಟಿಂಗ್			
೧ ನೇ ದರ್ಜೆ	0	14	[illegible]
,, ೨ ನೇ ದರ್ಜೆ	0	12	[illegible]
ಮಿಲ್ ಷರ್ಟಿಂಗ್	0	12	[illegible]
ವೈಟ್ ಸೂಟ್ ಕ್ಲಾತ್	0	14	[illegible]
ಕಾರ್ಪೆಟ್ ರಗ್	3	8	[illegible]
ಇಟಾಲಿಯನ್ ಲೈನಿಂಗ್ 48ವೈಡ್	1	8	[illegible]
ಇಂಡಿಯಾ ಟೆಕ್ಸ್‌ಟೈಲ್ಸ್ ಟ್ವಿಲ್ ಪ್ರಿಂಟ್	1	6	[illegible]
ಚಿಂಟ್ ಫಾಸ್ಟ್ ಕಲರ್	0	11	[illegible]
,, ಆಫ್‌ಫಾಸ್ಟ್ ,,	0	8	[illegible]
ವಾಯಿಲ್ 45" ವೈಡ್	1	0	[illegible]
ಚೆಕ್ಸ್ ಬಿನ್ನಿ ಷರ್ಟಿಂಗ್	0	6	[illegible]
ಬ್ಲೂ ಡ್ರಿಲ್ ಕ್ಯಾಲಿಕೋ ಬಿಲ್ ಸ್ಪೆಷಲ್ಸ್	2	0	[illegible]
ಕೋರಾ ಮಲ್ 50" ವೈಡ್	0	9	[illegible]
ಇಂಡಿಯಾ ಗ್ಲಾಸ್ಗೋ ಮಿಲ್	1	0	[illegible]
ಸೂರತ್ ಕೋಟಿಂಗ್	1	4	
ಗ್ರೇ ಕೋಟಿಂಗ್ ಸ್ಪೆಷಲ್	0	11	[illegible]
ಕ್ಯಾ. ಮಿ. ಧೋತಿ 2x8,	5	12	[illegible]
ರಾಜಾ ,, ನಂ 28 ,, ,,	6	13	[illegible]
ಫೈನ್ ಟೈಪ್ ,, ,,	8	0	[illegible]
ಕ್ಯಾಲಿಕೊ ಮಿಲ್ಸ್ ,, ,,	8	12	
ಮರ್ಸರೈಸ್ಡ್ ,, ,,	9	0	[illegible]
ಕ್ಯಾ. ಮಿ. ಪಾಪ್ಲಿನ್ 36ವೈಡ್	0	10	
ಸುಪೀರಿಯರ್ ಬಾಂಬೆ ಪ್ಯಾಟ	0	11	[illegible]

ಈಗ ಆಗುತ್ತಿರುವ ಬಟ್ಟೆಗಳ ವಿರಳತೆಗಳಲ್ಲಿ ಗೌರಿ ಹಬ್ಬಕ್ಕೆ ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಬನಾರಸ್ ಪಟ್ಟೆ ಎಲ್ಲ ಡಿಸೈನುಗಳಲ್ಲೂ ಹೊಸ ಮಾದರಿಯಲ್ಲಿ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

ಶ್ರೀ ಯುರ ಸೌ ಕರ್ಯ ಕ್ಕಾಗಿ

[illegible] ದಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

[illegible] ಫ್ರೆಂಡ್ಸ್ ಕಾಫಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಸಿದ್ಧವಾಗಿ ಸಂದ್ಯದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಅಕ್ಕಿ ಸದಾ ದೊರೆಯುತ್ತವೆ.

ಪ್ರತಿ ಶನಿವಾರ ಮತ್ತು ಭಾನುವಾರ 4 ಘಂಟೆಗೆ ಮ್ಯಾಟನಿ ಇರುತ್ತೆ

ನ್ಯೂ ಅಪೇರಾ ಟಾಕೀಸ್

೨೭—೮—೪೩ ರಿಂದ

ಟಿ. ಸೂರ್ಯಕುಮಾರಿ, ಎಂ. ಕೆ. ರಾಧ, ಅರಬ ಲಕ್ಷ್ಮೀದೇವಿ, ಕೆ. ಸ್ವಾ[illegible] ಮುಂತಾದವರು ಪಾತ್ರ ವಹಿಸಿರುವ

ಪ್ರೇಮ ಬಂಧನ

(ತಮಿಳು ಟಾಕಿ)

Morning shows at 10-45 a m.

FROM 27-8-43

Foreign Correspondent

ಸಂಪುಟ ೨] ಶುಕ್ರವಾರ ೨೭—೮—೪೩ [ಸಂಚಿಕೆ ೩೭

ನಾಜಿ-ಯೂರೋಪ್ ಆಕ್ರಮಣ ಹಂಚಿಕೆ

ಇಟಲಿ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆ ಸಂಭವ
ಜಪಾನ್ ಮುತ್ತಲು ಭಾರತವು ಮುಖ್ಯ ಸರಬರಾಜು ಕೇಂದ್ರ

ವಿಕ್ರಮ ಚಕ್ರವರ್ತಿ ಸ್ಮಾರಕೋತ್ಸವ

ಮೈಸೂರು ೨೬.

ರಾಜಧಾನಿಯ ಶರಣ ಹಿಂದೂ ಮಹಾಸಭೆಯವರು "ವಿಕ್ರಮ ಚಕ್ರವರ್ತಿಯ ಎರಡು ಸಹಸ್ರ ವರ್ಷಗಳ ಸ್ಮಾರಕೋತ್ಸವವನ್ನು ನಿನ್ನೆ ಸಂಜೆ ಈಡಿಗ ಬಡಾವಣೆಯಲ್ಲಿಯ 'ಆರ್ಯ ನಿವಾಸ'ದಲ್ಲಿ ಡಾ|| ಟಿ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ನಡೆಸಿದರು. ಹಿಂದೂ ಧರ್ಮದ ಉದ್ಧಾರಕ್ಕಾಗಿ ವಿಕ್ರಮ ಚಕ್ರವರ್ತಿಯು ಮಾಡಿದ ಕಾರ್ಯಗಳನ್ನು ಕುರಿತು ಅನೇಕರು ಭಾಷಣಮಾಡಿದರು. ಈ ಮಹಾ ಪುರುಷನ ಸ್ಮಾರಕೋತ್ಸವವನ್ನು ರಾಜಧಾನಿಯ ಸಮಸ್ತ ಹಿಂದೂಗಳೂ ಆಚರಿಸಬೇಕೆಂದು ಕೋರಲಾಯಿತು.

ಸಂವತ್ಸರೋತ್ಸವ

ನಂಜನಗೂಡು: ಶ್ರೀ ಶ್ರೀಕಂಠೇಶ್ವರ ಪ್ರೀತ ಸಭೆಯ ಆಶ್ರಯದಲ್ಲಿ ಸಂವತ್ಸರೋತ್ಸವವನ್ನು ನಾಳೆ ಮಧ್ಯಾಹ್ನ ೪-೩೦ ಗಂಟೆಗೆ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಸನ್ನಿಧಿಯಲ್ಲಿ ನೆರವೇರಿಸಲ್ಪಡುವುದು. ಶ್ರೀ ಕೆ ಗುರುದತ್ತರವರು ಅಧ್ಯಕ್ಷತೆವಹಿಸುವರು

ಚರ್ಚಾ ಕೂಟ

ಮೈಸೂರು ಸ್ವಸ್ತಿಕ ಸಾಹಿತ್ಯ ಸಂಘದವರು, ನಾಳೆ ಸಂಜೆ ೬ ಗಂಟೆಗೆ ಮಹಾರಾಜ ಕಾಲೇಜಿನ ಮುಂದಿರುವಲ್ಲಿ "ಧಾರ್ಮಿಕ ಜೀವನಕ್ಕಾಗಿ ಸವೆದು ಬಡವಾಗುವುದಕ್ಕಿಂತ ಆರ್ಥಿಕ ಐಶ್ವರ್ಯವನ್ನೂ, ಬಲವನ್ನೂ ಗಳಿಸುವುದೇ ಲೇಸು" ಎಂಬ ವಿಚಾರಕೂಟವನ್ನು ಏರ್ಪಡಿಸಿದ್ದಾರೆ. ಶ್ರೀ ಎಂ. ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸುವರು.

ಉದಾರ ದಾನ

ಶ್ರೀ ರಾಣಿ ವಿಲಾಸ ಹೈಸ್ಕೂಲಿನ ಬಡಹುಡುಗರ ಉಪಹಾರ ಸಂಸ್ಥೆ ಸಹಾಯಾರ್ಥವಾಗಿ ಲಕ್ಷ್ಮಿ ಬಸಪ್ಪಾಜಿ ಗಾರ್ಡನ್ಸಿನ ವಾಸವಾಗಿರುವ ನೀಲಗಿರಿ ಶ್ರೀ ಸುಬ್ಬರಾಯನವರು ೫೦ ರೂ ದಾನಕೊಟ್ಟಿದ್ದಾರೆ

ಕಳ್ಳತನ

ಚಾಮರಾಜಪುರಂನಲ್ಲಿರುವ 'ಕಾಯಿನಾಡು' ಬಾಕ್ಕಿದಾರರಾದ ಶ್ರೀ ಎನ್. ಶ್ರೀನಿವಾಸಮೂರ್ತಿಯವರ ಮನೆಯಲ್ಲಿ ನಿನ್ನೆ ಮಧ್ಯಾಹ್ನ ಬಟ್ಟೆಗಳ ಕಳುವಾಯಿತೆಂದು ಹೇಳಲಾಗಿದೆ. ಪೋ|| ತನಿಖೆ ಕ್ರಮನಡೆಸುತ್ತಿರುವರು.

ಪಾರಿತೋಷಕ ಬಹುಮಾನ

ಮೈಸೂರು ನಾಟಕ ಸಂಘದವರು ಕೆಲವು ತಿಂಗಳ ಹಿಂದೆ ನಡೆಸಿದ ಸ್ಪರ್ಧೆಯ ಪಾರಿತೋಷಕ ಬಹುಮಾನವನ್ನು ಸಪ್ಟೆಂಬರ್ ೧೧ ನೇ ತಾ|| ಟೌನ್ ಹಾಲಿನಲ್ಲಿ ಶ್ರೀ ... ದತ್ತರವರು ದಯಪಾಲಿಸುವರು.

ಪತ್ರಿಕೋದ್ಯಮಿಗಳಲ್ಲಿ ಮನವಿ

ಮೈಸೂರು ನಗರದ ಪತ್ರಿಕೋದ್ಯಮಿಗಳ ಸಭೆಯೊಂದನ್ನು ಆಗಸ್ಟ್ ೩೦ ನೆಯ ತಾ ಸೋಮವಾರ ಸಂಜೆ ೫-೩೦ ಗಂಟೆಗೆ ಚಾಮರಾಜ ರಸ್ತೆಯಲ್ಲಿರುವ "... " ಪತ್ರಿಕಾ ಕಛೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಪತ್ರಿಕೋದ್ಯಮಿಗಳ ಸಂಬಂಧಕ ಹಲವು ಮುಖ್ಯವಿಷಯಗಳು ಚರ್ಚಿಸಬೇಕಾಗಿರುವುದರಿಂದ ನಗರದ ಪತ್ರಿಕೋದ್ಯಮಿಗಳೆಲ್ಲ ದಯಮಾಡಿ ಸಭೆಗೆ ಬರಬೇಕೆಂದು ಪ್ರಾರ್ಥನೆ

ಎನ್. ಎಸ್. ಶಾಸ್ತ್ರಿ, ಕನ್ವೀನರ್.

ಜಪಾನ್ ಮುತ್ತಲು ಭಾರತ ಮುಖ್ಯ ಕೇಂದ್ರ

ಜಪಾನಿನ ಮೇಲೆ ಯುದ್ಧಮಾಡುವ ಮುಖ್ಯವಾಗಿ ಭಾರತವನ್ನು ಯುದ್ಧ ಸರಬರಾಜು ನೆಲೆಯನ್ನಾಗಿ ಮಾಡಲು ಕೈಕೊಂಡಿರುವ ಕಾರ್ಯಗಳನ್ನು ವಿವರಿಸಿದರು. ಜೂನ್ ೩೦ರವರೆಗೆ ೬೮ ಕೋಟಿ ಪೌಂಡ್‌ಗಳ ಸರಬರಾಜನ್ನು ಭಾರತ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಚೀನಾಗಳಿಗೆ ಕಳುಹಿಸಲಾಗಿದೆಯೆಂದೂ, ಅದರಲ್ಲಿ ಶೇಕಡ ೭೦ ರಷ್ಟನ್ನು ಭಾರತ ಮತ್ತು ಚೀನಾಗಳಿಗೆ ಕಳುಹಿಸಲಾಗಿದೆಯೆಂದೂ ತಿಳಿಸಿದರು

ಫ್ಯಾಸಿಸ್ಟ್ ನಾಯಕರ ಆತ್ಮಹತ್ಯೆ

ಇಟಲಿ ಫಾಸಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿದ್ದ ಕೌಂಟ್ ಅಲ್ಸಿಸಾಂಡ್ರೋ ಫ್ರಾಂಟೋನಿಯವರು ಆತ್ಮಹತ್ಯೆಮಾಡಿಕೊಂಡರೆಂದು ಬುಡಾಪೆಸ್ಟ್ ರೇಡಿಯೋ ತಿಳಿಸಿದೆ.

ಫ್ಯಾಸಿಸ್ಟ್ ಪಕ್ಷದ ಮಾಜಿ ಕಾರ್ಯದರ್ಶಿಯನ್ನು ಗುಂಡಿನಿಂದ ಹೊಡೆದು ಕೊಲೆಮಾಡಲಾಯಿತೆಂದು ವರದಿಯಾಗಿದೆ. ಒಳಾಡಳಿತದಲ್ಲುಂಟಾಗುತ್ತಿರುವ ಅನೇಕ ಅವ್ಯವಸ್ಥೆಗಳಿಗೆ ಆತನು ಕಾರಣನಾಗಿದ್ದನೆಂದು ದಸ್ತಗಿರಿ ಮಾಡಲಾಗಿತ್ತು.

ಬಾಲ್ಕನ್ನಲ್ಲಿ ಜರ್ಮನ್ ಸಿದ್ಧತೆ

ಬಾಲ್ಕನ್ನಲ್ಲಿ ಮಿತ್ರರ ದಂಡಯಾತ್ರೆಯನ್ನು ಎದುರಿಸಲು ಜರ್ಮನಿಯು ಈಗಾಗಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತಿದೆಯೆಂದು ವರದಿಯಾಗಿದೆ. ರುಮೇನಿಯಾ ಡಿಕ್ಟೇಟರಾದ ಜನರಲ್ ಅಂಟೊನೆಸ್ಕೊರವರು ಮತ್ತು ಬಲ್ಗೇರಿಯಾ ದೊರೆ ಬೋರಿಸ್‌ರವರು ಹಿಟ್ಲರನ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿದ್ದಾರೆಂದು ಹೇಳಲಾಗಿದೆ. ಹಂಗೇರಿಯ ಡಿಫೆನ್ಸ್ ಮಂತ್ರಿಗಳು ಈ ಸಮ್ಮೇಳನಕ್ಕೆ ಹೋಗದಿರುವುದನ್ನು ನೋಡಿದರೆ ಜರ್ಮನಿ ಮತ್ತು ಹಂಗೇರಿ ಸಂಬಂಧ ಅಷ್ಟು ಚೆನ್ನಾಗಿಲ್ಲವೆಂದು ಹೇಳಲಾಗಿದೆ.

ಇಟಲಿಯ ಶಾಂತಿ ಭಿಕ್ಷೆ

ಇಟಲಿಯ ಕೌಂಟ್ ಗ್ರಾಂಡಿಯವರು ಮಿತ್ರರಲ್ಲಿ ಶಾಂತಿ ಸಂಧಾನ ನಡೆಸಲು ಪೋರ್ಚುಗಲ್ಲಿಗೆ ಹೋಗಿರುವರೆಂದು ಸ್ವಿಸ್ ವಾರ್ತೆ ತಿಳಿಸುತ್ತದೆ

ಹಿಟ್ಲರನ ಯೂರೋಪ್ ಮೇಲೆ ಮುತ್ತಿಗೆ

ಹಿಟ್ಲರನ ಯೂರೋಪಿನ ಮೇಲೆ ಉಗ್ರ ವಿಮಾನ ದಾಳಿ ಮತ್ತು ಮುತ್ತಿಗೆ ನಡೆಸಲು ತಕ್ಕ ಹಂಚಿಕೆಯನ್ನು ಕ್ವಿಬೆಕ್‌ನಲ್ಲಿ ತೆಗೆದು ಕೊಳ್ಳಲಾಯಿತೆಂದು ಹೇಳಲಾಗಿದೆ. ಇದರ ಜೊತೆಗೆ ಜಪಾನ್ ಮೇಲೂ ಬಲವಾದ ಯುದ್ಧ ನಡೆಸಲಾಗುವುದೆಂದು ಹೇಳಲಾಗಿದೆ. ಈಗ ಬ್ರಿಟನ್ ಮತ್ತು ಅಮೆರಿಕ ರಷ್ಯಾದೊಂದಿಗೆ ಮಿಲಿಟರಿ ಮತ್ತು ರಾಜಕೀಯ ವಿಷಯಗಳಲ್ಲಿ ಚರ್ಚಿಸಲು ಸಿದ್ಧರಾಗಿರುವರೆಂದೂ, ಇಂತಹ ಸಮ್ಮೇಳನ ನಡೆಸಲು ಇದು ಆಹ್ವಾನವೆಂದೂ ಹೇಳಲಾ...

ರಷ್ಯಾದಿಂದ ಸ್ಪಾನಿಷ್ ಸೈನ್ಯ ವಾಪಸು

ಸ್ಪೇನಿನ ಜನರಲ್ ಫ್ರಾಂಕೋ ಮತ್ತು ಬ್ರಿಟಿಷ್ ರಾಯಭಾರಿಯಾದ ಸರ್ ಸಾಮ್ಯುಯಲ್ ಹೋರ್‌ರವರ ಮಾತುಕತೆ ಫಲವಾಗಿ ರಷ್ಯಾದಲ್ಲಿರುವ ಸ್ಪಾನಿಷ್ ಸೈನ್ಯವನ್ನು ವಾಪಸು ಕರೆಸಿ, ತಟಸ್ಥ ಸ್ವಾತಂತ್ರ್ಯವಾದ ನೀತಿಯನ್ನು ಬದಲಾಯಿಸಬೇಕೆಂದು ಸರ್ ಹೋರ್‌ರವರು ಒತ್ತಾಯಪಡಿಸಿದರೆಂದು ಹೇಳಲಾಗಿದೆ.

ಸ್ಪೇನಿಗೆ ಕಚ್ಚಾ ಯುದ್ಧ ಶಸ್ತ್ರವನ್ನು ಕಳುಹಿಸಬೇಕೆಂಬ ಫ್ರಾಂಕೋರವರ ಮನವಿಯನ್ನು ಅಮೆರಿಕವು ನಿರಾಕರಿಸಿದೆಯೆಂದು ವರದಿಯಾಗಿದೆ.

ಜಪಾನ್-ಜರ್ಮನ್ ಮಾತುಕತೆ

ಯೂರೋಪಿನ ಪರಿಸ್ಥಿತಿಯನ್ನು ಪರಿಶೀಲಿಸಲು, ಜರ್ಮನ್ ರಾಯಭಾರಿಯು ಜಪಾನ್ ವಿದೇಶಾಂಗ ಮಂತ್ರಿಯನ್ನು ಭೇಟಿಮಾಡಿ ಮಾತುಕತೆ ನಡೆಸಿದರೆಂದು ಜಪಾನ್ ವಾರ್ತೆ ತಿಳಿಸುತ್ತದೆ

ಒಂದೇ ವಾರದಲ್ಲಿ ೧೦೩೯ ಜನರ ಮರಣ

ಕಲ್ಕತ್ತಾ ನಗರದ ಆರೋಗ್ಯ ಇಲಾಖೆ ರಿಪೋರ್ಟಿನಿಂದ ಆಗಸ್ಟ್ ೨೧ಕ್ಕೆ ಅಂತ್ಯವಾದ ವಾರದಲ್ಲಿ ೧,೦೩೯ ಮಂದಿ ಮರಣ ಹೊಂದಿದರೆಂದು ಗೊತ್ತಾಗಿದೆ. ನಗರದ ಬೀದಿಯಲ್ಲಿ ಹೊಟ್ಟೆಗಿಲ್ಲದೆ ಸಂಕಟಪಡುತ್ತಿದ್ದ ೩೫೯ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತು.

ಪೋಲೀಸ್ ಅಧಿಕಾರಿಗಳ ಮೇಲೆ ಟೀಕೆ

ಕೊಯಮುತ್ತೂರು ಜಿಲ್ಲೆ ... ಗ್ರಾಮದಲ್ಲಿ ಪೋಲೀಸ್ ಹೆಡ್ ಕಾನ್‌ಸ್ಟೇಬಲ್ ಆಗಿದ್ದ ನಟೇಶಮುತ್ತುಪಿಳ್ಳೆ ಎಂಬುವನು ಓರ್ವ ಹೆಂಗಸನ್ನು ಕೊಲೆಮಾಡಿದನೆಂದು ಅವನಿಗೆ ಸೆಷನ್ ನ್ಯಾಯಾಧೀಶರು ಮರಣ ದಂಡನೆ ವಿಧಿಸಿದರು. ಈ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಪೋ|| ಅಧಿಕಾರಿಗಳು ಮೋಟಾರ್, ಬಸ್ಸುಗಳಲ್ಲಿ ಹಣ ಕೊಡದೆ ಉಚಿತವಾಗಿ ಸಂಚಾರಮಾಡುವುದನ್ನು ತೀವ್ರವಾಗಿ ಖಂಡಿಸಿ ಇದನ್ನು ತಕ್ಷಣ ನಿಲ್ಲಿಸಬೇಕೆಂದು ಟೀಕಿಸಿದ್ದಾರೆ

ಮಿಲಿಟರಿ ಅಧಿಕಾರಿಗೆ ಶಿಕ್ಷೆ

ದಕ್ಷಿಣ ಭಾರತ ಸೈನ್ಯದಲ್ಲಿ ನಾನ್ ಕಮೀಷನ್ಡ್ ಆಫೀಸರಾದ ಹವಿಲ್‌ದಾರ್ ಅಹಮದ್ ದೀನ್ ಎಂಬುವರು, ಮದ್ರಾಸಿನ ... ಕಳೆದ ಮೇ ೧೧ರಲ್ಲಿ ನಡೆದ ನೋಟಿನಲ್ಲಿ ಅಕ್ರಮವಾಗಿ ನಡೆಸಿದರೆಂದು ಮಿಲಿಟರಿ ಕೋರ್ಟಿನಲ್ಲಿ ತೀರ್ಮಾನವಾಗಿ, ಅವರನ್ನು ಮಿಲಿಟರಿ ಇಲಾಖೆಯಿಂದ ವಜಾಮಾಡಿ, ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ

ಇಟಲಿಯಲ್ಲಿ ರಾಜಕೀಯ ಬದಲಾವಣೆ

ಮುಸೋಲಿನಿ ಪತನವಾದ ನಂತರ ... ಅತ್ಯಂತ ಆಶ್ಚರ್ಯಕರವಾದ ರಾಜಕೀಯ ಬದಲಾವಣೆಯು ಇಟಲಿಯಲ್ಲಿ ಸದ್ಯದಲ್ಲಿಯೇ ಆಗುವುದೆಂದು ಬರ್ಲಿನ್ ರೇಡಿಯೋ ತಿಳಿಸುತ್ತದೆ. ಜರ್ಮನಿ ಎಸ್. ಎಸ್. ಸೈನ್ಯವು ಸಹ ರೋಮ್ ನಗರಕ್ಕೆ ಬಂದಿದೆಯೆಂದು ವರದಿಯಾಗಿದೆ

ಉಕ್ರೇನ್ ಕ್ಷೇತ್ರದಲ್ಲಿ ಭಾರಿ ಕದನ

ಯುಕ್ರೇನ್ ದಕ್ಷಿಣಭಾಗದಲ್ಲಿ ಭಾರಿ ಯುದ್ಧ ನಡೆಯುತ್ತಿದೆಯೆಂದೂ, ಡೋನೆಟ್ಸ್ ಬೇಸಿನ್‌ನಲ್ಲಿ ರಷ್ಯನ್ನರು ಜರ್ಮನರ ಅನೇಕ ವ್ಯೂಹಗಳನ್ನು ಭೇದಿಸಿ ಮುನ್ನುಗ್ಗುತ್ತಿದ್ದಾರೆ. ಖಾರ್ಕೋವ್-ಪೋಲ್ಟಾವಾ ರೈಲ್ವೇಮಾರ್ಗದಲ್ಲಿ ಜರ್ಮನರಿಗೆ ವಿಪತ್ತುಂಟಾಗಿದೆ. ಪೋಲ್ಟವದಿಂದ ೫೦ ಮೈಲಿ ದೂರದ ... ನಗರವನ್ನು ರಷ್ಯನ್ನರು ಹಿಡಿದಿದ್ದಾರೆ.

ಕೊನೆಯವರೆಗೂ ಯುದ್ಧ ಮಾಡಲಾಗುವುದು

ಜರ್ಮನ್ ... ಹಿಟ್ಲರನು ಜರ್ಮನ್ ಪ್ರಜೆಗಳಿಗೆ ಎಚ್ಚರಿಕೆ ಕೊಟ್ಟು, ನಾಜಿಗಳು ಕೊನೆಯವರೆಗೆ ಯುದ್ಧಮಾಡುವರೆಂದೂ, ... ವರೆಗೂ ಹಿಂದೆ ... ವಿಪತ್ತು ಬರುವುದಿಲ್ಲವೆಂದೂ ತಿಳಿಸಿದ್ದಾನೆ

ಆ ಕಾ ಶ ವಾ ಣಿ

೨೮ ನೇ ಶನಿವಾರ

೬-೩೦ ಕೀರ್ತನೆ. ಚಕ್ರ ಸಭಾ ... ಶ್ರೀನಿವಾಸ ರಂಗಾಚಾರ್

ಜೋತಿಷ್ಯ ನಂಬಿ ನೇಣುಹಾಕಿಕೊಂಡ ಪ್ರಸಂಗ

ಬೆಂಗಳೂರು ೨೬

ಬೆಂಗಳೂರು ಕೆಂಪಾಪುರ ಅಗ್ರಹಾರದ ದೊಡ್ಡ ಕೆಂಪಣ್ಣ ಎಂಬುವನ ಪತ್ನಿ ೩೦ ವರ್ಷದ ಈರಮ್ಮ ಎಂಬುವಳು, ಜೋತಿಷ್ಯ ನಂಬಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ. ಕಳೆದ ವರ್ಷ ಒಬ್ಬ ಜೋಯಿಸನು ಭವಿಷ್ಯ ಹೇಳಿದ್ದ. ಆಕೆಯ ಒಂದು ಮಗು ಸತ್ತುಹೋಯಿತು. ಈ ವರ್ಷ ಅದೇ ಜೋಯಿಸ ಆಕೆಯ ಜೀವನದಲ್ಲಿ ಇನ್ನೊಂದು ಗಂಡು ಘಟ ಹೋಗುತ್ತದೆ ಎಂದು ಭವಿಷ್ಯ ನುಡಿದಿದ್ದನ್ನು ನಂಬಿ, ಗಂಡನಿಲ್ಲದೆ ತನ್ನ ಬದುಕು ಹಾಳಾಗುವುದೆಂದು ತಿಳಿದು, ಪ್ರಾಣ ಕಳೆದುಕೊಂಡಳೆಂದು ಹೇಳಲಾಗಿದೆ.

ರೇಷನ್ ಕಾರ್ಡ್ ದುರುಪಯೋಗಪಡಿಸಿದ್ದಕ್ಕೆ ದಂಡ

ಬಂಡಿಕೆ ಧರ್ಮರಾಜ ಕೋಯಿಲ್ ರಸ್ತೆಯ ದಿನಸಿ ಅಂಗಡಿ ರಾಮಚಂದ್ರ ಶರ್ಮ ಎಂಬುವನು ಇನ್ನೊಬ್ಬರ ರೇಷನ್ ಕಾರ್ಡನ್ನು ದುರುಪಯೋಗಪಡಿಸಿದನೆಂಬ ಆಪಾದನೆಯ ಮೇಲೆ ದಂಡಿಸಿ ಮ್ಯಾಜಿಸ್ಟ್ರೇಟರು ಆತನಿಗೆ ೭೦೦ ರೂ. ಜುಲ್ಮಾನೆ ವಿಧಿಸಿದರು.

ನೂಲಿನ ಹತೋಟಿ

ಭಾರತ ಸರಕಾರದ ಆದ ವಾಣಿಜ್ಯ ಡೈರೆಕ್ಟರ್‌ರವರ ಅಪ್ಪಣೆ ವಿನಹ ಯಾರಾದರೂ ನೂಲಿನ ವ್ಯಾಪಾರ ಮಾಡುವುದಾಗಲೀ ಅಥವಾ ವ್ಯಾಪಾರ ಜಾಹಿರಾತುಗಳಾಗಲಿ ಹೊರಡಿಸಿದರೆ [illegible] ಮೂರು ವರ್ಷ ಶಿಕ್ಷೆ ಅಥವಾ ಜುಲ್ಮಾನೆ ಅಥವಾ ಎರಡು ಶಿಕ್ಷೆಯನ್ನೂ ವಿಧಿಸಲಾಗುವುದು.

ಆಸ್ಪತ್ರೆಗೆ ದಾನ

ಆನಂದಪುರದ ಶ್ರೀ ಎ. ರಾಮಕೃಷ್ಣ ಒಪ್ಪೆಂಗಾರ್‌ರವರು ಮುಳಿನಾಡಿನಲ್ಲಿ ಹೆಂಗಸರ ಆಸ್ಪತ್ರೆಯೊಂದನ್ನು ಕಟ್ಟಲು ಒಂದು ಸಾವಿರ ರೂ. ಕೊಡಲು ಒಪ್ಪಿದ್ದಾರೆ.

ಸ್ಟ್ಯಾಂಡರ್ಡ್ ಬಟ್ಟೆ ಹಂಚಿಕೆ ಸಲಹಾ ಸಮಿತಿ

ಸ್ಟ್ಯಾಂಡರ್ಡ್ ಬಟ್ಟೆ ಸರಬರಾಯಿ ಸಲಹಾ ಸಮಿತಿಯನ್ನು ಸರ್ಕಾರದವರು ಒಂದು ವರ್ಷ ಕಾಲ ನೇಮಕ ಮಾಡಿದ್ದಾರೆ. ಸರಬರಾಜು ಇಲಾಖೆ ಡೈರೆಕ್ಟರ್, ವಾಣಿಜ್ಯ ಕೈಗಾರಿಕೆ ಡೈರೆಕ್ಟರ್, ಬೆಂಗಳೂರು [illegible], ಬೆಂಗಳೂರು ಪೀಸ್ ಗೂಡ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ, ಬಿನ್ನಿ ಮಿಲ್ಲಿನ ಶ್ರೀ ಸೆಂಟರ್, ಶ್ರೀ ದೇವರಾವ್, ಶ್ರೀ ವಿ. ಸುಬ್ಬರಾಮಶೆಟ್ಟಿ ಮತ್ತು ಶ್ರೀ ಟಿ. ಕೆ. ಮೂರ್ತಿ ಇವರು ಸದಸ್ಯರು.

ಜುಲ್ಮಾನೆ ರದ್ದು

ಪೌರಸಭಾ ಸದಸ್ಯರಾದ ಶ್ರೀ ಟಿ. ಗಂಗಾಧರ ಸ್ವಾಮಿಯವರಿಗೆ ರಹದಾರಿಯಿಲ್ಲದೆ ಸಕ್ಕರೆ ಮೂಟೆಗಳನ್ನು ಇಟ್ಟುಕೊಂಡಿದ್ದರೆಂಬ ಆಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ೫೦೦ ರೂ. ದಂಡ ವಿಧಿಸಿದ್ದರು. ಅಪೀಲಿನಲ್ಲಿ ಸೆಷನ್ಸ್ ನ್ಯಾಯಾಧೀಶರು ದಂಡವನ್ನು ರದ್ದುಗೊಳಿಸಿದರು.

ವಿಷದ ಬೇಳೆ ನಿಷೇಧಿಸಲಾಗಿದೆ

"ಖೇಸರಿ" ಎಂಬ ವಿಷ ತೊಗರಿಬೇಳೆಯನ್ನು ನಗರದಲ್ಲಿ ಮಾರಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತು. ಈ ಬಗ್ಗೆ ತಕ್ಷಣ ತನಿಖೆ ನಡೆದು, ೩,೦೦೦ ಮೂಟೆಗಳನ್ನು ಪತ್ತೆ ಹಚ್ಚಿ, ಅವುಗಳ ಮಾರಾಟವಾಗದಂತೆ ತಡೆಯಲಾಗಿದೆ. ಈ ಧಾನ್ಯದ ಬಗ್ಗೆ ಸರ್ಕಾರದ ಕೆಮಿಕಲ್ ಎಕ್ಸಾಮಿನರ್ ಅಭಿಪ್ರಾಯವನ್ನು ಪಡೆದು, ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರದ ಪಬ್ಲಿಸಿಟಿ ಆಫೀಸರ ಪ್ರಕಟಣೆಯೊಂದು ತಿಳಿಸುತ್ತದೆ.

ವನಸ್ಪತಿ ಎಣ್ಣೆ ರಫ್ತಿಗೆ ಪ್ರತಿಬಂಧಕ

ಸಂಸ್ಥಾನದಲ್ಲಿ ತಯಾರಾಗುವ ವನಸ್ಪತಿ ಎಣ್ಣೆಯನ್ನು ರಹದಾರಿಯಿಲ್ಲದೆ ರಫ್ತು ಮಾಡಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

ಹಿಂಡಿ ದರ

ಕಡಲೇಕಾಯಿ ಹಿಂಡಿ ದರವನ್ನು ಟನ್ ಒಂದಕ್ಕೆ ೧೧೦ ರೂ. ಎಂದು ಸರ್ಕಾರದವರು ನಿರ್ಧರಿಸಿದ್ದಾರೆ.

ಡೆಕ್ಕಾದಲ್ಲೂ ಕ್ಷಾಮದ ಛಾಯೆ

ಡೆಕ್ಕಾ ನಗರದಲ್ಲಿ ಹೊಟ್ಟೆಗಿಲ್ಲದೆ ಜನರ ಸಂಖ್ಯೆ ಹೆಚ್ಚುತ್ತಲಿದೆಯೆಂದೂ, ೩ ವಾರಗಳಲ್ಲಿ ಸತ್ತವರ ಸಂಖ್ಯೆ ಹೆಚ್ಚಿದ್ದುದೆಂದೂ ಹೇಳಲಾಗಿದೆ. ಬೀದಿಬೀದಿಗಳಲ್ಲಿ ಅನ್ನವಿಲ್ಲದ ಹೆಂಗಸರೂ, ಮಕ್ಕಳೂ ಅಲೆಯುತ್ತಿದ್ದಾರೆಂದು ವರದಿಯಾಗಿದೆ.

ಅಕ್ಕಿಗೆ ಬಂದ ಜನರ ಮೇಲೆ ಲಾಠೀ ಛಾರ್ಜು

ಚಿಕ್ಕಮಗಳೂರು ತಾಲ್ಲೂಕು ಆಫೀಸಿನ ಮುಂಭಾಗದಲ್ಲಿ ಅಕ್ಕಿ ಕಂಟ್ರೋಲ್ ಪಡೆಯಲು ನೆರೆದಿದ್ದ ಜನರ ಗುಂಪಿನ ಮೇಲೆ ಪೋಲೀಸರು ಲಾಠಿ ಛಾರ್ಜು ಮಾಡಿದರೆಂದೂ, ಕೆಲವರಿಗೆ ಏಟು ಬಿದ್ದು ಗಾಯಗಳಾಗಿವೆಯೆಂದೂ ಹೇಳಲಾಗಿದೆ. ಪೋಲೀಸ್ ಇನ್ಸ್‌ಪೆಕ್ಟರು ತಕ್ಷಣ ಸ್ಥಳಕ್ಕೆ ಬಂದು ಲಾಠಿಗಳನ್ನು ತಮ್ಮ ವಶಪಡಿಸಿಕೊಂಡು ಜನರನ್ನು ಸಮಾಧಾನ ಮಾಡಿದರೆಂದು ವರದಿಯಾಗಿದೆ.

ಪೆಸಿಫಿಕ್ ರಂಗದ ದಂಡನಾಯಕರ ನೇಮಕ

ಭಾರತ ಮತ್ತು ಸಿಲೋನ್ ನೆಲೆಗಳಿಂದ ಜಪಾನ್ ಮೇಲೆ ಕಾರ್ಯಾಚರಣೆ ನಡೆಯುವ ಸಲುವಾಗಿ ಪ್ರತ್ಯೇಕವಾದ ಆಗ್ನೇಯ ಏಷ್ಯಾ ಕಮ್ಯಾಂಡನ್ನು ರಚಿಸಿ, ಲಾರ್ಡ್ ಲೂಯಿ ಮೌಂಟ್ ಬ್ಯಾಟನ್‌ರವರನ್ನು ಮಿತ್ರ ದಂಡನಾಯಕರನ್ನಾಗಿ ನೇಮಕ ಮಾಡಲಾಗಿದೆ.

"ಶತ್ರುಗಳು ಸಂಪೂರ್ಣವಾಗಿ ಶರಣಾಗತರಾಗುವವರೆಗೂ ಸಂಯುಕ್ತ ರಾಷ್ಟ್ರಗಳು ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ ಶತ್ರುಗಳನ್ನು ಸದೆಬಡಿಯುವುವು" ಎಂಬುದಾಗಿ ಪ್ರೆ|| ರೂಸ್ವೆಲ್ಟರು ಅಮೆರಿಕ ಕಾಂಗ್ರೆಸ್ಸಿಗೆ ಒಪ್ಪಿಸಿದ ಲೀಸ್-ಲೆಂಡ್ ವರದಿಯಲ್ಲಿ ತಿಳಿಸಿದ್ದಾರೆ.

ಬೇಕಾಗಿದೆ

ನೌಕರಿ, ಸೈನ್ಯ, ವಿಮಾನ ದಳಕ್ಕೆ 11 ನೇ ಫಾರಂ ಓದಿದವರು ಮೊದಲುಗೊಂಡು S. S. L. C. ವರೆಗೆ ಓದಿದವರು ಟೆಕ್ನಿಕಲ್ ಟ್ರೈನಿಂಗ್‌ಗಳಿಗಾಗಲಿ, ಆಫೀಸ್ ಕ್ಲಾರ್ಕ್ ಕೆಲಸಗಳಿಗಾಗಲಿ ಬೇಕಾಗಿದೆ. V ನೇ ಫಾರಂ ಓದಿದವರಿಗೆ ಈಗ 65 ರೂ. ಸಂಬಳ ಕೊಡಲಾಗುತ್ತೆ. ಊಟ, ವಸತಿಗಳೆಲ್ಲಾ ಉಚಿತ. ಎಲ್ಲಾ ವಿವರಗಳಿಗೆ ಈ ಕೆಳಗಿನ ಅಡ್ರೆಸ್ಸಿನಲ್ಲಿ ಪ್ರತಿ ದಿನ ಸಾಯಂಕಾಲ 4 ಘಂಟೆಯಿಂದ 6 ಘಂಟೆವರೆಗೆ ವಿಚಾರಿಸಿ.

ಡಬ್ಲ್ಯು. ಹೆಚ್. ಥಿಯೋಬಾಲ್ಡ್
ಹಾರ್ಡಿಂಜ್ ರೋಡ್, ಮೈಸೂರು.

ಜರ್ಮನ್ ಗುಪ್ತ ಶಸ್ತ್ರ

ಒಂದೇ ಚಿಮ್ಮಿನಿಂದ ಐದು ಮೈಲಿಗಳ ಸರಹದ್ದಿನಲ್ಲಿರುವ ವಸ್ತುಗಳನ್ನೆಲ್ಲಾ ಸುಟ್ಟು ಭಸ್ಮಮಾಡುವಂತಹ ನೂತನ ಬಾಂಬುಗಳನ್ನು ಜರ್ಮನರು ತಯಾರಿಸುತ್ತಿದ್ದಾರೆಂದೂ, ಇದೇ ಅವರ ಗುಪ್ತಾಸ್ತ್ರವೆಂದೂ ಹೇಳಲಾಗಿದೆ.

ನ್ಯಾಷನಲ್ ಎಂಪೋರಿಯಂ
(ಮದರಾಸ್ ಅಂಗಡಿ)
ಮೈಸೂರು.

ಪ್ಯೂ. ಮಿ. ಕೋರಾ ಡ್ರಿಲ್	0	10	[illegible]
ರ್‍ಯಾಲಿ ಬ್ರದರ್ಸ್ ,, ,,	0	13	[illegible]
ಫಿಶ್ ವೈಟ್ ಡ್ರಿಲ್	1	0	[illegible]
ಡಬ್ಲ್ ಸ್ಪೆಷಲ್ ಲಾಂಗ್ ಕ್ಲಾತ್	0	8	[illegible]
ಮಿನರ್ವಾ ಮಿ. ಲ್ ,,	0	9	[illegible]
ಬೇಬಿ ನಂ. 36 ,,	0	11	[illegible]
ಕೋರಾ 44 ವೈಡ್ ,,	0	11	[illegible]
ನಂ 3640 ,,	0	7	[illegible]
ಲಾಂಗ್‌ಕ್ಲಾತ್ ಪಾಪ್ಲಿನ್	1	9	[illegible]
ಸ್ಟ್ರೈಪ್ಸ್ ,,	2	0	[illegible]
ಸ್ಟ್ರೈಪ್ಸ್ ಷರ್ಟಿಂಗ್ ೧ ನೇ ದರ್ಜೆ	0	14	[illegible]
,, ೨ ನೇ ದರ್ಜೆ	0	13	[illegible]
ಮಿ. ಲ್ ಷರ್ಟಿಂಗ್	0	12	[illegible]
ವೈಟ್ ಸೂಟ್ ಕ್ಲಾತ್	0	14	[illegible]
ಕಾಟೇಜ್ ರಗ್	3	8	
ಇಟಾಲಿಯನ್ ಟ್ವಿಲಿಂಗ್ 48 ವೈಡ್	1	8	
ಇಂಡಿಯನ್ ಟ್ವಿಲ್ ಕ್ರೇಪ್ ಪ್ರಿಂಟ್	1	6	
ಟೆಂಟ್ ಫಾಸ್ಟ್ ಕಲರ್	0	11	
,, ಟರ್ಕಿಷ್ ,,	0	8	
ವಾಯಿಲ್ 45" ವೈಡ್	1	0	
ಟೆನ್ನಿಸ್ ಸ್ಟ್ರೈಪ್ ಷರ್ಟಿಂಗ್	0	6	
ಬ್ಲಾಯ್ಸ್ ಪ್ರಿಂಟ್ ಖಲಸ್ಟೈಲ್ಸ್	2	0	
ಕೋರಾ ಮಲ್ 50" ವೈಡ್	0	9	
ಇಂಡಿಯನ್ ಗ್ಲಾಸ್ಕೋ ಮಲ್	1	0	
ಸೂರತ್ ಕೋಟಿಂಗ್	1	4	
ಗ್ರೇ ಕೋಟಿಂಗ್ ಸ್ಟ್ರೈಪ್ಸ್	0	11	
ಪ್ಯೂ. ಮಿ. ಧೋತಿ 2×8,	5	12	
ರಾಜಾ ,, ನಂ 28 ,, ,,	6	13	
ಫೈನ್ಸ್ ಟೈಪ್ ,, ,,	8	0	
ಬಿನ್ನಿ ಕಿರು ಮಿಲ್ಸ್ ,, ,,	8	12	
ಮಿನರ್ವಾಸ್ ,, ,,	9	0	
ಪ್ಯೂ. ಮಿ. ಹಾಲೆಂಡ್ 36 ವೈಡ್	0	10	
ಮಹಾಲಕ್ಷ್ಮಿ ಟೇಬಲ್ ಕ್ಲಾತ್	0	14	

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.
ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಪ್ರಾಯಶಃ ಇಷ್ಟೊಂದು ಶೈಲಿಗಳಲ್ಲೂ ಹೊಸ ಮಾದರಿಗಳಲ್ಲೂ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ.

Edited, printed and published by A. R. Nagaraju at the Sadhvi Press, D. Subbiah Road, Mysore.

ಪ್ರತಿ ಶನಿವಾರ ಮತ್ತು ಭಾನುವಾರ 4 ಘಂಟೆಗೆ ಮ್ಯಾಟಿನಿ ಇರುತ್ತೆ

ನ್ಯೂ ಅಪೇರಾ ಟಾಕೀಸ್

೨೭—೮—೪೩ ರಿಂದ

ಬಿ. ಸೂರ್ಯಕುಮಾರಿ, ಎಂ. ಕೆ. ರಾಧ, ಆರಬಿ ಲಕ್ಷ್ಮೀದೇವಿ, ಕೆ. ಸ್ವಾಮಿ ಮುಂತಾದವರು ಪಾತ್ರವಹಿಸಿರುವ

ಪ್ರೇಮ ಬಂಧನ

ಸ್ತ್ರೀಯರ ಸೌಕರ್ಯಕ್ಕಾಗಿ
[illegible] ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

[illegible]

ಸಿ. ಪುಟ್ಟೇಗೌಡ ಫಿನಿಸಿಮೂಲಿ, ದೇವರಾಜ ಮಾರ್ಕೆಟ್, ಮೈಸೂರು
ಈ ಸ್ಥಳ ಚಿಲ್ಲರೆಯಾಗಿ ಸುಣ್ಣದ ಸಕ್ಕರೆ, ಕಲ್ಲುಸಕ್ಕರೆ, ಬೂರಾ ಸಕ್ಕರೆ ಮತ್ತು ಬೆಲ್ಲ ದೊರೆಯುತ್ತವೆ.

ಸಂಪುಟ ೨] ಶನಿವಾರ ೨೮--೮--೪೩ [ಸಂಚಿಕೆ ೩೭

ಬರ್ಮಾ ಮುತ್ತಲು ಹಂಚಿಕೆ

ಪೋಲಟಾವಾದಲ್ಲಿ ಭೀಕರ ಟ್ಯಾಂಕ್ ಕದನ
ಮಿತ್ರ ಕಾರ್ಯಾಚರಣೆಯಿಂದ ಜಪಾನಿನಲ್ಲಿ ಗಡಿಬಿಡಿ

...ಎಸ್. ಎಸ್. ಸುಬ್ಬರಾಯರವರ ಸ್ಮಾರಕ ಚರ್ಚಾ ಸ್ಪರ್ಧೆ

ಮೈಸೂರು ೨೬

ಶ್ರೀ ಶಾರದಾ ವಿಲಾಸ ಹೈಸ್ಕೂಲಿನವರು ಏರ್ಪಡಿಸಿದ ಶ್ರೀ ಎಸ್. ಎಸ್. ಸುಬ್ಬರಾಯರ ಸ್ಮಾರಕ ಚರ್ಚಾ ಸ್ಪರ್ಧೆಯು ನಿನ್ನೆ ನಡೆಯಿತು. ರಾಜಧಾನಿಯ ಎಲ್ಲಾ ಸ್ಕೂಲಿನವರು ಮತ್ತು ಹೆಂಗಸರ ಟ್ರೈನಿಂಗ್ ಕಾಲೇಜಿನವರೂ ಭಾಗವಹಿಸಿದ್ದರು ...ನಗೆ ಬೇಕಾಗಿರುವುದು ಅನ್ನ, ಅಕ್ಷರ ...ವೇ ಎಂಬುದೇ ಚರ್ಚೆಯ ವಿಷಯ. ಮಹಾರಾಣಿ ಹೈಸ್ಕೂಲಿಗೆ ಮೊದಲನೆ ಬಹುಮಾನ ದೊರೆತು, ರೋಲಿಂಗ್ ಷೀಲ್ಡ್ ಕೊಡಲಾಯಿತು. ಮಹಾರಾಣಿ ಸ್ಕೂಲಿನ ಕುಮಾರಿ ಸರೋಜರವರಿಗೆ ...ದಲನೆ (ಬೆಳ್ಳಿ ಕಪ್ಪು) ಬಹುಮಾನವ... ಮಹಾರಾಜ ಹೈಸ್ಕೂಲಿನ ಸುಬ್ಬರಾಯರವರಿಗೆ ಎರಡನೇ ಬಹುಮಾನವನ್ನೂ ...ತ್ತು ಹೆಂಗಸರ ಟ್ರೈನಿಂಗ್ ಕಾಲೇಜಿನ ...ಮತಿ ...ದೇವಮ್ಮನವರಿಗೆ ಮೂರನೆಯ ಬಹುಮಾನವನ್ನೂ ಕೊಡಲಾಯಿತು.

ಶ್ರೀ ಎಂ. ಎಸ್. ಪಾರ್ಥಸಾರಥಿಯವರು ...ಮಾಡಿಸಿದ ಬಹುಮಾನವನ್ನು ...ಗೂ, ಶ್ರೀ ಕೇಶವರವರ ಬಹುಮಾನ ...ಗೂ ಕೊಡಲಾಯಿತು. ಜಗನ್ನಾಥಪ್ರಸಕ್ತ ಎಂ. ರಾಮರಾಯರು ಬಹುಮಾನ ವಿನಿಯೋಗ ಮಾಡಿದರು.

ಮೈ ಸುಟ್ಟುಕೊಂಡ

ಕೃಷ್ಣರಾಜ ನಗರದ ೨೫ ವರ್ಷ ... ದಸಣ್ಣ ಮಲ್ಲೆಗೌಡ ಎಂಬುವನು ...ಯಿಂದ ಮೈಸುಟ್ಟುಕೊಂಡು, ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ.

ವಿಶ್ವಭಾರತಿ ಪತ್ರಿಕೆ

'ವಿಶ್ವಭಾರತಿ' ಪತ್ರಿಕೆ ಕಾರಣಾಂತರದ ಇಷ್ಟು ದಿನ ಗೋಚರವಾಗದಿರಲು ...ಶ್ರೇಯೋಭಿಲಾಷಿಗಳ ಕ್ಷಮಾಪ್ಪಣೆ... ಈ ಮೂಲಕ ಬೇಡುತ್ತೇನೆ. ಈಗ ನಾವು "ದಸರ ಸ್ಪೆಷಲ್ ಸಂಚಿಕೆ" ...ಅಕ್ಟೋಬರ್ ೧ನೇ ತಾರೀಖು ...ಗೆ ಸಾರ್ವಜನರಿಗೆ ಹಂಚಲು ನಿರ್ಧರಿಸಿವೆ ಎಂಬುದಾಗಿ ವ್ಯವಸ್ಥಾಪಕರು ...ತ್ತಾರೆ.

ಜಿನ್ನಾರವರ ಸಹಾಯ

...ಗಾಳದಲ್ಲಿ ಕ್ಷಾಮ ಬಾಧೆಯಿಂದ ನರಳುವ ಮುಸ್ಲಿಂ ಜನಾಂಗದ ಸಹಾಯಾರ್ಥವಾಗಿ ಅಖಿಲ ಭಾರತ ಮುಸ್ಲಿಂ ...ನ ಅಧ್ಯಕ್ಷರಾದ ಮಿ॥ ಜಿನ್ನಾರವರು ...ವಿರ ರೂ.ಗಳನ್ನು ಕೊಟ್ಟಿರುವರು.

ಒರಿಸ್ಸಾದಲ್ಲಿ ಉಚಿತ ಭೋಜನಶಾಲೆ

...ಸರ್ಕಾರದವರು ಎಲ್ಲ ಜಿಲ್ಲಾ ನಗರಗಳಲ್ಲಿ ...ಕರು ಮತ್ತು ಹೊರಗಿನ ಜನರಿಗಾಗಿ ಉಚಿತ ಭೋಜನಶಾಲೆಯನ್ನು ...ಲು ೩೦ ಸಾವಿರ ರೂ ಗಳ ಗ್ರಾಂಟ್ ...ಕೊಟ್ಟಿರುವರು.

ಹಾರಪ್ಪನವರ ಮೇಲೆ ಮೊಕದ್ದಮೆ

ಶ್ರೀ ಜಿ. ಸಿ. ಹಾನಗಲಪ್ಪ ಮತ್ತು ...ನವರ ಮೇಲೆ ಭಾರತ ರಕ್ಷಣಾ ಶಾಸನದ... ನಾಗಪುರದ ಮ್ಯಾ॥ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ಜಪಾನನ್ನು ಬಡಿದಟ್ಟಲಾಗುವುದು

ಆಗ್ನೇಯ ಏಷ್ಯಾ ಕಮ್ಯಾಂಡಿನ ದಂಡನಾಯಕರಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್‌ರವರು ಅಮೇರಿಕ ಮಿಲಿಟರಿ ಅಧಿಕಾರಿಗಳೊಡನೆ ಮಾತುಕತೆ ನಡೆಸಲು ವಾಷಿಂಗ್‌ಟನಿಗೆ ಹೋಗಿದ್ದಾರೆ. "ಜಪಾನನ್ನೆಲ್ಲಾ ಪೂರ್ಣವಾಗಿ ಓಡಿಸುವವರೆಗೆ ಮತ್ತು ಅಂತ್ಯ ಜಯ ಪಡೆಯುವವರೆಗೆ ನಾವು ಹೋರಾಡುವೆವು" ಎಂಬುದಾಗಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಅವರು ...ಗ್ರತೆಯಲ್ಲಿ ಭಾರತಕ್ಕೆ ಬಂದು ತಮ್ಮ ಹೊಸ ಹುದ್ದೆಯ ಸೂತ್ರವನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಜಪಾನರ ಕಳವಳ

ಮಿತ್ರ ಕಾರ್ಯಾಚರಣೆಯ ಬಗ್ಗೆ ಕಳವಳಗೊಂಡು ಜಪಾನ್ ... ಪರಿಸ್ಥಿತಿಯನ್ನು ಚರ್ಚಿಸಲು ಮಂತ್ರಿಮಂಡಲದ ಸಭೆಯನ್ನು ತ್ವರಿತದಲ್ಲಿ ನಡೆಸಲಿರುವರು. ಇದಕ್ಕೆ ನಾಲ್ವರು ಮಾಜಿ ಮುಖ್ಯ ಮಂತ್ರಿಗಳನ್ನೂ, ಪ್ರಿನ್ಸ್ ಕೊನೋಯಿ ಮತ್ತು ಇತರ ಜನಾಧಿಕಾರಿಗಳನ್ನೂ ಆಹ್ವಾನಿಸಿದ್ದಾರೆ.

ಸಾಲಮೋವಕ್ಕೆ ಗಂಡಾಂತರ

ನ್ಯೂಗಿನಿಯಾದಲ್ಲಿರುವ ಸಾಲಮೋವಕ್ಕೆ ಕೇವಲ ೧ ಮೈಲಿ ದೂರದಲ್ಲಿ ಅಮೇರಿಕನ್ ಸೈನ್ಯ ಬಂದಿದೆ. ಸಾಲಮೋವಕ್ಕೆ ಹತ್ತಿರ ಫ್ರಾನ್ಸಿಸ್ಕೋ ನದಿಯನ್ನು ದಾಟಿ, ಅದಕ್ಕೆ ಪಶ್ಚಿಮ ಭಾಗದಲ್ಲಿರುವ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲಾಗಿದೆ. ಈ ಭಾ... ಜಪಾನರ ಕಥೆ ಮುಗಿದಂತೆಯೇ ಎಂದು ಹೇಳಲಾಗಿದೆ.

ಹ್ಯಾಂಕೋ ಮೇಲೆ ಧಾಳಿ

ಹ್ಯಾಂಕೋ ವಿಮಾನ ನಿಲ್ದಾಣದ ಮೇಲೆ ಅಮೇರಿಕ ವಿಮಾನಗಳು ಪುನಃ ಧಾಳಿ ನಡೆಸಿ, ಅಪಾರ ನಷ್ಟ ಉಂಟುಮಾಡಿವೆ. ೧೯ ಜಪಾನಿ ವಿಮಾನಗಳನ್ನು ನಾಶಮಾಡಲಾಯಿತು.

ರಷ್ಯಾದಲ್ಲಿ ಮಿತ್ರರಾಷ್ಟ್ರಗಳ ಸಮ್ಮೇಳನ

ಬ್ರಿಟನ್, ಅಮೇರಿಕ ಮತ್ತು ರಷ್ಯಾ ಮುಖಂಡರುಗಳ ಸಮ್ಮೇಳನವೊಂದು ಮಾಸ್ಕೋದಲ್ಲಿ ನಡೆಯುವುದೆಂದು ಹೇಳಲಾಗಿದೆ.

ಪೋಲಟಾವಾದಲ್ಲಿ ಭೀಕರ ಕದನ

ಪೋಲಟಾವ ಕ್ಷೇತ್ರದಲ್ಲಿ ಭೀಕರ ಕದನ ನಡೆಯುತ್ತಿದೆಯೆಂದು, ಜರ್ಮನರ ಪ್ರತಿಭಟನೆ ಉಗ್ರವಾಗಿದೆಯೆಂದೂ ವರದಿಯಾಗಿದೆ. ಪೋಲಟಾವ ಹತ್ತಿರ ರಷ್ಯನರು ಪ್ರಚಂಡ ಟ್ಯಾಂಕ್ ಕದನ ನಡೆಸಿ, ಶತ್ರುವನ್ನು ನಾಲ್ಕು ಮೈಲಿ ಹಿಂದಕ್ಕೆ ನೂಕಿ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದಾರೆ.

ಫಿನ್‌ಲೆಂಡಿನ ಶಾಂತಿ ಷರತ್ತು

ಯುದ್ಧಾನಂತರ ಫಿನ್‌ಲೆಂಡಿಗೆ ಪೂರ್ಣ ಸ್ವಾತಂತ್ರ್ಯ ಕೊಡಬೇಕು, ಫಿನ್‌ಲೆಂಡಿನಿಂದ ಜರ್ಮನರು ಹೋದ ನಂತರ ರಷ್ಯನರು ಆಕ್ರಮಿಸಿಕೊಳ್ಳಕೂಡದು, ಮಿತ್ರರು ಆಹಾರಪದಾರ್ಥ ಮತ್ತು ಇತರ ವಸ್ತುಗಳನ್ನು ಜರ್ಮನರ ಬದಲು ಸರಬರಾಜು ಮಾಡಬೇಕು ಎಂಬ ಮೂರು ಷರತ್ತುಗಳನ್ನು ಮಿತ್ರರಾಷ್ಟ್ರಗಳು ಒಪ್ಪುವುದಾದರೆ ಫಿನ್‌ಲೆಂಡ್ ಶಾಂತಿ ಮಾಡಿಕೊಳ್ಳುವುದೆಂದು ಹೇಳಲಾಗಿದೆ.

ಹಿಟ್ಲರನಿಗೆ ಮಿಲಿಟರಿ ಸಲಹ ಸಮಿತಿ

ಹಿಟ್ಲರನ ಸಹಾಯಕ್ಕೋಸ್ಕರ ಒಂದು ಮಿಲಿಟರಿ ಸಲಹಾ ಸಮಿತಿಯನ್ನು ಏರ್ಪಡಿಸಲು ನಾಜಿಗಳು ಯತ್ನ ನಡೆಸುತ್ತಿರುವರೆಂದು ಹೇಳಲಾಗಿದೆ.

ಅಕ್ಕಿ, ರಾಗಿ ಸಿಕ್ಕದೆ ಎಲೆ ತಿನ್ನುತ್ತಿದ್ದಾರೆ

ಮದ್ರಾಸ್ ಪ್ರಾಂತ್ಯದ ಚಿತ್ತೂರಿನ ಜನರಿಗೆ ಅಕ್ಕಿ, ರಾಗಿ ಸಿಕ್ಕದೆ, ಹೇವದಾರು ಎಲೆಗಳನ್ನು ತಿಂದು ಜೀವಿಸುತ್ತಿರುವರೆಂದು ವರದಿಯಾಗಿದೆ.

ಕ್ಷಾಮಬಾಧೆ ಹೆಚ್ಚುತ್ತಿದೆ

ಕಲ್ಕತ್ತಾದಲ್ಲಿ ಕ್ಷಾಮಬಾಧೆಯಿಂದ ರಸ್ತೆಯಲ್ಲಿ ನರಳುತ್ತಿದ್ದ ೧೩ ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ...ಆಸ್ಪತ್ರೆಯಲ್ಲಿ ೧೩ ಜನ ಸತ್ತರು.

ಕಲ್ಕತ್ತಾ ನಗರದಲ್ಲಿ ಕಷ್ಟ ಆಜ್ಞೆ ಯುದ್ಧಕಾಲಕ್ಕೆ ಜಾರಿಗೆ ತರಲಾಗುವುದೆಂಬ ವದಂತಿಗೆ ಆಧಾರವಿಲ್ಲವೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರಕು ಬಟ್ಟೆಗಳಿಗೆ ರಿಯಾಯಿತಿ

ಭಾರತ ಸರ್ಕಾರದ ಟೆಕ್ಸ್‌ಟೈಲ್ ಕಮಿಷನರು ಒಂದು ಆಜ್ಞೆಯನ್ನು ... ಧಾನ್ಯಗಳಿಂದ ಕತ್ತರಿಸಿದ ಸಣ್ಣ ... ಬಟ್ಟೆಗಳು ಮತ್ತು ೭೨ ಇಂಚುಗಳಿಗೆ ... ಮೀರಿದ ಕತ್ತರಿಸಿದ ಬಟ್ಟೆಗಳು ... ಬಟ್ಟೆಗೆ ಅನ್ವಯಿಸುವುದಿಲ್ಲವೆಂದು ... ಸಿದ್ದಾರೆ.

ತಂದೆ-ಮಕ್ಕಳ ಮರಣ

ಬ್ರಿಟನ್ನಿನ ೭೫ ವರ್ಷದ ಎಲೆಕ್ಟ್ರಿಕಲ್ ಇಂಜನಿಯರು ಮತ್ತು ವ್ಯವಸಾಯ ಸಂಶೋಧಕರೂ ಆದ ಮಿ॥ ಮ್ಯಾಥ್ಯೂಸ್‌ರವರು ತಮ್ಮ ೧೫ ವರ್ಷದ ಮಗ ಡೇವಿಡ್ ಎಂಬುವನು ನೀರಿನಲ್ಲಿ ಮುಳುಗಿ ಮರಣ ಹೊಂದಿದ್ದನ್ನು ಕೇಳಿ ಹೃದಯ ಬಡಿತ ನಿಂತು ಅವರೂ ಮೃತಪಟ್ಟರೆಂದು ವರದಿಯಾಗಿದೆ.

ಮಿಲಿಟರಿ ಕಂಟ್ರಾಕ್ಟರಿಗೆ ಶಿಕ್ಷೆ

ಕರಾಚಿ ಮಿಲಿಟರಿ ಸ್ಟೋರ್ಸ್‌ಗೆ ಸೇರಿದ್ದ ೧೨ ಸಾವಿರ ರೂ. ಗಳ ತಾಮ್ರ, ಹಿತ್ತಾಳೆ ತಂತಿಗಳನ್ನು ದುರುಪಯೋಗಪಡಿಸಿದ ... ದಕ್ಕೆ ಮೋಸ ಮಾಡಿದರೆಂಬ ಆಪಾದನೆಯ ಮೇಲೆ ಮಿ॥ ಸ್ಟೀವನ್‌ಸನ್ ಎಂಬ ಮಿಲಿಟರಿ ಕಂಟ್ರಾಕ್ಟರಿಗೆ ೭ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಫಾಗಿಯಾ ಮೇಲೆ ಅಗಾಧ ಧಾಳಿ

ಇಟಲಿ ಪೂರ್ವ ತೀರದಲ್ಲಿರುವ ಮುಖ್ಯ ವಿಮಾನ ನೆಲೆಯಾದ ಫಾಗಿಯಾ ಮೇಲೆ ೩ ಮಿತ್ರ ವಿಮಾನ ಪಡೆಗಳು ವಿಶಾಲದಲ್ಲಿ ಅಗಾಧ ಧಾಳಿ ನಡೆಸಿ ಅಪಾರ ನಷ್ಟವುಂಟು ಮಾಡಿದವು. ೨೬ ಶತ್ರು ವಿಮಾನಗಳು ನಾಶವಾಗಿ, ೩೦೦-೪೦೦ ಶತ್ರು ಸೈನಿಕರು ಕೊಲೆಯಾದರು.

ಬರ್ಮಾ ಮೇಲೆ ಮುತ್ತಿಗೆ

ಜಪಾನಿನ ಮೇಲೆ ಮೊದಲನೆ ಮುತ್ತಿಗೆ ಭಾರತದಿಂದ ಪ್ರಾರಂಭವಾಗುವುದೆಂದೂ, ಬರ್ಮಾ ಮೇಲೆ ಭೂಜಲವಾಯು ಧಾಳಿ ಆರಂಭವಾಗುವುದೆಂದೂ ಹೇಳಲಾಗಿದೆ. ಬಂಗಾಳಕೊಲ್ಲಿ ಅಥವ ಇಂಡಿಯನ್ ಸಮುದ್ರದಿಂದಲೂ ಮತ್ತು ಅಸ್ಸಾಂ-ಬರ್ಮಾ ಗಡಿಯಿಂದಲೂ ಮುತ್ತಿಗೆ ನಡೆಸಲಾಗುವುದೆಂದು ಊಹಿಸಲಾಗಿದೆ.

ಲಂಡನ್ನಿನ "ನ್ಯೂಸ್ ಕ್ರಾನಿಕಲ್" ಪತ್ರಿಕೆಯು ಪ್ರಕಾರ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಮೇಲೆ ಮೊದಲು ಮುತ್ತಿಗೆ ನಡೆಸಲಾಗುವುದೆಂದೂ ಹೇಳಲಾಗಿದೆ.

ಸ್ಪೇನ್ ಯುವಕನ ಮೇಲೆ ಮೊಕದ್ದಮೆ

೨೫ ವರ್ಷದ ಲೂಯಿಸ್ ಲೋಪೆಜ್ ಕಾರ್ಡನ್ ಎಂಬ ಸ್ಪೇನ್ ದೇಶದವನು ಜಿಬ್ರಾಲ್ಟರ್ ಬಂದರಿಗೆ ನಷ್ಟಪಡಿಸಲು ಬಾಂಬುಗಳನ್ನು ಇಟ್ಟುಕೊಂಡಿದ್ದನೆಂದು ಅವನ ಮೇಲೆ ಮೊಕದ್ದಮೆ ಹೂಡಲಾಗಿದೆ.

ಆಹಾರ ಧಾನ್ಯಗಳ ರಫ್ತು

ಆಹಾರ ಧಾನ್ಯಗಳ ... ಪ್ರಾಂತ್ಯಗಳಿಗೆ ಆಹಾರ ಪದಾರ್ಥ... ಕಳುಹಿಸಲು ೧೨೦ ... ಪ್ರಾಂತ್ಯ ...

ಯುದ್ಧಾನಂತರ ಸಾಮಾಜಿಕ ಮಟ್ಟ ಉತ್ತಮವಾಗಬೇಕು

ಬೆಂಗಳೂರು ೨೭

[illegible]

ಆಹಾರ ಸಮಸ್ಯೆ

ಆಹಾರ ಸಮಸ್ಯೆಯು ವಿಶೇಷವಾಗಿ ಪಾತವಾದ್ದು, ಪರಿಸ್ಥಿತಿಯು ಉಗ್ರವಾದ್ದರಿಂದ ಅಕ್ಕಿ ಮತ್ತು ಇತರ ಧಾನ್ಯಗಳನ್ನು ಮಿತ್ರರಿಗೆ ಬೆಳೆಯಲು ಕಾರ್ಯಕ್ರಮಕ್ಕೆ ಗೊತ್ತಾಗಿದೆಯೋ, ಹಿಂದಿನ ಕೆಲಸಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೆಂದೂ ತಿಳಿಸಿದರು. ಜನರು ವ್ಯವಸಾಯಕ್ಕೆ ಹೋಗುವ ಇಚ್ಛೆಯನ್ನು ಉತ್ತಮಪಡಿಸಬೇಕೆಂದೂ ತಿಳಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸ

ಪ್ರಾಥಮಿಕ ವಿದ್ಯಾಭ್ಯಾಸವನ್ನು ವ್ಯಾಪಕಗೊಳಿಸಬೇಕಾದರೆ ಆರ್ಥಿಕ ದೃಷ್ಟಿಯಿಂದ ಈ ದರ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕು. ಶಾಲೆಗಳ ಸಂಖ್ಯೆ ಹೆಚ್ಚುವುದು ಅಗತ್ಯ. ವಿದ್ಯಾವಂತರಾದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಉಪಾಧ್ಯಾಯರ ವೃತ್ತಿಯನ್ನು ಅನುಸರಿಸಿದರೆ ಮಾತ್ರವೇ ಈ ಸಮಸ್ಯೆಯು ತೃಪ್ತಿಕರವಾಗಿ ಪರಿಹಾರವಾಗುವುದು ಸಾಧ್ಯವೆಂದು ದಿವಾನರು ತಿಳಿಸಿದರು.

ವೃತ್ತಿ ಶಿಕ್ಷಣ

ಸಂಸ್ಥಾನದಲ್ಲಿ ವೃತ್ತಿ ಶಿಕ್ಷಣದ ಇತಿಹಾಸವು ಗಮನಾರ್ಹವಾಗಿದೆ. ಅದು ವ್ಯಾಪಕವಾಗುವಂತೆ ವಿಸ್ತರಿಸಿ, ದೇಶದ ಕೈಗಾರಿಕೆ ಉದ್ಯಮಗಳಿಗೆ ಅದರಿಂದ ಸಹಜವಾದ ಸಹಾಯವಾಗುವಂತೆ ಮಾಡುವುದು ಅಗತ್ಯ.

ಸಂಸ್ಥಾನದ ಯುದ್ಧಾನಂತರ ಕೈಗಾರಿಕೆಗಳು ಸಾಧಿಸಿರುವದನ್ನು ಅಭಿವೃದ್ಧಿಪಡಿಸುವುದಲ್ಲದೆ ಕಾರ್ಖಾನೆಗಳಲ್ಲಿ ನಡೆಯುವ ಕೆಲಸದ ಮಾದರಿಯೊಂದು ಭಾಗವನ್ನು ಗೃಹಕೈಗಾರಿಕೆಯಾಗಿ ನಡೆಸಬಹುದೆ ಎಂಬುದನ್ನು ಯೋಚಿಸಬೇಕು. ಗೃಹ ಮತ್ತು ಕಾರ್ಖಾನೆ ಕೈಗಾರಿಕೆಗಳು ಪರಸ್ಪರ ಸ್ಪರ್ಧಿಸದೆ ಸಹಾಯಕವಾಗುವಂತೆ ವಿಸ್ತರಿಸಬೇಕು.

"ಆರ್ಥಿಕ ಉನ್ನತಿಯ ಬಗ್ಗೆ ಬಂದ ಸಲಹೆಗಳನ್ನು ಅದರ ದೂರದೃಷ್ಟಿಗೆ ಧಕ್ಕೆ ಬರದಂತೆ ಶೀಘ್ರವಾಗಿ ಫಲಕಾರಿಯಾಗುವಂಥ ಸಲಹೆಗಳನ್ನು ಕಾರ್ಯಗತ ಮಾಡುವುದು ನಮ್ಮ ಕರ್ತವ್ಯ" ಎಂಬುದಾಗಿ ದಿವಾನರು ಸೂಚಿಸಿದರು.

೫೦೦೦೦ ರೂ. ಉದಾರದಾನ

ಮಲ್ಲೇಶ್ವರದಲ್ಲಿ ಬಲಿಜ ನಾಯ್ಡು ಕೋಮಿನ ವಿದ್ಯಾರ್ಥಿಗಳಿಗೆ ಹಾಸ್ಟಲ್ ಭವನ ಕಟ್ಟಲು ಶ್ರೀ ಪಿ. ಅಪ್ಪಯ್ಯನಾಯುಡುರವರು ೩೦ ಸಾವಿರ ರೂ ಗಳನ್ನೂ, ವಿದ್ಯಾರ್ಥಿಗಳ ಭೋಜನ ಮುಂತಾದ ಸೌಕರ್ಯಗಳಿಗೆ ೨೦ ಸಾವಿರ ರೂ ಗಳನ್ನೂ ದಾನ ಮಾಡಿದ್ದಾರೆ.

ಕೆಲಸಕ್ಕೆ ಅನರ್ಹರು

ಕಂಟ್ರೋಲರ್ ಕಚೇರಿಯಲ್ಲಿ ಗುಮಾಸ್ತರಾಗಿದ್ದ ಶ್ರೀ ಇ. ವಿ ಸಿಲ್ವಾರವರು ೨ ವರ್ಷ ಕಾಲ ಸರ್ಕಾರದ ಹುದ್ದೆಗೆ ಸೇರದಂತೆ ಡಿಬಾರ್ ಮಾಡಲಾಗಿದೆ.

ಬೆವಿನ್ ಟ್ರೈನಿಂಗ್

ಚನ್ನಪಟ್ಟಣದ ಸ್ಪನ್ ಸಿಲ್ಕ್ ಮಿಲ್ಲಿನಲ್ಲಿ ಎಲೆಕ್ಟ್ರಿಕಲ್ ಇಂಜನಿಯರಾದ ಶ್ರೀ ಆರ್. ಗುಂಡೂರಾಯರನ್ನು ಬೆವಿನ್ ಟ್ರೈನಿಂಗ್ ಸ್ಕೀಮಿಗೆ ಆರಿಸಲಾಗಿದೆ.

ಪತ್ರಿಕೋದ್ಯೋಗಿಗಳ ಸಮ್ಮೇಳನ

ಮೈಸೂರು ಸಂಸ್ಥಾನದ ಎರಡನೇ ಪತ್ರಿಕೋದ್ಯೋಗಿಗಳ ಸಮ್ಮೇಳನದ ಆರಂಭೋತ್ಸವವನ್ನು ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು ನೆರವೇರಿಸಲು ಒಪ್ಪಿರುತ್ತಾರೆ. ಅಧಿವೇಶನವು ಸೆಪ್ಟೆಂಬರ್ ೧೯ ಮತ್ತು ೨೦ ರಲ್ಲಿ ನಡೆಯುವುದು.

ಭಾರಿ ಕೇಡಿಗಳು

೧೮ ಸಾರಿ ಶಿಕ್ಷೆ ಅನುಭವಿಸಿದ ಭಾರಿ ಕೇಡಿಗಳಾದ ಮುಕುಂದ ಮತ್ತು ಹಯಾತ್ ಎಂಬುವರು ಮನೆ ನುಗ್ಗಿ ಕಳ್ಳತನ ಮಾಡಿದರೆಂದು ಸೆಷನ್ಸ್ ವಿಚಾರಣೆಗೆ ಗುರಿಮಾಡಲಾಗಿದೆ.

ಜರ್ಮನಿಗೆ ಗಂಡಾಂತರ

"ಜರ್ಮನಿಗೆ ಈಗ ಭಾರೀ ಗಂಡಾಂತರ ಸಂಭವಿಸಿದೆ. ಇಂದು ನಮ್ಮ ದೇಶಕ್ಕೆ ಸನ್ನಿಹಿತವಾಗಿರುವ ಪ್ರಾಣಘಾತುಕ ಅಪಾಯಗಳು ನಮ್ಮ ಇತಿಹಾಸದಲ್ಲೇ ಒಂದೆಂದೂ ಸಂಭವಿಸಿಲ್ಲ. ಜರ್ಮನಿ ಮತ್ತು ಜರ್ಮನ್ ಪ್ರಜೆಗಳನ್ನು ನಾಶಮಾಡಲು ಮಿತ್ರರಾಷ್ಟ್ರಗಳು ಯುದ್ಧಮಾಡುತ್ತಿದ್ದಾರೆಂದೂ ಆದರೆ ಜರ್ಮನಿ ಅವರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಸಂಭವವಿಲ್ಲವೆಂದು ಡಾ|| ಗೊಬೆಲ್ಸ್‌ರವರು 'ದಾಸ್‌ರೀಚ್' ಎಂಬ ಪತ್ರಿಕೆಯಲ್ಲಿ ತಿಳಿಸಿದ್ದಾರೆ.

ಇಂಡೊ ಚೈನಾಕ್ಕೆ ಸ್ವಾತಂತ್ರ್ಯ

ಫ್ರೆಂಚ್ ರಾಷ್ಟ್ರೀಯ ಸ್ವಾತಂತ್ರ್ಯ ಸಮಿತಿಯು ಫ್ರೆಂಚ್ ಇಂಡೊ ಚೈನಾಕ್ಕೆ ಸ್ವತಂತ್ರ್ಯ ಕೊಡಲು ನಿರ್ಧರಿಸಿದೆ. ಫ್ರಾನ್ಸ್ ಸ್ವತಂತ್ರವಾದ ಕೂಡಲೆ ಇದನ್ನು ರೂಢಿಗೊಳಿಸಲಾಗುವುದೆಂದು ಹೇಳಲಾಗಿದೆ.

ಅಲ್ಜೀರ್ಯರ್ಸ್‌ನಲ್ಲಿರುವ ರಾಷ್ಟ್ರ ಸಮಿತಿಗೆ ಫ್ರೆಂಚ್ ಸಮಿತಿಗೆ ಬ್ರಿಟನ್, ಅಮೆರಿಕ ಮತ್ತು ಕೆನಡಾ ದೇಶಗಳು ಮಾನ್ಯತೆಯನ್ನು ಕೊಟ್ಟಿವೆ.

ಡೆನ್ಮಾರ್ಕಿನಲ್ಲಿ ಅಶಾಂತಿ

ಡೆನ್ಮಾರ್ಕಿನಲ್ಲಿ ಅಶಾಂತಿ ಹೆಚ್ಚಾಗುತ್ತಿದೆಯೆಂದು ವರದಿಯಾಗಿದೆ. ಜಟ್ಲೆಂಡಿಗೆ ಉತ್ತರದಲ್ಲಿರುವ ಒಂದು ದ್ವೀಪದಲ್ಲಿ ಡೇನಿಷ್ ಕೆಲಸಗಾರರು ಮುಷ್ಕರ ಹೂಡಿ ಪ್ರದರ್ಶನ ನಡೆಸಿದರು. ಹಡಗು ಕಟ್ಟುವ ಕಾರ್ಖಾನೆಯನ್ನು ನಾಶಮಾಡಿ, ಜರ್ಮನರಿಗೆ ಬಹಳ ತೊಂದರೆಯುಂಟುಮಾಡಿದರು. ಇನ್ನೊಂದು ಪ್ರದೇಶದಲ್ಲಿ ಗಲಭೆ ನಡೆದು ೧೫ ಜನರನ್ನು ಕೊಲೆಮಾಡಲಾಯಿತು. ಕೋಪನ್ ಹೇಗನ್‌ನಲ್ಲಿ ಜರ್ಮನ್ ಸಬ್ ಮೆರಿನ್ ಕಾರ್ಖಾನೆಯ ೬ ಸಾವಿರ ಕೆಲಸಗಾರರು ಮುಷ್ಕರ ಹೂಡಿದರು.

ನ್ಯಾಷನಲ್ ಎಂಪೋರಿಯಂ

(ಮದರಾಸ್ ಅಂಗಡಿ)

ಮೈಸೂರು.

ಕ್ರೆಂ. ಮಿ. ಕೋರಾ ಡ್ರಿಲ್	0	10
ರ್‍ಯಾಲಿ ಬ್ರದರ್ಸ್ ,, ,,	0	13
ಥಿರ್ ವೈಟ್ ಡ್ರಿಲ್	1	0
ಡಬ್ಲ್ ವೈಕಲ್ ಲಾಂಗ್ ಕ್ಲಾತ್	0	8
ಮಿನರ್ವಾ ಮಿ. ,,	0	9
ಚೇಚಿ ನಂ. 36 ,,	0	11
ಕೋರಾ 44 ವೈಡ್ ,,	0	11
ನಂ 3640 ,,	0	7
ಲಾಂಗ್‌ಕ್ಲಾತ್ ಹಾಫ್ ಆರಂ	1	9
ಸ್ಪೋರ್ಟ್ಸ್ ,,	2	0
ಸ್ಪೋರ್ಟ್ಸ್ ಷರ್ಟಿಂಗ್		
೧ ನೇ ದರ್ಜೆ	0	14
,, ೨ ನೇ ದರ್ಜೆ	0	12
ವಾಯಿಲ್ ಷರ್ಟಿಂಗ್	0	12
ವೈಟ್ ಸೂಟ್ ಕ್ಲಾತ್	0	14
ಕಾರ್ಟಿ ರನ್	3	8
ಇಟಾಲಿಯಾಟ್ ಲೈನಿಂಗ್ 48 ವೈಡ್	1	8
ಇಂಡಿಯನ್ ಟೆಕ್ಸ್‌ಟೈಲ್ಸ್		
ಟ್ವಿಲ್ ಪ್ರಿಂಟ್	1	6
ಚಿಂಟ್ ಫಾಸ್ಟ್ ಕಲರ್	0	11
,, ಅಫಾಸ್ಟ್ ,,	0	8
ವಾಯಿಲ್ 45" ವೈಡ್	1	0
ಚೆಕ್ಸ್ ಖದ್ದರ್ ಷರ್ಟಿಂಗ್	0	6
ಬಾಯ್ಸ್ ಪ್ಯೂರ್ ಉಲ್ ಸ್ವೆಟರ್ಸ್	2	0
ಕೋರಾ ಮಲ್ 50" ವೈಡ್	0	9
ಇಂಡಿಯನ್ ಗ್ಲಾಸ್ಗೋ ಮಲ್	1	0
ಸೂರತ್ ಕೋಟಿಂಗ್	1	4
ಗ್ರೆ ಕೋಟಿಂಗ್ ಸ್ಟ್ರೈಪ್ಸ್	0	11
ಕ್ರೆಂ ಮಿ. ಧೋತಿ 2×8,	5	12
ರಾಜಾ ,, ನಂ 28 ,, ,,	6	15
ಫಿನ್ಲೆ ಟೈಪ್ ,, ,,	8	0
ರ್‍ಯಾಲಿಕೊ ಮಿಲ್ಸ್ ,, ,,	8	12
ಮರ್ಕ್ಯೆಂಟ್ಸ್ ,, ,,	9	0
ಕ್ರೆಂ ಮಿ ಹಾಲೆಂಡ್ 36 ವೈಡ್	0	10
ಸುಪೀರಿಯರ್ ಬ್ಲಾಂಚೆ ವ್ಯಾಟ	0	14

ಈಗ ಆಗುತ್ತಿರುವ ಬಟ್ಟೆಗಳ ಇಳಿತಗಳಲ್ಲಿ ಗೌರಿ ಹಬ್ಬಕ್ಕೆ

ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಜುಬಲಿ [illegible] ಮೊದಲ ಮಾದರಿಯನ್ನು ಹೋಲಿದು ಸಿದ್ಧಪಡಿಸಿದ (ರಿಜಿಸ್ಟರ್ಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ಪಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ದೊರೆಯಾಗಿ ತೆರೆದಿದ್ದಾರೆ.

ಮನೆ, ಜಮೀನು ಮತ್ತು ಷೇರು

ಕೊಳ್ಳುವವರೂ, ಮಾರುವವರೂ ನಮ್ಮಲ್ಲಿ ವಿಚಾರಿಸಿ

ಬಿ. ಆರ್. ಲಕ್ಷ್ಮಣಶೆಟ್ಟಿ

ದಿ ಎಸ್ಟೇಟ್ ಬ್ರೋಕರೇಜ್ ಹೌಸ್, ಸಯ್ಯಾಜಿರಾವ್ ರಸ್ತೆ, ಮೈಸೂರು.

Edited, printed and published by A. R. Nagarajan, at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಬನ್ನೀ ಉಪಯೋಗಿಸಿ.

ಡಿ. ಪುಟ್ಟೆಯಪ್ಪ ಐನಸಿಂಡಿ, ದೇವರಾಜ ಮಾರ್ಕೆಟ್, ಮೈಸೂರು.

[illegible]

ಪ್ರತಿ ಶನಿವಾರ ಮತ್ತು ಭಾನುವಾರ 1 ಘಂಟೆಗೆ ಮ್ಯಾಟಿನಿ ಇರುತ್ತೆ.

ನ್ಯೂ ಅಪೇರಾ ಟಾಕೀಸ್

೨೭—೮—೪೩ ರಿಂದ

ಟಿ. ಸೂರ್ಯಕುಮಾರಿ, ಎಂ. ಕೆ. ರಾಧ, ಆರಬಿ ಲಕ್ಷ್ಮೀದೇವಿ, ಮುಂತಾದವರು ಪಾತ್ರ ವಹಿಸಿರುವ

ಪ್ರೇಮ ಬಂಧನ

(ತಮಿಳು ಭಾಷೆ)

ಸಂಪುಟ ೨] ಭಾನುವಾರ ೨೮—೮—೪೩ [ಸಂಚಿಕೆ ೪೮

ಭಾರತದ ಪ್ರಶ್ನೆ ಚರ್ಚೆಯಿಲ್ಲ

ಮೈಸೂರು ಪೌರಸಭೆಯಲ್ಲಿ ವಾಕ್ ಔಟ್
ದಕ್ಷಿಣ ಆಫ್ರಿಕದಲ್ಲಿ ಭಾರತದ ಟ್ರೇಡ್ ಕಮಿಷನರ ನೇಮಕ

ಪೌರಸಭೆಯಲ್ಲಿ ವಾಕ್ ಔಟ್

ಮೈಸೂರು ೨೭

ನಿನ್ನೆ ಮಧ್ಯಾಹ್ನ ನಡೆದ ಪೌರ ಸಭೆಯ ವಿವಾದಾಂಶದಲ್ಲಿ ಅಧ್ಯಕ್ಷರ ನಡವಳಿಕೆಯನ್ನು ಪ್ರತಿಭಟಿಸಲು ೧೭ ಮಂದಿ ಸದಸ್ಯರು ಸಭೆ ಪರಿತ್ಯಾಗಮಾಡಿದರು.

ಸಭೆಯು ಪ್ರಾರಂಭವಾಗಿ, ನಗರದಲ್ಲಿ ಜನರಿಗೆ ಸೌಕರ್ಯಕ್ಕೋಸ್ಕರ ನಲ್ಲಿಗಳನ್ನು ಹಾಕುವ ವಿಷಯವನ್ನು ಚರ್ಚೆ ಮಾಡುವಾಗ, ಶ್ರೀ. ಜನಾರ್ದನನಾಯ್ಡು ರವರು ಕೃಷ್ಣರಾಜಮೊಹಲ್ಲಾದಲ್ಲಿ ನೀರಿನ ಸರಬರಾಜು ಸರಿಯಾಗಿಲ್ಲವೆಂದು ಅಧ್ಯಕ್ಷರ ಗಮನಕ್ಕೆ ತಂದರು. ಎಲ್ಲ ಮೊಹಲ್ಲಾಗಳಲ್ಲೂ ಇಂತಹ ಅನೇಕ ಫಿರ್ಯಾದುಗಳು ಬರುತ್ತಿವೆ ಯೆಂದೂ, ಇದನ್ನು ಈಗಿನ ಪರಿಸ್ಥಿತಿಯಲ್ಲಿ ನಲ್ಲಿಗಳಿಗೆ ಮೀಟರನ್ನು ಹಾಕುವುದರಿಂದಲೇ ಸರಿಮಾಡ ವ್ಯವಸ್ಥೆ ಆಗುವುದೇ ಹೊರತು ಇನ್ನಾವುದರಿಂದಲೂ ಅನುಕೂಲವಾಗುವುದಿಲ್ಲವೆಂದು ಅಧ್ಯಕ್ಷರು ಉತ್ತರಕೊಟ್ಟರು. ಈಗಿನ ಎ.ಆರ್.ಪಿ ಸೆನ್ಸಸ್ ಪ್ರಕಾರ ರಾಜಧಾನಿಯಲ್ಲಿ ೨ ಲಕ್ಷ ಪ್ರಜಾ ಸಂಖ್ಯೆ ಇರುವರೆಂದೂ, ಆದರಿಂದ ನೀರಿನ ಖರ್ಚು ಜಾಸ್ತಿಯಾಗಿದೆಯೆಂದೂ, ತಿಳಿಸಿದರು.

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ಪ್ರಶ್ನೆಗೆ ಅಧ್ಯಕ್ಷರು ಉತ್ತರಕೊಡುತ್ತಾ ಹಿಂದಿನ ಬಾಕಿ ಹಣ ವಸೂಲುಮಾಡಲು ಕಳೆದ ೫ ವರ್ಷಗಳಲ್ಲಿ ೩೦೦ ಕೇಸುಗಳು ಹೂಡಲಾಯಿತು ಎಂದೂ, ಅದರಲ್ಲಿ ೩ ಕೇಸುಗಳು ಫಲಕಾರಿಯಾಗಲಿಲ್ಲವೆಂದೂ ತಿಳಿಸಿದರು. ಪೌರ ಸಭೆ ... ೫ ವರ್ಷಗಳಲ್ಲಿ ೧೨ ಕೇಸುಗಳನ್ನು ಹೂಡಲಾಗಿದೆ ಎಂದೂ ತಿಳಿಸಿದರು. ಶ್ರೀ ರಾಜಗೋಪಾಲಯ್ಯಂಗಾರ್ಯರು ಉಪ ಪ್ರಶ್ನೆ ಹಾಕಲಾಗಿ, ಅಧ್ಯಕ್ಷರು ಈ ವಿಚಾರಗಳನ್ನು ಸದಸ್ಯರು ಚರ್ಚಿಸುವುದು ಅನಾವಶ್ಯಕ ಮತ್ತು "ತಮ್ಮ ಹಕ್ಕನ್ನು ಸದಸ್ಯರು ದುರುಪಯೋಗಪಡಿಸುತ್ತಿದ್ದಾರೆ" ಎಂದು ಹೇಳಿದರು. ಅಧ್ಯಕ್ಷರು ಅಂತಹ ವಾಕ್ಯವನ್ನು ಆಡಕೂಡದೆಂದೂ, ಅದನ್ನು ವಾಪಸು ತೆಗೆದುಕೊಳ್ಳಬೇಕೆಂದೂ ಶ್ರೀ. ರಾಜಗೋಪಾಲಯ್ಯಂಗಾರ್ಯರು ಪ್ರತಿಭಟಿಸಿದರು. ಆದರೆ ಅಧ್ಯಕ್ಷರು ಅದನ್ನು ವಾಪಸು ತೆಗೆದುಕೊಳ್ಳಲು ನಿರಾಕರಿಸಿದರು.

ಅಧ್ಯಕ್ಷರ ನಡತೆಯು ಸಭೆಯ ಘನತೆಗೆ ತಕ್ಕುದಲ್ಲವೆಂದು ಪ್ರತಿಭಟಿಸಿ, ೧೭ ಮಂದಿ ಸದಸ್ಯರೂ ಸಭೆ ಪರಿತ್ಯಾಗಮಾಡಿದರು.

ಸಭೆಯಲ್ಲಿ ಕೋರಂ ಇಲ್ಲದುದರಿಂದ ಅಧ್ಯಕ್ಷರು ಸಭೆಯನ್ನು ಮುಂದು ಹಾಕಿದರು.

ನೊಂದವರಿಗೆ ಸಹಾಯ

ಬಂಗಾಳದಲ್ಲಿ ಅನ್ನಾಹಾರವಿಲ್ಲದೆ ಕಷ್ಟಪಡುವವರ ಸಹಾಯಾರ್ಥವಾಗಿ ಮೈಸೂರು ನಗರದಲ್ಲಿ ಒಂದು ಸಹಾಯ ನಿಧಿ ಕೂಡಿಸುತ್ತಿರಲಾಗಿದೆ. ಇದಕ್ಕೆ ಸಹಾಯಮಾಡಬೇಕೆನ್ನುವವರು ದಯವಿಟ್ಟು ಶ್ರೀ. ಎಂ.ಚಂದ್ರ ಜೋಯಿಸ್ ಉಪಾಧ್ಯಾಯ ... ಮಹಾಜನ ಹೈಸ್ಕೂಲ್ ಇವರಿಗಾಗಲಿ ಗ್ರಾಜುಯೇಟ್ಸ್ ಅಸೋಸಿಯೇಷನ್‌ಗಾಗಲಿ ... ಕಳುಹಿಸಬೇಕಾಗಿ, ಪುಣ್ಯಶಾಲಿಗಳಾಗಬೇಕಾಗಿದೆ.

ಟೀಚರುಗಳ ಭತ್ಯ ಹೆಚ್ಚಿಸಿದೆ

ಬಂಗಾಳ ಪ್ರಾಂತ್ಯದಲ್ಲಿರುವ ಎಲ್ಲಾ ... ಟೀಚರುಗಳಿಗೆ ನೀಡಲು ಕೊಡು, ... ಭತ್ಯಕ್ಕಿಂತ ಈಗ ೨ ರಷ್ಟು ಬಂಗಾಳ ಸರ್ಕಾರದವರು ಹೆಚ್ಚಿಸಿದ್ದಾರೆ.

ಯುದ್ಧ ಪರಿಸ್ಥಿತಿ ಕುರಿತು ಬ್ರೆಂಡರ್ ಬ್ರೇಕರ್‌ರ ಹೇಳಿಕೆ

ಬ್ರಿಟನ್ನಿನ ಸಹಾಯ ಸಚಿವರಾದ ಮಿ|| ಬ್ರೆಂಡನ್ ಬ್ರೇಕರ್‌ರವರು ನ್ಯೂಯಾರ್ಕಿನಲ್ಲಿ ಭಾಷಣಮಾಡುತ್ತಾ, ಇತ್ತೀಚೆಗೆ ನಡೆದ ಕ್ವಿಬೆಕ್ ಸಮ್ಮೇಳನದಲ್ಲಿ ಸ್ಟಾಲಿನರು ಭಾಗವಹಿಸದಿದ್ದುದರಿಂದಾಗಲೀ ಅಥವಾ ಯು.ಎಸ್.ಎಸ್.ಆರ್.ದಲ್ಲಿರುವ ಏಸ್ಸ್ಟ್ ರಾಯಭಾರಿಯನ್ನು ಬಸಿಲಾಯಿಸಿದುದರಿಂದಾಗಲಿ ರಷ್ಯವು ಜರ್ಮನಿಯೊಡನೆ ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಳ್ಳುವುದಂತೂ ಅರ್ಥವಿಲ್ಲ ಎಂದು ತಿಳಿಸಿದರು. ಇನ್ನಲ್ಲವು ಸಿಸ್ಟಂ ಕಾಲಂನವರ ಅಪಪ್ರಚಾರವೆಂದೂ, ತಿಳಿಸಿದರು. ಬ್ರಿಟನ್ನಿನ ಸಾಧ್ಯವಾದ ಎಲ್ಲಾ ಸಹಾಯವನ್ನು ಒದಗಿಸುವುದಲ್ಲದೆ ಸ್ಟಾಲಿನ್ ರವರನ್ನು ಒಳಗೊಂಡ ಪ್ರಿಂಸ್ಗಳ ಸಮ್ಮೇಳನವೊಂದನ್ನು ಏರ್ಪಡಿಸಲಾಗುವುದೆಂದೂ ತಿಳಿಸಿದರು.

ಭಾರತದ ಪರಿಸ್ಥಿತಿ ಬಗ್ಗೆ ಬಂದ ಒಂದು ಪ್ರಶ್ನೆಗೆ ಮಿ|| ಬ್ರೇಕರ್‌ರವರು ಉತ್ತರವಾಗಿ ಯುದ್ಧ ನಡೆಯುವ ಪರ್ಯಂತರ ಭಾರತದ ರಾಜಕೀಯ ಪ್ರಶ್ನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲವೆಂದೂ, ಬ್ರಿಟನ್ ಭಾರತದ ಬಗ್ಗೆ ಒಂದು ಸಂಕಲ್ಪ ಹೊಂದಿರುವುದಾಗಿಯೂ, ಅದನ್ನು ಸಂಪೂರ್ಣವಾಗಿ ನೆರವೇರಿಸುವುದಾಗಿಯೂ ತಿಳಿಸಿದರು.

ಚರ್ಚಿಲ್ ರೂಸ್ವೆಲ್ಟ್ ಸ್ಟಾಲಿನ್ ಸಮ್ಮೇಳನ

ಬ್ರಿಟಿಷ್ ಮುಖ್ಯ ಮಂತ್ರಿ ಮಿ|| ಚರ್ಚಿಲ್, ಅಧ್ಯಕ್ಷ ರೂಸ್ವೆಲ್ಟರೂ ಮತ್ತು ಮಾರ್ಷಲ್ ಸ್ಟಾಲಿನರೂ, ಈ ವರ್ಷಾಂತ್ಯದಲ್ಲಿ ಆಫ್ರಿಕಾದಲ್ಲಿ ಕಲೆತು, ಸಮ್ಮೇಳನವೊಂದನ್ನು ನಡೆಸುವರೆಂದು ಹೇಳಲಾಗಿದೆ.

ರಾಜೀನಾಮೆ

ಬೊಲಿವಿಯನ್ ಸರ್ಕಾರದ ಮಂತ್ರಿ ಮಂಡಲದವರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತು, ತಮ್ಮ ಅಧಿಕಾರವನ್ನು ಅಧ್ಯಕ್ಷರಿಗೆ ವಹಿಸಿದ್ದಾರೆ. ಅಧ್ಯಕ್ಷರು ಹೊಸ ಕ್ಯಾಬಿನೆಟ್ಟೊಂದನ್ನು ರಚಿಸುವರೆಂದು ... ಅನಂತರಗಳಲ್ಲಿ ಊಹಿಸಲಾಗಿದೆ.

ಆಗ್ನೇಯ ಏಷ್ಯಾದ ಸುಪ್ರೀಂ ಕಮ್ಯಾಂಡರ್

ಆಗ್ನೇಯ ಏಷ್ಯಾದ ಸುಪ್ರೀಂ ಕಮ್ಯಾಂಡರಾಗಿ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ ರವರನ್ನು ನೇಮಿಸಿರುವುದರ ಬಗ್ಗೆ ಚೀಣಾ ಮಿಲಿಟರಿ ಅಧಿಕಾರಿಗಳೊಬ್ಬರು ಈ ರೀತಿ ತಿಳಿಸುತ್ತಾರೆ.—

"ಜಪಾನನ್ನು ಸಾರಸಗಟಾದ ಕಾರ್ಯ ಕೈಗೊಳ್ಳುವುದಕ್ಕಾಗಿ ಕ್ವಿಬೆಕ್ ಸಮ್ಮೇಳನದಲ್ಲಿ ಆದ ನಿರ್ಧಾರದ ಅಂಗವಾಗಿ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರನ್ನು ಆಗ್ನೇಯ ಏಷ್ಯದ ಕಮ್ಯಾಂಡರನ್ನಾಗಿ ನೇಮಿಸಲಾಗಿದೆ."

ಆರ್.ಎ.ಎಫ್. ವಿಮಾನ ಮುತ್ತಿಗೆ

ಆರ್. ಎ ಎಫ್. ವಿಮಾನಗಳು ಜರ್ಮನಿಯ ನ್ಯೂರೆಂಬರ್ಗ್ ಮೇಲೆ ಮುತ್ತಿಗೆ ನಡೆಸಿ ಲ್ಯೂರ್ ಪ್ರದೇಶದ ಮೇಲೆ ಬಾಂಬು ಸುರಿಸಿದರೆಂದು ಅಧಿಕಾರಯುತವಾಗಿ ಗೊತ್ತಾಗಿದೆ.

ಆರ್. ಎ. ಎಫ್. ವಿಮಾನದ ಆಕಸ್ಮಿಕ ಘಟನೆ

ಇಂಡಿಯಾದ ಆರ್. ಎ. ಎಫ್. ಟ್ರಾನ್ಸ್‌ಪೋರ್ಟ್ ವಿಮಾನವೊಂದು ದೆಹಲಿಯಲ್ಲಿ ಹೋಗುತ್ತಿದ್ದಾಗ ಆಕಸ್ಮಾತ್ತಾಗಿ ಕೆಳಗೆ ಬಿದ್ದುದರ ಪರಿಣಾಮವಾಗಿ ವಿಮಾನದಲ್ಲಿದ್ದ ಆರುಜನ ಪ್ರಯಾಣಿಕರು ಮತ್ತು ಮೂವರು ವೈಮಾನಿಕರು ಆಕಸ್ಮಿಕ ಮರಣ ಹೊಂದಿದರೆಂದು ವರದಿಯಾಗಿದೆ.

ಬೈರಾಕೊವನ್ನು ತ್ಯಜಿಸಿದರು

ನ್ಯೂ ಜಾರ್ಜಿಯದಲ್ಲಿರುವ ಬೈರಾಕೊ ಎಂಬ ಸ್ಥಳವನ್ನು ತ್ಯಜಿಸಿದರೆಂದು ಗೊತ್ತಾಗಿದೆ. ಮಿತ್ರ ಪಕ್ಷದವರ ಪ್ರತಿಭಟನೆಯು ಹೆಚ್ಚಾಗಿದ್ದುದರಿಂದಲೇ ಶತ್ರುಗಳು ತ್ಯಜಿಸಬೇಕಾಯಿತು.

ಕೌಲೂನ್ ಕ್ಷೇತ್ರದ ಮೇಲೆ ಧಾಳಿ

ಕಳೆದ ಬುಧವಾರ ಹ್ಯಾಂಕೊ ಮೇಲೆ ಅಮೆರಿಕ ವಿಮಾನಗಳ ಮುತ್ತಿಗೆ ನಡೆಸಿ ಯಶಸ್ವಿಯಾಗಿ ಹಿಂದಿರುಗಿದ ಮಾರನೆಯ ದಿನ ಅಮೆರಿಕ ಬಾಂಬರುಗಳು ಹಾಂಗ್‌ಕಾಂಗಿನ ... ಕೌಲೂನ್ ಕ್ಷೇತ್ರದ ಮೇಲೆ ಧಾಳಿ ಹೂಡಲಾಯಿತು.

ಆಕಸ್ಮಿಕ ಮರಣ

ಕಳೆದ ೨೩ನೇ ತಾ|| ಚನ್ನಪಟ್ಟಣದಿಂದ ರಾಮಗಿರಿ ರೂ ... ವರ್ಕ್ಸ್ ಬಳಿ ಕೆಲಸ ಮಾಡುತ್ತಿದ್ದ ಪುಟ್ಟನಂಜೇಗೌಡ ಎಂಬುವನ ಮೇಲೆ ಕಲ್ಲಿನ ಗರ್ಡರ್ ಬಿದ್ದು ಸತ್ತನೆಂದು ತಿಳಿದು ಬಂದಿದೆ. ಸದರಿ ಪುಟ್ಟನಂಜೇಗೌಡನು ಲಾರಿಯ ಮೇಲೆ ಗರ್ಡರ್‌ಗಳನ್ನು ಇತರ ಕೂಲಿಗಳೊಡನೆ ಇಳಿಸುತ್ತಿದ್ದಾಗ ಆಕಸ್ಮಾತ್ ಕಬ್ಬಿಣದ ಗರ್ಡರು ಅವನ ಮೇಲೆ ಜಾರಿಬಿದ್ದುದರಲ್ಲಿ ಪರಿಣಾಮವಾಗಿ ಕೂಡಲೆ ಸತ್ತನೆಂದು ಗೊತ್ತಾಗಿದೆ. ಪೊಲೀಸ್ ಮಹಜರ್ ಕ್ರಮ ನಡೆಸಿದರು. ಈತನಿಗೆ ಹೆಂಡತಿಯೂ, ೬ ಮಕ್ಕಳೂ ಇರುವರೆಂದು ವರದಿಯಾಗಿದೆ.

ನರೇಂದ್ರಮಂಡಲಿಯ ಛಾನ್ಸಲರು

ಬರುವ ಅಕ್ಟೋಬರ್‌ನಲ್ಲಿ ನಡೆಯಲಿರುವ ನರೇಂದ್ರಮಂಡಲಿಯ ಅಧಿವೇಶನವು ನಡೆದನಂತರ ಭೂಪಾಲ್ ಸಂಸ್ಥಾನದ ನವಾಬರು ನರೇಂದ್ರ ಮಂಡಲಿಯ ಛಾನ್ಸಲರ್ ಆಗುವರೆಂದು ತಿಳಿಯಬರುತ್ತೆ.

ಜರ್ಮನ್ ಗುಪ್ತ ವಿಮಾನ

ಬಾಲ್ಟಿಕ್ ಸಮುದ್ರದಲ್ಲಿ ಸ್ವೀಡಿಷ್ ತೀರದ ಬಳಿ ಇರುವ ಓಲೆಂಡ್ ದ್ವೀಪದ ಒಂದು ಹಟ್ಟಿಣದಲ್ಲಿ ಜರ್ಮನ್ ಗುಪ್ತ ವಿಮಾನ ಬಂದಿಳಿದಿತ್ತೆಂದು ವರದಿಯಾಗಿದೆ. ವಿಮಾನದೊಳಗೆ ಯಾರೂ ಇರಲಿಲ್ಲವೆಂದು ಸಂಶೋಧಿಸಿ ನೋಡುವಲ್ಲಿ ಈ ವಿಮಾನವು ಬಹುಶಃ ರೇಡಿಯೋ ಸಹಾಯದಿಂದಲೇ ನಡೆಸಲ್ಪಟ್ಟುದಾಗಿಯೂ ಗೊತ್ತಾಗಿದೆ. ಪ್ರಯೋಗಕ್ಕೆ ಕಳುಹಿಸಿದಕ್ಕೆ ... ಈ ಹಾರಾಟ ನಡೆಸಲಾಯಿತೆಂದು ಹೇಳಲಾಗಿದೆ.

ಕುರಿ ಸಾಗಿಸುತ್ತಿದ್ದುದಕ್ಕಾಗಿ ಜುಲ್ಮಾನೆ

ಅಕ್ಬರ್ ಎಂಬಾತನು ತನ್ನಲ್ಲಿದ್ದ ಲ್ಯಾನ್ಸ್‌ಕ್ಲಿನ ಲೈಸೆನ್ಸನ್ನು ಹೊಂದಿ ... ಪಟ್ಟಣದ ಗಡಿಯಿಂದ ಹೊರಕ್ಕೆ ೫೦ ಕುರಿಗಳನ್ನು ಸಾಗಿಸುತ್ತಿದ್ದುದನ್ನು ಪೊಲೀಸ್ ಪತ್ತೆ ಹಚ್ಚಿ ಅವನ ಮೇಲೆ ಮೊಕದ್ದಮೆ ಹೂಡಿದ್ದರು. ಎಕ್ಸ್ ಅಫಿಷಿಯೊ ಮ್ಯಾ|| ರಾದ ಮಿ ಮಹಮದ್ ಅಹಮದ್‌ರವರು ಆತನಿಗೆ ೨೦ ರೂ ಜುಲ್ಮಾನೆ ವಿಧಿಸಿದರು.

ಮದರಾಸ್‌ನಲ್ಲಿ ರೇಷನಿಂಗ್

ಮದರಾಸು ನಗರದಲ್ಲಿ ಬರುವ ಸೆಪ್ಟೆಂಬರ್ ೨ನೇ ತಾರೀಖಿನಿಂದ ಅಕ್ಕಿಯ ರೇಷನಿಂಗನ್ನು ಜಾರಿಗೆ ತರಲಾಗುವುದೆಂದು ಸರ್ಕಾರದ ಪ್ರಕಟನೆಯೊಂದು ಹೊರಬಿದ್ದಿದೆ. ಈಗಾಗಲೇ ರೇಷನ್ ಕಾರ್ಡುಗಳನ್ನು ಎಲ್ಲರಿಗೂ ಹಂಚಲಾಗಿದೆಯೆಂದು ಗೊತ್ತಾಗಿದೆ.

ಬರ್ನಾರ್ಡ್ ಷಾ ಹೇಳಿಕೆ

ಭಾರತೀಯ ಸ್ವಾತಂತ್ರ್ಯಕ್ಕೆ ಇಂಗ್ಲೆಂಡಿನ ಸ್ತ್ರೀಯ ಲಂಗೋಟಿಯ ... ನ್ಯಾಯವಾಗಿರುವ ಕೌನ್ಸಿಲ್ಗೆ ಸೇರಿ ... ಹಿಸಲಾಗಿದ್ದ ಆಹ್ವಾನವನ್ನು ನಿರಾಕರಿಸಿ, ಜಾರ್ಜ್ ಬರ್ನಾರ್ಡ್ ಷಾರವರು ಈ ರೀತಿ ತಿಳಿಸಿದ್ದಾರೆ—

ಭಾರತದ ಸ್ವಾತಂತ್ರ್ಯದ ... ದಲ್ಲಿ ನಾವು ... ಇಂಡಿಯಾದ ಬಗ್ಗೆ ... ಆಡುವುದು ... ಬದಲು ... ಭಾರತೀಯರೇ ... ಬೇಕು.

ಅಕೆಡೆಮಿಕ್ ಕೌನ್ಸಿಲಿನಲ್ಲಿ ಚರ್ಚೆ

ಬೆಂಗಳೂರು ೨೮

ಮೈಸೂರು ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯು ಇಂದು ವೈಸ್ ಛಾನ್ಸಲರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಎನ್. ಎಸ್. ಸುಬ್ಬರಾಯರು ಮತ್ತು ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರುಗಳ ನಿಧನಕ್ಕಾಗಿ ಸಂತಾಪದ ನಿರ್ಣಯಗಳಾದುವು. ಸೆನೆಟ್ ಸಭೆಯಿಂದ ಕಳಿಸಲ್ಪಟ್ಟ ಶ್ರೀ ಪುಟ್ಟಯ್ಯನವರ ಪತ್ರಿಕೋದ್ಯೋಗದ ಶಿಕ್ಷಣದ ನಿರ್ಣಯ ವಿಚಾರವಾಗಿ ಚರ್ಚೆ ನಡೆಯಿತು. ಶ್ರೀ ವೆಂ. ಶ್ರೀಕಂಠಯ್ಯ, ಶ್ರೀ. ರಾಮರಾವ್ ... ಡಾ॥ ... ಬೆಂಬಲಿಸಿದ್ದರು ... ವಿಷಯದ ನಿರ್ಣಯ ... ಬಂದವು ... ಜನ ಸದಸ್ಯರು ತಟಸ್ಥರಾಗಿದ್ದರು.

ಬೆಂಕಿಯ ಪ್ರಮಾದ

... ಸಂಕಿ ... ಸುಟ್ಟ ಗಾಯಗಳಾದುವು. ... ಆಸ್ಪತ್ರೆಗೆ ಸೇರಿಸಲಾಯಿತು.

ಡೈನಾಮೆಟ್ ಸಿಡಿತ

... ತಾ॥ ... ಕೆಲಸ ಮಾಡುತ್ತಿದ್ದಾಗ ಡೈನಾಮೆಟ್ ಸಿಡಿದು ... ತೀವ್ರ ಪೆಟ್ಟು ... ಆಸ್ಪತ್ರೆಗೆ ಸೇರಿಸಲಾಯಿತು.

ಪೋಲೀಸರು ಗುಂಡು ಹಾರಿಸಿದರು

ದಾವಣಗೆರೆಗೆ ೨೦ ಮೈಲಿ ದೂರದಲ್ಲಿ ... ಗಡಿಯಲ್ಲಿ ಸುಮಾರು ೧೦೦ ... ಜನರು ... ಪೋಲೀಸರು ... ಪೋಲೀಸರ ಮೇಲೆ ಜನರು ಕವಣೆ ಕಲ್ಲನ್ನು ಬೀರಿದರೆಂದೂ, ಆಗ ಪೋಲೀಸರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತೆಂದೂ ವರದಿಯಾಗಿದೆ. ಈ ಪ್ರಕರಣದಲ್ಲಿ ಗುಂಡೇಟಿನ ಫಲವಾಗಿ ಒಬ್ಬನು ಸತ್ತು ಅನೇಕರಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ.

ಪತ್ರಿಕೋದ್ಯೋಗಿ ಬಿಡುಗಡೆ

ಮಿರಜ್ ಪತ್ರಿಕೋದ್ಯೋಗಿಯಾದ ಶ್ರೀ ... ಅಸ್ಪೃಶ್ಯರು ... ಇಟ್ಟುಕೊಂಡಿದ್ದರೆಂಬ ಆಪಾದನೆಯ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಅವರನ್ನು ಖುಲಾಸೆ ಮಾಡಿ ... ಇಟ್ಟುಕೊಂಡಿದ್ದ ಮಾತ್ರಕ್ಕೆ ಅಪರಾಧವಲ್ಲವೆಂದು ತೀರ್ಪಿತ್ತರು.

ಹುದ್ದೆ ನಿರಾಕರಣೆ

ಸಿಂಧ್ ... ಚೀಫ್ ಜಸ್ಟಿಸ್ ... ಶ್ರೀಮಾನ್ ... ಅವರು ... ನೇಮಿಸಲಾಗಿತ್ತು. ಆದರೆ ಭಾರತೀಯ ಸ್ವಾತಂತ್ರ್ಯವಾಗುವವರೆಗೂ ... ಒಪ್ಪುವುದಿಲ್ಲವೆಂದು ... ತಿಳಿಸಿದ್ದಾರೆ.

Edited, printed and published by A. R. Nagarajan, at the Sadhvi Press, D. Subbiah Road, Mysore

ಡೆನ್ಮಾರ್ಕಿನಲ್ಲಿ ಮತ್ತೆ ದಂಗೆ

ಡೆನ್ಮಾರ್ಕಿನಲ್ಲಿ ಗಲಭೆಗಳು ಇನ್ನೂ ನಿಂತಿಲ್ಲ ಮತ್ತೆ ಒಂದು ಕಡೆ ರೈಲನ್ನು ಉರುಳಿಸಲಾಯಿತು ಒಂದು ಕಡೆ ವಿದ್ಯುತ್ ಸೌಕರ್ಯಗಳನ್ನು ಕತ್ತರಿಸಲಾಯಿತು. ಪ್ರತಿಭಟನೆಯನ್ನು ಸೂಚಿಸಲು ಹೊರಟ ೧೦೭ ಜನರನ್ನು ಕೋಪನ್‌ಹೇಗನ್‌ನಲ್ಲಿ ಬಂಧಿಸಲಾಯಿತು.

ಗುಂಡು ಹಾರಿಸಿದರು

ಬಲ್ಗೇರಿಯಾ ರಾಜರಾದ ಬೋರಿಸ್‌ರವರ ಮೇಲೆ ಮಂಗಳವಾರ ರಾತ್ರಿ ಗುಂಡು ಹಾರಿಸಿದರೆಂದೂ, ಅವರಿಗೆ ತೀವ್ರ ಗಾಯಗಳಾಗಿವೆಯೆಂದೂ ತಿಳಿದುಬಂದಿದೆ.

ಚೀನಾದ ಒಪ್ಪಿಗೆ

ಫ್ರೆಂಚ್ ರಾಷ್ಟ್ರೀಯತಾ ಸ್ವಾತಂತ್ರ್ಯ ಸಂಘವನ್ನು ಚೀನಾ ಸರ್ಕಾರವು ಒಪ್ಪಿರುವುದಾಗಿ ಚೀನಾ ಸರ್ಕಾರ ಪ್ರಕಟಣೆ ... ಸುತ್ತದೆ.

ಪ್ರಕಟಣೆ

ಆಮಶಂಕೆ, ಅತಿಸಾರಗಳನ್ನು ಖಾತರಿಯಾಗಿ ನಿವಾರಿಸುವ

ಡಿಸೆಂಟಿಸೈಡ್

ಕೇವಲ 2 ಆಣೆಗಳಿಗೆ ಇವರುಗಳಲ್ಲಿ ದೊರೆಯುತ್ತೆ:

ಮೈಸೂರು :—

ಶ್ರೀ ಗುರುರಾಜ ಸ್ಟೋರ್ಸ್.

ವೆಂಕಟೇಶ ಬುಕ್ ಡಿಪೋ.

ಧನ್ವಂತರಿ ವೈದ್ಯಶಾಲಾ.

B. ಸಿ. ನಟರಾಜ್.

ಎಂ. ವಿ. ವೀರಣ್ಣಶೆಟ್ಟಿ ಅಂಡ್ ಸನ್

ಶಾಂತರಾಜ್ ಅಂಡ್ ಕೋ.

ಕೆ. ಎಸ್. ಜಾನಕಿರಾಮ್.

ಪಿ. ಎಸ್. ಚಿಕ್ಕಯ್ಯಶೆಟ್ಟಿ, ಗೋವಿಂದಶೆಟ್ಟಿ

ಮಾರ್ಡನ್ ಆಯುರ್ವೇದಿಕ್ ಫಾರ್ಮಸಿ.

ಭಾರತ ಸ್ಟೋರ್ಸ್.

ಬೇಕಾಗಿದೆ

ನೌಕರಿ ... ವಿವಾಹದ ... ದರ್ಜೆ ಬರೆದು ... S. S. L. C. ವರೆಗೆ ಓದಿದವರು ಟೈಪ್ ... ಕಲ್ ಟ್ರೈನಿಂಗ್ ... ಆಫೀಸಿಯಲ್ ... ಬೇಕಾಗಿದೆ. V ನೇ ಫಾರಂ ಓದಿದವರಿಗೆ ಈಗ 65 ರೂಪಾಯಿ ಸಂಬಳ ಕೊಡಲ್ಪಡುತ್ತೆ. ಊಟ, ವಸತಿಗಳಿಲ್ಲ ... ಎಲ್ಲಾ ವಿವರಗಳಿಗೆ ಈ ಕೆಳಗಿನ ವಿಳಾಸದಲ್ಲಿ ಪ್ರತಿದಿನ ಸಾಯಂಕಾಲ 4 ಘಂಟೆಯಿಂದ 6 ಘಂಟೆವರೆಗೆ ತಿಳಿಯಬಹುದು.

ಡಬ್ಲ್ಯು. ಹೆಚ್. ಥಿಯೋಬಾಲ್ಡ್, ಲೆಮನ್ ರೋಡ್, ಮೈಸೂರು.

ಕಲ್ಕತ್ತಾ ಪರಿಸ್ಥಿತಿ

ಕಲ್ಕತ್ತಾದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ಬಿದ್ದಿದ್ದ ... ಜನರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಒಟ್ಟು ... ಮಂದಿ ಸತ್ತರೆಂದು ವರದಿಯಾಗಿದೆ.

ಪ್ರಕಟಣೆಗೆ ನಿರಾಕರಣೆ

ಕಳೆದ ವರ್ಷ ಮುಖಂಡರ ಬಂಧನದ ಕಾಲದ ... ರಾಷ್ಟ್ರವಾಣಿ ಪತ್ರಿಕೆಯವರು ಪ್ರಕಟಣೆಯನ್ನು ನಿಲ್ಲಿಸಿದ್ದರು. ಪುನಃ ಅದರ ಪ್ರಕಟಣೆಗೆ ಸರ್ಕಾರದವರು ಅನುಮತಿ ಕೊಡಲಿಲ್ಲ.

ಆ ಕಾ ಶ ವಾ ಣಿ

೩೦ ನೇ ಸೋಮವಾರ

...೮-೩೦ ವೇಣುವಾದನ : ವಿದ್ವಾನ್ ಪಲ್ಲಡಂ ನಾಗರಾಜರಾವ್.

ನ್ಯಾಷನಲ್ ಎಂಪೋರಿಯಂ
(ಮದರಾಸ್ ಅಂಗಡಿ)
ಮೈಸೂರು.

ಕ್ಯಾ. ಮಿ. ಕೋರಾ ಡ್ರಿಲ್	0	10
ಡ್ಯಾಲಿ ಬ್ರದರ್ಸ್ ,, ,,	0	13
ಫೀಲ್ ವೈಟ್ ಡ್ರಿಲ್	1	0
ಡಬ್ಲ್ ...	0	8
ಮಿನರ್ವ ಮಿಲ್ ,,	0	9
ಬೇಬಿ ನಂ. 36 ,,	0	11
ಕೋರಾ ... ,,	0	11
...	[illegible]	[illegible]
ಲಾಂಗ್‌ಕ್ಲಾತ್ ...	1	9
ಸ್ಟ್ರೈಪ್ಸ್ ,,	2	0
ಸ್ಟ್ರೈಪ್ಸ್ ಷರ್ಟಿಂಗ್		
,, ೧ ನೇ ದರ್ಜೆ	0	11
,, ೨ ನೇ ದರ್ಜೆ	0	12
ಮಿಲ್ ಷರ್ಟಿಂಗ್	0	12
ವೈಟ್ ಸೂಟ್ ಕ್ಲಾತ್	0	11
ಕಾಟನ್ ರಗ್	3	8
ಇಟಾಲಿಯನ್ ಸ್ಪಿನ್ 48 ವೈಡ್	1	8
ಇಂಡಿಯನ್ ಟ್ವೀಲ್		
,, ಟ್ವೀಡ್ ಪ್ರಿಂಟ್	1	[illegible]
ಟೆಂಟ್ ಫಾಸ್ಟ್ ಕಲರ್	0	11
,, ... ,,	0	[illegible]
... 45" ವೈಡ್	1	[illegible]
ಚೆಕ್ಸ್ ಮದ್ರಾಸ್ ಷರ್ಟಿಂಗ್	0	[illegible]
... ಷರ್ಟಿಂಗ್ಸ್	2	[illegible]
ಕೋರಾ ವ್ಹಿಲ್ 50" ವೈಡ್	0	[illegible]
ಇಂಡಿಯನ್ ...	1	[illegible]
ಸೂರತ್ ಕೋಟಿಂಗ್		1
ಗ್ರೇ ಕೋಟಿಂಗ್ ...	6	1
ಕ್ಯಾ.ಮಿ. ಧೋತಿ 2×8,	5	1
ರಾಜಾ ,, ನಂ 28 ,, ,,	6	1
ಫಿನ್ಲೇ ... ,, ,,	8	[illegible]
ಕ್ಯಾಲಿಕೊ ಮಿಲ್ಸ್ ,,	8	1
ಮಹರಾಜ್ ... ,,	9	[illegible]
... 36 ವೈಡ್	0	1
...	0	1

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಜುಂಪರ್ ಮತ್ತು ಎಲ್ಲಾ ವೈಜಿನಲ್ಲೂ ಹೊಸ ಮಾದರಿಯಲ್ಲಿ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ... ಬಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್ ... ಮೈಸೂರು ಇವರ ಅಂಗಡಿಯಲ್ಲಿ ಕೊಂಡುಕೊಳ್ಳಿರಿ.

ಸ್ತ್ರೀಯರ ಸೌಕರ್ಯಕ್ಕಾಗಿ

ಸ್ತ್ರೀ ... ಧಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

... ಬ್ರಾಂಡ್ ಕಾಫಿ ಪುಡಿ

... ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.— ಚಿಲ್ಲರೆಯಾಗಿ ... ಸಕ್ಕರೆ, ... ಮತ್ತು ... ಸರಿ ದರದಲ್ಲಿ ದೊರೆಯುತ್ತವೆ.

ಚಿನ್ನ, ಬೆಳ್ಳಿ ಒಡವೆಗಳಿಗೆ ಬೆಳ್ಳಿಯ ಪಾತ್ರೆಗಳಿಗೆ

ಪಿ. ಜಿ. ಲಾಲ್

ಅಶೋಕರೋಡ (ದೊಡ್ಡಪೇಟೆ) ಮೈಸೂರು.

ಸತ್ಕಾರಕೂಟ ಆಗದು

ಬಂಗಾಳ ಸರ್ಕಾರವು ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಒಂದು ಆಜ್ಞೆಯನ್ನು ಹೊರಡಿಸಿ, ಸಿವಿಲ್ ಸಪ್ಲೈ ಕಂಟ್ರೋಲರ ಅಥವಾ ಡಿಸ್ಟ್ರಿಕ್ಟ್ ಮ್ಯಾ॥ ರ ಅನುಮತಿ ಪಡೆಯದೆ ಒಂದೇ ದಿನದಲ್ಲಿ ೫೦ ಜನಕ್ಕಿಂತ ಹೆಚ್ಚು ಅತಿಥಿಗಳನ್ನು ಸೇರಿಸಿ ಯಾವ ಸಮಾರಂಭ ಸತ್ಕಾರ ಕೂಟಗಳನ್ನೂ ನಡೆಸಕೂಡದೆಂದು ಸೂಚಿಸಿದೆ. ಈ ಆಜ್ಞೆಯು ಕಲ್ಕತ್ತ ಮತ್ತು ಅದಕ್ಕೆ ಸೇರಿದ ಕೈಗಾರಿಕಾ ಪ್ರದೇಶಗಳಿಗೂ ಅನ್ವಯಿಸುತ್ತದೆ.

ಮದರಾಸಿನಲ್ಲಿ ಅಕ್ಕಿ ರೇಷನಿಂಗ್

ಮದರಾಸ್ ನಗರದಲ್ಲಿ ಸೆಪ್ಟೆಂಬರ್ ೫ನೇ ದಿನದಿಂದ ಅಕ್ಕಿ ರೇಷನಿಂಗ್ ಜಾರಿಗೆ ತರಲಾಗುವುದು. ಒಂದು ತಿಂಗಳಿಗೆ ಒಟ್ಟು ೧೧,೦೦೦ ಟನ್ ಅಕ್ಕಿ ಬೇಕಾಗುವುದೆಂದೂ, ತ್ಯಾಂಜೂರ್, ದಕ್ಷಿಣ ಆರ್ಕಾಟ್ ಮತ್ತು ನೆಲ್ಲೂರು ಪ್ರಾಂತ್ಯಗಳಿಂದ ಅಷ್ಟು ಅಕ್ಕಿಯನ್ನು ಸರಬರಾಜು ಮಾಡಲಾಗುವುದೆಂದೂ ಹೇಳಲಾಗಿದೆ.

ಕಲ್ಕತ್ತಾದಲ್ಲಿ ಕ್ಷುದ್ಬಾಧೆಯು ಹೆಚ್ಚುತ್ತಿದೆ.

ಕಲ್ಕತ್ತಾ ನಗರದಲ್ಲಿ ಹೊಟ್ಟೆಗಿಲ್ಲದೆ ಸತ್ತಂತಿದ್ದ ೫೦ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ಮತ್ತು ೬ ಜನರು ಬೇರೆ ಆಸ್ಪತ್ರೆಗಳಲ್ಲಿ ಮರಣಹೊಂದಿದರೆಂದೂ ಹೇಳಲಾಗಿದೆ. ಆಗಸ್ಟ್ ೨೭ನೇ ತಾ॥ ಒಂದರಲ್ಲೇ ಕ್ಯಾಂಪ್ ಆಸ್ಪತ್ರೆಗೆ ೬೦ ನಿರಾಶ್ರಿತ ಜನರನ್ನು ಸೇರಿಸಲಾಯಿತೆಂದೂ ಅವರ ಪೈಕಿ ೧೫ ಮಂದಿ ಮರಣಹೊಂದಿದರೆಂದೂ ವರದಿಯಾಗಿದೆ.

ನಾರಾಯಣಗಂಜ್‌ನಲ್ಲಿ ಈ ಕಳೆದ ೧ ತಿಂಗಳಲ್ಲಿ ೧೦೦ ಜನ ಭಿಕ್ಷುಕರು ಸತ್ತಿರುವರೆಂದೂ, ಕಾಮಿಲದಲ್ಲಿ ಹೊಟ್ಟೆಗಿಲ್ಲದೆ ೧೩೫ ಮಂದಿ ಮರಣಹೊಂದಿದರೆಂದೂ ಹೇಳಲಾಗಿದೆ,

ಬರ್ದ್ವಾನ್‌ನಲ್ಲಿ ಅಕ್ಕಿ ದರವು ೧ ಮಣಕ್ಕೆ ಮೂವತ್ತೇಳುವರೆ ರೂ. ಗಳು ಹೆಚ್ಚಿದೆಯೆಂದೂ ಹೇಳಲಾಗಿದೆ. ಕಲ್ಕತ್ತಾನಗರದಲ್ಲಿ ಕಾಲರಾ ಉಪದ್ರವವು ಪ್ರಾರಂಭವಾಗಿದೆಯೆಂದು ಪ್ರಕಟವಾಗಿದೆ. ಕರಾಚಿ ಕ್ಷಾಮ ಪರಿಹಾರ ಸಮಿತಿಯವರು ೫೦೦೦ ಚೀಲ ಅಕ್ಕಿಯನ್ನೂ ಮತ್ತು ಸಿಂಧ್ ರಾಜ್ಯದ ಸ್ವಾಮಿಗಳವರು ೫ ಸಾವಿರ ಅಕ್ಕಿಯ ಚೀಲಗಳನ್ನೂ ಕಲ್ಕತ್ತಾಕ್ಕೆ ಕಳಿಸಿದ್ದಾರೆ.

ಶ್ರೀಮತಿ ರಾಮೇಶ್ವರಿ ನೆಹರು

ಶ್ರೀಮತಿ ರಾಮೇಶ್ವರಿ ನೆಹರುರವರಿಗೆ ತಿಂಗಳು ಶಿಕ್ಷೆ ಮತ್ತು ೧ ಸಾವಿರ ರೂ. ಜುಲ್ಮಾನೆ ವಿಧಿಸಲಾಗಿತ್ತು. ಅಪೀಲಿನಲ್ಲಿ ಲಾಹೋರ್ ಹೈಕೋರ್ಟಿನವರು ಜುಲ್ಮಾನೆಯನ್ನು ರದ್ದು ಮಾಡಿ ಇಲ್ಲಿಯವರೆಗೆ ಅನುಭವಿಸಿದ ಶಿಕ್ಷೆಯೇ ಸಾಕೆಂದು ತಿಳಿಸಿ ಅವರನ್ನು ಬಿಡುಗಡೆ ಮಾಡಿದರು.

ಲಾರಿ ಅಪಘಾತ

ಸೇಲಂಗೆ ೫ ಮೈಲಿ ದೂರದಲ್ಲಿ ಒಂದು ಲಾರಿಯೊಂದು ಮಗುಚಿಕೊಂಡು ೫ ಜನ ಸತ್ತರೆಂದೂ ೩೫ ಮಂದಿಗೆ ಗಾಯವಾಗಿವೆಯೆಂದೂ ವರದಿಯಾಗಿದೆ.

WEEKLY EDITION

ಸಂಪುಟ ೨] ಸೋಮವಾರ ೩೦--೮--೪೩ [ಸಂಚಿಕೆ ೪೯

ದಕ್ಷಿಣ ಇಟಲಿಯಲ್ಲಿ ಜರ್ಮನ್ ಸೈನ್ಯ

ಜಪಾನರಿಗೆ ಸಹಾಯಮಾಡುತ್ತಿದ್ದರೆಂದು ಗಾಂಧಿಜಿ ಬಂಧನ

ಹುಣಸೂರು ಹತ್ತಿರ ಮೋಟಾರು ಅಪಘಾತದಿಂದ ನಾಲ್ಕು ಮಂದಿ ಮರಣ

ದಕ್ಷಿಣ ಇಟಲಿಗೆ ಜರ್ಮನ್ ಸೈನ್ಯ

ದಕ್ಷಿಣ ಇಟಲಿಯ ಕೊನೆ ಭಾಗದಲ್ಲಿ ಮಿತ್ರರು ಬಂದಿಳಿಯುವರೆಂದು ಹೆದರಿ ಜರ್ಮನಿಯು ಹೆಚ್ಚಾಗಿ ಸೈನ್ಯವನ್ನು ಆ ಪ್ರದೇಶಕ್ಕೆ ತ್ವರೆಯಿಂದ ಕಳುಹಿಸುತ್ತಿರುವುದೆಂದು ಸ್ವೀಡಿಷ್ ಪತ್ರಿಕೆಯೊಂದು ತಿಳಿಸುತ್ತದೆ.

ದಕ್ಷಿಣ ಇಟಲಿ ಮೇಲೆ ಧಾಳಿ

ದಕ್ಷಿಣ ಇಟಲಿಯ ಮೇಲೆ ಮಿತ್ರ ವಿಮಾನಗಳು ಧಾಳಿ ಮಾಡಿದುದರ ಫಲವಾಗಿ ರೈಲ್ವೆ ಸಂಚಾರಕ್ಕೆ ಒಡೆದ ಅಡಚಣೆಯುಂಟಾಗಿದೆಯೆಂದೂ, ರೈಲುಗಳ ೬ ಡಾಕ್ ನೇ [illegible] ಹೋಗಿವೆಯೆಂದೂ ವರದಿಯಾಗಿದೆ.

ಸಾಲರ್ನೋ ಮತ್ತು ಸಿಂಬರಾ ಮೇಲೆ ಅಗಾಧ ಧಾಳಿ ಮಾಡಿ ಕೈಗಾರಿಕೆ ಕೇಂದ್ರಗಳಿಗೆ ಅಪಾರ ನಷ್ಟ ಉಂಟುಮಾಡಲಾಗಿದೆ. ೩೦ ಶತ್ರುವಿಮಾನಗಳನ್ನು ನೆಲಕ್ಕುರುಳಿಸಲಾಯಿತು.

ಫಾಗಿಯಾ ಮೇಲೆ ಮಿತ್ರವಿಮಾನಗಳ ಧಾಳಿಯಿಂದ ೧೧೮ ಆಕ್ಸಿಸ್ ವಿಮಾನಗಳು ನಾಶವಾದುವೆಂದು ಹೇಳಲಾಗಿದೆ.

ಮಿತ್ರರ ದಂಡಯಾತ್ರೆ ಎಲ್ಲಿ

ಮಿತ್ರ ದಂಡಯಾತ್ರೆಯು ಪೂರ್ವ ಯೂರೋಪಿನಲ್ಲಿ ಆರಂಭವಾಗುವುದಿಲ್ಲವೆಂದೂ, ಅದರ ಬದಲು ದಕ್ಷಿಣ ಮತ್ತು ಮಧ್ಯ ಇಟಲಿಯಲ್ಲಿ ಆರಂಭವಾಗುವುದೆಂದೂ ಹೇಳಲಾಗಿದೆ.

ಈ ಮುತ್ತಿಗೆಯು ಫಲಕಾರಿಯಾದ ನಂತರ ಕ್ರೀಟ್ ಮತ್ತು ಗ್ರೀಸ್ ಮೇಲೆ ದಂಡಯಾತ್ರೆ ಮುಂದುವರಿಯುವುದೆಂದು ಹೇಳಲಾಗಿದೆ.

ಫ್ರಾನ್ಸ್ ಮಾಜಿ ಅಧ್ಯಕ್ಷರ ದಸ್ತಗಿರಿ

ಫ್ರಾನ್ಸಿನ ಮಾಜಿ ಪ್ರೆಸಿಡೆಂಟರಾದ ಎಲ್ಬರ್ಟ್ ಲೆಬ್ರೂನ್ ರವರನ್ನು ಮತ್ತು ಬರ್ಲಿನ್ ಮಾಜಿ ಫ್ರೆಂಚ್ ರಾಯಭಾರಿಯಾದ ಅಂಡ್ರೂ ಫ್ರಾನ್ಸಿಸ್ ಪಾನ್‌ಸೆಟ್ ರವರನ್ನೂ ನಾಜಿ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಜಪಾನ್ ಮುತ್ತಲು ಅಮೆರಿಕನ್ ನೌಕಾ ಸಿದ್ಧತೆ

ಅಮೆರಿಕನ್ ನೌಕಾ ಮತ್ತು ವಿಮಾನದಳವನ್ನು ಪೆಸಿಫಿಕ್ಕಿನಲ್ಲಿ ಬಲವಾಗಿ ಉಪಯೋಗಿಸಿ, ಜಪಾನ್ ತೀರ ಪ್ರದೇಶಕ್ಕೆ ಅಮೆರಿಕ ಸೈನ್ಯವು ತಲುಪುವಂತೆ ಮಾಡಲಾಗುವುದೆಂದೂ ಮತ್ತು ಜಪಾನ್ ಮುತ್ತಿಗೆ ನಡೆಸಲು ಈಗಾಗಲೇ ನೂತನ ನೌಕಾ ಸಿದ್ಧತೆ ಆಗಿದೆಯೆಂದೂ ಅಮೆರಿಕಾ ನೌಕಾ ಸೆಕ್ರೆಟರಿಗಳಾದ ಕ್ನಾಕ್ಸ್ ರವರು ತಿಳಿಸಿದ್ದಾರೆ.

ಬಲ್ಗೇರಿಯಾ ದೊರೆಗಳ ಮರಣ

ಬಲ್ಗೇರಿಯಾ ದೊರೆಗಳಾದ ಬೋರಿಸ್ ರವರು ಮೊನ್ನೆ ಸಂಜೆ ಮರಣ ಹೊಂದಿದರೆಂದು ವರದಿಯಾಗಿದೆ. ಬೋರಿಸ್ ರವರ ಮೇಲೆ ಯಾರೋ ಗುಂಡುಹಾರಿಸಿದರೆಂದೂ ಅದರಿಂದ ತೀವ್ರಘಾಯವಾಗಿತ್ತೆಂದೂ ಹಿಂದೆ ತಿಳಿಸಲಾಗಿತ್ತು.

ಇವರ ಮರಣದಿಂದ ಬಾಲ್ಕನ್ನಿನಲ್ಲಿ ಆಕ್ಸಿಸ್ ನಡೆಸುತ್ತಿದ್ದ ರಾಜನೀತಿ ಒಳಸಂಚುಗಳಿಗೆ ಕುಂದುಕ ಬಂದಿತ್ತೆಂದು ಹೇಳಲಾಗಿದೆ.

ಡೆನ್ಮಾರ್ಕಿನಲ್ಲಿ ಮಾರ್ಷಿಯಲ್ ಲಾ

ಡೆನ್ಮಾರ್ಕಿನಲ್ಲಿ ಮಾರ್ಷಿಯಲ್ ಲಾವನ್ನು ಜಾರಿಗೆ ತರಲಾಗಿದೆಯೆಂದು ವರದಿಯಾಗಿದೆ. ಇತ್ತೀಚೆಗೆ ಡೆನ್ಮಾರ್ಕಿನಲ್ಲಿ ಜರ್ಮನಿ ವಿರುದ್ಧವಾಗಿ ಅಶಾಂತಿ ಹೆಚ್ಚಾಗಿ ಜನಗಳ ಚಳುವಳಿಯನ್ನು ಅಡಗಿಸಲು ಅವಶ್ಯಕವಾಗಿದ್ದುದರಿಂದ ಮಾರ್ಷಿಯಲ್ ಲಾವನ್ನು ಜಾರಿಗೆ ತರಲಾಗಿದೆ ಎಂದು ಹೇಳಲಾಗಿದೆ. ದಂಡನಾಯಕರ ಆಜ್ಞೆಯಂತೆ ಎಲ್ಲಾ ಅಧಿಕಾರಿಗಳೂ ತಮ್ಮ ಸ್ಥಾನದಲ್ಲಿದ್ದುಕೊಂಡು ಜರ್ಮನ್ ಅಧಿಕಾರಕ್ಕೆ ಒಳಗಾಗಬೇಕೆಂದೂ, ಜರ್ಮನ್ ಸೈನ್ಯಕ್ಕೆ ವಿರುದ್ಧವಾಗಿ ನಡೆದವರಿಗೆ ಶಿಕ್ಷೆ ಮಾಡಲಾಗುವುದೆಂದೂ ತಿಳಿಸಲಾಗಿದೆ.

ಡ್ಯಾನಿಷ್ ಮಂತ್ರಿಮಂಡಲವು ಜರ್ಮನ್ ಅಲ್ಟಿಮೇಟಮ್ಮನ್ನು ನಿರಾಕರಿಸಿ ರಾಜೀನಾಮೆ ಕೊಟ್ಟಿದೆ.

ಮೈ ಸುಟ್ಟುಕೊಂಡು ಮರಣ

ಮೈಸೂರು, ೨೦

ಕೃಷ್ಣರಾಜನಗರ [illegible] ಸಣ್ಣಕುಳ್ಳೆಗೌಡನ [illegible] ಮೈ ಸುಟ್ಟುಕೊಂಡು [illegible] ರಾಜೇಂದ್ರ ಆಸ್ಪತ್ರೆಗೆ [illegible] ಬಿಡಲಾಗಿತ್ತು. ಅವನು ನಿನ್ನೆ ಬೆಳಗ್ಗೆ ಅಲ್ಲಿ ಮರಣ ಹೊಂದಿದನು.

ಫುಟ್ ಬಾಲ್

ಆ॥ ಭಾ॥ ಫುಟ್‌ಬಾಲ್ ಸೆಮಿ ಫೈನಲ್ಸ್ ಪಂದ್ಯದಲ್ಲಿ ನಿನ್ನೆ ಸಂಜೆ ಮೈಸೂರು ರೋವರ್ಸ್ ಟೀಮಿನವರು, ಮೈ॥ ಟಾಲ್ಕಂ ಯೂನಿಯನ್ ರವರನ್ನು ೧ ಗೋಲಿನಿಂದ ಸೋಲಿಸಿದರು

ಕ್ರಿಕೆಟ್ ಪಂದ್ಯ

ಮೈಸೂರು ಸ್ಟೇಟ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ನಿನ್ನೆ ಮಹಾರಾಜಾ ಕಾಲೇಜಿನವರಿಗೂ ಮತ್ತು ಮೈಸೂರು ಜಿಮ್‌ಖಾನವರಿಗೂ ಪಂದ್ಯನಡೆದು, ಡ್ರಾ ಆಯಿತು.

ಮೋಟಾರು ಅಪಘಾತದಿಂದ ೪ ಮಂದಿ ಮರಣ

ಮೈಸೂರಿನಿಂದ ಹುಣಸೂರಿಗೆ ಹೋಗುತ್ತಿದ್ದ ಮಾಡರ್ನ್ ಮೋಟಾರ್ ಬಸ್ಸೊಂದು [illegible] ಮೈಲಿನ ಕಲ್ಲಿನ ಹತ್ತಿರ [illegible] ತಗ್ಗಿಗೆ ಉರುಳಿ, ೪ ಮಂದಿ (ಹೆಂಗಸರು, ಮಕ್ಕಳು) ಸತ್ತರೆಂದೂ, ೪ ಮಂದಿಗೆ ತೀವ್ರ ಘಾಯಗಳಾಗಿವೆಯೆಂದೂ ವರದಿಯಾಗಿದೆ.

ಭಾರಿ ಕಳ್ಳತನ

ನೆಗ್ಗದಹಳ್ಳಿ ಕೋಟೆ ೫ನೇ [illegible] ಲಿಂಗಪ್ಪನ ಮಗ ನಿಂಗಪ್ಪನ ಮನೆಯಲ್ಲಿ ನಿನ್ನೆ ದಿನ ಬಾಗಿಲು ಮುರಿದು ರೂ. ೬,೭೪೫-೮-೦ ಬೆಲೆ ಬಾಳುವ ಚಿನ್ನ, ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದಾಗಿಯೂ, ಪೋಲೀಸು ಮಂದಿ ತನಿಖೆ ನಡೆಸುತ್ತಿರುವುದಾಗಿಯೂ ವರದಿಯಾಗಿದೆ.

ಅತ್ತೆಯನ್ನು ಕೊಂದ ಅಳಿಯ

ಶ್ರೀರಂಗಪಟ್ಟಣದ ತಾಲ್ಲೂಕು, [illegible] ಹಳ್ಳಿ ಗ್ರಾಮದ ಗೌಡಯ್ಯನೆಂಬುವನು ತನ್ನ ಹೆಂಡತಿ ಮತ್ತು ಅತ್ತೆ ಮೇಲಿನ ಸಿಟ್ಟಿನಿಂದ [illegible] ಅತ್ತೆಯು ಹೊಲಕ್ಕೆ ಹೋಗಿದ್ದ ಸಮಯದಲ್ಲಿ ಆಕೆಯನ್ನು ಕೊಲೆಮಾಡಿದನೆಂದು ವರದಿಯಾಗಿದೆ. ಪೋಲೀಸರು ಗುಮಾನಿಯ ಮೇಲೆ [illegible]

ವಿದ್ಯಾರ್ಥಿಗಳಿಗೆ ಸಹಾಯ

[illegible] ತಿಂಗಳಿನ [illegible] ವಿದ್ಯಾರ್ಥಿಗಳು ಆಗಸ್ಟ್ ೨೩ನೇ ತಾರೀಖು ಉಪವಾಸ ಮಾಡಿ, ಆ ದಿವಸದಿಂದ ಉಳಿತಾಯವಾದ ಹಣವನ್ನು ಬಂಗಾಳ ಕ್ಷಾಮ ಪರಿಹಾರ ನಿಧಿಗೆ [illegible]

ನ್ಯೂರೆಂಬರ್ಗ್ ಮೇಲೆ ಧಾಳಿ

ದಕ್ಷಿಣ ಜರ್ಮನಿ [illegible] ನ್ಯೂರೆಂಬರ್ಗ್ [illegible] ಮಿತ್ರ ವಿಮಾನಗಳು ಧಾಳಿ ನಡೆಸಿ [illegible] ಶತ್ರು ಪ್ರತಿಭಟನೆ [illegible] ೩೩ ವಿಮಾನಗಳು [illegible]

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ತಾ|| ೩೦-೮-೪೩ ರಿಂದ ೫-೯-೪೩ ರವರೆಗೆ

ಮೇಷ... ಈ ವಾರ ನಿಮ್ಮ ಆರೋಗ್ಯ ಕೆಡುವ ಸಂಭವವಿದೆ. ಧನಕ್ಕೆ ತೊಂದರೆ, ಸರ್ಕಾರಿ ಕೆಲಸದಲ್ಲಿ ವಿಘ್ನ. ವ್ಯಾಪಾರಗಾರರಿಗೆ ಲಾಭ. ತಾ|| ೨, ೩ ಉತ್ತಮ.

ವೃಷಭ... ನಿಮಗೆ ಈ ವಾರ ರೋಗಭಯ. ಸ್ನೇಹಿತರ ಭಂಗ, ಬಂಧುಗಳಲ್ಲಿ ಕಲಹ, ಸರ್ಕಾರಿ ಕೆಲಸದಲ್ಲಿ ಅಪಜಯ, ವ್ಯಾಪಾರದಲ್ಲಿ ನಷ್ಟ. ತಾ|| ೩, ೪ ಉತ್ತಮ.

ಮಿಥುನ... ಆರೋಗ್ಯ ಚೆನ್ನಾಗಿದ್ದರೂ [illegible], ಸರ್ಕಾರಿ ಕೆಲಸದಲ್ಲಿ ಒಳ್ಳೆ ಜಯ, ಗೌರವ ಪ್ರಾಪ್ತಿ, ಕೆಲಸದಲ್ಲಿ ಉತ್ಸಾಹ, ವ್ಯಾಪಾರಗಾರರಿಗೆ ಲಾಭ. ತಾ|| ೩೧ ಒಳ್ಳೆಯ ದಿನ.

ಕರ್ಕಾಟಕ... ಈ ವಾರ ನಿಮಗೆ ಅನಾರೋಗ್ಯ, ಕುಟುಂಬದಲ್ಲಿ ಕಲಹ, ಕೆಲಸಕ್ಕೆ ವಿಘ್ನ, ನೌಕರಿ ಹೋಗುವಿಕೆ, ವ್ಯಾಪಾರಗಾರರಿಗೆ ನಷ್ಟ, ಹೆಚ್ಚು ಖರ್ಚು.

ಸಿಂಹ... ಅನಾರೋಗ್ಯ, ಧನಕ್ಕೆ ಅಡಚಣೆ, ಸರ್ಕಾರಿ ಕೆಲಸದಲ್ಲಿ ವಿಘ್ನ, ವ್ಯಾಪಾರದಲ್ಲಿ ಲಾಭ. ತಾ|| ೩, ೪ ಒಳ್ಳೆಯ ದಿನಗಳು.

ಕನ್ಯಾ... ಆರೋಗ್ಯ ಚೆನ್ನಾಗಿರುತ್ತದೆ, ಸರ್ಕಾರಿ ಕೆಲಸದಲ್ಲಿ ಅಪಜಯ, ವ್ಯಾಪಾರಗಾರರಿಗೆ ಧನ ನಷ್ಟ, ನಿದಾನ ಧನಾದಾಯ ಉಂಟಾಗುತ್ತೆ. ತಾ|| ೧, ೨ ಉತ್ತಮ.

ತುಲಾ... ನಿಮ್ಮ ರಾಶಿಯವರಿಗೆ ಈ ವಾರದಲ್ಲಿ ಸರ್ಕಾರಿ ಕೆಲಸ ಕಾರ್ಯದಲ್ಲಿ ಹೆಚ್ಚಿನ ಮಾನ, ಮರ್ಯಾದೆ, ಕೆಲಸಗಳಲ್ಲಿ ಜಯ, ವ್ಯಾಪಾರಗಾರರಿಗೆ ಧನ ನಷ್ಟ, ಸ್ವಕ್ಷೇತ್ರದಲ್ಲಿ ಅಡಚಣೆ, ಬಂಧುಗಳ ಅನಾರೋಗ್ಯ. ತಾ|| ೩೦, ೩೧ ಉತ್ತಮ.

ವೃಶ್ಚಿಕ... ಬಂಧುಗಳಲ್ಲಿ ಕಲಹ, ದೇಹಕ್ಕೆ ಉಷ್ಣಪೀಡೆ, ಸರ್ಕಾರಿ ಕೆಲಸದಲ್ಲಿ ಜಯ, ಗೌರವ ಪ್ರಾಪ್ತಿ, ವ್ಯಾಪಾರಸ್ಥರಿಗೆ ಲಾಭ. ತಾ|| ೩೦, ೧, ೨ ಶುಭ.

ಧನುಸ್ಸು... ಆರೋಗ್ಯ ಸಾಧಾರಣವಾಗಿರುತ್ತೆ, ಧನಕ್ಕೆ ತೊಂದರೆ, ಸರ್ಕಾರಿ ಕೆಲಸದಲ್ಲಿ ವಿಘ್ನ, ವ್ಯಾಪಾರದಲ್ಲಿ ಆದಾಯ ಚೆನ್ನಾಗಿದೆ. ತಾ|| ೨, ೩, ೪ ಒಳ್ಳೆಯ ದಿನಗಳು.

ಮಕರ... ಆರೋಗ್ಯ ವಿಷಯದಲ್ಲಿ ಎಚ್ಚರಿಕೆಯಿರಲಿ. ಕೆಲಸ ಕಾರ್ಯದಲ್ಲಿ ಅಪಜಯ, ವ್ಯಾಪಾರದಲ್ಲಿ ಅನಾನುಕೂಲತೆ. ತಾ|| ೪, ೫ ಉತ್ತಮ.

ಕುಂಭ... ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿರುತ್ತದೆ. ಕೆಲಸಕಾರ್ಯಗಳಲ್ಲಿ ವಿಘ್ನ, ಬಂಧುಗಳಿಗೆ ದೇಹಪೀಡೆ, ವ್ಯಾಪಾರದಲ್ಲಿ ಲಾಭ. ೩೦, ೩೧, ೧ ಒಳ್ಳೆಯ ದಿನಗಳು.

ಮೀನ... ದೇಹಕ್ಕೆ ಅನಾರೋಗ್ಯ, ಕೆಲಸದಲ್ಲಿ ಜಯ, ದೇಶಾಟನ, ವ್ಯಾಪಾರಸ್ಥರಿಗೆ ಧನನಷ್ಟ. ತಾ|| ೩೦, ೩೧, ೧, ೨

ಭಾರತದಲ್ಲಿ ಜಾತಿದ್ವೇಷವಿಲ್ಲ

ಭಾರತದಲ್ಲಿ ಜಾತಿ ದ್ವೇಷ ಇಲ್ಲವೇ ಇಲ್ಲ. ಹಳ್ಳಿಗಳಲ್ಲಿ ಎಲ್ಲ ಜಾತಿಯ ಜನ ಅಣ್ಣತಮ್ಮಂದಿರಂತೆ ನಡೆದುಕೊಳ್ಳುತ್ತಾರೆ. ಯಾವ ಹಳ್ಳಿಗಾದರೂ ಹೋಗಿ ನೋಡಿ, ಈ ಹಿಂದೂ ಮುಸ್ಲಿಂ ಜಗಳ ಕೊಂಚವಾದರೂ ಕಾಣುವುದಿಲ್ಲ. ಈ ಜಾತಿ ಕಲಹವೆಲ್ಲ ರಾಜಕೀಯ ಮುಖಂಡರ ಸೃಷ್ಟಿ. ಇದೇ ಬ್ರಿಟಿಷರ ಆಲೋಚನೆಯ ಅಡಿಗಲ್ಲು. ಎಲ್ಲೋ ಕಾಣುವ ಜಾತಿ ಜಗಳ ದೆಹಲಿಗೆ ಬಂದೊಡನೆ ದೊಡ್ಡದಾಗಿ ಕಾಣುವುದೇ ನನ್ನ ಈ ಹೇಳಿಕೆಗೆ ಪ್ರಮಾಣ ಎಂಬುದಾಗಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಸುದ್ದಿಗಾರರಾದ ಹರ್ಬರ್ಟ್ ಮ್ಯಾಥ್ಯೂಸ್‌ರವರು ಬರೆದಿದ್ದಾರೆ.

ಜಪಾನಿಯರ ಪ್ರತಿಭಟನೆ ನಿಂತಿತು

ನ್ಯೂಜಾರ್ಜಿಯಾದಲ್ಲಿ ಜಪಾನಿಯ ಪ್ರತಿಭಟನೆ ನಿಂತಿದೆಯೆಂದೂ, ವೈರಿಗಳನ್ನು ಜಪಾನಿ ಸೈನ್ಯ ತ್ಯಜಿಸಿದೆಯೆಂದೂ ವರದಿಯಾಗಿದೆ.

ನಾಜೀ ಮಂತ್ರಿಗಳಿಗೆ ಉಚ್ಚಾಟನೆ

ನಾಜಿ ಫಿಲಾಸಫಿ ಸ್ಥಾಪನಾಕಾರರೂ ಮತ್ತು ಹಿಟ್ಲರನ ಆಪ್ತರೂ ಆಗಿದ್ದ ವಾನ್ ರೋಸನ್‌ಬರ್ಗ್ ಎಂಬುವರನ್ನು ಆಕ್ರಮಿತ ಪೂರ್ವ ಪ್ರದೇಶಗಳ ಮಂತ್ರಿಸ್ಥಾನದಿಂದ ವಜಾಮಾಡಲಾಗಿದೆಯೆಂದು ಹೇಳಲಾಗಿದೆ

ಧಾತುಪುಷ್ಟಿ ಮತ್ತು ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯನಷ್ಟ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯವನ್ನು ಧಾರಾಳ ಹೆಚ್ಚಿಸಿ, ದೇಹಶಕ್ತಿ, ಶರೀರ ಉತ್ಸಾಹಗಳನ್ನು ಕೊಡುತ್ತದೆ ೪೦ ಮಾತ್ರೆಗಳ ಡಬ್ಬಿ 1ಕ್ಕೆ ರೂ. 1.

ಮದನಮಂಜರಿ ಫಾರ್ಮಸಿ, 184, ಚೈನಾ ಬಜಾರು ರಸ್ತೆ, ಮದ್ರಾಸ್

ಏಜೆಂಟರು : ಅಶೋಕಾ ಫಾರ್ಮಸಿ ಹಳೇ ಮೈಸೂರು ಬ್ಯಾಂಕು ರಸ್ತೆ, ಮೈಸೂರು

ಯುದ್ಧಕಾಲದಲ್ಲಿ ಹಣಕ್ಕೆ ಬೆಲೆಯಿಲ್ಲ

ಅಂಗಡಿಗಳ ಅನೇಕ ಪದಾರ್ಥಗಳ ಬೆಲೆಗಳು ಇಂದಿಗೆ ಕಂಡಾಬಟ್ಟೆ ಹೆಚ್ಚಿವೆ. ಯುದ್ಧಕಾಲದಲ್ಲಿ ಅತ್ಯವಶ್ಯಕವಾದ ಪದಾರ್ಥಗಳ ಹೊರತಾ ಇತರ ಪದಾರ್ಥಗಳನ್ನು ಕೊಂಡರೆ ಗಿಟ್ಟುವುದೇ ಇಲ್ಲ. ಇದಕ್ಕೆ ಪ್ರತಿಯಾಗಿ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಗೂ ಪೂರ್ಣ ಬೆಲೆಯು ದೊರೆಯಬೇಕೆಂದರೆ ಅದು ಸಾಧಾರಣ ಕಾಲ ಪುನಹಾ ಬಂದಾಗಲೇ ಸಾಧ್ಯ. ಶಾಂತಿಸಮಯದಲ್ಲಿ ವೆಚ್ಚಮಾಡಲು ಈಗಲೇ ಹಣವನ್ನು ಕೂಡಿಡಿ.

ಮುಂಬರುವ ದಿನಗಳಿಗಾಗಿ ಕ್ಷೇಮಕರವಾಗಿ ಕೂಡಿಡಿ

[illegible] ಭಂಗಾರ, ಬೆಳ್ಳಿ, ಆಭರಣಗಳು, [illegible], ಕಟ್ಟಡಗಳು, [illegible]

[illegible] [illegible]

ದಿನವೂ ನಾಲ್ಕು ಆಣೆ ಕೂಡಿಡಿ!

ಅಲ್ಪ ಹಣವನ್ನು ಒಂದೆಡೆ ತಪ್ಪದೆ ಕೂಡಿಡುತ್ತಾ ಬಂದಲ್ಲಿ ಎಷ್ಟು ಹಣ ಶೇಖರವಾಗುತ್ತದೆಯೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಂದು ಹಣದ ಪೆಟ್ಟಿಗೆಯನ್ನು ಈಗಲೇ ಆರಂಭಿಸಿ! ದಿನವೂ ನಾಲ್ಕು ಆಣೆ ಕೂಡಿಡಿ, ಅಥವಾ ಸಾಧ್ಯವಾದರೆ ಹೆಚ್ಚು ದರೂ ಸರಿಯೆ, ಅನಂತರ ಕಂಡಷ್ಟು ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ ಕೆಳಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಮಾರ್ಪಡಿಸುತ್ತಾ ಬನ್ನಿ.

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

ಮೆದುಳಿನ ಶಸ್ತ್ರಚಿಕಿತ್ಸೆ

೧೮ ರಿಂದ ೩೦ ವರ್ಷ ವಯಸ್ಸಿನೊಳಗಾಗಿರುವ ಬಹಳ ಮೇಧಾವಂತ ತರುಣ ತರುಣಿಯರಲ್ಲಿ ಅಕಸ್ಮಿಕವಾಗಿ ತಲೆ ದೋರುವ ಮಾನಸಿಕ ರೋಗವನ್ನು ಶಸ್ತ್ರ ಚಿಕಿತ್ಸೆ ನಡೆಸಿ ವಾಸಿ ಮಾಡುವ ಹೊಸ ಪ್ರಯೋಗವೊಂದನ್ನು ಮೆಂಟಲ್ ಆಸ್ಪತ್ರೆಯ ಡಾ|| ಗೋವಿಂದಸ್ವಾಮಿಯವರು ಡಾ|| ಬಾಲಕೃಷ್ಣರಾಯರ ಸಹಾಯದೊಡನೆ ಯಶಸ್ವಿಯಾಗಿ ನಡೆಸಿ ೧೬ ಸಂದರ್ಭಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡಿರುವ ವಿಷಯವು ಈಗ ಬೆಳಕಿಗೆ ಬಂದಿದೆ. ಇಂತಹ ಪೂರ್ವ ಜಗತ್ತಿನಲ್ಲಿ ಶಸ್ತ್ರಪ್ರಯೋಗ ನಡೆಸಿ ಆ ರೋಗವನ್ನು ವಾಸಿಮಾಡಿರುವುದು ಇದೇ ಮೊದಲೆಂದು ತಿಳಿದು ಬಂದಿದೆ 'ಪ್ರೀ ಫ್ರಂಟಲ್ ಲ್ಯುಕೋಟಮಿ' ಎಂಬುದಾಗಿ ಆ ಶಸ್ತ್ರಚಿಕಿತ್ಸಾಕ್ರಮಕ್ಕೆ ಹೆಸರು

೧೮ ರಿಂದ ೩೦ ವರ್ಷದೊಳಗೆ ಇರುವ ಕೆಲವು ಪ್ರತಿಭಾವಂತ ತರುಣ ತರುಣಿಯರಲ್ಲಿ ಅನಿರೀಕ್ಷಿತವಾಗಿ ಬುದ್ಧಿ ಭ್ರಮಣೆಯಾಗಿ ಅವರ ಜೀವನವೇ ಹಾಳಾಗಿ ಹೋಗುವ ಉದಾಹರಣೆಗಳಷ್ಟೋ ಇವೆ. ಇಂತಹ ಸಂದರ್ಭಗಳಲ್ಲಿ ಅವರಿಗೆ ಬಹಳ ಹೆಚ್ಚಿನ ಪ್ರಮಾಣದಲ್ಲಿ 'ಇನ್ ಸ್ಯುಲಿನ್' ಎಂಬ ಔಷಧಿಯನ್ನು ಕೊಟ್ಟು ಅವರಿಗೆ ಪ್ರಜ್ಞೆ ತಪ್ಪುವಂತೆ ಮಾಡಿ ಗುಣಪಡಿಸುತ್ತಿದ್ದುದು ನಡೆದುಕೊಂಡು ಬಂದಿರುವ ಚಿಕಿತ್ಸಾ ಕ್ರಮವಾಗಿತ್ತು ಆದರೆ ಇದರಿಂದ ಹೆಚ್ಚು ಪ್ರಯೋಜನವಾಗಿರುವುದು ಕಂಡು ಬಂದಿಲ್ಲ. ಡಾ|| ಗೋವಿಂದಸ್ವಾಮಿಯವರು ಡಾ|| ಬಾಲಕೃಷ್ಣರಾಯರ ಸಹಾಯದಿಂದ ಒಂದು ನೂತನ ಚಿಕಿತ್ಸಾ ಕ್ರಮವನ್ನು ಕಂಡುಹಿಡಿದು, ಕಳೆದ ಒಂದು ವರ್ಷದಲ್ಲಿ ೧೬ ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ ಮೆದುಳಿನ ತಿರುಳನ್ನು ಒಡೆದು, ಒಳಗಿರುವ ನರಗಳಿಗೆ ಸಂಬಂಧ ಪಟ್ಟಂತೆ ಚಿಕಿತ್ಸೆಯನ್ನು ನಡೆಸುವ ಬಹಳ ಕಷ್ಟಕರವಾದ ಶಸ್ತ್ರಚಿಕಿತ್ಸಾ ಕ್ರಮವದು. ಕಳೆದ ಒಂದು ವರ್ಷದಲ್ಲಿ ೧೬ ಸಂದರ್ಭಗಳಲ್ಲಿ ನಡೆಸಿರುವ ಶಸ್ತ್ರಚಿಕಿತ್ಸೆಯು ಒಂದೂ ವಿಫಲವಾಗಿಲ್ಲ. ಈ ... ಮಂದಿಗಳಲ್ಲಿ ಅನೇಕರು, ಸಂಪೂರ್ಣ ಗುಣಹೊಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಇನ್ನೂ ಅನೇಕರು ಆಸ್ಪತ್ರೆಯಲ್ಲಿ ಗುಣಹೊಂದುತ್ತಿದ್ದಾರೆ.

—

ಎರಡು ಮೈಲಿ ಉದ್ದದ ಸುರಂಗ ಕಾಲುವೆ

ಪಂಜಾಬಿನಲ್ಲಿರುವ ಅಂಬಾಲಾ ಜಿಲ್ಲೆಯ ಪಟಿಯಾಲಕ್ಕಾಗಿ ಯಮುನಾ ನದಿಯಿಂದ ಎರಡು ಮೈಲಿ ಉದ್ದದ ಸುರಂಗ ಕಾಲುವೆ ತೋಡುವ ಯೋಜನೆ ಪಂಜಾಬು ಸರ್ಕಾರದ್ದಾಗಿದೆ ಇದಕ್ಕೆ ಸಹಾಯಕವಾಗಿ ಸಿರ್ಮೂರ್ ಸಂಸ್ಥಾನದಲ್ಲಿರುವ ಟಾನ್ಸ್ ಮತ್ತು ಗಿರಿ ನದಿಗಳಿಗೆ ಅಣೆಕಟ್ಟು ಕಟ್ಟಲಾಗುವುದು.

ಈ ಯೋಜನೆಯಿಂದ ಸುಮಾರು ೪ ಲಕ್ಷ ಎಕರೆ ಜಮೀನಿಗೆ ನೀರು ಒದಗಿಸಬಹುದೆಂದು ಹೇಳಲಾಗಿದೆ.

ಪತ್ರ ವ್ಯವಹಾರ

ಭಾನುವಾರ ಅಂಗಡಿ ಮುಚ್ಚುವಿಕೆ

ನನ್ನ ಸ್ನೇಹಿತರಾದ ಶ್ರೀ ಜಿ ವಿ ಸೂರ್ಯನಾರಾಯಣ ಶೆಟ್ಟರವರಿಗೆ ತಿಳಿಸುವುದೇನೆಂದರೆ—

ಭಾನುವಾರದ ರಜಾ ವಿಚಾರದಲ್ಲಿ ತಾವು ೨೧-೮-೪೨ ರಲ್ಲಿ ಬರೆದಿರುವುದು ಸಂಯುಕ್ತ ತಾವು ಮೈಸೂರಿನಲ್ಲಿ ಹಳೇ ವ್ಯಾಪಾರಿಗಳು ತನ್ನ ಕಾಲದಿಂದಲೂ, ಅಮಾವಾಸ್ಯೆ ಮತ್ತು ಭಾನುವಾರದ ದಿವಸಗಳಲ್ಲಿ ರಜಾ ಕೊಡುವ ಪದ್ಧತಿಯನ್ನು ಜಾರಿಗೆ ತಂದು ಆಚರಿಸುವವರಲ್ಲಿ ಮೊದಲನೆಯವರಾಗಿರುತ್ತಿರಿ ಸಹಕಾರ ಸಂಘಗಳಲ್ಲೂ ಸಹ ಸರ್ವರಿಗಾಗಿ ಮತ್ತು ಪೈರೆಕ್ಟರಾಗಿ, ಸಹಕಾರ ಸಂಘಗಳ ಅಭ್ಯುದಯಕ್ಕೆ ಏನು ಎಂಬುದನ್ನು ಚೆನ್ನಾಗಿ ಅರಿತವರಾಗಿ, ವರ್ತಕರಾಗಿ, ವರ್ತಕ ಸಂಘದವರು ತಿಳಿಸಿರುವುದನ್ನು ವಿರೋಧಿಸಿರುವುದು ತುಂಬಾ ಶೋಚನೀಯವಾದುದು. ವರ್ತಕ ತನವೆಲ್ಲಾ ಹಾಳಾಗುತ್ತಿರುವುದಲ್ಲದೆ ನಮ್ಮ ವ್ಯಾಪಾರಗಳೆಲ್ಲವೂ ಸರ್ಕಾರದವರ ಕೈಗೆ ಒಂದೊಂದಾಗಿ ಹೋಗುತ್ತಿರುವಾಗ, ನಾವು ಪಾಶ್ಚಾತ್ಯದಲ್ಲಿ ಹೊಡೆದಾಟ ಮಾಡುವುದನ್ನು ಬಿಟ್ಟು, ಕೆಲಸಗಾರರ ಶ್ರೇಯಸ್ಸನ್ನು ಕೋರಿ, ವರ್ತಕ ಸಂಘದ ತೀರ್ಮಾನದಂತೆ ಭಾನುವಾರ ರಜಾವನ್ನು ಸಹ ವರ್ತಕರು ಕೊಡುವುದಲ್ಲದೇ ಮುಖ್ಯವಾಗಿ ವರ್ತಕ ತನವು ಉಳಿಯುವಂತೆ ವರ್ತಕರೆಲ್ಲರೂ ಒಗ್ಗಟ್ಟಾಗಿ ಸೇರಿ ಜನಗಳಿಗೆ ಒದಗಿರುವ ಕಷ್ಟಸುಖಗಳನ್ನು ಚರ್ಚಿಸಿ ಮುಂದೆ ಜನಗಳಿಗೆ ನೆರವಾಗುತ್ತೀರೆಂದು ಪ್ರಾರ್ಥಿಸುತ್ತೇನೆ

ವರ್ತಕ ಎಂ. ... ಬಸಪ್ಪ

ಬೇಕಾಗಿದೆ

ನೌಕಾ ಸೈನ್ಯ, ವಿಮಾನ ದಳಕ್ಕೆ II ನೇ ಫಾರಂ ಓದಿದವರು ಮೊದಲುಗೊಂಡು S. S. L. C. ವರೆಗೆ ಓದಿದವರು. ಟೆಕ್ನಿಕಲ್ ಟ್ರೈನಿಂಗ್‌ಗಳಿಗಾಗಲಿ, ಅಫಿಸಿಯಲ್ ಕ್ಲಾರ್ಕು ಕೆಲಸಗಳಿಗಾಗಲಿ ಬೇಕಾಗಿದೆ V ನೇ ಫಾರಂ ಓದಿದವರಿಗೆ ಈಗ 65 ರೂ. ಸಂಬಳ ಕೊಡಲಾಗುತ್ತೆ. ಊಟ, ವಸತಿಗಳೆಲ್ಲಾ ಉಚಿತ ಎಲ್ಲಾ ವಿವರಗಳಿಗೆ ಈ ಕೆಳಗಿನ ಅಡ್ರೆಸ್ಸಿನವರಲ್ಲಿ ಪ್ರತಿ ದಿನ ಸಾಯಂಕಾಲ 4 ಘಂಟೆಯಿಂದ 6 ಘಂಟೆವರೆಗೆ ತಿಳಿಯಬಹುದು.

ಡಬ್ಲ್ಯು. ಹೆಚ್. ಥಿಯೋಬಾಲ್ಡ್
ಪರ್ಚ್ ರೋಡ್, ಮೈಸೂರು.

ಟಿ. ಸಿ. ನಟರಾಜ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಚಿಕ್ಕಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ

ಯುಗೋಸ್ಲಾವಿಯಾ ಗೆರಿಲ್ಲಾಗಳ ಚಟುವಟಿಕೆ

ಯುಗೋಸ್ಲಾವಿಯಾದ ಬೋಸ್ನಿಯಾ ಮತ್ತು ಹರ್ಜಗೋವಿನಾ ದೇಶಾಭಿಮಾನಿಗಳು ದಂಗೆಯೆದ್ದು ೨ ಮೈಲಿ ಕಲ್ಲಿದ್ದಲು ಪ್ರದೇಶಗಳನ್ನು ಹಿಡಿದು ಕೊಂಡಿದ್ದಾರೆಂದೂ, ಕೆಲವು ಪಟ್ಟಣವನ್ನು ಮುತ್ತಿರುವರೆಂದೂ, ವರದಿಯಾಗಿದೆ. ಜಾಲ್ಮೇಷಿಯಾ ಕ್ರೊಯೆಷ್ಯಾ ಗೆರಿಲ್ಲಾಗಳು ಆ ಪ್ರದೇಶಗಳಲ್ಲಿ ಶತ್ರುವಿನ ೨ ಸೇತುವೆಗಳನ್ನು ನಾಶಮಾಡಿದ್ದಾರೆ.

ರಾಜಧಾನಿಯಾದ ಜಾಗ್ರೆಬ್ ಪಟ್ಟಣಗಳ ಮೇಲೆ ದಾಳಿಮಾಡಿ. ೩೮ ವಿಮಾನಗಳನ್ನು ನಾಶ ಮಾಡಿ, ವಿಮಾನ ನೆಲೆಗೆ ಅಪಾರ ನಷ್ಟವುಂಟುಮಾಡಿದ್ದಾರೆ. ಸರಜೀವೋದಿಂದ ಸಂಚಾರಮಾಡುತ್ತಿದ್ದ ಒಂದು ಜರ್ಮನ್ ರೈಲನ್ನು ಉರುಳಿಸಿದರು

— —

ಯುದ್ಧೋದ್ಯಮದಲ್ಲಿ ಮಹಿಳೆಯರ ಪಾತ್ರ

ಗ್ರೇಟ್ ಬ್ರಿಟನ್ನಿನಲ್ಲಿ ಈಗ ೧೮ ರಿಂದ ೪೦ ವಯಸ್ಸಿನವರೆಗಿನ ೬೬,೦೦,೦೦೦ ಮಂದಿ ಸ್ತ್ರೀಯರು ಯುದ್ಧ ಕಾರ್ಯಗಳಲ್ಲಿ ನಿರತರಾಗಿದ್ದಾರೆ ಇವರ ಪೈಕಿ ಶೇಕಡಾ ತೊಂಭತ್ತು ಮಂದಿಯಷ್ಟು ಯೋಧವೃತ್ತಿಯಲ್ಲಿ ಸಿವಿಲ್ ಡಿಫೆನ್ಸ್ ಕಾರ್ಯಗಳಲ್ಲೂ ಮತ್ತು ಕಾರ್ಖಾನೆಗಳಲ್ಲೂ ಕೆಲಸಮಾಡುತ್ತಿದ್ದಾರೆ.

— —

ಟಾಲಸ್ಟಾಯ್ ಮಕ್ಕಳಿಗೆ ಪ್ರಶಸ್ತಿ

ರಷ್ಯಾ ದೇಶದ ಸುಪ್ರಸಿದ್ಧ ಸಾಹಿತಿಗಳಾದ ಟಾಲ್‌ಸ್ಟಾಯ್‌ರವರ ಮಗನಿಗೆ " ಆರ್ಡರ್ ಆಫ್ ದಿ ರೆಡ್ ಬ್ಯಾನರ್ " ಎಂಬ ಪ್ರಶಸ್ತಿಯನ್ನು ಅವರ ೬೦ ನೇ ವರ್ಷದ ವರ್ಧಂತ್ಯುತ್ಸವದ ಜ್ಞಾಪಕಾರ್ಥವಾಗಿಯೂ, ಅವರು ದೇಶಕ್ಕೆ ಸಲ್ಲಿಸಿರುವ ಅಮೋಘ ಸೇವೆಗೂ ಮತ್ತು ಅವರ ಬಾಳ್ವೆಗೆಗಳನ್ನು ಪ್ರಕಟಿಸುವ ಉಪಕಾರಕ್ಕಾಗಿಯೂ ಕೊಡಲಾಗಿದೆ

ಬಂಗಾಳ ಅಧಿಕಾರಿಗಳ ಮೇಲೆ ಮೊಕದ್ದಮೆ

ಬಂಗಾಳ ಸರ್ಕಾರದ ಸಿವಿಲ್ ಸರಬರಾಜು ಇಲಾಖೆಯ ಆಸಿಸ್ಟೆಂಟ್ ಡೈರೆಕ್ಟರ್ ಮಿ|| ವಾರ್ಡನ್ ಎಂಬುವರು, ಕಲ್ಕತ್ತಾ ವರ್ತಕರೊಂದಿಗೆ ಸೇರಿ ಆಹಾರ ಪದಾರ್ಥ ಗೋಧಿಯನ್ನು ಪೂರೈಸಿರುವ ಕಂಪನಿ, ಹೆಚ್ಚಿನ ಬೆಲೆ ಪಡೆಯುವುದಕ್ಕೆ ಅವಕಾಶಕೊಟ್ಟು ಮೋಸಮಾಡಿದರೆಂಬ ಆಪಾದನೆಮೇಲೆ ಮೊಕದ್ದಮೆ ಹೂಡಲಾಗಿದೆ

———

ಹಿಟ್ಲರನ ಭವನಕ್ಕೆ ಏಟು

ಬರ್ಲಿನ್ ನಗರವನ್ನು ವಿಶ್ವ ವಿಮಾನಗಳು ಧಾಳಿ ನಡೆಸಿದಾಗ ಹಿಟ್ಲರನ ಸ್ವಂತ ಭವನವಾದ ರೀಚ್ ಛಾನ್ಸಲರಿಗೆ ಪೆಟ್ಟು ತಗಲಿದೆಯೆಂದು ವರದಿಯಾಗಿದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಪ್ರಭಾವಶಾಲಿ **ಜೀವನಿ** ಔಷಧ

ಗರ್ಭಾಶಯಕ್ಕೆ ಶಕ್ತಿವರ್ಧಕ.

ಜೀವನಿಯನ್ನು ನಿಯಮಿತ ಕಾಲ ನಿತ್ಯವೂ ಸೇವಿಸುತ್ತ ಬಂದರೆ ಗರ್ಭಾಶಯಕ್ಕೆ ವಿಶೇಷವಾದ ಶಕ್ತಿಯುಂಟಾಗುತ್ತದೆ.

ಮುಟ್ಟು ದೋಷಕ್ಕೆ ಗಂಡೌಷಧ.

ಮುಟ್ಟು ಕಾಲದಲ್ಲಿ ಅಧವಾ ಆಮೇಲೆ ತೋರುವ ಅಧಿಕ ರಕ್ತಸ್ರಾವ, ಬಿಳುಪು ಹೋಗುವುದು, ಅಕ್ರಮ ಋತುಸ್ರಾವ, ಮುಂತಾದುವುಗಳನ್ನು "ಜೀವನಿ" ಜಾಗ್ರತೆ ಪರಿಹರಿಸುತ್ತದೆ

ಅನುಕ್ರಮವಾಗಿ ಉಪಶಮನ ಕ.

ಸ್ತ್ರೀಯರ ಎಲ್ಲಾ ಉಷ್ಣ ವಿಕಾರಗಳಿಗೂ 'ಜೀವನಿ' ಪ್ರಶಸ್ತವಾದುದು

ರಕ್ತಹೀನತೆ, ನರಗಳ ದೌರ್ಬಲ್ಯ ಬೆನ್ನುನೋವು, ನಡುನೋವು, ಗರ್ಭಸ್ರಾವ, ಎಂಬೀ ನರಳಿಕೆಗಳಿಗೆ "ಜೀವನಿ" ಅತ್ಯುಪಯುಕ್ತವಾದುದು

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ

ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

ಜುಬಿಯರಿ ಮತ್ತು ಎಲ್ಲಾ ನೈಜವಸ್ತು ಹೊಸ ಮಾದರಿಯಲ್ಲಿ ಹೊಲಿದು ಸಿದ್ಧಪಡಿಸಿದ (ರೆಡಿಮೇಡ್ ಡ್ರೆಸ್) ಉಡುಪುಗಳನ್ನು ಇಟ್ಟಿರುವ ಜಿ. ವಿ. ಸೂರ್ಯನಾರಾಯಣಶೆಟ್ಟಿ, ಅಂಡ್ ಸನ್ಸ್, ಸಯ್ಯಾಜಿರಾವ್ ರೋಡ್, ಮೈಸೂರು ಇವರ ಅಂಗಡಿಯಲ್ಲಿ ಹೊಸದಾಗಿ ತೆರೆದಿದ್ದಾರೆ

ಸ್ತ್ರೀಯರ ಸೌಕರ್ಯಕ್ಕಾಗಿ

೧೯೧೧ ನೇ ಇಸವಿ ಯಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ.— ಚಿಲ್ಲರೆಯಾಗಿ ಮಂತ್ರದ ಸಕ್ಕರೆ, ಕಲ್ಲುಸಕ್ಕರೆ, ಜಾಜಿ ಕಾಯಿ ಮತ್ತು ಅಕ್ಕಿ, ಸಹಾ ದೊರೆಯುತ್ತವೆ

ವಿಮಾನ ನಿರ್ಮಾಣ ಕಾರ್ಯ

ಯುದ್ಧವು ಆರಂಭವಾದಾಗಿನಿಂದೀಚೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಬ್ರಿಟನ್ ರಾಜ್ಯಗಳಿಂದೇ ೧,೫೦೦೦೦ ವಿಮಾನಗಳನ್ನು ತಯಾರು ಮಾಡಿವೆ. ೧೭,೧೫,೦೦೦ ಭಾರಿ ಫಿರಂಗಿಗಳನ್ನೂ ಭೂಸೈನ್ಯಕ್ಕೆ ಒದಗಿಸಿವೆ. ಮತ್ತು ಅಮೆರಿಕಾ ಒಂದೇ ಹಡಗುಗಳನ್ನು ತಯಾರಿಸಿದೆ. ... ಯುದ್ಧನೌಕೆಗಳನ್ನು ... ನಿರ್ಮಿಸಿವೆ.

— —

ದ್ವಿತೀಯ ರಣರಂಗ ಅವಶ್ಯಕ

ರಷ್ಯನರು ತಾಸ್ಪೆಟ್ಟಿದೆ: ಪೂರ್ವ ರಷ್ಯ ರಣಕ್ಷೇತ್ರದಲ್ಲಿ ಕದನ ನಡೆಯುವ ಸಂಭವ ಇದೆ ಎಂದೂ, ಅವರ ಮಿತ್ರರು ದ್ವಿತೀಯ ರಣರಂಗವನ್ನು ಶೀಘ್ರವಲ್ಲದೆಯೇ ಆರಂಭಿಸಬೇಕೆಂದೂ ೫೦-೬೦ ಡಿವಿಜನ್ ಜರ್ಮನ್ ಸೈನ್ಯವನ್ನು ಪೂರ್ವ ಕಡೆಗೆ ಎಳೆಯುವ ಹಾಗೆ ಮಾಡಬೇಕೆಂದು ಮಿಲಿಟರಿ ಸುದ್ದಿಗಾರರು ಅಭಿಪ್ರಾಯ ಪಡುತ್ತಾರೆ. ಜರ್ಮನಿಯು ಫ್ರಾನ್ಸ್ ಮತ್ತು ಇತರ ಆಕ್ರಮಿತ ಪ್ರದೇಶಗಳಿಂದ ಹೆಚ್ಚು ಹೆಚ್ಚಾಗಿ ಸೈನ್ಯಗಳನ್ನು ಪೂರ್ವ ರಣರಂಗಕ್ಕೆ ಕಳುಹಿಸುತ್ತಿರುವರೆಂದು ಹೇಳಲಾಗಿದೆ.

ಡೆನ್ಮಾರ್ಕ್ ದೊರೆಗಳ ದಸ್ತಗಿರಿಯೇ ?

ಜರ್ಮನ್ನರು ಆದೇಶಕ್ಕೆ ಡೆನ್ಮಾರ್ಕ್ ಒಳಗಾಗಬೇಕೆಂಬ ಅಲ್ಟಿಮೇಟಮ್ಮನ್ನು ಡೇನಿಷ್ ಮಂತ್ರಿ ಮಂಡಳವು ನಿರಾಕರಿಸಿ, ಪ್ರಧಾನಿ ಮತ್ತು ಇತರರು ರಾಜೀನಾಮೆ ಕೊಟ್ಟಿದ್ದಾರೆಂದು ವರದಿಯಾಗಿದೆ.

ಇದನ್ನು ಅಂಗೀಕರಿಸುವುದಾದರೆ ತಾವು ರಾಜ್ಯತ್ಯಾಗ ಮಾಡುವುದಾಗಿ ಕ್ರಿಶ್ಚಿಯನ್ ದೊರೆಗಳು ತಿಳಿಸಿದ್ದಾರೆಂದೂ, ಇತ್ತೀಚಿನ ವರದಿ ಪ್ರಕಾರ, ಕ್ರಿಶ್ಚಿಯನ್ ದೊರೆಗಳನ್ನು ಜರ್ಮನರು ದಸ್ತಗಿರಿ ಮಾಡಿದ್ದಾರೆಂದೂ ಹೇಳಲಾಗಿದೆ. ಡೆನ್ಮಾರ್ಕಿನಲ್ಲಿ ಸಂಪೂರ್ಣ ಜರ್ಮನ್ ಮಿಲಿಟರಿ ಅಧಿಕಾರತ್ವ ಸ್ಥಾಪಿಸಲಾಗಿದೆಯೆಂದೂ ಹೇಳಲಾಗಿದೆ.

— —

ಜರ್ಮನಿ ಮುತ್ತಲು ಅಂತ್ಯ ಹಂಚಿಕೆ

ಜರ್ಮನಿ ಮೇಲೆ ಅಂತ್ಯ ಮುತ್ತಿಗೆ ನಡೆಸಲು ತಕ್ಕ ಹಂಚಿಕೆ ತೆಗೆದುಕೊಂಡ ಚರ್ಚಿಲರು ಬ್ರಿಟನಿಗೆ ಹಿಂತಿರುಗುವವರಿದ್ದಾರೆಂದು ಹೇಳಲಾಗಿದೆ.

ಮಹೋಲಿನ ಪತನವಾದ ಕೂಡಲೆ ಜರ್ಮನಿಯನ್ನು ನಡೆಸುವುದಲು ಕಾರ್ಯಕ್ರಮ ತೆಗೆದುಕೊಳ್ಳಲು ಮಹಾಯುದ್ಧ ಆರಂಭವಾಯಿತೆಂದು ಹೇಳಲಾಗಿದೆ. ಫ್ಯಾಸಿಸಂ ಮೇಲೆ ... ... ಆಗಿದೆಯೆಂದು ... ಮೇಲೆ ಆಕ್ರಮಿತ ಯುರೋಪಿನ ಆಚೆ ... ಜರ್ಮನಿಯು ... ಲಕ್ಷ ಸೈನ್ಯವನ್ನು ಉಪಯೋಗಿಸುತ್ತಿದೆಯೆಂದೂ ಹೇಳಲಾಗಿದೆ.

ನಿರಾಶ್ರಿತ ರಷ್ಯನ್ ಜನರಿಗೆ ಸಹಾಯ

ಜರ್ಮನರ ವಶದಿಂದ ವಿಮುಕ್ತರಾದ ರಷ್ಯನ್ ಜನಗಳಿಗೆ ಸಿದ್ಧವಾದ ಮನೆಗಳನ್ನು ತಯಾರಿಸಲು ನೂತನ ಯೋಜನೆಗಳನ್ನು ರಚಿಸಲಾಗುವುದೆಂದು ಹೇಳಲಾಗಿದೆ. ಶತ್ರುವಿನಿಂದ ಸುಟ್ಟು ನಾಶಗೊಂಡಿದ್ದ ಪ್ರದೇಶದ ಜನಗಳಿಗೆ ಸಹಾಯವಾಗಿ ಸಾವಿರಾರು ಮನೆಗಳನ್ನು ತಯಾರಿಸಲಾಗುತ್ತಿದೆ.

——

ಫ್ರೀಕರಣರ ಕಟ್ಟುಕಥೆ

ಗಾಂಧೀಜಿಯು ಜಪಾನಿಗೆ ಸಹಾಯ ಮಾಡುತ್ತಿದ್ದುದರಿಂದ ಅವರನ್ನು ಬಂಧನದಲ್ಲಿ ಇಡಲಾಗಿದೆಯೆಂದು ಎಂ. ಫ್ರೀಕರ್ ಫ್ರೀಕರಣರು ನ್ಯೂಯಾರ್ಕ್ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

——

ಯುಕ್ರೇನಲ್ಲಿ ಭೀಕರ ಕದನ

ರಷ್ಯನ್ ರಣಕ್ಷೇತ್ರದಲ್ಲಿ ರಷ್ಯನರು ಖಾರ್ಕೋವಿನಿಂದ ನೂರು ಮೈಲಿಗಳ ದೂರ ನುಗ್ಗಿ ಅನೇಕ ಜರ್ಮನ್ ವ್ಯೂಹಗಳನ್ನು ಕತ್ತರಿಸಿರುವರು ಪೋಲಟೋವಾ ಮತ್ತು ಕ್ರೋನೋಗ್ರಾಡ್ ಭಾಗಗಳನ್ನೂ ಸುತ್ತಿರುವರೆಂದೂ ವರದಿಯಾಗಿದೆ.

ನೀಪರ್ ಗೆ ಕೇವಲ ೫೦ ಮೈಲಿ ದೂರದಲ್ಲಿ ರಷ್ಯನರಿರುವರೆಂದೂ ಹೇಳಲಾಗಿದೆ. ಇದರಿಂದ ಯುಕ್ರೇನಲ್ಲಿರುವ ೫೦ ಡಿವಿಜನ್ ಜರ್ಮನ್ ಸೈನ್ಯಕ್ಕೂ ಮತ್ತು ಕ್ರೈಮಿಯದಲ್ಲಿರುವ ೩೦ ಡಿವಿಜನ್ ಶತ್ರು ಸೈನ್ಯಕ್ಕೂ ಗಂಡಾಂತರವೊದಗಿದೆಯೆಂದು ಹೇಳಲಾಗಿದೆ. ಖಾರ್ಕೋವಿನ ಉತ್ತರ ಮತ್ತು ಪಶ್ಚಿಮ ಕ್ಷೇತ್ರದಲ್ಲಿ ಭೀಕರ ಟ್ಯಾಂಕ್ ಮತ್ತು ಪದಾತಿ ಕದನವು ನಡೆಯುತ್ತಿದೆಯೆಂದೂ, ಈ ಭಾಗದಲ್ಲಿ ೫೦ ಡಿವಿಜನ್ ಜರ್ಮನ್ ಸೈನ್ಯ ಕೇಂದ್ರೀಕರಿಸಲಾಗಿದೆಯೆಂದೂ ಹೇಳಲಾಗಿದೆ. ೬೫೦ ಮೈಲಿ ರಣಕ್ಷೇತ್ರವಾದ ಯುಕ್ರೇನ್ ಬಳಿ ೫ ಲಕ್ಷ ಜರ್ಮನ್ ಮತ್ತು ರಷ್ಯ ಸೇನೆಗಳು ಹೋರಾಡುತ್ತಿವೆ.

——

ಬರ್ಮಾದ ಮೇಲೆ ಧಾಳಿ

ಮಧ್ಯ ಬರ್ಮಾದ ಮೇಲೆ ಮೀಡಿಯಂ ಬಾಂಬರುಗಳು ಉಗ್ರ ಧಾಳಿ ನಡೆಸಿ ಅನೇಕ ಉಗ್ರಾಣದ ಕಟ್ಟಡಗಳನ್ನೂ ನಾಶಮಾಡಿರುವುದಾಗಿ ವರದಿಯಾಗಿದೆ.

——

ನಿರಾಶ್ರಿತರಿಗೆ ಸಹಾಯ

ಕಲ್ಕತ್ತೆಯಲ್ಲಿ ನಿರಾಶ್ರಿತರ ಸಹಾಯಕ್ಕಾಗಿ ಮಹಮ್ಮದೀಯ ಸಂಘದವರು ೬೧ ಸಾವಿರ ರೂಪಾಯಿಗಳನ್ನು ದಾನವಾಗಿ ಪಡೆದಿರುವರು ಈ ಪ್ರಸ್ತುತ ಉಚಿತ ಭೋಜನ ಶಾಲೆಗಾಗಿ ಉಪಯೋಗಿಸಿ, ೫ ಶಾಲೆಗಳನ್ನು ತೆರೆದಿರುವರು. ಮತ್ತು ಇನ್ನೆರಡು ಶಾಲೆಗಳನ್ನೂ ಶೀಘ್ರದಲ್ಲಿಯೇ ತೆರೆಯಲಾಗುವುದೆಂದೂ ವರದಿಯಾಗಿದೆ.

ಆ ಕಾ ಶ ವಾ ಣಿ

... ಮಂಗಳವಾರ

...೮-೩೦ ಹರಿಕಥಾಕಾಲಕ್ಷೇಪ : ಸಂಗೀತ ಭೂಷಣ ವಿದ್ವಾನ್ ಎಂ. ಎ. ನರಸಿಂಹಾಚಾರ್.

ಕಲ್ಕತ್ತಾವಲ್ಲಿ ಭಾರಿ ದರೋಡೆ

ಕಲ್ಕತ್ತಾ ನಗರದ ಚಿತಸ್ಪೂರ್ ಮೊಹಲ್ಲಾದ ಮನೆಯೊಂದರಲ್ಲಿ ಸಶಸ್ತ್ರ ದರೋಡೆಕಾರರು ಮನೆಗೆ ನುಗ್ಗಿ ೧೫ ಸಾವಿರ ರೂಪಾಯಿಗಳನ್ನು ಅಪಹರಿಸಿದರೆಂದೂ ಇವರ ಸಂಬಂಧದಲ್ಲಿ ಪೋಲೀಸರು ೫ ಮಂದಿಯನ್ನು ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ.

——

ಅಮೆರಿಕದ ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಕಂಪೆನಿಯವರು ಇತ್ತೀಚೆಗೆ ಹೊಸ ಬಗೆಯ ದೀಪವೊಂದನ್ನು ಸೃಷ್ಟಿಸಿದ್ದಾರೆ. ಇದು ಆಕಾಶದಲ್ಲಿ ನೆಲ್ಲಿ ಕಾಯಿನಂತಿದ್ದು ಇದರ ಬೆಳಕು ೬೦ ಮೈಲಿ ದೂರ ಕಾಣಿಸುತ್ತದೆ. ಈ ದೀಪದಿಂದ ಕತ್ತಲಲ್ಲಿ ಹಾರುವ ವಿಮಾನಗಳಿಗೆ ತುಂಬಾ ಅನುಕೂಲವಾಗುವುದೆಂದು ಹೇಳಲಾಗಿದೆ. ಈ ದೀಪವು ಒಂದು ಬಾರಿ ಹಚ್ಚಿದ ನಂತರ ಒಂದೇ ಸಮನೆ ಹತ್ತು ರಾತ್ರಿಗಳ ವರೆಗೆ ಉರಿಯಬಲ್ಲುದೆಂದು ಗೊತ್ತಾಗಿದೆ ಇದು ೧೫೦೦ ಕ್ಯಾಂಡಲ್ ಪವರಿನಷ್ಟು ಪ್ರಕಾಶವಾಗಿರುವುದು.

——

Edited, printed and published by A. R. Nagarajan, at the Sadhvi Press, D.Subbiah Road, Mysore.

ಚಿತ್ರತಾರೆಗೆ ದಂಡ

ರೋಟಿ ಚಿತ್ರದಲ್ಲಿ ನಟಿಸಿದ್ದ ಅಖ್ತರಿಬಾಯಿ ನಟಿಯು ೭೨೬ ರೂಗಳನ್ನು ಮೋಸ ಮಾಡಿದಳೆಂದು ಆಪಾದನೆಯು ರುಜುವಾತಾಗಿ ೩೦೦ ರೂಗಳ ದಂಡ ಅಥವಾ ೩ ತಿಂಗಳ ಕಠಿಣ ಸಜಾ ಅನುಭವಿಸಬೇಕೆಂದು ಮ್ಯಾಜಿಸ್ಟ್ರೇಟರು ತೀರ್ಪಿತ್ತಿರುವರು.

——

• • • •

ವಿಚಿತ್ರ ನದಿ

ಅಲ್ಜೀರಿಯ ದೇಶದಲ್ಲೊಂದು ನದಿ ಇದೆ. ಇದರ ನೀರು ಕಪ್ಪು. ಕಪ್ಪೆಂದರೆ ನಾವು ಬರೆಯಲು ಉಪಯೋಗಿಸುವ ಮಸಿಯಷ್ಟು ಕಪ್ಪು. ಇದರಿಂದಲೇ ನದಿಗೆ ಮಸಿನದಿ ಎಂದು ನಾಮಕರಣವಾಗಿದೆ. ಮಸಿಗಿರುವ ಎಲ್ಲಾ ರಸಾಯನಿಕ ವಸ್ತುಗಳೂ ಈ ನದೀ ನೀರಿನಲ್ಲಿದೆ. ಈ ನದಿಯನ್ನು ಸೇರುವ ಒಂದು ನದಿಯ ನೀರಿನಲ್ಲಿ ಕಬ್ಬಿಣದ ಲವಣವಿದೆ. ಇನ್ನೊಂದು ನದಿಯ ನೀರಿನಲ್ಲಿ ಸೀಸದ ದ್ರಾವಕವಿದೆ. ಎರಡೂ ಸೇರಿ ಈ ನದಿಯ ನೀರು ಮಸಿಯಾಗುವುದು. ಮಸಿ ಮಾಡಲು ಉಪಯೋಗಿಸುವುದು ಇದೇ ವಸ್ತುಗಳನ್ನೆ.

• • • •

ಪ್ರ ಕ ಟ ಣೆ

ದಿ ಬೆಂಗಳೂರು ಪ್ರಾವಿಡೆಂಟ್ ಇನ್ಷೂರೆನ್ಸ್ ಕಾರ್ಪೊರೇಷನ್, ಲಿಮಿಟೆಡ್

(ಸ್ಥಾಪನೆ : ೧೯೩೯)

ಮುಖ್ಯ ಕಚೇರಿ : "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿ ಉದಾರ ಕರಾರುಗಳ ಮೇಲೆ ಮತ್ತು ಅಧಿಕ ಕಮಿಷನ್ನಿನ ಮೇಲೆ ಏಜಂಟರನ್ನು ನೇಮಿಸಿಕೊಳ್ಳುವವರಿದ್ದೇವೆಂದು ಪ್ರಕಟಿಸಲು ಸಂತೋಷಪಡುತ್ತೇವೆ. ಏಜಂಟರು ಪ್ರತಿ ತಿಂಗಳು ಸುಲಭವಾಗಿ ೧೦೦ ರೂ. ಗಳಿಸಬಹುದು.

ಶ್ರೀ ಪಿಂಗಳಿ ವೆಂಕಟರಾಮರೆಡ್ಡಿ ಡೈರೆಕ್ಟರು : ೧) ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ., ಬೆಂಗಳೂರು ಸಿಟಿ. ೨) ಲೈಫ್ ಅಷ್ಯೂರೆನ್ಸ್ ಕಂ. ಲಿ., ಬೊಂಬಾಯಿ. ೩) ದಿ ಯೂನಿಯನ್ ಲೈಫ್ ಬೊಂಬಾಯಿ. ೪) ಮಿನರ್ವಾ ಮಿಲ್ಸ್ ಲಿ., ಬೆಂಗಳೂರು. ೫) ಮಾಡರ್ನ್ ... ಲಿ., ಬೊಂಬಾಯಿ. ೬) ಹಿಂದ್ ಷುಗರ್ ಕಂ. ಲಿ., ಬೊಂಬಾಯಿ. ೭) ಸ್ಟೀಮ್ ನ್ಯಾವಿಗೇಷನ್ ಕಂ. ಲಿ., ಬೊಂಬಾಯಿ. ೮) ಈಸ್ಟರ್ನ್ ಬಂಕರರ್ಸ್ ... ಲಿ., ಬೊಂಬಾಯಿ. ೯) ಈಸ್ಟರ್ನ್ ಬಂಕರರ್ಸ್ [ಬರ್ಮಾ] ಲಿ., ಬೊಂಬಾಯಿ. ೧೦) ನರೋತ್ತಮ ಲಿ., ಬೊಂಬಾಯಿ. ೧೧) ಕೋ-ಆಪರೇಟಿವ್ ಡೊಮಿನಿಯನ್ ಬ್ಯಾಂಕ್ ಲಿ., ಹೈದರಾಬಾದ್, [ದಕ್ಷಿಣ]. ೧೨) ಸದಸ್ಯರು, ಅಡ್ವೈಸರಿ ಬೋರ್ಡ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಲಿ. ಮತ್ತು ದೇಶಮುಖ್, ಜಮೀನ್ದಾರ್, ಬ್ಯಾಂಕರ್, ಆನರರಿ ಸಿವಿಲ್ ಜಡ್ಜ್, ಹೈದರಾಬಾದ್ [ದಕ್ಷಿಣ]. ಚೇರ್ಮನ್.

ಶ್ರೀ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ. ಲಿ., ಬೆಂಗಳೂರು ಮ್ಯಾನೇಜಿಂಗ್ ಡೈರೆಕ್ಟರ್.

ಕಾರ್ಪೊರೇಷನ್ನಿನ ಬಗ್ಗೆ ಮಹತ್ವದ ಸಂಗತಿಗಳು

೧) ಇನ್ಷೂರೆನ್ಸ್ ಕಾಯಿದೆಯನ್ವಯ ಮೈಸೂರು ಮತ್ತು ಬ್ರಿಟಿಷ್ ಸರ್ಕಾರಗಳಲ್ಲಿ ಠೇವುಗಳನ್ನು ಇಡಲಾಗಿದೆ.
೨) ೧೫ ವರ್ಷ ಅನುಭವದ ಡೈರೆಕ್ಟರ ಅಧೀನದಲ್ಲಿ ಭದ್ರವಾದ ಮತ್ತು ಪ್ರಖ್ಯಾತರಾದ ಡೈರೆಕ್ಟರುಗಳ ಮತ್ತು ವ್ಯವಸ್ಥಾಪಕ ಮಂಡಳಿ.
೩) ಈಗ ದೊರೆತ ಉದ್ಯಮ ೭ ಲಕ್ಷಕ್ಕಿಂತ ಹೆಚ್ಚಿಗೆ ಮತ್ತು ಕಾರ್ಯಕರ್ತರ ಸಂಖ್ಯೆ
೪) ಜೀವನಿಧಿ ೯೫% ಹೆಚ್ಚಿಗೆ.
೫) ಡಾಕ್ಟರ್ ಪರೀಕ್ಷೆಗೊಳಪಡಿಸದೆ ೬೦೦, ರೂ. ೨೦೦, ರೂ. ೩೦೦, ರೂ. ೪೦೦, ೫೦೦ ಗಳಿಗೆ ಹೋಲ್ ಲೈಫ್, ಜಾಯಿಂಟ್ ಲೈಫ್ ಮತ್ತು ಎಂಡೋಮೆಂಟ್ ಪಾಲಿಸಿಗಳನ್ನು ಕೊಡಲಾಗುವುದು ರೂ. ೨೫ ಕ್ಕೆ ಸಹ ಪಾಲಿಸಿಗಳನ್ನು ಕೊಡಲಾಗುವುದು. ದಯವಿಟ್ಟು ವಿವರಗಳಿಗೆ ಬರೆಯಿರಿ.

ಸಂಪುಟ ೨] ಮಂಗಳವಾರ ೩೧-೮-೪೩ [ಸಂಚಿಕೆ ೪೦

ಬಲ್ಗೇರಿಯಾದಲ್ಲಿ ಪ್ರಜಾ ದಂಗೆ

ಯುಕ್ರೇನ್ ಕ್ಷೇತ್ರದಲ್ಲಿ ಭೀಕರ ಟ್ಯಾಂಕ್ ಕದನ
ಡೆನ್ಮಾರ್ಕಿನ ಪರಿಸ್ಥಿತಿ ವಿಷಮವಾಗುತ್ತಿದೆ

ಪತ್ರಿಕೋದ್ಯೋಗಿಗಳ ಸಭೆ

ಮೈಸೂರು ೩೦

ಭಾನುವಾರ ಬೋರಿಂಗ್ಟನ್ನಿನಲ್ಲಿರುವ "ಡೈಲಿ ಪೋಸ್ಟ್" ಆಫೀಸಿನಲ್ಲಿ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಭೆಯೊಂದು ಶ್ರೀಮಾನ್ ಜಿ. ಆರ್. ಜೋಸ್ಯರ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀಗಳಾದ ಟಿ. ಟಿ. ಶರ್ಮ, ಎಂ. ಶ್ರೀನಿವಾಸಮೂರ್ತಿ, ಎಸ್. ಶಾಸ್ತ್ರಿ, ಶೇಷಭಟ್ಟ, ಕೃಷ್ಣನ್, ಕೃಷ್ಣಸ್ವಾಮಿ, ಎಸ್. ವಿ. ಗುಂಡಪ್ಪ, ಸಂತಸುಬ್ಬರಾಯ, ನರಸಿಂಹಯ್ಯ ಮೊದಲಾದ ಪತ್ರಿಕೋದ್ಯೋಗಿಗಳು ಆಗಮಿಸಿದ್ದರು. ಶ್ರೀ ಜೋಸ್ಯರ್‌ರವರು ಉಚಿತವಾದ ಉಪಾಹಾರವನ್ನು ಏರ್ಪಡಿಸಿದ್ದರು.

ಅಧ್ಯಕ್ಷರು ಸ್ಥಳೀಯ ಪತ್ರಿಕೋದ್ಯೋಗಿಗಳು ಒಟ್ಟಿಗೆ ಸೇರಿ, ಹಾಲಿ ಇರುವ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕ್ರಮಗಳ ಚಟುವಟಿಕೆಯಾಗಿ ಮಾಡಲು ಸಹಕರಿಸಬೇಕೆಂದು ಕೋರಿದರು.

ಅನಂತರ ಕೆಲವು ವಿಷಯಗಳ ಮೇಲೆ ತೀರ್ಮಾನವಾಗಿ ನಿರ್ಧಾರಕ್ಕೆ ಬರಲಾಯಿತು.

೧ ಹಾಲಿ ಇರತಕ್ಕ ಸಂಘದ ಕಚೇರಿಯನ್ನು ಮತ್ತೊಂದು ವಿಶಾಲವಾದ ಕೊಠಡಿಗೆ ಬದಲಾಯಿಸಿಕೊಡಬೇಕೆಂದು ಸಂಬಂಧಪಟ್ಟ ಇಂಜಿನಿಯರಿಂಗ್ ಇಲಾಖೆಯನ್ನು ಪ್ರಾರ್ಥಿಸಬೇಕೆಂದು ತೀರ್ಮಾನವಾಯಿತು.

೨ ಈಗ ಹಾಲಿ ಇರುವ ಸಂಘದ ಕಾಲ ಪತ್ರಿಕೋದ್ಯೋಗಿಗಳಿಗೂ, ಸಾರ್ವಜನಿಕರಿಗೂ ಅನುಕೂಲವಾಗಿರುವುದರಿಂದ, ಮಧ್ಯಾಹ್ನ ೨ ರಿಂದ ೬ ರ ವರೆಗೂ, ಸಾಯಂಕಾಲ ೬ ರಿಂದ ೮ ರ ವರೆಗೂ ಬದಲಾಯಿಸಿಕೊಡಬೇಕೆಂದು ಆ ಇಲಾಖೆಯವರಲ್ಲಿ ಪ್ರಾರ್ಥಿಸುವುದು.

೩ ೪-೯-೪೩ ನೇ ಶನಿವಾರ ಬ್ರಾಡ್ವೇ ಹೋಟೆಲಿನಲ್ಲಿ ಸಂಘದ ಕಚೇರಿಯಲ್ಲಿ ಮತ್ತೊಂದು ಸಭೆ ಸೇರಿ, ಸಂಘಕ್ಕೆ ಮುಂದಿನ ಸಾಲಿನ ಅಧಿಕಾರಿಗಳನ್ನು ಚುನಾವಣೆ ನಡೆಸುವುದೆಂದು ನಿರ್ಧರಿಸಲಾಯಿತು.

ಸೀಸದ ಕಳ್ಳರ ದಸ್ತಗಿರಿ

ಬೆಂಗಳೂರು ಕಂಟೋನ್ಮೆಂಟಿನಿಂದ ಇದೇ ೨೭ ನೇ ತಾ॥ ಬೆಳಗ್ಗೆ ಸುಮಾರು ೩ ಪೌಂಡುಗಳಷ್ಟು ಸೀಸವನ್ನು ಕದ್ದು ತರುತ್ತಿದ್ದ ಅಬ್ದುಲ್ ರಹಿಮಾನ್ ಮತ್ತು ಸಯ್ಯದ್ ಉಮ್ಮರ್ ಎಂಬುವರನ್ನು ಪೋಲೀಸರು ದಸ್ತಗಿರಿ ಮಾಡಿ ಕೆಂಗಲ್ಪಟ್ಟಣದ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ.

ಅದೇ ದಿನ ರಾತ್ರಿ ಆರ್ಸೆಕೆರೆ ಕೈಪ್ಪೆಯಲ್ಲಿ ಸುಮಾರು ೧೮ ಪೌಂಡಿನಷ್ಟು ಸೀಸವನ್ನು ಬೀದಿಯಲ್ಲಿ ಸಿಕ್ಕಿತೆಂದೂ ಕೈಪ್ಪೆ ಪೋಲೀಸರು ಅದನ್ನು ವಶಪಡಿಸಿಕೊಂಡು ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ದಸ್ತಗಿರಿ

ಒಂಟಿಕೊಪ್ಪಲು ಕಂಟ್ರಾಕ್ಟರ್ ಶ್ರೀ ನಂಜುಂಡಯ್ಯನವರ ಹೋಟಲಿನಲ್ಲಿ ಕೆಲಸಕ್ಕಿದ್ದ ನಂಜುಂಡನೆಂಬುವನು ಕೆಲವು ಬೆಲೆಬಾಳುವ ಸಾಮಾನುಗಳನ್ನು ಕಳವು ಮಾಡಿದನೆಂದು ಪೋಲೀಸರು ಅವನನ್ನು ದಸ್ತಗಿರಿ...

ಡಾಕ್ಟರ್ ಹೈಗ್ಲರವರ ರಾಜೀನಾಮೆ

ಬೆಂಗಳೂರು ೩೦

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಕಳೆದ ೪ ವರ್ಷಗಳಿಂದಲೂ ಪ್ರೊಫೆಸರು ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೊದಲನೇ "ಫಿಸಿಷಿಯನ್" ಆಗಿದ್ದೂ, ಈಚೆಗೆ ವಿಕ್ಟೋರಿಯಾ ಆಸ್ಪತ್ರೆಗೆ ವರ್ಗ ಮಾಡಲಾದ ಡಾ॥ ಹೈಗ್ಲರವರು ತಮ್ಮ ಕೆಲಸಕ್ಕೆ ರಾಜೀನಾಮೆ ಇತ್ತಿದ್ದಾರೆ, ಸರ್ಕಾರದವರು ಅಂಗೀಕರಿಸಿದ್ದಾರೆ. ಡಾ॥ ಹೈಗ್ಲರವರು ಜಯಪುರದ ಸಂಸ್ಥಾನಕ್ಕೆ ಹೋಗುವರೆಂದು ಹೇಳಲಾಗಿದೆ.

ವಿದ್ಯಾರ್ಥಿಗಳ ಬಿಡುಗಡೆ

ಒರಿಸ್ಸಾ ಪ್ರಾಂತ್ಯದಲ್ಲಿ ಭಾರತ ರಕ್ಷಣಾ ಶಾಸನದ ಪ್ರಕಾರ ಬಂಧಿಸಲ್ಪಟ್ಟಿದ್ದ ಎಲ್ಲಾ ವಿದ್ಯಾರ್ಥಿಗಳನ್ನೂ ಬಿಡುಗಡೆ ಮಾಡಲು ಸರ್ಕಾರದವರು ನಿಶ್ಚಯಿಸಿದ್ದಾರೆ.

ಇಟಾಲಿಯನ್ ಗುರಿಗಳ ಮೇಲೆ ಧಾಳಿ

ಮಿತ್ರರಾಷ್ಟ್ರಗಳ ನೌಕಾಪಡೆಯವರು ನಿನ್ನೆ ಅಮೇರಿಕಾದಿಂದ ಧಾಳಿ ಮಾಡಿ ಕ್ರೋಟೋನ್ ಬಳಿ ವೈರಿ ಉತ್ತರ ಭಾಗದಲ್ಲಿರುವ ರೈಲ್ವೆ ನಿಲ್ದಾಣದವರೆಗೆ ವಿನಾಶ ಮಾಡಿದರು. ಉಗ್ರವಾದ ಧಾಳಿ ಮಾಡುತ್ತಿರುವ ರೋಂಗೆ ಪೂರ್ವದಲ್ಲಿ ಸುಮಾರು ಮೈಲಿ ದೂರದಲ್ಲಿರುವ ರೈಲ್ವೆ ಸ್ಟೇಷನ್, ಟೆಲಿಫೋನು ಮತ್ತು ನೇಪಲ್ಸಿಗೆ ಉತ್ತರದಲ್ಲಿರುವ ರೈಲ್ವೆ ಕೇಂದ್ರ ಮತ್ತು ಸಾಲಿರ್ನೊಗಳ ಮೇಲೆ ಧಾಳಿ ನಡೆಸಿ ೩೦ ರಷ್ಟು ವಿಮಾನಗಳನ್ನು ನಾಶಮಾಡಲಾಯಿತು. ನಮ್ಮ ೬ ವಿಮಾನಗಳು ನಷ್ಟ ಹೊಂದಿವೆ. ಮಿತ್ರಪಡೆಗೆ ೯ ವಿಮಾನಗಳು ನಷ್ಟವಾಗಿವೆ.

೩೦ ಗಂಟೆಗಳಲ್ಲಿ ಅಮೇರಿಕಾದಿಂದ ಬೊಂಬಾಯಿಗೆ ಬರಬಹುದು

ಅಮೇರಿಕಾದಿಂದ ಬೊಂಬಾಯಿಗೆ ೩೦ ಗಂಟೆಗಳ ಕಾಲದಲ್ಲಿ ವಿಮಾನದಲ್ಲಿ ಬರಬಹುದೆಂದೂ, ಇದಕ್ಕೆ ೧,೫೦೦ ರೂ. ಗಳು ಖರ್ಚಾಗುವುದೆಂದೂ ಮತ್ತು ಈ ಪ್ರಯಾಣದ ಸಮಯದಲ್ಲಿ ಹಾರಿಗೆ ಕಾಲದ ಇದ ೧೨ ಬೊಂಬಾಯಿಗೆ...

ಬಡ ವಿದ್ಯಾರ್ಥಿಗಳಿಗೆ ಸರ್ಕಾರದ ಸಹಾಯ

ಕಲ್ಕತ್ತಾ ಮತ್ತು ಢಕ್ಕಾ ವಿಶ್ವವಿದ್ಯಾಲಯಗಳ ೨ ನೆ ಕಾಲೇಜುಗಳಲ್ಲಿಯ ಬಡ ವಿದ್ಯಾರ್ಥಿಗಳಿಗೆ ಸಧ್ಯದ ಕಠಿಣ ಪರಿಸ್ಥಿತಿಯನ್ನು ನಿವಾರಿಸಲು ೬ ತಿಂಗಳವರೆಗೆ ಧನ ಸಹಾಯ ಮಾಡಲು ಬಂಗಾಳ ಸರ್ಕಾರದವರು ಒಪ್ಪಿದ್ದಾರೆ. ಪ್ರತಿ ತಿಂಗಳು ೧ ಲಕ್ಷ ರೂಪಾಯಿ ಸರ್ಕಾರದವರು ವೆಚ್ಚ ಮಾಡುವರು.

ಬ್ರಿ॥ ಹಡಗು ಜಪಾನ್ ವಶ

ಪೋರ್ಚುಗಲ್ ಟೈಮ್ಸ್ ಶಾಂಘೈನಿಂದ ಹೊರಟು ಬಂದಿದ್ದ "ಷೇ" ಎಂಬ ಬ್ರಿಟಿಷ್ ಹಡಗನ್ನು ಜಪಾನಿಯರು ಬಲಾತ್ಕಾರದಿಂದ ವಶಪಡಿಸಿಕೊಂಡರೆಂದೂ, ಈ ಘಟನೆಯಲ್ಲಿ ೩೦ ಪೋರ್ಚುಗೀಸ್ ಪೋಲೀಸರು ಸತ್ತರೆಂದೂ ವರದಿಯಾಗಿದೆ.

ಆರಂಡಲ್ ಮಿತ್ರ ವಶ

ನ್ಯೂಯಾರ್ಕ್, ಜಾವಾ ದ್ವೀಪಕ್ಕೂ ಮಧ್ಯೆ ಇರುವ ಆರಂಡಲ್ ದ್ವೀಪವನ್ನು ಅಮೇರಿಕಾ ಸೈನ್ಯವು ಯಾವ ಪ್ರತಿಭಟನೆ ಇಲ್ಲದೆ ಆಕ್ರಮಿಸಿಕೊಂಡಿತೆಂದು ವರದಿಯಾಗಿದೆ.

ಯುಕ್ರೇನಿನಲ್ಲಿ ಭೀಕರ ಕದನ

ಯುಕ್ರೇನ್ ಕ್ಷೇತ್ರದಲ್ಲಿ ೨ ಪಕ್ಷದವರ ಭೀಕರ ಕದನ ನಡೆಯುತ್ತಿರುವುದರಿಂದೂ ಟ್ಯಾಂಕ್ ಮತ್ತು ಫಿರಂಗಿಗಳನ್ನು ಉಪಯೋಗಿಸಲಾಗುತ್ತಿದೆಯೆಂದೂ ವರದಿಯಾಗಿದೆ. ರಷ್ಯನ್ನರು ಕೆಲವು ಸ್ವಲ್ಪ ಭಾಗಗಳನ್ನು, ೮ ನಗರಕ್ಕೆ ಹತ್ತಿರವಾಗಿದ್ದಾರೆ.

ಟ್ಯಾಗನ್‌ರಾಗ್ ಪಟ್ಟಣವನ್ನು ಇಷ್ಟರಲ್ಲೇ ರಷ್ಯನ್ನರು ವಶಪಡಿಸಿಕೊಳ್ಳುವ ಸಂಭವವಿದೆಯೆಂದೂ, ಇದರಿಂದ ಕ್ರೈಮಿಯಕ್ಕೆ ರೈಲ್ವೆ ಮಾರ್ಗ ರಷ್ಯನ್ನರಿಗೆ ಬಹಳ ಉಪಯೋಗಕರವಾಗುವುದೆಂದೂ ಹೇಳಲಾಗಿದೆ. ಬ್ರಿಯಾನ್ಸ್ಕ್ ದಕ್ಷಿಣ ಭಾಗದಲ್ಲಿ...

ಮೋಟಾರು ಅಪಘಾತದ ವಿವರ

ಮೈಸೂರು ೩

ಮರಕೇರಿಯಿಂದ ಮೈಸೂರಿಗೆ ಬರುತ್ತಿದ್ದ ಮಾದರ್ನ್ ಮೋಟಾರ್ ಸರ್ವಿಸ್ ಬಸ್ಸೊಂದು ಹೋಗುತ್ತಾ ಅಪಘಾತಕ್ಕೊಳಗಾಯಿತೆಂದು ತಿಳಿದು ಬಂದಿದೆ. ಅದರ ವಿವರಗಳು ಹೀಗಿವೆ. ಮೋಟಾರು ಸ್ಟೀರಿಂಗ್ ತಪ್ಪಿ ಬಲದ ಕಡೆಯಿಂದ ಬಸ್ಸು ಹತೋಟಿ ತಪ್ಪಿ ಮರವೊಂದಕ್ಕೆ ಢಿಕ್ಕಿ ಹೊಡೆದು ಮಗುಚಿಕೊಂಡಿತು. ಅದರಲ್ಲಿದ್ದ ಗಂಗೂಬಾಯಿ ಮತ್ತು ಆಕೆ ಮಗು ಜಯವಿಠ್ಠಲ್, ನಿಂಗಯ್ಯ ಮತ್ತು ಸುಬ್ಬಶೆಟ್ಟಿ ಎಂಬ ೪ ಜನ ಆಸ್ಪತ್ರೆಯಲ್ಲಿ ಮರಣಹೊಂದಿದರೆಂದೂ, ಸ್ವಾಮಿರಾವ್, ಸೋಮಯ್ಯ, ರಾಮಸ್ವಾಮಿ ಶಾಸ್ತ್ರೀ ಈ ನಾಲ್ಕು ಮಂದಿಗೆ ತೀವ್ರ ಘಾಯಗಳಾಗಿ, ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದೂ ತಿಳಿಯಬರುತ್ತೆ. ಬಸ್ ಡ್ರೈವರ್ ದೇವರಾಜುವನ್ನು ದಸ್ತಗಿರಿ ಮಾಡಿ, ಕೇಸು ದಾಖಲು ಮಾಡಲಾಗಿದೆ. ಪೋ॥ ಸಬ್‌ಇನ್ಸ್‌ಪೆಕ್ಟರು ತನಿಖೆ ನಡೆಸುತ್ತಿದ್ದಾರೆ.

ಸೋಮಯ್ಯನ ಸ್ಥಿತಿ ಚಿಂತಾಜನಕವಾಗಿದೆ.

ಬಲ್ಗೇರಿಯಾದಲ್ಲಿ ದಂಗೆ ಏಳುವ ಸಂಭವ

ಬೋರಿಸ್ ರಾಜರ ನಿಧನಾನಂತರ ಬಲ್ಗೇರಿಯಾದಲ್ಲಿ ಪ್ರಜಾದಂಗೆ ಏಳಬಹುದೆಂದು ಹೇಳಲಾಗಿದೆ.

ರಾಜಕೀಯ ಅಧಿಕಾರದ ಚುಕ್ಕಾಣಿ ಹಿಡಿಯಲು ಜರ್ಮನಿ ಯತ್ನಿಸುತ್ತಿದೆ ಎಂದೂ ಊಹಿಸಲಾಗಿದೆ.

ಯಾವ ದಂಗೆಯನ್ನೂ ಅಡಗಿಸಲು ಬೇಕಾದ ಏರ್ಪಾಡುಗಳನ್ನು ಮಾಡಲಾಗಿದೆಯೆಂದೂ, ಅರಾಜಕತ್ವವನ್ನು ತಪ್ಪಿಸಲು ಜರ್ಮನ್ ಬಲ್ಗೇರಿಯಾವನ್ನು ಸಂಪೂರ್ಣವಾಗಿ ಆಕ್ರಮಿಸಬಹುದೆಂದು ಹೇಳಲಾಗಿದೆ. ಆದರೆ, ಈಗಿನ ಪರಿಸ್ಥಿತಿಯಲ್ಲಿ ಜರ್ಮನಿಗೆ ಬಲ್ಗೇರಿಯಾವನ್ನು ಪೂರ್ತಿ ಆಕ್ರಮಣ ಮಾಡುವುದು ಕಷ್ಟವಾಗಬಹುದೆಂದು ಹೇಳಲಾಗಿದೆ. ದಂಗೆ ಪ್ರಾರಂಭವಾದರೆ ಪ್ರೆಸ್ ಸಂರಕ್ಷಣೆಗೋಸ್ಕರ ಇಟ್ಟಿರುವ ಪಡೆ ಬಲ್ಗೇರಿಯಾ ದಿವಾನ್ ಸೈನ್ಯವನ್ನು ಎದುರಿಸಿ ಸಾಕು ಮಾಡುವುದೆಂದು ಹೇಳಲಾಗಿದೆ.

ಇಟಲಿ ಶಾಂತಿ ಸಂಧಾನ

ಇಟಲಿಯು ಯುದ್ಧದಿಂದ ವಿಮುಖವಾಗಲು ಪ್ರಯತ್ನಿಸುತ್ತಿದೆ. ಇಟಾಲಿಯನ್ ಪ್ರತಿನಿಧಿಗಳೊಡನೆ ಮಿತ್ರರಾಷ್ಟ್ರದವರು ಪ್ರತಿನಿಧಿಗಳೊಡನೆ ಮಾತುಕತೆ ನಡೆಸುತ್ತಿರುವರೆಂದು ವರದಿಯಾಗಿದೆ.

ಜರ್ಮನ್ ನಗರಗಳನ್ನು ನಾಶ ಮಾಡಲಾಗುತ್ತಿದೆ

ಮಿತ್ರ ವಿಮಾನ ದಾಳಿಯಿಂದ ಬರ್ಲಿನ್, ಹ್ಯಾನೋವರ್ ಮೊದಲಾದ ನಗರಗಳನ್ನು ನಾಶ ಮಾಡಲಾಗುತ್ತಿದೆಯೆಂದೂ ಈ ನಗರಗಳ ಮೇಲೆ ಪ್ರತಿ ದಿನ ದಾಳಿ ನಡೆಯುತ್ತಿದೆಯೆಂದೂ ಜನರು ಭಯಭೀತರಾಗಿದ್ದಾರೆಂದೂ ವರದಿಯಾಗಿದೆ.

ಉತ್ತರ ಇಟಲಿಯಲ್ಲಿ ಮಿತ್ರ ವಿಮಾನಗಳು ...

ಜಿಲ್ಲಾಧಿಕಾರಿಗಳ ಆಜ್ಞೆ ಶಾಸನವಲ್ಲ

ಬೆಂಗಳೂರು, ೩೦

ಗೌರಿಬಿದನೂರಿನ ಶ್ರೀ ಟಿ. ಗಂಗಾಧರಸ್ವಾಮಿಯವರು ಜಿಲ್ಲಾಧಿಕಾರಿಗಳು ಹೊರಡಿಸಿದ ಆಜ್ಞೆಯ ವಿರೋಧವಾಗಿ [illegible] ಜಿಲ್ಲಾಧಿಕಾರಿಗಳ ಆಜ್ಞೆಯು ಕೇವಲ ಆಜ್ಞೆಯೇ ಹೊರತು ಶಾಸನವಲ್ಲ [illegible] ಎಂದು ತೀರ್ಪಿತ್ತಿದ್ದಾರೆ.

ಕಾರಂಗಿ ಕೆಲಸಗಾರರಿಗೆ ಶಿಕ್ಷೆ

[illegible] ಶ್ರೀ [illegible] ಕೃಷ್ಣಪ್ಪ ಮತ್ತು ಎಸ್. [illegible] ನ್ಯಾಯಾಧೀಶರು [illegible] ಶಿಕ್ಷೆಯನ್ನು ವಿಧಿಸಿದರು.

ಇದೇ ಆಪಾದನೆಗೆ ವೇಲಿ ಸುಬ್ಬಯ್ಯ, ನಟರಾಜ ಮತ್ತು [illegible] ತಿಂಗಳ ಕಠಿಣ ಶಿಕ್ಷೆ ಮತ್ತು [illegible] ತಿಂಗಳು ಕಠಿಣ ಶಿಕ್ಷೆ ವಿಧಿಸಿದರು.

ರಾಜಕೀಯ ಬಂದಿಗಳ ಬಿಡುಗಡೆಯಾಗಬೇಕು

[illegible] ಎಲ್ಲಾ ರಾಜಕೀಯ ಬಂದಿಗಳನ್ನ [illegible] ಬಿಡುಗಡೆಮಾಡಿ [illegible] ಪೌರ ಸಭೆಯಲ್ಲಿ ಅಂಗೀಕೃತವಾಯಿತು

ಬಂಗಾಳ ಪರಿಹಾರ ನಿಧಿ

[illegible] ಬಂಗಾಳ ಕಷ್ಟ ನಿವಾರಣ ನಿಧಿಗೆ ೧೦೦೦ ರೂ. ಕೊಟ್ಟಿದ್ದಾರೆ.

[illegible] "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯ [illegible] ಶ್ರೀ [illegible] ರೂ. ಗಳನ್ನು ಕೊಟ್ಟಿದ್ದಾರೆ.

ಮಲೇರಿಯಾ ನಿವಾರಣೆ ಕಾರ್ಯಕ್ರಮ

ಕೃಷ್ಣರಾಜಪೇಟೆ ಮತ್ತು ಕೃಷ್ಣರಾಜನಗರ [illegible] ಮಲೇರಿಯಾ [illegible] ಕಾರ್ಯಕ್ರಮವನ್ನು [illegible]

ಚುನಾವಣೆ ಅರ್ಜಿಯ ನಿರಾಕರಣೆ

[illegible] ಬೆಂಗಳೂರು ಜಿಲ್ಲೆಯಲ್ಲಿ ನ್ಯಾಯವಿಧಾಯಕ ಸಭೆಗೆ ನಡೆದ ಚುನಾವಣೆಯಲ್ಲಿ ಶ್ರೀ [illegible] ಸುಬ್ಬಯ್ಯನವರು [illegible] ಶ್ರೀ ಬಿ. ಎಲ್. [illegible] ಅರ್ಜಿಯನ್ನು [illegible] ಶ್ರೀ ಎ. [illegible] ತಿರಸ್ಕರಿಸಿದರು.

ಮೈ ಸುಟ್ಟುಕೊಂಡು ಮರಣ

[illegible] ಆಸ್ಪತ್ರೆಗೆ [illegible] ಎಂದು ಹೇಳಲಾಗಿದೆ.

ವಿದ್ಯಾಭ್ಯಾಸ ಅಭಿವೃದ್ಧಿ ಪಂಚಿಕೆ

[illegible] ಸಂಸ್ಥಾನದ ವಿದ್ಯಾಭ್ಯಾಸ ಅಭಿವೃದ್ಧಿಗೋಸ್ಕರ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ [illegible] ವಿದ್ಯಾಭ್ಯಾಸ, ಉಪಾಧ್ಯಾಯರುಗಳಿಗೆ [illegible] ಚರ್ಚೆಯಾಯಿತೆಂದೂ ಹೇಳಲಾಗಿದೆ.

ಸರ್ ಸಿ.ಪಿ. ಯವರ ಸಹಾಯ

[illegible] ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು [illegible] ರೂ. ಗಳನ್ನು ಕೊಡಲು [illegible]

ಡೆನ್ಮಾರ್ಕಿನಲ್ಲಿ ತೀಕ್ಷ್ಣ ಪರಿಸ್ಥಿತಿ

ಡೆನ್ಮಾರ್ಕ್ ರಾಜ್ಯವನ್ನು ಜರ್ಮನಿ [illegible] ಪರಿಸ್ಥಿತಿಯು ಬಹಳ ವಿಷಮಗೊಂಡಿದೆ [illegible] ಅನೇಕ ಡೇನಿಷ್ [illegible] ಜರ್ಮನರು [illegible]

ನಾಜಿಗಳ ಕ್ರೂರಾಚಾರ

ನಾರ್ವೆಯಲ್ಲಿ [illegible] ಜರ್ಮನ್ ಅಧಿಕಾರಿಗಳು [illegible]

ಕೌಂಟ್ ಸಿಯಾನೋ ಪ[illegible]

[illegible] ಕೌಂಟ್ ಸಿಯಾನೋ [illegible]

Edited, printed and published by A. R. Nagara[illegible] at the Sadhvi Press, D. S[illegible]iah Road, Mysore

ಈಗ ಆಗುತ್ತಿರುವ ಬಟ್ಟೆಗಳ ಏರಿಳಿತಗಳಲ್ಲಿ ಗೌರಿ ಹಬ್ಬಕ್ಕೆ
ಬಟ್ಟೆಗಳನ್ನು ಎಲ್ಲಿ ಕೊಳ್ಳಬೇಕೆಂದು ಯೋಚಿಸಬೇಡಿ.
ಬನಾರಸ್‌ನವರೇ ಬಂದು ಬನಾರಸ್ ಬೆಲೆಗೇ ಮಾರುತ್ತಿರುವ

ಬನಾರಸ್ ಟೆಕ್ಸ್‌ಟೈಲ್ ಎಂಪೋರಿಯಂ

ನಲ್ಲೇ ಕೊಂಡುಕೊಳ್ಳಿ.

[illegible] (ರೆಡಿಮೇಡ್ ಡ್ರೆಸ್) [illegible] ಮೈಸೂರು [illegible]

ಸ್ತ್ರೀಯರ ಸೌಕರ್ಯಕ್ಕಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫೀ ಪುಡಿ

ಡಿ. ಪುಟ್ಟಯ್ಯ [illegible] ಮೈಸೂರು

[illegible]

ದಿವ್ಯವಾದ ಸಾಬೂನ

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ [illegible] ಆದರೆ [illegible] ಗುಣವೂ, ಸುಗಂಧವೂ [illegible]

ಮೈಸೂರು ಸ್ಯಾಂಡಲ್ ಸೋಪ್